ಗುರುವಾರ, ಜನವರಿ 25, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ನಟಿ ಅದಿತಿ ರಾವ್ ಹೈದರಿ ಪಾಲ್ಗೊಂಡಿದ್ದರು



ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ: ಭದ್ರಕೋಟೆಯಲ್ಲಿ ಇಕ್ಕಟ್ಟಿಗೆ ಸಿಲುಕಿರುವ ಬಿಜೆಪಿ ನಾಯಕತ್ವ

ನಳಿನ್‌ಗೆ ಮತ್ತೆ ಮಣೆ ಹಾಕುವುದೇ ಬಿಜೆಪಿ?

• ಪ್ರವೀಣ್ ಕುಮಾರ್ ಪಿ.ವಿ

> ಚುನಾವಣೆ ಕಾರ್ಯತಂತ್ರದ ಬಗ್ಗೆ ಚರ್ಚಿಸಲು ಜಿಲ್ಲೆಯ 16 ಬೂತ್‌ಗಳಲ್ಲೂ ಪೂರ್ವಭಾವಿ ನಡೆಸಿದ ಸಭೆಗಳಿಗೆ ನಿರೀಕ್ಷೆಗೂ ಮೀರಿದ ಸ್ಪಂದನೆ ವ್ಯಕ್ತವಾಗಿದೆ
> **ಹರೀಶ್ ಕುಮಾರ್**
> ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ

> ಲೋಕಸಭೆಗೆ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪಕ್ಷದ ವರಿಷ್ಠರು ಈಗಾಗಲೇ ರಾಜ್ಯಮಟ್ಟದಲ್ಲಿ ಸಭೆ ನಡೆಸಿದ್ದಾರೆ. ಯಾರನ್ನೇ ಕಣಕ್ಕಿಳಿಸಿದರೂ ಅನಾಯಾಸವಾಗಿ ಗೆಲ್ಲಿಸುತ್ತೇವೆ
> **ಸತೀಶ್ ಕುಂಪಲ**
> ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ

ನಳಿನ್ ಕುಮಾರ್ ಕಟೀಲ್

ಮಂಗಳೂರು: ಬಿಜೆಪಿಯ ಭದ್ರ ಕೋಟೆ ಎಂದೇ ಗುರುತಿಸಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅಸಮಾಧಾನದ ಅಲೆಯನ್ನು ತಣಿಸಿ ಲೋಕಸಭೆ ಚುನಾವಣೆ ಎದುರಿಸಬೇಕಾದ ಇಕ್ಕಟ್ಟಿಗೆ ಬಿಜೆಪಿ ನಾಯಕತ್ವ ಸಿಲುಕಿದೆ.

ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಸತತ ಗೆಲುವಿನ ಸರಪಣಿಯು 1991ರ ಲೋಕಸಭೆ ಚುನಾವಣೆಯಲ್ಲಿ ವಿ.ಧನಂಜಯ ಕುಮಾರ್ ಗೆಲುವಿನೊಂದಿಗೆ ಕಳಚಿತ್ತು. ಆ ಬಳಿಕ ನಡೆದ ಎಂಟೂ ಚುನಾವಣೆಗಳಲ್ಲಿಇಲ್ಲಿ ಬಿಜೆಪಿಯದೇ ಪಾರುಪತ್ಯ.

2004ರ ಚುನಾವಣೆಯಲ್ಲಿ ಆಗಿನ ಸಂಸದ ಧನಂಜಯ್ ಕುಮಾರ್ ವಿರುದ್ಧ ಪಕ್ಷದೊಳಗೆ ಅಸಮಾಧಾನವಿತ್ತು. ಆಗ ಅವರಿಗೆ ಟಿಕೆಟ್ ನಿರಾಕರಿಸಿದ ಬಿಜೆಪಿ, ಡಿ.ವಿ. ಸದಾನಂದ ಗೌಡರನ್ನು ಕಣಕ್ಕಿಳಿಸಿ ಗೆಲುವಿನ ಓಟವನ್ನು ಮುಂದುವರಿಸಿತ್ತು. 2009ರ ಚುನಾವಣೆ ವೇಳೆ ಕಾರ್ಯಕರ್ತ ವಲಯದಲ್ಲಿ ಸದಾನಂದ ಗೌಡರ ವಿರುದ್ಧವೂ ಅಸಮಾಧಾನ ವ್ಯಕ್ತವಾಗಿತ್ತು. ಆಗ ಸಂಘ ಪರಿವಾರದ ಹಿನ್ನೆಲೆಯ ಯುವ ನಾಯಕ ನಳಿನ್ ಕುಮಾರ್ ಕಟೀಲ್ ಅವರನ್ನು ಪಕ್ಷವು ಕಣಕ್ಕಿಳಿಸಿತ್ತು. ಈ ಸಲವೂ ಪಕ್ಷ ಅದೇ ತಂತ್ರ ಅನುಸರಿಸಬಹುದು ಎಂಬ ಚರ್ಚೆ ಪಕ್ಷದಲ್ಲಿ ನಡೆಯುತ್ತಿದೆ.

ಬೆಳ್ಳಾರೆಯಲ್ಲಿ 2022ರ ಜುಲೈನಲ್ಲಿ ಪಕ್ಷದ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ನಡೆದ ಸಂದರ್ಭದಲ್ಲಿ ನಳಿನ್ ವಿರುದ್ಧ ಪಕ್ಷದ ಕಾರ್ಯಕರ್ತರು ಬಹಿರಂಗವಾಗಿಯೇ ಅಸಮಾಧಾನ ತೋರ್ಪಡಿಸಿದ್ದರು. ಪುತ್ತೂರು ಕ್ಷೇತ್ರದ ಟಿಕೆಟ್ ಹಂಚಿಕೆ ಆದ ಬಳಿಕ ಇದು ತಾರಕಕ್ಕೇರಿತ್ತು. ಈ ಕ್ಷೇತ್ರದಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಅರುಣ್ ಕುಮಾರ್ ಪುತ್ತಿಲ 62,458 ಮತಗಳನ್ನು ಗಳಿಸುವ ಮೂಲಕ ಪಕ್ಷದ ಅಧಿಕೃತ ಅಭ್ಯರ್ಥಿ ಆಶಾ ತಿಮ್ಮಪ್ಪ ಗೌಡ ಅವರು ಮೂರನೇ ಸ್ಥಾನಕ್ಕೆ ಕುಸಿಯುವಂತೆ ಮಾಡಿದ್ದರು.

ಪುತ್ತಿಲ ಬೆಂಬಲಿಗರು ಸಾಮಾಜಿಕ ಮಾಧ್ಯಮಗಳಲ್ಲಿ ಗುಂಪುಗಳನ್ನು ರಚಿಸಿಕೊಂಡು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪುತ್ತಿಲ ಅವರಿಗೆ ಟಿಕೆಟ್ ನೀಡಬೇಕು ಎಂಬ ಅಭಿಯಾನ ನಡೆಸುತ್ತಿದ್ದಾರೆ. ನಳಿನ್‌ಗೆ ಈ ಸಲವೂ ಟಿಕೆಟ್ ನೀಡಿದರೆ ಪುತ್ತಿಲ ಪಕ್ಷೇತರರಾಗಿ ಸ್ಪರ್ಧಿಸುವ ಸಾಧ್ಯತೆ ದಟ್ಟವಾಗಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಇತ್ತೀಚೆಗೆ ಮಂಗಳೂರಿನಲ್ಲಿ ಕಾರ್ಯಕರ್ತರ ಸಭೆಯಲ್ಲಿ 'ನಳಿನ್ ಅವರಿಗೆ ಈ ಬಾರಿಯೂ ಆಶೀರ್ವದಿಸಿ' ಎಂದು ಹೇಳಿಕೆ ನೀಡಿದ್ದರು.

'ರಾಜ್ಯ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ನಳಿನ್‌ಗೆ ಟಿಕೆಟ್ ನಿರಾಕರಿಸಿದರೆ ವಿರೋಧ ಪಕ್ಷದವರು ಅದನ್ನು ರಾಜಕೀಯವಾಗಿ ಬಳಸಿಕೊಳ್ಳುವ ಸಾಧ್ಯತೆ ಇದೆ' ಎಂದು ಬಿಜೆಪಿ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಪಕ್ಷದ ರಾಜ್ಯ ಘಟಕದ ಕಾರ್ಯದರ್ಶಿ ಕ್ಯಾ. ಬ್ರಿಜೇಶ್ ಚೌಟ ಅವರೂ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿ. ಅರುಣ್ ಪುತ್ತಿಲ ಬಣದ ವಿರೋಧ ಇರುವುದು ನಳಿನ್ ಸ್ಪರ್ಧೆಗೆ ಮಾತ್ರ. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಅಭ್ಯರ್ಥಿ ಆಯ್ಕೆಗೆ ವರಿಷ್ಠರು ತೀರ್ಮಾನಿಸಿದರೆ, ತಮಗೂ ಅವಕಾಶ ಸಿಗಬಹುದು ಎಂಬ ನಿರೀಕ್ಷೆ ಅವರದು.

ಅಸಮಾಧಾನ ತಣಿಸಲು ಪಕ್ಷದ ವರಿಷ್ಠರು ನಿರ್ಧರಿಸಿದರೆ, ನಳಿನ್ ಅವರನ್ನು ಉಡುಪಿ– ಚಿಕ್ಕಮಗಳೂರು ಕ್ಷೇತ್ರದಲ್ಲಿ ಕಣಕ್ಕಿಳಿಸಿ, ಇಲ್ಲಿ ಬೇರೊಬ್ಬರಿಗೆ ಟಿಕೆಟ್ ನೀಡುವ ಸಾಧ್ಯತೆಯೂ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಿಲ್ಲವರಿಗೆ ಆದ್ಯತೆ ನೀಡಲು ಕಾಂಗ್ರೆಸ್ ಚಿಂತನೆ

ವಿನಯ ಕುಮಾರ್

1991ರ ಬಳಿಕ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಾಲಿಗೆ ಗೆಲುವು ಮರೀಚಿಕೆಯಾಗಿದೆ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ರಾಜ್ಯದಾದ್ಯಂತ ಗೆಲುವಿನಲೆಯಲ್ಲಿ ತೇಲಿದ್ದ ಪಕ್ಷಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫಲಿತಾಂಶ ನಿರಾಶೆ ಮೂಡಿಸಿತ್ತು. ಇಲ್ಲಿನ ಎಂಟರಲ್ಲಿ ಎರಡು ಕ್ಷೇತ್ರಗಳಲ್ಲಿ ಮಾತ್ರ ಪಕ್ಷದ ಅಭ್ಯರ್ಥಿಗಳು ಗೆದ್ದಿದ್ದರು. ಈ ಲೋಕಸಭೆ ಚುನಾವಣೆಯಲ್ಲಾದರೂ ಗತ ವೈಭವವನ್ನು ಮರಳಿ ಪಡೆಯಬೇಕೆಂದು ಪಕ್ಷದ ಮುಖಂಡರು ಶತಾಯ ಗತಾಯ ಪ್ರಯತ್ನ ಮಾಡುತ್ತಿದ್ದಾರೆ.

ಬಿಜೆಪಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಖ್ಯಾ ಪ್ರಾಬಲ್ಯ ಹೊಂದಿರುವ ಬಿಲ್ಲವರಿಗೆ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನೀಡಿಯೇ ಇಲ್ಲ. ಇದೇ ವಿಚಾರವನ್ನು ಚುನಾವಣಾ ಅಸ್ತ್ರವನ್ನಾಗಿ ಮಾಡಿಕೊಂಡು ಬಿಲ್ಲವ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಕಾಂಗ್ರೆಸ್ ಪಕ್ಷವು ತಯಾರಿ ನಡೆಸಿದೆ. ಬಿಜೆಪಿಯೊಳಗಿನ ಭಿನ್ನಮತದ ಲಾಭ ಪಡೆದು ಚುನಾವಣೆ ಗೆಲ್ಲಲು ಕಾರ್ಯತಂತ್ರ ರೂಪಿಸುತ್ತಿದೆ.

ಕಾರ್ಯಕರ್ತರಲ್ಲಿ ಸ್ಥೈರ್ಯ ತುಂಬಲು ರಾಜ್ಯಮಟ್ಟದ ಸಮಾವೇಶವನ್ನೂ ಜಿಲ್ಲೆಯಲ್ಲಿ ಆಯೋಜಿಸಲಾಗುತ್ತಿದೆ.

'ಬಿಲ್ಲವ ಸಮುದಾಯದವರಾದ ಮಾಜಿ ಸಂಸದ, ಮಾಜಿ ಸಚಿವ ವಿನಯಕುಮಾರ್ ಸೊರಕೆ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪದ್ಮರಾಜ್ ಆರ್, ಕೆಪಿಸಿಸಿ ವಕ್ತಾರ ವಿವೇಕ್‌ರಾಜ್ ಪೂಜಾರಿ ಪ್ರಬಲ ಆಕಾಂಕ್ಷಿಗಳು. ಹಿರಿತನವನ್ನು ಆಧರಿಸಿ ಟಿಕೆಟ್ ನೀಡಿದರೆ ಸೊರಕೆ ಅಭ್ಯರ್ಥಿಯಾಗುವ ಸಾಧ್ಯತೆ ಇದೆ. ಯುವ ಮುಖಗಳಿಗೆ ಮಣೆ ಹಾಕಿದರೆ ಪದ್ಮರಾಜ್ ಆರ್. ಅಥವಾ ವಿವೇಕ್‌ರಾಜ್ ಪೂಜಾರಿ ಅವರಲ್ಲಿ ಒಬ್ಬರಿಗೆ ಟಿಕೆಟ್ ಸಿಗುವ ಸಾಧ್ಯತೆ ಇದೆ. ರಕ್ಷಿತ್ ಶಿವರಾಂ ಹೆಸರೂ ಚಾಲ್ತಿಯಲ್ಲಿತ್ತಾದರೂ, ಅವರು ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಅಷ್ಟು ಆಸಕ್ತಿ ಹೊಂದಿಲ್ಲ' ಎಂದು ಪಕ್ಷದ ಮೂಲಗಳು ತಿಳಿಸಿವೆ.

'ರಾಜ್ಯದಲ್ಲಿ ನಮ್ಮದೇ ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಜಾರಿಗೊಳಿಸಿರುವ ಯೋಜನೆಗಳಿಂದಾಗಿ ಜಿಲ್ಲೆಯಲ್ಲಿ ಪಕ್ಷಕ್ಕೆ ಬಲ ಬಂದಿದೆ. ಉಡುಪಿ– ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಂಟ ಸಮುದಾಯದವರಿಗೆ ಟಿಕೆಟ್ ನೀಡಿದರೆ, ನಮ್ಮ ಜಿಲ್ಲೆಯಲ್ಲಿ ಬಿಲ್ಲವರಿಗೆ ಟಿಕೆಟ್ ನೀಡುವ ಸಾಧ್ಯತೆ ಜಾಸ್ತಿ. ಪಕ್ಷವು ಯಾರಿಗೆ ಟಿಕೆಟ್ ನೀಡಿದರೂ ಗೆಲ್ಲಿಸಿಕೊಂಡು ಬರಲು ಶಕ್ತಿ ಮೀರಿ ಪ್ರಯತ್ನಿಸುತ್ತೇವೆ' ಎಂದು ಜಿಲ್ಲಾ ಘಟಕದ ಅಧ್ಯಕ್ಷ ಹರೀಶ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

'ಬಿಜೆಪಿಯಲ್ಲಿ ನಾಯಕರ ಕೊರತೆ'

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): 'ಬಿಜೆಪಿ- ಜೆಡಿಎಸ್‌ನಲ್ಲಿ ನಾಯಕತ್ವದ ಕೊರತೆ ಇದ್ದು, ದುಃಸ್ಥಿತಿಗೆ ತಲುಪಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಟೀಕಿಸಿದರು.

ತಾಲ್ಲೂಕಿನ ಬೈಲುಕುಪ್ಪೆಯಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಜಗದೀಶ ಶೆಟ್ಟರ್ ಬಿಜೆಪಿ ಬಿಟ್ಟು ಕಾಂಗ್ರೆಸ್‌ಗೆ ಬಂದಿದ್ದಾರೆ. ಅವರನ್ನೇ ವಾಪಸ್ ಕರೆದುಕೊಳ್ಳಲು ಬಿಜೆಪಿಯವರು ಅವರನ್ನು ಪದೇ ಪದೇ ಸಂಪರ್ಕಿಸುತ್ತಿದ್ದಾರೆ ಎಂದರೆ ಏನರ್ಥ?' ಎಂದು ಕೇಳಿದರು.

'ಲೋಕಸಭೆ ಚುನಾವಣೆ ಹತ್ತಿರ ಬರುತ್ತಿದೆ. ನಿಮ್ಮಲ್ಲಿ ಲೀಡರ್‌ಗಳು ಇಲ್ಲವೇ? ಒಳ್ಳೆಯ ಅಭ್ಯರ್ಥಿಗಳು ಇದ್ದರೆ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿಕೊಳ್ಳಿ' ಬಿಜೆಪಿಯವರಿಗೆ ಸವಾಲೆಸೆದರು.

'ಬಿ.ಎಸ್. ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸಿ ಕಣ್ಣೀರು ಹಾಕಿಸಿದವರು ಯಾರು? ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆದಿದ್ದು ಯಾರು? ಇದೆಲ್ಲವನ್ನೂ ರಾಜ್ಯ ರಾಜಕಾರಣ ನೋಡಿದೆ. ಹೀಗಿದ್ದರೂ ಬಿಜೆಪಿ-ಜೆಡಿಎಸ್‌ನವರು ತಬ್ಬಿಕೊಳ್ಳುತ್ತಿದ್ದಾರೆ. ನಾವು ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದೆವು. ಆದರೆ, ಮೈತ್ರಿ ಸರ್ಕಾರ ತೆಗೆದವರನ್ನೇ ಕುಮಾರಸ್ವಾಮಿ ತಬ್ಬಿಕೊಳ್ಳುತ್ತಿದ್ದಾರೆ. ಅಂದರೆ ಎರಡೂ ಪಕ್ಷದಲ್ಲಿ ನಾಯಕತ್ವದ ಕೊರತೆ ಇದೆ ಎಂದೇ ಅರ್ಥ' ಎಂದು ವ್ಯಂಗ್ಯವಾಡಿದರು.

'ಬಿಜೆಪಿಯ ಅನೇಕ ನಾಯಕರು ಶೆಟ್ಟರ್ ಅವರಿಗೆ ದುಂಬಾಲು ಬೀಳುತ್ತಿದ್ದಾರೆ. ಅವರ ಪಕ್ಷ ಎಷ್ಟು ದುರ್ಬಲವಾಗಿದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇಕಾ?' ಎಂದು ಕೇಳಿದರು.

ಚಿಕ್ಕಮಗಳೂರಿನಿಂದಲೇ ಸ್ಪರ್ಧೆ: ಶೋಭಾ ಕರಂದ್ಲಾಜೆ

ತುಮಕೂರು: 'ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಚಿಕ್ಕಮಗಳೂರು–ಉಡುಪಿ ಕ್ಷೇತ್ರದಿಂದಲೇ ಸ್ಪರ್ಧೆ ಮಾಡುತ್ತೇನೆ' ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಸ್ಪಷ್ಟಪಡಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ತುಮಕೂರು ಲೋಕಸಭೆ ಕ್ಷೇತ್ರದಿಂದ ಸ್ಪರ್ಧೆ ಮಾಡುವ ಬಗ್ಗೆ ಯೋಚನೆಯನ್ನೇ ಮಾಡಿಲ್ಲ. ಇಲ್ಲಿಗೆ ಬಂದು ಸ್ಪರ್ಧೆ ಮಾಡುವುದಿಲ್ಲ. ಕಳೆದ ಬಾರಿ ಚಿಕ್ಕಮಗಳೂರು ಕ್ಷೇತ್ರದಿಂದ ಆಯ್ಕೆ ಆಗಿದ್ದು, ಈ ಬಾರಿಯೂ ಅಲ್ಲಿಂದಲೇ ಸ್ಪರ್ಧಿಸುತ್ತೇನೆ. ಕ್ಷೇತ್ರ ಬದಲಿಸುವ ಪ್ರಶ್ನೆಯೇ ಇಲ್ಲ' ಎಂದು ಹೇಳಿದರು.

ಕೃಷಿಕ ಎಂಬ ಕಾರಣಕ್ಕೆ ಕಾಲೆಳೆಯುವ ಕೆಲಸ: ನಳಿನ್ ಆರೋಪ

ಪ್ರಜಾವಾಣಿ ವಾರ್ತೆ

ಮಂಗಳೂರು: 'ನಾನು ಹಳ್ಳಿಯಿಂದ ಬಂದವ, ಕೃಷಿಕ. ಹಳ್ಳಿಯವ ಎಂಬ ಕಾರಣಕ್ಕೆ ಈಗಲೂ ನನ್ನ ಕಾಲೆಳೆಯುವ ಕೆಲಸ ನಿರಂತರವಾಗಿ ಸಾಗುತ್ತಿದೆ' ಎಂದು ಸಂಸದ ನಳಿನ್ ಕುಮಾರ್ ಕಟೀಲ್ ಅವರು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು ನಗರದ ಕುಲಶೇಖರದಲ್ಲಿರುವ ಒಕ್ಕೂಟದ ಡೇರಿ ಆವರಣದಲ್ಲಿ ಬುಧವಾರ ಆಯೋಜಿಸಿದ್ದ ಮಂಗಳೂರು ಡೈರಿಯ ಉಗ್ರಾಣಕ್ಕೆ ಶಂಕುಸ್ಥಾಪನೆ ಹಾಗೂ ವಸತಿ ಸಮುಚ್ಚಯದ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಕೃಷಿಕ ಎಂಬ ಕಾರಣದಿಂದ ನನ್ನನ್ನು ಕೆಳಕ್ಕೆ ಇಳಿಸುವ ಹುನ್ನಾರ ನಡೆಯುತ್ತಿದೆ' ಎಂದರು.

'ನಾನು ಈಗಲೂ 32 ನಾಟಿ ಹಸುಗಳನ್ನು ಸಾಕುತ್ತಿದ್ದೇನೆ. ದಿನಕ್ಕೆ 4 ಲೀಟರ್ ಹಾಲು ಮಾತ್ರ ಅವುಗಳಿಂದ ಸಿಗುತ್ತದೆ. ಆದರೂ ಹೈನುಗಾರಿಕೆ ಮತ್ತು ಪಶುಪಾಲನೆಯ ಸಂಸ್ಕೃತಿ ಉಳಿಯಬೇಕು ಎಂಬ ಕಾರಣಕ್ಕೆ ದನಗಳನ್ನು ಉಳಿಸಿಕೊಂಡಿದ್ದೇನೆ' ಎಂದು ಹೇಳಿದರು.

'ವೈಫಲ್ಯ ಮುಚ್ಚಿಡಲು ಶ್ರೀರಾಮನ ಬಳಕೆ'

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸಿದ್ದರಾಮಯ್ಯ ವಾಗ್ದಾಳಿ • ಜೆಡಿಎಸ್ ಕುರಿತು ಲೇವಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 150 ಕೆರೆ–ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ
- ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ
- ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಲು ಮನವಿ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): 'ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ವೈಫಲ್ಯಗಳನ್ನು ಮುಚ್ಚಿಟ್ಟುಕೊಳ್ಳಲು ಶ್ರೀರಾಮಚಂದ್ರನನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ತಾಲ್ಲೂಕಿನ ಮುತ್ತಿನಮುಳುಸೋಗೆ ಗ್ರಾಮದ ಬಳಿ ಕಾವೇರಿ ನದಿಯಿಂದ ನೀರೆತ್ತಿ 79 ಗ್ರಾಮಗಳ 150 ಕೆರೆ-ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಗೆ ಬುಧವಾರ ಚಾಲನೆ ನೀಡಿದ ಬಳಿಕ, ಕೊಪ್ಪ ಗ್ರಾಮದ ಬಳಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಅವರು ಮಾತನಾಡಿದರು.

'ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದು ಪ್ರಧಾನಿ ಹೇಳಿದ್ದರು. ಅದರಲ್ಲಿ ವಿಫಲರಾದರು. ನುಡಿದಂತೆ ನಡೆದಿದ್ದಲ್ಲಿ ಈವರೆಗೆ 20 ಕೋಟಿ ಉದ್ಯೋಗ ಕೊಡಬೇಕಿತ್ತು' ಎಂದು ಲೇವಡಿ ಮಾಡಿದರು. 'ಅವರಿಗೆ ಮತ್ತೆ ಮತ ನೀಡಬೇಕಾ?' ಎಂದು ಕೇಳಿದರು. ಆಗ ನರೆದಿದ್ದವರು ಇಲ್ಲ ಎಂದು ಪ್ರತಿಕ್ರಿಯಿಸಿದರು.

'ಜನರು ದಡ್ಡರಲ್ಲ. ಬಿಜೆಪಿಯವರು ಎಷ್ಟೇ ದಾರಿ ತಪ್ಪಿಸಿದರೂ ಅರ್ಥ ಮಾಡಿಕೊಳ್ಳುತ್ತಾರೆ. ಪೆಟ್ರೋಲ್, ಡೀಸೆಲ್, ರಸಗೊಬ್ಬರ, ಅಡುಗೆ ಅನಿಲ ಸಿಲಿಂಡರ್ ಬೆಲೆ ಗಗನಕ್ಕೇರಿದೆ. ಇದರಿಂದ ಸಮಸ್ಯೆಯಾಗುತ್ತಿದೆ. ಇದಕ್ಕೆ ಕಾರಣವಾದವರು ಯಾರು?' ಎಂದು ಕೇಳಿದರು.

'ಜೈ ಶ್ರೀರಾಮ ಎನ್ನದಿದ್ದರೆ ಹಿಂದೂ ವಿರೋಧಿ ಎನ್ನುತ್ತಾರೆ. ನಾನು ಈಚೆಗೆ ಜೈ ಶ್ರೀರಾಮ ಘೋಷಣೆ ಕೂಗಿ– ನೆರೆದಿದ್ದವರಿಂದಲೂ ಕೂಗಿಸಿದ್ದಕ್ಕೆ, ಈಗಲಾದರೂ ಜ್ಞಾನೋದಯ ಆಯಿತಲ್ಲ ಎಂದು ಬಿಜೆಪಿಯವರು ವ್ಯಾಖ್ಯಾನ ಮಾಡುತ್ತಿದ್ದಾರೆ. ಜನರು ತಮ್ಮ ಪರವಾಗಿ ಇರುವವರನ್ನು ಮಾತ್ರ ಬೆಂಬಲಿಸಬೇಕು' ಎಂದು ಕೋರಿದರು.

'ಬಿ.ಎಸ್. ಯಡಿಯೂರಪ್ಪ ಅವರು ಮಾತ್ರ ರೈತನ ಮಕ್ಕಳಾ? ನಾವ್ಯಾರು? ನಾವು ಹಿಂದೂಗಳಲ್ಲವೇ? ಎಂದು ಕೇಳಿದರು.

'ಎಚ್‌.ಡಿ. ದೇವೇಗೌಡರೇ ನೀವು ಈಚೆಗೆ ಪ್ರಧಾನಿ ನರೇಂದ್ರ ಮೋದಿ ಜೊತೆ ಚೆನ್ನಾಗಿದ್ದೀರಲ್ಲಾ, ಕೇಂದ್ರದಿಂದ ಬರ ಪರಿಹಾರದ ಹಣ ಬಿಡುಗಡೆ ಮಾಡಿಸಿಕೊಡಿ' ಎಂದು ವ್ಯಂಗ್ಯವಾಗಿ ಕೋರಿದರು.

'ಬಿಜೆಪಿಯನ್ನು ವಿರೋಧಿಸುತ್ತಿದ್ದ ಜೆಡಿಎಸ್‌ನವರು ಈಗ ಮತ ಹಾಗೂ ಅಧಿಕಾರಕ್ಕಾಗಿ ಕೋಮುವಾದಿಗಳ ಜೊತೆ ಕೈಜೋಡಿಸಿದ್ದಾರೆ. ಈ ಡೋಂಗಿಗಳನ್ನು ಸೋಲಿಸಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಬೇಕು' ಎಂದು ಮನವಿ ಮಾಡಿದರು.

'ಜಾತ್ಯತೀತ ಎಂದು ಪಕ್ಷದ ಹೆಸರಿಟ್ಟುಕೊಂಡು ಈಗ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ' ಎಂದು ಲೇವಡಿ ಮಾಡಿದರು.

'ಗ್ಯಾರಂಟಿ ಯೋಜನೆಗಳಿಂದಾಗಿ 1.30 ಲಕ್ಷ ಕುಟುಂಬಗಳಿಗೆ ₹4 ಸಾವಿರದಿಂದ ₹ 5 ಸಾವಿರ ಲಾಭ ಸಿಗುತ್ತಿದೆ. ಇದರಿಂದ ರಾಜ್ಯದ 4.30 ಕೋಟಿ ಜನರು ಪ್ರಯೋಜನ ಪಡೆಯುತ್ತಿದ್ದಾರೆ. ಯಾವ ಸರ್ಕಾರವಾದರೂ ಇಂತಹ ಅನುಕೂಲ ಕಲ್ಪಿಸಿತ್ತಾ? ಎಂದು ಕೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ವೆಂಕಟೇಶ್, ಡಾ.ಎಚ್.ಸಿ.ಮಹದೇವಪ್ಪ, ಎನ್.ಎಸ್.ಬೋಸರಾಜು ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ 79 ಗ್ರಾಮಗಳ 150 ಕೆರೆ–ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುತ್ತಿನಮುಳುಸೋಗೆ ಗ್ರಾಮದ ಬಳಿ ಬುಧವಾರ ಚಾಲನೆ ನೀಡಿದರು. ಸಚಿವ ಡಾ.ಎಚ್‌.ಸಿ. ಮಹದೇವಪ್ಪ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕ ಡಿ.ರವಿಶಂಕರ್, ಸಚಿವರಾದ ಎನ್‌.ಎಸ್‌. ಬೋಸರಾಜು ಹಾಗೂ ಕೆ.ವೆಂಕಟೇಶ್ ಪಾಲ್ಗೊಂಡಿದ್ದರು

ದೇವೇಗೌಡರೇ ಹೇಳಿದ ಮೇಲೆ ಸಂಶಯ ಬೇಡ: ಪ್ರಜ್ವಲ್ ರೇವಣ್ಣ

ಹಾಸನ: 'ಹಾಲಿ ಸಂಸದರೇ ಮುಂದಿನ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಲಿದ್ದಾರೆ ಎಂದು ದೊಡ್ಡವರು (ಎಚ್‌.ಡಿ. ದೇವೇಗೌಡ) ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಾಗಿ, ಜೆಡಿಎಸ್ ಅಭ್ಯರ್ಥಿ ಯಾರು ಎಂಬ ಸಂಶಯ ಅನಗತ್ಯ' ಎಂದು ಸಂಸದ ಪ್ರಜ್ವಲ್ ರೇವಣ್ಣ ಹೇಳಿದರು.

ಇಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೇವೇಗೌಡರು ಈಗಾಗಲೇ ಪಕ್ಷದ ಮುಖಂಡರು, ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ, ತಾಲ್ಲೂಕುಗಳಲ್ಲಿ ನಡೆದಿರುವ ಸಭೆಗಳಲ್ಲಿ ಅಭ್ಯರ್ಥಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹೀಗಿರುವಾಗ ಅಭ್ಯರ್ಥಿ ಯಾರು ಎಂದು ಕೇಳುವ ಪ್ರಶ್ನೆ ಇಲ್ಲ' ಎಂದು ಹೇಳಿದರು.

'ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಅವರು ನನಗೆ ಆಶೀರ್ವಾದ ನೀಡಿದ್ದಾರೆ. ಬಿಜೆಪಿಯ ಕೆಲ ನಾಯಕರು ದೂರವಾಣಿ ಕರೆ ಮಾಡುವ ಮೂಲಕ ಕ್ಷೇತ್ರದಲ್ಲಿ ಸಂಚರಿಸಿ ಚುನಾವಣಾ ಪ್ರಚಾರ ಮುಂದುವರಿಸಲು ತಿಳಿಸಿದ್ದಾರೆ. ಜಿಲ್ಲೆಯಲ್ಲಿ 4,890 ಗ್ರಾಮಗಳಿದ್ದು, ಪ್ರಚಾರ ಮುಂದುವರಿಸಿದ್ದೇನೆ. ಬಿಜೆಪಿ– ಜೆಡಿಎಸ್ ಮೈತ್ರಿ ಬಳಿಕ ನಾವೆಲ್ಲರೂ ದೇವೇಗೌಡ ಹಾಗೂ ಎಚ್‌.ಡಿ. ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ. ಬಿಜೆಪಿ ಮುಖಂಡರು ಹಾಗೂ ಜೆಡಿಎಸ್ ವರಿಷ್ಠರೆಲ್ಲ ಸೇರಿ ಸಭೆ ನಡೆಸಿ, ಸೀಟು ಹಂಚಿಕೆ ಕುರಿತು ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದು ತಿಳಿಸಿದರು.

ಜಾಗೃತಿ ದಾವಣಗೆರೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬುಧವಾರ ಆಯೋಜಿಸಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಿಳೆಯರು ರಂಗೋಲಿ ಬಿಡಿಸುವ ಮೂಲಕ ಹೆಣ್ಣು ಮಗುವಿನ ರಕ್ಷಣೆ ಕುರಿತು ಜಾಗೃತಿ ಮೂಡಿಸಿದರು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

'ಬಟನ್' ಒತ್ತಿದಾಗ ಚಾಲನೆಗೊಳ್ಳದ ಯಂತ್ರ: ಸೆಸ್ಕ್ ಎಂಡಿ ಅಮಾನತು

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ಹಾಜರಿಲ್ಲದೇ ಕರ್ತವ್ಯ ಲೋಪ ಎಸಗಿದ, ಶಿಷ್ಟಾಚಾರ ಉಲ್ಲಂಘಿಸಿದ ಹಾಗೂ ಮುಜುಗರಕ್ಕೆ ಕಾರಣವಾದ ಹಿನ್ನೆಲೆಯಲ್ಲಿ ಇಲ್ಲಿನ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶ್ರೀಧರ್ (ಕೆಎಎಸ್, ಸೂಪರ್ ಟೈಂ ಸ್ಕೇಲ್) ಅವರನ್ನು ಇಲಾಖಾ ವಿಚಾರಣೆ ಬಾಕಿ ಇಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕಿನ ಮುತ್ತಿನಮುಳುಸೋಗೆ ಬಳಿ ಕಾವೇರಿ ನದಿಯಿಂದ ನೀರೆತ್ತಿ 79 ಗ್ರಾಮಗಳಲ್ಲಿ ಬರುವ 150 ಕೆರೆ–ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ ಉದ್ಘಾಟನೆಗೆ ಮುಖ್ಯಮಂತ್ರಿ ಬಂದಿದ್ದರು. ಅವರು ಬಟನ್ ಒತ್ತಿದಾಗ ಯಂತ್ರ ಚಾಲನೆ ಪಡೆದಿರಲಿಲ್ಲ. ಇದರಿಂದ ಅವರು ತೀವ್ರ ಮುಜುಗರಕ್ಕೆ ಒಳಗಾಗಿದ್ದರು ಹಾಗೂ ಅಧಿಕಾರಿಗಳ ವಿರುದ್ಧ ಸಿಡಿಮಿಡಿಗೊಂಡಿದ್ದರು.

ವ್ಯವಸ್ಥಿತವಾಗಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸಹಕಾರಿಯಾಗದೇ ಕರ್ತವ್ಯದಲ್ಲಿ ಅಸಡ್ಡೆ ಹಾಗೂ ನಿರ್ಲಕ್ಷ್ಯದಿಂದ ಸರ್ಕಾರವನ್ನು ಮುಜುಗರಕ್ಕೆ ಒಳಪಡುವ ಸನ್ನಿವೇಶ ಸೃಷ್ಟಿಗೆ ನೇರ ಕಾರಣವಾದ್ದರಿಂದ ಅವರ ವಿರುದ್ಧ ಕ್ರಮ ಜರುಗಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅಧಿಕಾರಿಯು ಅಮಾನತಿನ ಅವಧಿಯಲ್ಲಿ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಅವರು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಕೇಂದ್ರ ಸ್ಥಾನವನ್ನು ಬಿಡುವಂತಿಲ್ಲ ಎಂದು ಆದೇಶಿಸಲಾಗಿದೆ.

ಬರ ಪರಿಹಾರ ನೀಡದ ಕೇಂದ್ರ: ಸಿ.ಎಂ

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): 'ಕೇಂದ್ರ ಸರ್ಕಾರ ಬರ ಪರಿಹಾರವನ್ನು ಕೂಡ ಈವರೆಗೂ ಬಿಡುಗಡೆ ಮಾಡಿಲ್ಲ. ನಮ್ಮ ರೈತರು ಸಂಕಷ್ಟದಲ್ಲಿ ಇರುವುದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕಿನ ಬೈಲುಕುಪ್ಪೆಯಲ್ಲಿ ಬುಧವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರನ್ನು ಖುದ್ದಾಗಿ ಭೇಟಿಯಾಗಿ ಮನವಿ ಸಲ್ಲಿಸಿದ್ದೆ. ಆದರೆ, ಕೇಂದ್ರದವರು ಒಮ್ಮೆ ಸಭೆ ಕರೆದು ಮುಂದೂಡಿದರು. ಪ್ರಧಾನಿ ಈಚೆಗೆ ಬೆಂಗಳೂರಿಗೆ ಬಂದಾಗಲೂ, ಪರಿಹಾರವನ್ನು ಬೇಗ ನೀಡುವಂತೆ ಕೇಳಿಕೊಂಡಿದ್ದೆ. ಅಲ್ಲಿಂದ ಸ್ಪಂದನ ಸಿಗದಿದ್ದರಿಂದಾಗಿ, ಸದ್ಯಕ್ಕೆ ನಾವೇ ಬರ ನಿರ್ವಹಣೆ ಮಾಡುತ್ತಿದ್ದೇವೆ' ಎಂದು ತಿಳಿಸಿದರು.

'ಬರ ಪರಿಹಾರಕ್ಕಾಗಿ ನಮ್ಮ ಸರ್ಕಾರದಿಂದ ಈವರೆಗೆ ₹ 2ಸಾವಿರ ಕೋಟಿ ಖರ್ಚು ಮಾಡಿದ್ದೇವೆ. ಈಗ ₹ 550 ಕೋಟಿ ಬಿಡುಗಡೆ ಮಾಡಿದ್ದು, ರೈತರಿಗೆ ಮೊದಲ ಕಂತಿನ ಹಣವನ್ನು ವಾರದೊಳಗೆ ಖಾತೆಗೆ ಹಾಕಲಾಗುವುದು. ನಾವು ಸುಮ್ಮನೆ ಕುಳಿತಿಲ್ಲ. ಲೋಕಸಭಾ ಚುನಾವಣೆ ನೀತಿಸಂಹಿತೆ ಜಾರಿಯಾದರೂ ಬರ ಪರಿಹಾರ ಕಾರ್ಯಕ್ಕೆ ಅಡ್ಡಿಯಾಗುವುದಿಲ್ಲ' ಎಂದು ಪ್ರತಿಕ್ರಿಯಿಸಿದರು.

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೈಗೊಂಡಿರುವ ಭಾರತ್ ಜೋಡೊ ನ್ಯಾಯ ಯಾತ್ರೆಗೆ ಅಡ್ಡಿಪಡಿಸುತ್ತಿರುವುದು ಸಂವಿಧಾನ ವಿರೋಧಿಯಾಗಿದೆ' ಎಂದು ಸಿದ್ದರಾಮಯ್ಯ ಕಿಡಿಕಾರಿದರು.

'ಯಾತ್ರೆಗೆ ಉದ್ದೇಶಪೂರ್ವಕವಾಗಿ ತೊಂದರೆ ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರದ ವಿರುದ್ಧದ ಪ್ರತಿಭಟನೆ, ಪಾದಯಾತ್ರೆಗಳನ್ನು ಬಿಜೆಪಿ ಸಹಿಸುತ್ತಿಲ್ಲ. ದೇಶದ ಜನರ ಸಮಸ್ಯೆಗಳನ್ನು ತಿಳಿದುಕೊಳ್ಳಲು, ಅವುಗಳಿಗೆ ಪರಿಹಾರ ಕಂಡುಕೊಳ್ಳಲು ರಾಹುಲ್ ಪಾದಯಾತ್ರೆ ಮಾಡುತ್ತಿದ್ದಾರೆ. ಅಗತ್ಯ ಭದ್ರತೆ ನೀಡಬೇಕಿರುವುದು ಕೇಂದ್ರ ಹಾಗೂ ಆಯಾ ರಾಜ್ಯ ಸರ್ಕಾರಗಳ ಕರ್ತವ್ಯ' ಎಂದರು.

'ನೆಹರೂ ಕುಟುಂಬಕ್ಕೆ ಬೆದರಿಕೆ ಇದೆ. ಹೀಗಿರುವಾಗ, ರಾಹುಲ್ ಯಾತ್ರೆಗೆ ಉದ್ದೇಶಪೂರ್ವಕವಾಗಿ ಭದ್ರತಾ ಲೋಪ ಉಂಟು ಮಾಡುತ್ತಿರುವುದು ಸರಿಯಲ್ಲ. ಅಸ್ಸಾಂ ಮುಖ್ಯಮಂತ್ರಿ ಅವರು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮೆಚ್ಚಿಸಲು ಹೀಗೆಲ್ಲ ಮಾಡುತ್ತಿದ್ದಾರೆ' ಎಂದು ದೂರಿದರು. 'ಇದನ್ನು ತೀವ್ರವಾಗಿ ಖಂಡಿಸುತ್ತೇನೆ' ಎಂದು ಹೇಳಿದರು.

ಜಂಟಿ ಖಾತೆ ತೆರೆದರಷ್ಟೇ ಬರದ ನೆರವು: ಶೋಭಾ

ತುಮಕೂರು: ಬರ ಪರಿಹಾರದ ನೆರವು ಬೇಕಾದರೆ ರಾಜ್ಯ–ಕೇಂದ್ರ ಸರ್ಕಾರದ ಹೆಸರಿನಲ್ಲಿ ಜಂಟಿಯಾಗಿ ಬ್ಯಾಂಕ್‌ನಲ್ಲಿ ಖಾತೆ ತೆರೆಯಬೇಕು. ಖಾತೆ ತೆರೆದ ತಕ್ಷಣವೇ ಕೇಂದ್ರದಿಂದ ಹಣ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ನಗರದ ಎಪಿಎಂಸಿಯಲ್ಲಿ ಬುಧವಾರ ನಾಫೆಡ್ ಕೊಬ್ಬರಿ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು. 'ಈವರೆಗೂ ಕೇಂದ್ರದಿಂದ ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆಯಾಗಿಲ್ಲ. ಪ್ರಧಾನಿ ಮೇಲೆ ಒತ್ತಡ ತಂದು ನೆರವು ಕೊಡಿಸಬೇಕು' ಎಂದು ಗೃಹ ಸಚಿವ ಜಿ.ಪರಮೇಶ್ವರ ಒತ್ತಾಯಕ್ಕೆ ಈ ರೀತಿ ಸೂಚನೆ ನೀಡಿದರು.

ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಜಾರಿಯಾಗುತ್ತಿರುವ ಯಾವುದೇ ಯೋಜನೆಗಳಲ್ಲಿ ಅನುದಾನ ಸಿಗಬೇಕಾದರೆ ಇನ್ನು ಮುಂದೆ ಜಂಟಿ ಖಾತೆ ತೆರೆಯುವುದು ಕಡ್ಡಾಯ. ಈ ಬಗ್ಗೆ ನೀತಿ ಆಯೋಗ ಸ್ಪಷ್ಟವಾಗಿ ಸೂಚನೆ ನೀಡಿದೆ. ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಹಣ ಬಿಡುಗಡೆ ಮಾಡಿದರೂ ಸಾಕಷ್ಟು ಸಂದರ್ಭಗಳಲ್ಲಿ ರಾಜ್ಯ ಸರ್ಕಾರ ಹಣ ನೀಡುವುದಿಲ್ಲ. ಕೇಂದ್ರದ ಹಣ ವೆಚ್ಚವಾಗಿದ್ದರೂ ಹಣ ಕೊಡದೆ ರಾಜ್ಯ ಸತಾಯಿಸುತ್ತದೆ. ಇದರಿಂದ ಯೋಜನೆ ಜಾರಿ ಮಾಡುವುದು ಕಷ್ಟಕರವಾಗುತ್ತದೆ. ಹಾಗಾಗಿ ಜಂಟಿ ಖಾತೆ ಕಡ್ಡಾಯ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಅಭಿವೃದ್ಧಿ, ಅನುದಾನ ನೀಡುವ ವಿಚಾರದಲ್ಲಿ ಯಾವುದೇ ರಾಜ್ಯಕ್ಕೂ ತಾರತಮ್ಯ ಮಾಡುತ್ತಿಲ್ಲ. ಇದರಲ್ಲಿ ರಾಜಕೀಯ ಬೆರೆಸುತ್ತಿಲ್ಲ. ಎಲ್ಲ ರಾಜ್ಯಗಳು ಅಭಿವೃದ್ಧಿ ಹೊಂದಿದರೆ, ದೇಶ ಅಭಿವೃದ್ಧಿ ಕಾಣಲು ಸಾಧ್ಯವಿದೆ. ಹಾಗಾಗಿ ರಾಜ್ಯಕ್ಕೆ ಯಾವುದೇ ತಾರತಮ್ಯ ಮಾಡುವ ಪ್ರಶ್ನೆಯೇ ಇಲ್ಲ ಎಂದರು.

ಅಂಬೇಡ್ಕರ್ ಪುತ್ಥಳಿಗೆ ಅಪಮಾನ: ನಾಲ್ವರ ಬಂಧನ

ಕಲಬುರಗಿ: 'ಗಲಾಟೆ ಸೃಷ್ಟಿಸುವ ದುರುದ್ದೇಶದಿಂದಲೇ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ವಿಶ್ವವಿದ್ಯಾಲಯ ಠಾಣೆಯ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿದ್ದು, ನ್ಯಾಯಾಂಗದ ವಶಕ್ಕೆ ನೀಡಿದ್ದಾರೆ' ಎಂದು ಪೊಲೀಸ್ ಕಮಿಷನರ್ ಚೇತನ್ ಆರ್. ತಿಳಿಸಿದ್ದಾರೆ.

ಕೋಟನೂರ (ಡಿ) ಗ್ರಾಮದ ನಿವಾಸಿಗಳಾದ ಕಿರಣ್, ಮಾನು, ಹಣಮಂತ ಮತ್ತು ಸಂಗಮೇಶ ಬಂಧಿತ ಆರೋಪಿಗಳು. ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡಿದ್ದ ಸಂಗಮೇಶ, ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದ ಎನ್ನಲಾಗುತ್ತಿದೆ.

'ಆರೋಪಿಗಳನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಗಲಾಟೆ ಮಾಡುವ ದುಷ್ಕೃತ್ಯದಿಂದಲೇ ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ತಲೆ ಮರೆಸಿಕೊಂಡ ಇನ್ನೊಬ್ಬ ಆರೋಪಿಯನ್ನು ಪತ್ತೆ ಮಾಡಿದ ಬಳಿಕ, ನ್ಯಾಯಾಂಗ ಬಂಧನದಲ್ಲಿರುವ ಉಳಿದ ಆರೋಪಿಗಳನ್ನೂ ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆ ನಡೆಸಲಾಗುವುದು' ಎಂದು ಚೇತನ್ ತಿಳಿಸಿದರು.

ಬಾಲ್ಯ ವಿವಾಹ: ಆರೋಪಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ಪಟ್ಟಣದ ಉಪನೋಂದಣಾಧಿಕಾರಿ ಕಚೇರಿಗೆ ಸುಳ್ಳು ದಾಖಲಾತಿ ಸಲ್ಲಿಸಿ, ಬಾಲಕಿ ಜೊತೆ ವಿವಾಹ ನೋಂದಣಿ ಮಾಡಿಕೊಂಡ ಆರೋಪಿ ವಿರುದ್ಧ ತಾಲ್ಲೂಕಿನ ಬಂಕಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಳೇಬಂಕಾಪುರದ ನಾಗರಾಜ ಈಳಿಗೇರ ಎಂಬಾತ ಅದೇ ಗ್ರಾಮದ 17 ವರ್ಷ 7 ತಿಂಗಳ ಬಾಲಕಿಯನ್ನು ವಿವಾಹವಾದ ಆರೋಪಿ.

ನಾಗರಾಜ ಬಾಲಕಿಯೊಂದಿಗೆ 2023ರ ಸೆಪ್ಟೆಂಬರ್ 6ರಂದು ವಿವಾಹ ನೋಂದಣಿ ಮಾಡಿಕೊಂಡಿದ್ದ. ಕಳೆದ ಡಿಸೆಂಬರ್ 27ರಂದು ಈ ಇಬ್ಬರೂ ಮನೆ ಬಿಟ್ಟು ಪರಾರಿಯಾಗಿದ್ದಾರೆ ಎಂದು ಪರಿಶೀಲನೆಗೆ ಬಂದಿದ್ದ ಅಧಿಕಾರಿಗಳಿಗೆ ಬಾಲಕಿಯ ತಾಯಿ ಮಾಹಿತಿ ನೀಡಿದ್ದರು.

'ವಿವಾಹ ನೋಂದಣಿ ಮಾಡಿಕೊಳ್ಳುವಾಗ ಬಾಲಕಿಯ ವಯಸ್ಸನ್ನು ತಿದ್ದುಪಡಿ ಮಾಡಿಸಿ, ನೋಟರಿ ಮಾಡಿಸಿದ್ದರು. ವರನ ತಂದೆ–ತಾಯಿ ಮತ್ತು ವಧುವಿನ ಪರ ಅವರ ಸಂಬಂಧಿಗಳು ರುಜು ಮಾಡಿದ ದಾಖಲೆಗಳನ್ನು ಸಲ್ಲಿಸಿದ್ದರು. ಹೀಗಾಗಿ ಅವರ ವಿವಾಹ ನೋಂದಣಿ ಮಾಡಿದ್ದೇನೆ. ಸುಳ್ಳು ದಾಖಲಾತಿ ನೀಡಿರುವುದು ನಂತರ ಪತ್ತೆಯಾಗಿದೆ' ಎಂದು ಶಿಗ್ಗಾವಿ ಉಪನೋಂದಣಾಧಿಕಾರಿ ವಿನಯ್ ಆರ್. ತಿಳಿಸಿದ್ದಾರೆ.

'ಸಾರ್ವಜನಿಕರ ದೂರಿನ ಮೇರೆಗೆ ಬಾಲಕಿಯ ಶಾಲಾ ದಾಖಲಾತಿ ಬಗ್ಗೆ ಪರಿಶೀಲಿಸಿದಾಗ, ದಾಖಲಾತಿಗಳಲ್ಲಿನ ಲೋಪದೋಷಗಳು ಕಂಡು ಬಂದವು. ನಂತರ ಬಾಲಕಿಯ ಹೇಳಿಕೆ ಪಡೆದು ರಾಣೆಬೆನ್ನೂರಿನ ಸರ್ಕಾರಿ ಬಾಲಮಂದಿರಕ್ಕೆ ಕಳುಹಿಸಿದ್ದೇವೆ. ಪೋಷಕರಿಂದ ಮಾಹಿತಿ ಪಡೆದು, ಎಫ್‌ಐಆರ್ ಮಾಡಿಸಿದ್ದೇವೆ' ಎಂದು ತಾಲ್ಲೂಕು ಸಿಡಿಪಿಒ ಗಣೇಶ ಲಿಂಗನಗೌಡ್ರ ತಿಳಿಸಿದ್ದಾರೆ.

ಉಪಾಧಿವಂತರು–ವಿದ್ವಾಂಸರ ಬದಲಾವಣೆ ಪ್ರಶ್ನಿಸಿದ ಅರ್ಜಿ

ಗೋಕರ್ಣ ದೇಗುಲ: ಸರ್ಕಾರದ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋಕರ್ಣದ 'ಶ್ರೀ ಮಹಾಬಲೇಶ್ವರ ದೇವಸ್ಥಾನ'ದ ಆಡಳಿತ ನಿರ್ವಹಣೆಗಾಗಿ ಸುಪ್ರೀಂ ಕೋರ್ಟ್ ಆದೇಶದ ಅನುಸಾರ ರಚನೆಯಾಗಿದ್ದ ಮೇಲ್ವಿಚಾರಣಾ ಸಮಿತಿಯಲ್ಲಿನ ಇಬ್ಬರು ಉಪಾಧಿವಂತರು ಮತ್ತು ಇಬ್ಬರು ವಿದ್ವಾಂಸರನ್ನು ಬದಲಾಯಿಸಿದ್ದ ರಾಜ್ಯ ಸರ್ಕಾರದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಹೊಸನಗರದ ರಾಮಚಂದ್ರಾಪುರ ಮಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂತೋಷ ಹೆಗಡೆ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮೊರೆಹೋಗಿ ಸೂಕ್ತ ಆದೇಶ ಪಡೆಯಲು ಈ ತೀರ್ಪು ರಾಜ್ಯ ಸರ್ಕಾರಕ್ಕೆ ಯಾವುದೇ ರೀತಿ ಅಡ್ಡಿ ಉಂಟು ಮಾಡುವುದಿಲ್ಲ' ಎಂದೂ ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ.

'ಅರ್ಜಿದಾರರೇ ಸುಪ್ರೀಂ ಕೋರ್ಟ್‌ನಲ್ಲಿ ಬದಲಾವಣೆಯ ಆದೇಶವನ್ನು ಪ್ರಶ್ನೆ ಮಾಡಬಹುದಿತ್ತು' ಎಂಬ ರಾಜ್ಯ ಸರ್ಕಾರದ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠ, 'ಇದು ಸರ್ಕಾರದಿಂದಲೇ ಆಗಿರುವ ದೋಷ. ಸರ್ಕಾರ ಸುಪ್ರೀಂ ಕೋರ್ಟ್‌ನ ಅನುಮತಿ ಪಡೆಯಬೇಕಾಗಿತ್ತು. ಆದರೆ, ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಆದೇಶವನ್ನು ಮೀರಲು ಪ್ರಯತ್ನಿಸಿದೆ' ಎಂದು ಹೇಳಿದೆ.

'ಸರ್ಕಾರ ಬದಲಾವಣೆಯಾಗಿದೆ ಎಂದಮಾತ್ರಕ್ಕೆ ಸುಪ್ರೀಂ ಕೋರ್ಟ್‌ನ ಆದೇಶ ಉಲ್ಲಂಘಿಸುವ ಪ್ರಯತ್ನ ಮಾಡಲಾಗದು. ಅಲ್ಲದೆ, ಹಿಂದಿನ ಸರ್ಕಾರ ಮಾಡಿದ ನಾಮ ನಿರ್ದೇಶನವನ್ನು ಒಂದು ಆದೇಶದ ಮೂಲಕ ಸಂಪೂರ್ಣವಾಗಿ ರದ್ದುಪಡಿಸುವ ಅಧಿಕಾರ ಹೊಸ ಸರ್ಕಾರಕ್ಕೆ ಇರುವುದಿಲ್ಲ. ಆದರೆ, ಹಿಂದಿನ ಸರ್ಕಾರ ಮಾಡಿರುವ ನಿರ್ಧಾರಗಳು ಕಾನೂನಿಗೆ ವಿರುದ್ಧವಾಗಿವೆ ಎಂದಾದಲ್ಲಿ ಮಾತ್ರವೇ ಬದಲಾವಣೆ ಮಾಡಬಹುದು' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪಿ.ಎನ್. ಮನಮೋಹನ್ ವಾದ ಮಂಡಿಸಿದ್ದರು.

ಪ್ರಕರಣವೇನು?

ಗೋಕರ್ಣದ 'ಶ್ರೀ ಮಹಾಬಲೇಶ್ವರ ದೇವಸ್ಥಾನ'ದ ಡಿ–ನೋಟಿಫೈ ಪ್ರಕರಣದ ಸಿವಿಲ್ ದಾವೆಯಲ್ಲಿ ಸುಪ್ರೀಂ ಕೋರ್ಟ್ 2021ರ ಏಪ್ರಿಲ್ 19ರಂದು ಮಧ್ಯಂತರ ಆದೇಶ ನೀಡಿತ್ತು. ಈ ಆದೇಶದ ಅನುಸಾರ ದೇವಸ್ಥಾನದ ಆಡಳಿತ ನಿರ್ವಹಣೆಗಾಗಿ 2021ರ ಮೇ 4ರಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ನೇತೃತ್ವದಲ್ಲಿ ಅಧ್ಯಕ್ಷರನ್ನೂ ಒಳಗೊಂಡಂತೆ 8 ಸದಸ್ಯರ ಮೇಲ್ವಿಚಾರಣಾ ಸಮಿತಿ ರಚಿಸಲಾಗಿತ್ತು.

ಏತನ್ಮಧ್ಯೆ, 2023ರ ರಾಜ್ಯ ವಿಧಾನಸಭೆ ಚುನಾವಣೆ ನಂತರ ನೂತನ ರಾಜ್ಯ ಸರ್ಕಾರ ಎಲ್ಲ ನಾಮ ನಿರ್ದೇಶನಗಳನ್ನು 2023ರ ಮೇ 22ರಂದು ರದ್ದುಪಡಿಸಿ ಆದೇಶಿಸಿತ್ತು. ಈ ಆದೇಶದನ್ವಯ ಗೋಕರ್ಣ ದೇವಾಲಯದ ಸಮಿತಿಯಲ್ಲಿದ್ದ ಉಪಾಧಿವಂತರಾದ ಮಹಾಬಲ ಉಪಾಧ್ಯೆ, ದತ್ತಾತ್ರೇಯ ಹಿರೇಗಂಗೆ ಮತ್ತು ವಿದ್ವಾಂಸರಾದ ಪರಮೇಶ್ವರ ಮಾರ್ಕಾಂಡೆ ಹಾಗೂ ಮುರಳೀಧರ ಪ್ರಭು ಅವರನ್ನು ಕೈಬಿಡಲಾಗಿತ್ತು.

ಉಪಾಧಿವಂತರ ಸ್ಥಾನಕ್ಕೆ ಗಣಪತಿ ಶಿವರಾಮ ಹಿರೇಭಟ್ಟ, ಸುಬ್ರಹ್ಮಣ್ಯ ಚಂದ್ರಶೇಖರ ಅಡಿ ಹಾಗೂ ವಿದ್ವಾಂಸರ ಸ್ಥಾನಕ್ಕೆ ಪರಮೇಶ್ವರ ಸುಬ್ರಹ್ಮಣ್ಯ ಪ್ರಸಾದ ರಮಣಿ ಹಾಗೂ ಮಹೇಶ್ ಗಣೇಶ್ ಹಿರೇಗಂಗೆ ಅವರನ್ನು ನಾಮ ನಿರ್ದೇಶನ ಮಾಡಿತ್ತು. ಈ ಕುರಿತಂತೆ ಕಂದಾಯ ಇಲಾಖೆ ಹೊರಡಿಸಿದ್ದ ಆದೇಶವನ್ನು ರಾಮಚಂದ್ರಾಪುರ ಮಠವು ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಗುರುವಾರ, ಜನವರಿ 25, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಹಿತ್ಯೋತ್ಸವ
ಕೋಲ್ಕತ್ತದಲ್ಲಿ ಬುಧವಾರ ನಡೆದ 'ಕೋಲ್ಕತ್ತ ಸಾಹಿತ್ಯೋತ್ಸವ'ದಲ್ಲಿ ನಟಿ ಹುಮಾ ಖುರೇಶಿ ಪಾಲ್ಗೊಂಡಿದ್ದರು



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಮಾಜ ಕಲ್ಯಾಣ ಇಲಾಖೆ

ಸಂವಿಧಾನ ಕರಡು ಸಮಿತಿ ಅಧ್ಯಕ್ಷರಾದ **ಡಾ. ಬಾಬಾ ಸಾಹೇಬ್ ಅಂಬೇಡ್ಕರ್** ಅವರು ಸಂವಿಧಾನ ರಚನಾ ಸಭೆ ಅಧ್ಯಕ್ಷರಾದ **ಡಾ. ರಾಜೇಂದ್ರ ಪ್ರಸಾದ್** ಅವರಿಗೆ ಭಾರತೀಯ ಸಂವಿಧಾನದ ಅಂತಿಮ ಕರಡನ್ನು ನೀಡುತ್ತಿರುವುದು.

ನಮ್ಮ ಹಕ್ಕುಗಳ ಜನನಿ
ನಮ್ಮ ಸಂವಿಧಾನ



ಡಾ. ಬಿ. ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವನ್ನು ಅಂಗೀಕರಿಸಿಕೊಂಡ 75ನೇ ವರ್ಷಾಚರಣೆ ಅಂಗವಾಗಿ ಕರ್ನಾಟಕ ಸರ್ಕಾರವು

ಸಂವಿಧಾನ ಜಾಗೃತಿ ಜಾಥಾವನ್ನು

ರಾಜ್ಯದಾದ್ಯಂತ 26ನೇ ಜನವರಿ 2024 ರಿಂದ ಹಮ್ಮಿಕೊಂಡಿದೆ

26-01-2024 ರಂದು ಪ್ರತಿ ಜಿಲ್ಲೆಯಲ್ಲಿ ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರಿಂದ **ಸಂವಿಧಾನ ಜಾಗೃತಿ ಜಾಥಾಕ್ಕೆ ಚಾಲನೆ**

25-02-2024 ರಂದು ಬೆಂಗಳೂರಿನಲ್ಲಿ **ಬೃಹತ್ ಸಮಾವೇಶ**

ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ಮತ್ತು ಸಮಾನತೆ ಕುರಿತು **ವಿಚಾರಸಂಕಿರಣ**

ಶಾಲೆಗಳಲ್ಲಿ ವಿಜ್ಞಾನ **ವಸ್ತುಪ್ರದರ್ಶನ** ಆಯೋಜನೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿ

ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ
https://constitutionofindia-karnataka.in/home-kannada/

ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿರುವುದು.

ನುಡಿದಂತೆ ನಡೆದಿದ್ದೇವೆ...

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಗೃಹಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170

ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೊಮಾ ಪದವೀಧರರಿಗೆ

ನಾಡಿನ ಸಮಸ್ತ ಜನತೆಗೆ 75ನೇ ಗಣರಾಜ್ಯೋತ್ಸವದ ಶುಭಾಶಯಗಳು

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು; - ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

@SWDGok @swd.gok

ಮಣಿಪುರ ರಕ್ಷಣೆ: ಕಾರ್ಯಕ್ರಮದಲ್ಲಿ ಮೈತೇಯಿ ಬುಡಕಟ್ಟಿಗೆ ಸೇರಿದ 37 ಶಾಸಕರು, ಇಬ್ಬರು ಸಂಸದರು ಭಾಗಿ

ಸಶಸ್ತ್ರ ಗುಂಪಿನಿಂದ 'ಪ್ರತಿಜ್ಞಾವಿಧಿ' ಬೋಧನೆ

ಪ್ರಜಾವಾಣಿ ವಾರ್ತೆ/ಪಿಟಿಐ

ಗುವಾಹಟಿ: ಅಚ್ಚರಿಯ ಬೆಳವಣಿಗೆಯೊಂದರಲ್ಲಿ, 'ಅರಾಂಬಾಯಿ ತೆಂಗೋಲ್' ಎಂಬ ಸಶಸ್ತ್ರ ತೀವ್ರಗಾಮಿಗಳ ಸಂಘಟನೆ, ಮಣಿಪುರ ರಾಜ್ಯ ರಕ್ಷಣೆ ಮಾಡುವುದಕ್ಕೆ ಸಂಬಂಧಿಸಿ ಮೈತೇಯಿ ಬುಡಕಟ್ಟಿಗೆ ಸೇರಿದ 39 ಶಾಸಕರು ಹಾಗೂ ಇಬ್ಬರು ಸಂಸದರಿಗೆ ಬುಧವಾರ 'ಪ್ರತಿಜ್ಞಾವಿಧಿ' ಬೋಧಿಸಿದೆ.

ಮಣಿಪುರ ರಾಜಧಾನಿ ಇಂಫಾಲ್‌ನಲ್ಲಿರುವ ಐತಿಹಾಸಿಕ ಕಂಗ್ಲಾ ಕೋಟೆಯಲ್ಲಿ ಈ 'ಪ್ರತಿಜ್ಞಾ ವಿಧಿ' ಬೋಧಿಸುವ ಕಾರ್ಯಕ್ರಮ ನಡೆದಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಸಮುದಾಯದ ಎಲ್ಲ 40 ಶಾಸಕರು ಹಾಗೂ ಸಂಸದರಿಗೆ ಸಂಘಟನೆಯು ಸೂಚನೆ ನೀಡಿತ್ತು.

ಆದರೆ, ಮುಖ್ಯಮಂತ್ರಿ ಬಿರೇನ್ ಸಿಂಗ್ ಹಾಗೂ ಮತ್ತೊಬ್ಬ ಶಾಸಕ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರಲಿಲ್ಲ. ಉಳಿದವರು ಪ್ರತಿಜ್ಞೆ ಸ್ವೀಕರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಪ್ರತಿಜ್ಞಾವಿಧಿ ಕಾರ್ಯಕ್ರಮದ ಚಿತ್ರಗಳನ್ನು ಸಂಘಟನೆಯು ತನ್ನ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದೆ. ಸಂಘಟನೆಯ ಬೇಡಿಕೆಗಳನ್ನು ಒಳಗೊಂಡ ಪತ್ರಕ್ಕೆ ಮುಖ್ಯಮಂತ್ರಿ ಬಿರೇನ್ ಸಿಂಗ್, ಹಿರಿಯ ಸಚಿವ ವಿಶ್ವಜಿತ್ ಸಿಂಗ್ ಸೇರಿದಂತೆ 39 ಶಾಸಕರು, ಇಬ್ಬರು ಸಂಸದರು ಸಹಿ ಹಾಕಿರುವುದು ಈ ಫೇಸ್‌ಬುಕ್ ಪೋಸ್ಟ್‌ನಲ್ಲಿ ಕಾಣಿಸುತ್ತದೆ.

'ಮುಖ್ಯಮಂತ್ರಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರಲಿಲ್ಲ. ಆದರೆ, ಪತ್ರಕ್ಕೆ ಸಹಿ ಹಾಕಿದ್ದಾರೆ' ಎಂದು ಮೂಲಗಳು ಹೇಳಿವೆ.

ಕಾರ್ಯಕ್ರಮಕ್ಕೆ ಸಂಬಂಧಿಸಿದ ವಿಡಿಯೊವನ್ನು ಸಹ ಸಾಮಾಜಿಕ ಮಾಧ್ಯಮಗಳಲ್ಲಿ ಬಿಡುಗಡೆ ಮಾಡಲಾಗಿದೆ. ಸಂಘಟನೆಯ ಸದಸ್ಯರು ಬೋಧಿಸಿದಂತೆ ಶಾಸಕರು ಹಾಗೂ ಸಂಸದರು ಪ್ರತಿಜ್ಞಾವಿಧಿ ಉಚ್ಚರಿಸುತ್ತಿರುವ ದೃಶ್ಯಗಳು ವಿಡಿಯೊದಲ್ಲಿವೆ. ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್‌ನ ಹಿರಿಯ ನಾಯಕ ಒಕ್ರಾಮ್ ಇಬೋಬಿ ಸಿಂಗ್, ವಿದೇಶಾಂಗ ಖಾತೆ ರಾಜ್ಯ ಸಚಿವ ಆರ್.ಕೆ.ಸಿಂಗ್, ರಾಜ್ಯಸಭಾ ಸದಸ್ಯ ಲೀಶೆಂಬಾ ಸನಾಜೋಬಾ ಪ್ರತಿಜ್ಞೆ ಸ್ವೀಕರಿಸಿದ ಪ್ರಮುಖರು. ಬಹುತೇಕ ಶಾಸಕರು ಬಿಜೆಪಿಗೆ ಸೇರಿದವರಾಗಿದ್ದಾರೆ.

ಆತಂಕ: 'ಸಂಘಟನೆಯು ಪ್ರತಿಜ್ಞಾ ವಿಧಿ ಬೋಧಿಸಿದ ಈ ಬೆಳವಣಿಗೆಯಿಂದ ನಾವು ಗಾಬರಿಗೊಂಡಿದ್ದೇವೆ' ಎಂದು ಕುಕಿ ಬುಡಕಟ್ಟು ಗುಂಪುಗಳು ಹೇಳಿವೆ.

'ಮಣಿಪುರದಲ್ಲಿ ಕಳೆದ ವರ್ಷ ಮೇನಲ್ಲಿ ಆರಂಭವಾದ ಹಿಂಸಾಚಾರದಲ್ಲಿ ಕುಕಿ ಸಮುದಾಯದವರ ಹತ್ಯೆಯಲ್ಲಿ ಅರಾಂಬಾಯಿ ತೆಂಗೋಲ್ ಸಂಘಟನೆಯ ಪಾತ್ರ ಇತ್ತು' ಎಂದು ಕುಕಿ ಗುಂಪುಗಳು ಹೇಳಿವೆ.

'ಸಂಘಟನೆಯ ಮುಖ್ಯಸ್ಥ ಕೋರೌಂಗ್‌ಬನ್ ಖುಮಾನ್, ಕಾರ್ಯಕ್ರಮ ನಡೆದ ಸ್ಥಳಕ್ಕೆ ಬಂದಾಗ ಮಣಿಪುರ ಪೊಲೀಸರು ಹಾಗೂ ಕೇಂದ್ರೀಯ ಭದ್ರತಾ ಪಡೆಗಳ ಸಿಬ್ಬಂದಿ ಮೂಕಪ್ರೇಕ್ಷಕರಂತೆ ನಿಂತಿದ್ದರು' ಎಂದು ಕುಕಿ ಗುಂಪುಗಳ ವೇದಿಕೆ ಐಟಿಎಲ್‌ಎಫ್ ಹೇಳಿದೆ.

ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿ ಮಾಡಬೇಕು ಎಂದೂ ಅದು ಒತ್ತಾಯಿಸಿದೆ.

ಶಾಗೆ ಪತ್ರ: ಕುಕಿ–ಝೋ–ಮಾರ್ ಸಮುದಾಯಕ್ಕೆ ಸೇರಿದ 10 ಶಾಸಕರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಈ ಕುರಿತು ಪತ್ರ ಬರೆದಿದ್ದಾರೆ. ಮಣಿಪುರದಲ್ಲಿ ಕೂಡಲೇ ಆಫ್‌ಸ್ಪಾ ಮರು ಜಾರಿ ಮಾಡಬೇಕು, ಮೋರೆ ಪಟ್ಟಣದಿಂದ ರಾಜ್ಯ ಪೊಲೀಸರನ್ನು ವಾಪಸು ಕರೆಸಿಕೊಳ್ಳಬೇಕು ಎಂದು ಕೋರಿದ್ದಾರೆ.

'ತೆಂಗೋಲ್' ಬೇಡಿಕೆಗಳೇನು?

ಅರಾಂಬಾಯಿ ತೆಂಗೋಲ್ ಸಂಘಟನೆಯು ಕೆಲ ಬೇಡಿಕೆಗಳನ್ನು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕರು ಹಾಗೂ ಸಂಸದರ ಮುಂದಿಟ್ಟಿದೆ ಎಂದು ಮೂಲಗಳು ಹೇಳಿವೆ.

ಮಣಿಪುರದ 35 ಶಾಸಕರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸೋಮವಾರ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದ ಬೇಡಿಕೆಗಳಲ್ಲಿ ಸಂಘಟನೆ ಮುಂದಿಟ್ಟಿರುವ ಬೇಡಿಕೆಗಳು ಒಂದೇ ಆಗಿವೆ. ಸಂಘರ್ಷಕ್ಕೆ ಕೊನೆ ಹಾಡಲು ಈ ಬೇಡಿಕೆಗಳನ್ನು ಕೂಡಲೇ ಈಡೇರಿಸುವಂತೆ ಒತ್ತಾಯಿಸಿದ್ದ ಶಾಸಕರು, ತಪ್ಪಿದಲ್ಲಿ ಮಣಿಪುರ ಜನರೊಂದಿಗೆ ಸಮಾಲೋಚಿಸಿ ಸೂಕ್ತ ಹೆಜ್ಜೆ ಇಡುವುದಾಗಿಯೂ ಹೇಳಿದ್ದರು.

ಸಂಘಟನೆಯ ಪ್ರಮುಖ ಬೇಡಿಕೆಗಳು ಹೀಗಿವೆ:

- ಕಣಿವೆ ರಾಜ್ಯದಲ್ಲಿ ಕೈಗೊಂಡಿರುವ ಕಾರ್ಯಾಚರಣೆಯನ್ನು ನಿಲ್ಲಿಸಬೇಕು
- ಕುಕಿ ಬಂಡುಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು
- ಕುಕಿಗಳಿಗೆ ನೀಡಿರುವ ಎಸ್‌ಟಿ ಸ್ಥಾನ ರದ್ದು ಮಾಡಬೇಕು
- ಮಣಿಪುರ ಪ್ರವೇಶಿಸಿರುವ ವಿದೇಶಿಯರನ್ನು ಪತ್ತೆ ಹಚ್ಚುವುದಕ್ಕಾಗಿ ಎನ್‌ಆರ್‌ಸಿ ಜಾರಿಗೊಳಿಸಬೇಕು
- ಅಸ್ಸಾಂ ರೈಫಲ್ಸ್ ತುಕಡಿಯನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು

ಸುದ್ದಿ 2 ನಿಮಿಷ

ಗಣರಾಜ್ಯೋತ್ಸವದ ಪಥ ಸಂಚಲನದಲ್ಲಿ ಲಕ್ಷ್ಮಿ ಸಾಹಸ

ಅಮೀನಗಡ (ಬಾಗಲಕೋಟೆ ಜಿಲ್ಲೆ): ನವದೆಹಲಿಯಲ್ಲಿ ಜನವರಿ 26ರಂದು ನಡೆಯುವ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಮಹಿಳೆಯರ ಸೇನಾ ತಂಡ ಸಾಹಸ ಪ್ರದರ್ಶಿಸಲಿದ್ದು, ತಂಡದಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಬೇವಿನಮಟ್ಟಿ ಗ್ರಾಮದಲ್ಲಿ ಕಲಿತ ಲಕ್ಷ್ಮಿ ಪಚ್ಚೇರ್ ಕೂಡ ಒಬ್ಬರಾಗಿದ್ದಾರೆ. ಸಶಸ್ತ್ರ ಸೀಮಾ ಬಲ (ಎಸ್‌ಎಸ್‌ಬಿ) ತಂಡವು 'ಚಂದ್ರಯಾನ-3' ಎಂಬ ಹೆಸರಿನಲ್ಲಿ ಸಾಹಸಮಯ ಪ್ರದರ್ಶನ ನೀಡಲಿದೆ. ಇದರಲ್ಲಿ ಲಕ್ಷ್ಮಿ ಕೂಡ ಇದ್ದಾರೆ.

ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಕಾಟಾಪೂರ ಗ್ರಾಮದ ಲಕ್ಷ್ಮಿ ಪ್ರೌಢಶಿಕ್ಷಣವನ್ನು ಬೇವಿನಮಟ್ಟಿಯಲ್ಲಿ ಪೂರೈಸಿ, ಹುನಗುಂದದಲ್ಲಿ ಪದವಿ ಶಿಕ್ಷಣ ಪಡೆದರು. 2021ರಲ್ಲಿ ಸೇನೆಗೆ ಸೇರಿ, ಸದ್ಯ ಭೂತನ ಗಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

'ಸಾಹಸಮಯ ಪ್ರದರ್ಶನಕ್ಕೆ ಅಭ್ಯಾಸ ಮಾಡುವ ವೇಳೆ ಭಯವಿತ್ತು. ಈಗ ಆತ್ಮವಿಶ್ವಾಸ ಮೂಡಿದೆ. ಪಥಸಂಚಲನದಲ್ಲಿ ಪ್ರದರ್ಶನ ನೀಡಲು ಅವಕಾಶ ಸಿಕ್ಕಿದ್ದು ಹೆಮ್ಮೆಯ ಜೊತೆಗೆ ಖುಷಿ ತಂದಿದೆ' ಎಂದು ಲಕ್ಷ್ಮಿ ಪಚ್ಚೇರ್ ತಿಳಿಸಿದರು.

ಫೆ.16ರಂದು ಭಾರತ ಬಂದ್‌ಗೆ ಕರೆ

ನವದೆಹಲಿ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಕಾರ್ಪೊರೇಟ್ ಪರ ನಿಲುವು ಹಾಗೂ ಕೋಮುವಾದಿ ಮತ್ತು ಸರ್ವಾಧಿಕಾರಿ ಧೋರಣೆ ಖಂಡಿಸಿ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಬಿಎಂಎಸ್ ಹೊರತುಪಡಿಸಿ ಇತರ ಕಾರ್ಮಿಕ ಸಂಘಟನೆಗಳು ಫೆ.16ರಂದು ಭಾರತ ಬಂದ್ ನಡೆಸುವುದಾಗಿ ಘೋಷಿಸಿವೆ.

ಸುದ್ದಿಗಾರರೊಂದಿಗೆ ಮಾತನಾಡಿದ ಭಾರತೀಯ ಕಿಸಾನ್ ಒಕ್ಕೂಟದ ನರೇಂದ್ರ ಟಿಕಾಯತ್, 'ಹಲವು ರೈತ ಸಂಘಟನೆಗಳು ಬಂದ್‌ನಲ್ಲಿ ಭಾಗಿಯಾಗಲಿವೆ. ಆ ದಿನ ರೈತರು ತಮ್ಮ ಜಮೀನಿಗೆ ತೆರಳದೆ ಪ್ರತಿಭಟನೆ ನಡೆಸಬೇಕು' ಎಂದು ಕರೆ ನೀಡಿದರು.

ಕನಿಷ್ಠ ಬೆಂಬಲ ಬೆಲೆ ಗ್ಯಾರಂಟಿ ಕಾನೂನು, ನಿರುದ್ಯೋಗ, ಅಗ್ನಿವೀರ ಯೋಜನೆ, ಪಿಂಚಣಿ ಯೋಜನೆಗಳು ದೇಶದ ಪ್ರಮುಖ ಸಮಸ್ಯೆಗಳಾಗಿವೆ ಎಂದು ಅವರು ಹೇಳಿದರು.

ಯಶಸ್ಸಿನ ಗುಟ್ಟು ಬಿಡಿಸಿಟ್ಟ 'ಗೈಡಿಂಗ್ ಫೋರ್ಸ್'

ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಬಗೆ ತಿಳಿಸಿದ ಐಎಎಸ್, ಐಪಿಎಸ್ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪಿಯು, ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಸರ್ಕಾರಿ ಉದ್ಯೋಗಕ್ಕೆ ಸೇರಬೇಕೆಂಬ ಹಂಬಲವಿತ್ತು. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಐಎಎಸ್, ಐಪಿಎಸ್ ಅಧಿಕಾರಿಗಳಾಗಬೇಕು ಎಂಬ ಛಲವಿತ್ತು. ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸಿನ ಏಣಿ ಏರುವ ಬಗೆ ಅರಿತಾಗ ಪ್ರತಿಯೊಬ್ಬರ ಮೊಗ ಆತ್ಮವಿಶ್ವಾಸದಿಂದ ಅರಳಿದ್ದವು.

ಇಂತಹದ್ದೊಂದು ಅಪರೂಪದ ವಿದ್ಯಮಾನಕ್ಕೆ ಸಾಕ್ಷಿಯಾಗಿದ್ದು ನಗರದ ತರಾಸು ರಂಗಮಂದಿರ. 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್', 'ಸ್ಪರ್ಧಾವಾಣಿ' ಹಾಗೂ 'ಮಾಸ್ಟರ್ ಮೈಂಡ್' ವತಿಯಿಂದ ಬುಧವಾರ ಏರ್ಪಡಿಸಿದ್ದ 'ಗೈಡಿಂಗ್ ಫೋರ್ಸ್' ಇದಕ್ಕೆ ವೇದಿಕೆ ಒದಗಿಸಿತ್ತು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕಿಕ್ಕಿರಿದು ಸೇರಿದ್ದರು.

ಚಿತ್ರದುರ್ಗದ ತರಾಸು ರಂಗಮಂದಿರದಲ್ಲಿ ಬುಧವಾರ ಏರ್ಪಡಿಸಿದ್ದ 'ಗೈಡಿಂಗ್ ಫೋರ್ಸ್' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸ್ಪರ್ಧಾ ಆಕಾಂಕ್ಷಿಗಳು –ಪ್ರಜಾವಾಣಿ ಚಿತ್ರ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತ ಕೆ.ಎ.ದಯಾನಂದ ಹಾಗೂ ಅಗ್ನಿಶಾಮಕ ಮತ್ತು ತುರ್ತುಸೇವಾ ಇಲಾಖೆಯ ಡಿಐಜಿ ರವಿ ಡಿ.ಚನ್ನಣ್ಣನವರ್ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸುವ ರೀತಿಯನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ಗ್ರಾಮೀಣ ಪ್ರದೇಶದ ಹಿನ್ನೆಲೆ, ಬಡತನದ ಬೇಗೆ, ಬದುಕಿನ ಅನುಭವಗಳನ್ನು ಮುಂದಿಡುತ್ತ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳಾದ ರೀತಿಯನ್ನು ವಿವರಿಸಿದರು.

ಕೇಂದ್ರೀಯ ಲೋಕಸೇವಾ ಆಯೋಗ (ಯುಪಿಎಸ್‌ಸಿ), ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪರೀಕ್ಷೆ, ಬ್ಯಾಂಕಿಂಗ್ ಸೇರಿ ಎಲ್ಲ ಪರೀಕ್ಷೆ ಎದುರಿಸುವ ಸಂಕಲ್ಪ ಮಾಡಬೇಕು ಎಂದು ಸಂಪನ್ಮೂಲ ವ್ಯಕ್ತಿಗಳು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು. ಪಠ್ಯ, ಪರೀಕ್ಷಾ ಪತ್ರಿಕೆಗಳ ಸಂಗ್ರಹ, ಓದುವ ಸಾಮಗ್ರಿ ಕಲೆಹಾಕುವುದೂ ಸೇರಿದಂತೆ ಹಲವು ಗುಟ್ಟುಗಳನ್ನು ಮನದಟ್ಟು ಮಾಡಿಕೊಟ್ಟರು.

> **ಎನ್‌ಸಿಇಆರ್‌ಟಿ ಪಠ್ಯವನ್ನು ಸರಿಯಾಗಿ ಅಧ್ಯಯನ ಮಾಡಬೇಕು. ನಿತ್ಯ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್, ಸ್ಪರ್ಧಾವಾಣಿ, ಯೋಜನಾ, ಕುರುಕ್ಷೇತ್ರ ಪತ್ರಿಕೆ ಓದಿ**
> **ರವಿ ಡಿ.ಚನ್ನಣ್ಣನವರ್,** ಡಿಐಜಿ, ಅಗ್ನಿಶಾಮಕ ಮತ್ತು ತುರ್ತುಸೇವಾ ಇಲಾಖೆ

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, 'ಡೆಕ್ಕನ್ ಹೆರಾಲ್ಡ್' ಶಿಕ್ಷಣ ವಿಭಾಗದ ಸಹಾಯಕ ಪ್ರಧಾನ ವ್ಯವಸ್ಥಾಪಕ ಎಂ.ವಿ.ಸುರೇಶ್, ಮುಖ್ಯಸ್ಥೆ ಅಭಿಲಾಷಾ ಶ್ರೀವಾಸ್ತವ್, ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾ ಅಧಿಕಾರಿ ಆರ್. ಸುಬ್ರಾನಾಯಕ್ ಇದ್ದರು.

ಗಣರಾಜ್ಯೋತ್ಸವ: 14 ಸಾವಿರ ಭದ್ರತಾ ಸಿಬ್ಬಂದಿ

ನವದೆಹಲಿ (ಪಿಟಿಐ): ದೆಹಲಿಯ ಕರ್ತವ್ಯ ಪಥದಲ್ಲಿ ಇದೇ 26ರಂದು ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ನ ಭದ್ರತೆಗೆ 14 ಸಾವಿರ ಸಿಬ್ಬಂದಿಯನ್ನು ನಿಯೋಜಿಸಲಾಗುವುದು ಎಂದು ದೆಹಲಿ ಪೊಲೀಸರು ಬುಧವಾರ ತಿಳಿಸಿದ್ದಾರೆ.

ಪರೇಡ್ ವೀಕ್ಷಿಸಲು ಬರುವ ಸುಮಾರು 77,000 ಆಹ್ವಾನಿತರ ಸುರಕ್ಷತೆ ಮತ್ತು ಭದ್ರತೆಗಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ವೃತ್ತಿಪರರಿಂದ ಬಲಿಷ್ಠವಾದ ಭದ್ರತಾ ವ್ಯವಸ್ಥೆ ರೂಪಿಸಲಾಗುವುದು ಎಂದು ದೆಹಲಿಯ ವಿಶೇಷ ಪೊಲೀಸ್ ಆಯುಕ್ತ (ಭದ್ರತೆ) ದೀಪೇಂದ್ರ ಪಾಠಕ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವೈಮಾನಿಕ ಬೆದರಿಕೆಗಳನ್ನು ಎದುರಿಸಲು ದೆಹಲಿ ಪೊಲೀಸರು ಸಿದ್ಧತೆ ನಡೆಸಿದ್ದಾರೆ ಎಂದ ಅವರು, ಹಲವೆಡೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಹೆಚ್ಚಿನ ನಿಗಾವಹಿಸಲಾಗಿದೆ ಎಂದರು.

ಪರೇಡ್ ವೀಕ್ಷಣೆಗೆ ಬರುವವರ ಶೂಗಳನ್ನೂ ತಪಾಸಣೆಗೆ ಒಳಪಡಿಸಲಾಗುವುದು ಎಂದು ತಿಳಿಸಿದರು.

ಮ್ಯಾಕ್ರಾನ್ ಇಂದು ಭಾರತಕ್ಕೆ

ನವದೆಹಲಿ (ಪಿಟಿಐ): ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಅವರು ಗುರುವಾರದಿಂದ ಎರಡು ದಿನಗಳ ಕಾಲ ಭಾರತಕ್ಕೆ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಮೊದಲಿಗೆ ಅವರು ಜೈಪುರದ ಅಂಬರ್ ಕೋಟೆ, ಹವಾ ಮಹಲ್ ಮತ್ತು ಜಂತರ್ ಮಂತರ್‌ನ ಖಗೋಳ ವೀಕ್ಷಣಾಲಯಕ್ಕೆ ಭೇಟಿ ನೀಡಲಿದ್ದಾರೆ.

ಜ.26ರಂದು ದೆಹಲಿಯ ಕರ್ತವ್ಯಪಥದಲ್ಲಿ ನಡೆಯುವ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮ್ಯಾಕ್ರಾನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಈ ಮೂಲಕ ಪ್ರತಿಷ್ಠಿತ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಫ್ರಾನ್ಸ್‌ನ ಆರನೇ ನಾಯಕ ಎನಿಸಿಕೊಳ್ಳಲಿದ್ದಾರೆ.

ಮ್ಯಾಕ್ರಾನ್ ಆರು ತಾಸು ಜೈಪುರದಲ್ಲಿ ಕಾಲ ಕಳೆಯಲಿದ್ದು, ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ರೋಡ್ ಶೋನಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಉಭಯ ದೇಶಗಳ ನಾಯಕರು ಐಷಾರಾಮಿ ಹೋಟೆಲ್ ತಾಜ್ ರಾಮಬಾಗ್ ಪ್ಯಾಲೇಸ್‌ನಲ್ಲಿ ದ್ವಿಪಕ್ಷೀಯ ಒಪ್ಪಂದ ಮತ್ತಿತರ ವಿಷಯಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ನಿಧನ ವಾರ್ತೆ

ನ್ಯಾಯಮೂರ್ತಿ ವಸಂತ ಕುಮಾರ್

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ವಿ.ವಸಂತ ಕುಮಾರ್ (91) ಬುಧವಾರ ಬೆಳಿಗ್ಗೆ ಜಯನಗರ 7ನೇ ಬ್ಲಾಕ್‌ನಲ್ಲಿರುವ ಅವರ ನಿವಾಸದಲ್ಲಿ ನಿಧನರಾದರು. ಮಧ್ಯಾಹ್ನ ಬನಶಂಕರಿಯ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. ಪುತ್ರಿ ವಾಣಿ ಅವರ ಪತಿ ಎಚ್. ಸತೀಶ್ ಅವರು ನಗರದ ಎಸಿಎಂಎಂ ಕೋರ್ಟ್‌ನಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾಗಿದ್ದಾರೆ.

ವಸಂತ ಕುಮಾರ್ ಅವರು 1933ರ ಮೇ 1ರಂದು ಜನಿಸಿದ್ದರು. ಬೆಂಗಳೂರಿನ ಸೆಂಟ್ರಲ್ ಕಾಲೇಜು ಮತ್ತು ಸರ್ಕಾರಿ ಕಾನೂನು ಕಾಲೇಜಿನಲ್ಲಿ ವಿದ್ಯಾಭ್ಯಾಸ ಪೂರೈಸಿದ್ದರು.

1955ರ ಸೆಪ್ಟೆಂಬರ್ 7ರಂದು ವಕೀಲರಾಗಿ ಸನ್ನದು ನೋಂದಣಿ ಮಾಡಿಸಿದ್ದ ಅವರು, ಹಿರಿಯ ವಕೀಲ ವಿ.ಕೃಷ್ಣಮೂರ್ತಿ ಅವರಲ್ಲಿ ಕಿರಿಯ ವಕೀಲರಾಗಿ ವೃತ್ತಿ ಆರಂಭಿಸಿದ್ದರು. 1991ರ ಡಿಸೆಂಬರ್ 9ರಂದು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. ನಿವೃತ್ತಿ ನಂತರ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

'ವಸಂತ ಕುಮಾರ್ ಒಬ್ಬ ಸಹೃದಯಿಯಾಗಿದ್ದರು' ಎಂದು ಕರ್ನಾಟಕ ಜೈನ ಅಸೋಸಿಯೇಷನ್ ಮಾಜಿ ಅಧ್ಯಕ್ಷರೂ ಆದ ಎನ್.ಜಿತೇಂದ್ರ ಕುಮಾರ್ ಸ್ಮರಿಸಿದ್ದಾರೆ.

ಯಕ್ಷಗಾನ ಕಲಾವಿದ ಪೆರುವಾಯಿ ನಾರಾಯಣ ಶೆಟ್ಟಿ

ಬಂಟ್ವಾಳ (ದಕ್ಷಿಣ ಕನ್ನಡ): ತೆಂಕುತಿಟ್ಟಿನ ಯಕ್ಷಗಾನ ಕಲಾವಿದ ಪೆರುವಾಯಿ ನಾರಾಯಣ ಶೆಟ್ಟಿ (82) ತಾಲ್ಲೂಕಿನ ಪೆರುವಾಯಿಯಲ್ಲಿ ಬುಧವಾರ ನಿಧನರಾದರು.

12ನೇ ವಯಸ್ಸಿನಲ್ಲಿಯೇ ಯಕ್ಷಗಾನ ರಂಗ ಪ್ರವೇಶಿಸಿದ್ದರು. ಸುಮಾರು ಆರು ದಶಕ ಕಲಾಸೇವೆ ಮಾಡಿದ ಅವರು, ರಂಗಸ್ಥಳದಲ್ಲಿ ರಾರಾಜಿಸುವ ಕಾಲದಲ್ಲಿಯೇ ನಿವೃತ್ತರಾಗಿದ್ದರು.

ಕುಂಡಾವು ಮೇಳದಲ್ಲಿ ಕಲಾ ಸೇವೆ ಆರಂಭಿಸಿ, ವಿವಿಧ ಮೇಳಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ್ದಾರೆ. ತುಳು ಪ್ರಸಂಗಗಳ ಪಾತ್ರ ನಿರ್ವಹಣೆಯಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿದ್ದರು. ಕಂಚಿನ ಕಂಠ, ಸುಸ್ಪಷ್ಟ ಸಂಭಾಷಣೆ, ಮಾತಿನ ಓಘವು 'ಪೆರುವಾಯಿ ಶೈಲಿ' ಎಂದೇ ಖ್ಯಾತವಾಗಿತ್ತು. ದಿ.ಅರುವಾಯಿ ನಾರಾಯಣ ಶೆಟ್ಟಿಯವರು ಮತ್ತು ಪೆರುವಾಯಿ ನಾರಾಯಣ ಶೆಟ್ಟಿ ಜೋಡಿ ಅಂದಿನ ಕಾಲದಲ್ಲಿ 'ಅರುವಾಯಿ-ಪೆರುವಾಯಿ ಜೋಡಿ' ಎಂದೇ ಹೆಸರುವಾಸಿಯಾಗಿತ್ತು.

ಅವರಿಗೆ ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

11,366 ನೌಕರರಿಗೆ 'ಒಪಿಎಸ್' ಭಾಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2006 ಏ.4ಕ್ಕಿಂತ ಪೂರ್ವದಲ್ಲಿ ಹೊರಡಿಸಿದ್ದ ಅಧಿಸೂಚನೆ ಅನ್ವಯ ನೇಮಕಾತಿಗೆ ಅರ್ಜಿ ಸಲ್ಲಿಸಿ, ತಾಂತ್ರಿಕ ಕಾರಣಗಳಿಂದ ವಿಳಂಬವಾಗಿ ನೇಮಕಾತಿ ಆದೇಶ ಪಡೆದಿದ್ದ 11,366 ನೌಕರರನ್ನು ರಾಜ್ಯ ಸರ್ಕಾರ ಹಳೇ ಪಿಂಚಣಿ ಯೋಜನೆ ವ್ಯಾಪ್ತಿಗೆ (ಒಪಿಎಸ್) ಸೇರಿಸಿ ಆದೇಶ ಹೊರಡಿಸಿದೆ.

ಹಾಗೆಯೇ ಏ.1, 2006ರ ಪೂರ್ವದಲ್ಲಿ ಸರ್ಕಾರಿ ಹುದ್ದೆಗೆ ಆಯ್ಕೆಯಾಗಿ, ನಂತರ ಇತರೆ ಇಲಾಖೆಯ ಬೇರೆ ಹುದ್ದೆಗಳಿಗೆ ಮರು ಆಯ್ಕೆಯಾದವರೂ ಹಳೇ ಪಿಂಚಣಿ ಯೋಜನೆ ಆಯ್ಕೆ ಮಾಡಿಕೊಳ್ಳಲು ಆರ್ಥಿಕ ಇಲಾಖೆ ಅವಕಾಶ ನೀಡಿದೆ. ಇದರಿಂದ ಸುಮಾರು 13 ಸಾವಿರ ನೌಕರರಿಗೆ ಪ್ರಯೋಜನವಾಗಲಿದೆ.

ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಜಾರಿಗೂ ಮೊದಲು ಹೊರಡಿಸಿದ್ದ ನೇಮಕಾತಿ ಅಧಿಸೂಚನೆ ಅನ್ವಯ ನೇಮಕಾತಿ ಹೊಂದಿರುವ ನೌಕರರನ್ನು ಒಪಿಎಸ್ ವ್ಯಾಪ್ತಿಗೆ ಸೇರಿಸಲು ಕೇಂದ್ರ ಸರ್ಕಾರ 2023 ಮಾರ್ಚ್‌ನಲ್ಲಿ ಅಧಿಸೂಚನೆ ಹೊರಡಿಸಿತ್ತು. ಆದೇಶದಂತೆ ಕ್ರಮ ಕೈಗೊಳ್ಳಲು ರಾಜ್ಯಗಳಿಗೂ ನಿರ್ದೇಶನ ನೀಡಿತ್ತು. ಕೇಂದ್ರದ ಆದೇಶದಂತೆ ಕರ್ನಾಟಕ ಸರ್ಕಾರ ಈಗಾಗಲೇ ಐಎಎಸ್ ಶ್ರೇಣಿಯ ಅಧಿಕಾರಿಗಳನ್ನು ಒಪಿಎಸ್ ವ್ಯಾಪ್ತಿಗೆ ತಂದಿತ್ತು. ಈಗ ಇತರೆ ನೌಕರರನ್ನೂ ಒಪಿಎಸ್ ಯೋಜನೆಗೆ ಒಳಪಡಿಸಿದೆ.

> **ಸುಮಾರು 13 ಸಾವಿರ ನೌಕರರನ್ನು ಹಳೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡಿಸಿದ್ದೇವೆ. ಚುನಾವಣೆಗೂ ಪೂರ್ವದಲ್ಲಿ ನೀಡಿದ್ದ ಭರವಸೆ ಈಡೇರಿಸಿದ್ದೇವೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಹಳೇ ಪಿಂಚಣಿ ಯೋಜನೆಗೆ ಒಳಪಟ್ಟ ನೌಕರರು ಜೂನ್ 30ರ ಒಳಗೆ ಸಕ್ಷಮ ನೇಮಕಾತಿ ಪ್ರಾಧಿಕಾರಕ್ಕೆ ತಮ್ಮ ಅಭಿಪ್ರಾಯ ಸಲ್ಲಿಸಬೇಕು. ಎರಡು ಪಿಂಚಣಿ ಯೋಜನೆಯಲ್ಲಿ ತಾವು ಇಚ್ಛಿಸಿದ ಯೋಜನೆ ಆಯ್ಕೆ ಮಾಡಿಕೊಳ್ಳಬಹುದು. ಆಯ್ಕೆಯ ಅಭಿಪ್ರಾಯ ಸಲ್ಲಿಸದವರು ಈಗ ಇರುವಂತೆ ಎನ್‌ಪಿಎಸ್‌ನಲ್ಲೇ ಮುಂದುವರಿಯುತ್ತಾರೆ.

'ಆರ್ಥಿಕ ಇಲಾಖೆಯ ಆದೇಶದಿಂದ ಹಲವು ನೌಕರರಿಗೆ ಅನುಕೂಲವಾಗಿದೆ. ಚುನಾವಣೆಯ ಸಮಯದಲ್ಲಿ ಕೊಟ್ಟ ಭರವಸೆಯಂತೆ ಸರ್ಕಾರ ಎಲ್ಲ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಸಂಪೂರ್ಣ ರದ್ದು ಮಾಡಿ, ಎಲ್ಲ ಸರ್ಕಾರಿ ನೌಕರರನ್ನೂ ಹಳೇ ಪಿಂಚಣಿ ಯೋಜನೆ ವ್ಯಾಪ್ತಿಗೆ ತರಬೇಕು' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು ಕೋರಿದ್ದಾರೆ.

ಫೆ. 8ಕ್ಕೆ ಸಿ.ಎಂ ಜನಸ್ಪಂದನ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆಬ್ರುವರಿ 8ರಂದು ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ರಾಜ್ಯಮಟ್ಟದ ಜನಸ್ಪಂದನ ಕಾರ್ಯಕ್ರಮ ನಡೆಸಲಿದ್ದಾರೆ. ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ ಸ್ಥಳದಲ್ಲೇ ಪರಿಹಾರ ಒದಗಿಸಲಿದ್ದಾರೆ.

ಹಿರಿಯ ಅಧಿಕಾರಿಗಳ ಜತೆ ಬುಧವಾರ ಸಭೆ ನಡೆಸಿದ ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಜನಸ್ಪಂದನ ಕಾರ್ಯಕ್ರಮದ ಸಿದ್ಧತೆ ಕುರಿತು ಚರ್ಚಿಸಿದರು. ಎಲ್ಲ ಇಲಾಖೆಗಳ ಮುಖ್ಯಸ್ಥರು ಮತ್ತು ಕಾರ್ಯದರ್ಶಿಗಳು ಆ ದಿನ ಸಭೆಯಲ್ಲಿ ಕಡ್ಡಾಯವಾಗಿ ಹಾಜರಿರಬೇಕು ಎಂದು ಸೂಚಿಸಿದರು.

'ಇದು ಮುಖ್ಯಮಂತ್ರಿಯವರು ನಡೆಸುತ್ತಿರುವ ಎರಡನೇ ಜನಸ್ಪಂದನ ಕಾರ್ಯಕ್ರಮ. ಸಭೆಗೆ ಬರುವ ಅಂಗವಿಕಲರು, ಹಿರಿಯ ನಾಗರಿಕರಿಗೆ ವಿಶೇಷ ವ್ಯವಸ್ಥೆ ಮಾಡಬೇಕು. ಸ್ವಚ್ಛತೆಗೆ, ಕುಡಿಯುವ ನೀರು ಪೂರೈಕೆ, ಲಘು ಉಪಾಹಾರ ಮತ್ತು ಊಟದ ವ್ಯವಸ್ಥೆಗೆ ಸಿದ್ಧತೆ ಮಾಡಿಕೊಳ್ಳಬೇಕು. ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಗಳಿಂದ ವಿಧಾನಸೌಧಕ್ಕೆ ಉಚಿತ ಬಸ್ ಪ್ರಯಾಣದ ಸೌಲಭ್ಯ ಕಲ್ಪಿಸಬೇಕು' ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸುಧಾರಣೆ ಅಗತ್ಯ: ಡೆನಿಸ್ ಫ್ರಾನ್ಸಿಸ್

ನವದೆಹಲಿ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಸಮಕಾಲೀನ ಜಗತ್ತಿನ ವಾಸ್ತವತೆಯನ್ನು ಪ್ರತಿಬಿಂಬಿಸುತ್ತಿಲ್ಲ, ಹೀಗಾಗಿ ಅದರ ಸುಧಾರಣೆ ಅತ್ಯಗತ್ಯವಾಗಿದೆ ಎಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಡೆನಿಸ್ ಫ್ರಾನ್ಸಿಸ್ ಪ್ರತಿಪಾದಿಸಿದರು.

ಭಾರತಕ್ಕೆ ಐದು ದಿನಗಳ ಪ್ರವಾಸ ಕೈಗೊಂಡಿರುವ ಫ್ರಾನ್ಸಿಸ್, ಜಾಗತಿಕ ಶಾಂತಿ ಮತ್ತು ಭದ್ರತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಭದ್ರತಾ ಮಂಡಳಿಯು ಇತ್ತೀಚಿನ ವರ್ಷಗಳಲ್ಲಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಂಡಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಇದಕ್ಕೂ ಮುನ್ನ ಅವರು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಜೊತೆ ಮಾತುಕತೆ ನಡೆಸಿದ್ದರು. ಈ ಸಂದರ್ಭದಲ್ಲೂ ಅವರು, 'ಭದ್ರತಾ ಮಂಡಳಿಯ ಸುಧಾರಣೆ ಆಗಬೇಕಿದೆ' ಎಂದು ಪ್ರತಿಪಾದಿಸಿದರು.

ಆಫ್ರಿಕನ್ ಒಕ್ಕೂಟಕ್ಕೆ ಜಿ–20 ಸದಸ್ಯತ್ವ ನೀಡುವಲ್ಲಿ ಭಾರತ ವಹಿಸಿದ ಪಾತ್ರವನ್ನು ಶ್ಲಾಘಿಸಿದ ಅವರು, ಭಾರತದ ಈ ಕಾರ್ಯವು ಅಂತರರಾಷ್ಟ್ರೀಯ ಮಟ್ಟದಲ್ಲಿ ಅದರ ನಾಯಕತ್ವವನ್ನು ಪ್ರದರ್ಶಿಸುತ್ತದೆ ಎಂದರು.

ಭದ್ರತಾ ಮಂಡಳಿಯ ಸುಧಾರಣೆಗೆ ಸಂಬಂಧಿಸಿದಂತೆ ಭಾರತ ಹಲವು ವರ್ಷಗಳಿಂದ ಒತ್ತಾಯಿಸುತ್ತಿದೆ. ಅಲ್ಲದೆ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವಕ್ಕಾಗಿ ಭಾರತ ಪ್ರಬಲ ಸ್ಪರ್ಧಿಯೂ ಆಗಿದೆ.

ಪ್ರಸ್ತುತ ಭದ್ರತಾ ಮಂಡಳಿಯು ಐದು ಕಾಯಂ ಸದಸ್ಯರು ಮತ್ತು 10 ಕಾಯಂ ಅಲ್ಲದ ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿದೆ. ಕಾಯಂ ಅಲ್ಲದ ಸದಸ್ಯ ರಾಷ್ಟ್ರಗಳನ್ನು ಸಾಮಾನ್ಯ ಸಭೆಯಿಂದ ಎರಡು ವರ್ಷಗಳ ಅವಧಿಗೆ ಚುನಾಯಿಸಲಾಗುತ್ತದೆ. ರಷ್ಯಾ, ಬ್ರಿಟನ್, ಚೀನಾ, ಫ್ರಾನ್ಸ್ ಮತ್ತು ಅಮೆರಿಕ ಕಾಯಂ ಸದಸ್ಯ ರಾಷ್ಟ್ರಗಳಾಗಿದ್ದು, ವೀಟೊ ಅಧಿಕಾರ ಹೊಂದಿವೆ.

ಜ್ಞಾನವಾಪಿ ಸಮೀಕ್ಷೆ: ವರದಿ ನೀಡಲು ಆದೇಶ

ಪ್ರಜಾವಾಣಿ ವಾರ್ತೆ

ಲಖನೌ: ವಾರಾಣಸಿಯ ಜ್ಞಾನವಾಪಿ ಮಸೀದಿಯ ಆವರಣದಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸಿರುವ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ವರದಿಯನ್ನು ವಾದಿ, ಪ್ರತಿವಾದಿಗಳ ವಕೀಲರಿಗೆ ನೀಡಬೇಕು ಎಂದು ವಾರಾಣಸಿಯ ನ್ಯಾಯಾಲಯವೊಂದು ಬುಧವಾರ ಆದೇಶಿಸಿದೆ. ಈ ವರದಿಯನ್ನು ಜಿಲ್ಲಾ ನ್ಯಾಯಾಲಯಕ್ಕೆ ಈಗಾಗಲೇ ಸಲ್ಲಿಸಲಾಗಿದೆ.



ಹಿಂದೂ ಮತ್ತು ಮುಸ್ಲಿಂ ಅರ್ಜಿದಾರರ ಪರ ವಕೀಲರ ವಾದಗಳನ್ನು ಆಲಿಸಿದ ಜಿಲ್ಲಾ ನ್ಯಾಯಾಧೀಶ ಅಜಯ್ ಕೃಷ್ಣ ವಿಶ್ವೇಶ್ ಅವರು ಈ ಆದೇಶ ನೀಡಿದರು. ಸಮೀಕ್ಷೆಯ ಪ್ರಮಾಣೀಕೃತ ಪ್ರತಿಯನ್ನು ಎರಡೂ ಕಡೆಯವರಿಗೆ ನೀಡಬೇಕು ಎಂದು ಕೋರ್ಟ್ ಹೇಳಿದೆ.

ಪ್ರಮಾಣೀಕೃತ ಪ್ರತಿಯನ್ನು ಪಡೆಯುವ ಮೊದಲು ಎರಡೂ ಕಡೆಯವರು, 'ವರದಿಯನ್ನು ಬಹಿರಂಗಪಡಿಸುವುದಿಲ್ಲ' ಎನ್ನುವ ಪ್ರಮಾಣಪತ್ರವನ್ನು ಕೋರ್ಟ್‌ಗೆ ಸಲ್ಲಿಸಬೇಕಿದೆ. ಎಎಸ್‌ಐ ವರದಿಯನ್ನು ತಮಗೆ ನೀಡಬೇಕು ಎಂದು ಹಿಂದೂ ಹಾಗೂ ಮುಸ್ಲಿಂ ಅರ್ಜಿದಾರರು ಕೋರಿದ್ದರು.

ಎಎಸ್‌ಐ ತನ್ನ ವರದಿಯನ್ನು ಮುಚ್ಚಿದ ಎರಡು ಲಕೋಟೆಗಳಲ್ಲಿ ಕಳೆದ ತಿಂಗಳು ಸಲ್ಲಿಸಿದೆ.

ಮಸೀದಿ ಆವರಣದ ವಿಚಾರವಾಗಿ ಎರಡು ಸಮುದಾಯಗಳ ನಡುವೆ ದಶಕಗಳಿಂದಲೂ ವಿವಾದ ಇದೆ. ಆದರೆ, ಅಯೋಧ್ಯೆಯ ರಾಮಜನ್ಮಭೂಮಿ ವಿಚಾರವಾಗಿ ಸುಪ್ರೀಂ ಕೋರ್ಟ್‌ನ ತೀರ್ಪು ಬಂದ ನಂತರದಲ್ಲಿ, ಕಾಶಿ ವಿಶ್ವನಾಥ ದೇವಸ್ಥಾನ ಆವರಣವನ್ನು 'ಮರಳಿ ಪಡೆಯಲು' ಕೂಗು ಜೋರಾಗಿದೆ.

ದೇವಸ್ಥಾನ ಒಂದು ಭಾಗವನ್ನು ಮೊಘಲ್ ರಾಜ ಔರಂಗಜೇಬ 17ನೆಯ ಶತಮಾನದಲ್ಲಿ ಧ್ವಂಸಗೊಳಿಸಿದ ಎಂಬುದು ಹಿಂದೂ ಅರ್ಜಿದಾರರ ವಾದ. ಔರಂಗಜೇಬನ ಅವಧಿಗೂ ಮೊದಲೇ ಮಸೀದಿ ಇತ್ತು, ಇದು ಭೂದಾಖಲೆಗಳಲ್ಲಿ ಕೂಡ ಉಲ್ಲೇಖವಾಗಿದೆ ಎಂಬುದು ಮುಸ್ಲಿಮರ ವಾದ.

ಸಂಕ್ಷಿಪ್ತ ಸುದ್ದಿ

ಕುನೊ: ಮೂರಲ್ಲ, ನಾಲ್ಕು ಚೀತಾ ಮರಿಗಳ ಜನನ

ನವದೆಹಲಿ: ನಮೀಬಿಯಾದಿಂದ ತಂದಿದ್ದ ಚೀತಾವು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಮೂರಲ್ಲ, ನಾಲ್ಕು ಮರಿಗಳಿಗೆ ಜನ್ಮ ನೀಡಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಬುಧವಾರ ತಿಳಿಸಿದ್ದಾರೆ. ಇದಕ್ಕೂ ಮುನ್ನ ಈ ಚೀತಾವು ಮೂರು ಮರಿಗಳಿಗೆ ಜನ್ಮ ನೀಡಿದೆ ಎಂದು ವರದಿಯಾಗಿತ್ತು.

ಈ ವಿಷಯವನ್ನು 'ಎಕ್ಸ್' ಮೂಲಕ ತಿಳಿಸಿರುವ ಯಾದವ್, 'ಜಲ್ವಾ ಹೆಸರಿನ ಚೀತಾವು ಮೂರಲ್ಲ, ನಾಲ್ಕು ಮರಿಗಳಿಗೆ ಜನ್ಮ ನೀಡಿದೆ ಎಂದು ತಿಳಿದುಬಂದಿದೆ. ಇದರಿಂದ ನಮ್ಮ ಸಂತೋಷ ದುಪ್ಪಟ್ಟಾಗಿದೆ. ಎಲ್ಲರಿಗೂ ಅಭಿನಂದನೆಗಳು' ಎಂದು ಹೇಳಿದ್ದಾರೆ.

ಅಧಿಕಾರಿಗಳ ಪ್ರಕಾರ, ಚೀತಾವು ಜ.20ರಂದು ಮರಿಗಳಿಗೆ ಜನ್ಮ ನೀಡಿದೆ.

ಇದರೊಂದಿಗೆ ಕುನೊ ಉದ್ಯಾನದಲ್ಲಿ ಇರುವ ಚೀತಾ ಮರಿಗಳ ಸಂಖ್ಯೆ 8ಕ್ಕೆ ಏರಿಕೆಯಾಗಿದೆ.

ಶಹಜಹಾನ್ ಶೇಖ್ ನಿವಾಸದಲ್ಲಿ ಮತ್ತೆ ಇ.ಡಿ ಶೋಧ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಟಿಎಂಸಿ ನಾಯಕ ಶಹಜಹಾನ್ ಶೇಖ್ ಅವರ ನಿವಾಸದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಪುನಃ ಶೋಧ ನಡೆಸಿದ್ದಾರೆ.

ಪಡಿತರ ವಿತರಣಾ ಹಗರಣದ ತನಿಖೆಗೆ ಸಂಬಂಧಿಸಿದಂತೆ ಶೇಖ್ ಅವರ ನಿವಾಸದಲ್ಲಿ ಇ.ಡಿ ಅಧಿಕಾರಿಗಳು ಜನವರಿ 5ರಂದು ಶೋಧ ನಡೆಸಿದ್ದರು. ಆಗ ಇ.ಡಿ ತಂಡದ ಮೇಲೆ ಗುಂಪೊಂದು ಹಲ್ಲೆ ನಡೆಸಿ ಶೋಧ ಕಾರ್ಯಕ್ಕೆ ಅಡ್ಡಿಪಡಿಸಿತ್ತು.

ಈಗ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ 120ಕ್ಕೂ ಹೆಚ್ಚು ಸಿಬ್ಬಂದಿಯೊಂದಿಗೆ ಇ.ಡಿ ಅಧಿಕಾರಿಗಳ ತಂಡವು ಸಂದೇಶಖಾಲಿ ಪ್ರದೇಶದಲ್ಲಿರುವ ಶೇಖ್ ಅವರ ನಿವಾಸದಲ್ಲಿ ಶೋಧ ನಡೆಸಿದೆ. ಸ್ಥಳೀಯ ಪೊಲೀಸರು ಮತ್ತು ಇಬ್ಬರು ಸ್ಥಳೀಯರ ಸಾಕ್ಷಿಗಳ ಸಮ್ಮುಖದಲ್ಲಿ ಇ.ಡಿ ಅಧಿಕಾರಿಗಳು ಶೇಖ್ ಮನೆಯ ಗೇಟ್ ಅನ್ನು ಒಡೆದು ಒಳ ಪ್ರವೇಶಿಸಿದರು.

ಇ.ಡಿ ತಂಡ ಮನೆಯ ಕೊಠಡಿಗಳು, ಅಡುಗೆ ಮನೆ, ಕಪಾಟುಗಳು, ಅಲ್ಮೆರಾಗಳನ್ನು ಶೋಧಿಸಿದೆ. ಆದರೆ ಮನೆಯಲ್ಲಿ ಮಹತ್ವದ ದಾಖಲೆಗಳು ದೊರೆತಿಲ್ಲ. ದಾಖಲೆಗಳನ್ನು ಬೇರೆಡೆಗೆ ವರ್ಗಾಯಿಸಿದಂತೆ ಕಾಣುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸಹೋದ್ಯೋಗಿಗಳಿಗೆ ಗುಂಡು ಹಾರಿಸಿ ಯೋಧ ಆತ್ಮಹತ್ಯೆ

ಇಂಫಾಲ (ಪಿಟಿಐ): ಮಣಿಪುರದ ಚಂದೇಲ್ ಜಿಲ್ಲೆಯ ಸಾಜಿಕ್ ತಂಪಕ್ ಪ್ರದೇಶದಲ್ಲಿ ಅಸ್ಸಾಂ ರೈಫಲ್ಸ್‌ನ ಯೋಧರೊಬ್ಬರು ಸಹೋದ್ಯೋಗಿಗಳಿಗೆ ಗುಂಡು ಹಾರಿಸಿ, ಬಳಿಕ ತಾವೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಂಗಳವಾರ ರಾತ್ರಿ ಈ ಪ್ರಕರಣ ನಡೆದಿದ್ದು, ಅಸ್ಸಾಂ ರೈಫಲ್ಸ್‌ನ ಆರು ಮಂದಿ ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಒಂದು ದೇಶ, ಒಂದು ಚುನಾವಣೆ ಸುಲಭವಲ್ಲ: ಚಾವ್ಲಾ

ತಿರುವನಂತಪುರ (ಪಿಟಿಐ): 'ಒಂದು ದೇಶ, ಒಂದು ಚುನಾವಣೆ' ಕಲ್ಪನೆಯು ಚುನಾವಣಾ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಬಹುದು. ಆದರೆ ಇದನ್ನು ಜಾರಿಗೆ ತರಲು ವ್ಯಾಪಕ ರಾಜಕೀಯ ಸಮಾಲೋಚನೆ ಮತ್ತು ಸಾಂವಿಧಾನಿಕ ಬದಲಾವಣೆಗಳು ಅಗತ್ಯವಿದೆ. ಹೀಗಾಗಿ ಇದು ಸುಲಭದ ಕಾರ್ಯವಲ್ಲ' ಎಂದು ಮಾಜಿ ಮುಖ್ಯ ಚುನಾವಣಾ ಆಯುಕ್ತ ನವೀನ್ ಚಾವ್ಲಾ ಹೇಳಿದ್ದಾರೆ.

ಚುನಾವಣಾ ವೆಚ್ಚ ಕಡಿಮೆ ಮಾಡುವುದು ಮತ್ತು ಪದೇ ಪದೇ ಮಾದರಿ ನೀತಿ ಸಂಹಿತೆ ಹೇರುವಿಕೆಯನ್ನು ಕಡಿಮೆ ಮಾಡುವುದೂ ಈ ಪ್ರಯತ್ನದ ಹಿಂದಿರುವ ಪ್ರಮುಖ ಉದ್ದೇಶ ಎಂದು ಅವರು ಮನೋರಮಾ ಇಯರ್‌ಬುಕ್ 2024ಕ್ಕೆ ಬರೆದಿರುವ ಲೇಖನದಲ್ಲಿ ಹೇಳಿದ್ದಾರೆ.

ಸರಕು ಸಾಗಣೆ ಹಡಗುಗಳ ಮೇಲೆ ದಾಳಿ ನಡೆದ ಬೆನ್ನಲ್ಲೇ ಅಭ್ಯಾಸ

ಭಾರತ, ಯುಎಇ, ಫ್ರಾನ್ಸ್ ಸಮರಾಭ್ಯಾಸ

ನವದೆಹಲಿ (ಪಿಟಿಐ): ಭಾರತ, ಫ್ರಾನ್ಸ್ ಮತ್ತು ಯುಎಇ ದೇಶಗಳು ಒಟ್ಟಾಗಿ ಅರಬ್ಬಿ ಸಮುದ್ರದ ವಾಯುಪ್ರದೇಶದಲ್ಲಿ ಬೃಹತ್ ಸಮರಾಭ್ಯಾಸ ನಡೆಸಿವೆ. ಹುಥಿ ಬಂಡುಕೋರರು ಈ ಪ್ರದೇಶದ ಕೆಲವು ಜಲಮಾರ್ಗಗಳಲ್ಲಿ ಸರಕು ಸಾಗಣೆ ಹಡಗುಗಳ ಮೇಲೆ ದಾಳಿ ನಡೆಸಿರುವುದು ಜಾಗತಿಕ ಮಟ್ಟದಲ್ಲಿ ಕಳವಳಕ್ಕೆ ಕಾರಣವಾಗಿರುವ ಹೊತ್ತಿನಲ್ಲಿ ಈ ಸಮರಾಭ್ಯಾಸ ನಡೆದಿದೆ.

ಮೂರು ದೇಶಗಳ ಸಮರಾಭ್ಯಾಸವು ಮಂಗಳವಾರ ನಡೆದಿದೆ. ಇದರಲ್ಲಿ ಮೂರೂ ದೇಶಗಳ ವಾಯುಪಡೆಗಳ ಯುದ್ಧ ವಿಮಾನಗಳು ಭಾಗಿಯಾಗಿದ್ದವು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭಾರತೀಯ ವಾಯುಪಡೆಯ ಸು–30 ಎಂಕೆಐ, ಮಿಗ್–29 ಮತ್ತು ಜಾಗ್ವಾರ್ ಯುದ್ಧ ವಿಮಾನಗಳು ಸಮರಾಭ್ಯಾಸದಲ್ಲಿ ಭಾಗಿಯಾಗಿದ್ದವು. ರೇಡಾರ್ ಹೊಂದಿರುವ ಯುದ್ಧವಿಮಾನ, ಸಿ–130–ಜೆ ಸರಕು ಸಾಗಣೆ ವಿಮಾನ ಮತ್ತು ಆಗಸದಲ್ಲಿಯೇ ವಿಮಾನಗಳಿಗೆ ಇಂಧನ ಭರ್ತಿ ಮಾಡುವ ವ್ಯವಸ್ಥೆಯನ್ನು ಕೂಡ ಅಭ್ಯಾಸದ ವೇಳೆ ಪರೀಕ್ಷಿಸಲಾಯಿತು ಎಂದು ಹೇಳಿದ್ದಾರೆ.

'ಡಸರ್ಟ್ ನೈಟ್' ಸಮರಾಭ್ಯಾಸದಲ್ಲಿ ಪಾಲ್ಗೊಂಡಿದ್ದ ಭಾರತೀಯ ವಾಯುಪಡೆಯ ವಿಮಾನಗಳು –ಪಿಟಿಐ ಚಿತ್ರ

ಈ ಸಮರಾಭ್ಯಾಸಕ್ಕೆ 'ಡಸರ್ಟ್ ನೈಟ್' ಎಂದು ಹೆಸರಿಡಲಾಗಿದೆ. 'ಮೂರೂ ದೇಶಗಳ ವಾಯುಪಡೆಗಳ ನಡುವೆ ಸಮನ್ವಯವನ್ನು ಹೆಚ್ಚಿಸುವುದು ಈ ಸಮರಾಭ್ಯಾಸದ ಉದ್ದೇಶವಾಗಿತ್ತು' ಎಂದು ಭಾರತೀಯ ವಾಯುಪಡೆ ತಿಳಿಸಿದೆ. ಭಾರತೀಯ ವಾಯುಪಡೆಯ ವಿಮಾನಗಳು ಹಲವು ವಾಯುನೆಲೆಗಳಿಂದ ಕಾರ್ಯಾಚರಣೆ ನಡೆಸಿದವು.

ಫ್ರಾನ್ಸ್ ಮತ್ತು ಯುಎಇ ವಾಯುಪಡೆಗಳ ಯುದ್ಧ ವಿಮಾನಗಳು ಅಲ್–ದಫ್ರಾ ವಾಯುನೆಲೆಯಿಂದ ಕಾರ್ಯಾಚರಿಸಿದವು. 'ಇಂತಹ ಸಮರಾಭ್ಯಾಸಗಳು ಈ ಪ್ರದೇಶದಲ್ಲಿ ರಾಜತಾಂತ್ರಿಕ ಸಂಬಂಧ ಹೆಚ್ಚುತ್ತಿರುವುದು, ಮಿಲಿಟರಿಗಳ ನಡುವೆ ಒಡನಾಟ ಜಾಸ್ತಿ ಆಗುತ್ತಿರುವುದನ್ನು ಸೂಚಿಸುತ್ತವೆ ಹಾಗೂ ಭಾರತೀಯ ವಾಯುಪಡೆಯ ಶಕ್ತಿಯನ್ನು ಪ್ರದರ್ಶಿಸಲು ವೇದಿಕೆ ಒದಗಿಸುತ್ತವೆ' ಎಂದು ವಾಯುಪಡೆಯು ತಿಳಿಸಿದೆ.

ಗಣರಾಜ್ಯೋತ್ಸವಕ್ಕೆ ಕೆಲವೇ ದಿನಗಳು ಇರುವಾಗ ಈ ಸಮರಾಭ್ಯಾಸ ನಡೆದಿದೆ. ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಫ್ರಾನ್ಸ್‌ನ ತುಕಡಿಗಳು ಸಹ ಭಾಗವಹಿಸಲಿವೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ ರೈಲ್ವೆಯಲ್ಲಿ ಸಹಾಯಕ ಲೊಕೊ ಪೈಲಟ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಳ-ಅಗಲ 2,600 ಕೋಟಿ ದಾಖಲೆಗಳು ಡಾರ್ಕ್‌ವೆಬ್‌ನಲ್ಲಿ ಮಾರಾಟಕ್ಕೆ
ರಾಮ ಮಂದಿರದಲ್ಲಿ ಜನಸಾಗರ 9
ಅಸ್ಸಾಂ ಸರ್ಕಾರ ವಿರುದ್ಧ ರಾಹುಲ್ ಕಿಡಿ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,060	21,453	₹64,400 (ಬೆಂಗಳೂರು)	₹72,500 (ಬೆಂಗಳೂರು)	83.12

UPCOMING
ಪರಿಶ್ರಮ ಪಿಯು ಕಾಲೇಜು
ಇಂಟಿಗ್ರೇಟೆಡ್ NEET, JEE MAIN & KCET ತರಬೇತಿ
UNDER THE GUIDANCE OF PRADEEP ESHWAR
ನೀಟ್ ಫಲಿತಾಂಶದಲ್ಲಿ ನಮಗೆ ಶ್ಲಾಘನೆ
ಪಿಯುಸಿ ಕಾಲೇಜಿನಲ್ಲೂ
ಮುಂದುವರಿಯಲಿದೆ ನಮ್ಮ ಈ ಸಾಧನೆ
ರೆಸಿಡೆನ್ಶಿಯಲ್ ಮತ್ತು ಡೇ ಸ್ಕಾಲರ್ ತರಗತಿಗಳು
ನಮ್ಮ ಹಿಂದಿನ ವರ್ಷಗಳ ನೀಟ್ ಫಲಿತಾಂಶಗಳು
2021: 220 ವೈದ್ಯಕೀಯ ಸೀಟು
2022: 503 ವೈದ್ಯಕೀಯ ಸೀಟು
2023: 828 ವೈದ್ಯಕೀಯ ಸೀಟು
ಪಿಯುಸಿ ಕಾಲೇಜಿಗೆ ನೋಂದಣಿ ಪ್ರಾರಂಭವಾಗಿವೆ
080 24413444, 74838 30545 www.parishramaneetacademy.com

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಜತೆ ಟಿಎಂಸಿ ಮೈತ್ರಿ ಇಲ್ಲ ● ಪಂಜಾಬ್‌ನಲ್ಲಿ ಎಎಪಿ ಏಕಾಂಗಿ ಸ್ಪರ್ಧೆ

‘ಇಂಡಿಯಾ’ ಮೈತ್ರಿಯಲ್ಲಿ ಕಂಪನ

● ಮಂಜುನಾಥ ಹೆಬ್ಬಾರ್

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಸ್ಪರ್ಧಿಸುವ ಉತ್ಸಾಹ ಪ್ರದರ್ಶಿಸಿದ್ದ ‘ಇಂಡಿಯಾ’ ಮೈತ್ರಿಕೂಟದಲ್ಲಿ ಬುಧವಾರ ಬಿಕ್ಕಟ್ಟು ಸೃಷ್ಟಿಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್‌ನೊಂದಿಗೆ ಟಿಎಂಸಿ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಮಮತಾ ಬ್ಯಾನರ್ಜಿ ಪ್ರಕಟಿಸಿದರೆ, ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ಏಕಾಂಗಿಯಾಗಿ ಸ್ಪರ್ಧಿಸಲಿದೆ ಎಂದು ಮುಖ್ಯಮಂತ್ರಿ ಭಗವಂತ್ ಮಾನ್ ಘೋಷಿಸಿದ್ದಾರೆ.

ಸೀಟು ಹಂಚಿಕೆ ಸಂಬಂಧ ಕಾಂಗ್ರೆಸ್‌ನ ಕೆಲವು ನಾಯಕರು ಹಾಕಿರುವ ಷರತ್ತುಗಳು, ರಾಜ್ಯದ ಕಾಂಗ್ರೆಸ್ ನಾಯಕರಿಂದ ಪಕ್ಷದ ವಿರುದ್ಧ ನಡೆದ ನಿರಂತರ ತೀಕ್ಷ್ಣ ವಾಗ್ದಾಳಿ ಹಾಗೂ ಸೀಟು ಹಂಚಿಕೆ ಪ್ರಕ್ರಿಯೆಯ ವಿಳಂಬದಿಂದ ಮಮತಾ ಕುಪಿತಗೊಂಡಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯು ಪಶ್ಚಿಮ ಬಂಗಾಳ ಪ್ರವೇಶಿಸುವ ಮುನ್ನಾ ದಿನ ಮಮತಾ ಅವರು ತಮ್ಮ ನಿಲುವು ಪ್ರಕಟಿಸಿದ್ದಾರೆ.

ಯಾತ್ರೆ ಕುರಿತು ತಮ್ಮೊಂದಿಗೆ ಚರ್ಚಿಸುವ ಸೌಜನ್ಯವನ್ನೂ ಕಾಂಗ್ರೆಸ್ ನಾಯಕರು ತೋರಿಲ್ಲ ಎಂದೂ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

5ನೇ ಪುಟ ನೋಡಿ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

‘ನಾನು ಅವರಿಗೆ (ಕಾಂಗ್ರೆಸ್) ಸೀಟು ಹಂಚಿಕೆ ಪ್ರಸ್ತಾಪವನ್ನು ನೀಡಿದ್ದೆ. ಆದರೆ, ಅವರು ಅದನ್ನು ನಿರಾಕರಿಸಿದರು. ಹೀಗಾಗಿ, ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್‌ನೊಂದಿಗೆ ಯಾವುದೇ ಮೈತ್ರಿ ಇಲ್ಲ. ನಮ್ಮ ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸಲಿದೆ. ಕಾಂಗ್ರೆಸ್ 300 ಸ್ಥಾನಗಳಲ್ಲಿ ಸ್ಪರ್ಧಿಸಬೇಕು. ಉಳಿದವುಗಳನ್ನು ಪ್ರಾದೇಶಿಕ ಪಕ್ಷಗಳಿಗೆ ಬಿಟ್ಟುಕೊಡಬೇಕು ಎಂದು ಹೇಳಿದ್ದೆವು ಅವರು ಕೇಳಲಿಲ್ಲ. ಹೀಗಾಗಿ ನಮ್ಮ ನಿರ್ಧಾರ ಹೇಳಿದ್ದೇವೆ.

ಭಗವಂತ್ ಮಾನ್ ಪಂಜಾಬ್ ಮುಖ್ಯಮಂತ್ರಿ

ಪಂಜಾಬ್‌ನಲ್ಲಿ ಕಾಂಗ್ರೆಸ್ ನೊಂದಿಗೆ ಮೈತ್ರಿ ಇಲ್ಲ. ರಾಜ್ಯದಲ್ಲಿ ಎಲ್ಲ 13 ಕ್ಷೇತ್ರಗಳಲ್ಲಿ ಪಕ್ಷ ಜಯಭೇರಿ ಬಾರಿಸಲಿದೆ. 13 ಲೋಕಸಭಾ ಸ್ಥಾನಗಳಿಗೆ ಪಕ್ಷದ ಸಂಭಾವ್ಯ ಅಭ್ಯರ್ಥಿಗಳ ಬಗ್ಗೆ ಈಗಾಗಲೇ ಚರ್ಚೆಗಳು ನಡೆದಿವೆ. 40 ಸಂಭಾವ್ಯರ ಹೆಸರುಗಳು ಬಂದಿವೆ. ಪ್ರತಿ ಕ್ಷೇತ್ರಕ್ಕೆ ಮೂರರಿಂದ ನಾಲ್ಕು ಸಂಭಾವ್ಯ ಅಭ್ಯರ್ಥಿಗಳಿದ್ದಾರೆ. ಗೆಲುವನ್ನು ಮಾನದಂಡವಾಗಿಟ್ಟುಕೊಂಡು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗುತ್ತದೆ.

ಜೈರಾಮ್ ರಮೇಶ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಮಮತಾ ಬ್ಯಾನರ್ಜಿ ಅವರು ಇಲ್ಲದೆ ಇಂಡಿಯಾ ಮೈತ್ರಿಕೂಟದ ಅಸ್ತಿತ್ವವನ್ನು ಕಲ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ತೃಣಮೂಲ ಕಾಂಗ್ರೆಸ್ ಪಕ್ಷವು ಮೈತ್ರಿಕೂಟದ ಪ್ರಮುಖ ಆಧಾರಸ್ತಂಭ. ಮಮತಾ ಬ್ಯಾನರ್ಜಿ ಅವರನ್ನು ಬಿಟ್ಟು ಇಂಡಿಯಾ ಮೈತ್ರಿಕೂಟ ಇಲ್ಲ. ಇಂಡಿಯಾ ಮೈತ್ರಿಕೂಟವು ಪಶ್ಚಿಮ ಬಂಗಾಳದಲ್ಲಿ ಸ್ಪರ್ಧಿಸಲಿದ್ದು, ಎಲ್ಲರೂ ಒಗ್ಗಟ್ಟಿನಿಂದ ಸಾಗಲಿದ್ದೇವೆ

ಪಶ್ಚಿಮ ಬಂಗಾಳದಲ್ಲಿ ಮೈತ್ರಿಯ ನಡುವೆ ಈ ಕಚ್ಚಾಟವೇಕೆ?

ಪಶ್ಚಿಮ ಬಂಗಾಳದಲ್ಲಿ 42 ಲೋಕಸಭಾ ಕ್ಷೇತ್ರಗಳಿವೆ. 2019ರ ಚುನಾವಣೆಯಲ್ಲಿ ಟಿಎಂಸಿ 22 ಕ್ಷೇತ್ರಗಳಲ್ಲಿ, ಬಿಜೆಪಿ 18ರಲ್ಲಿ ಹಾಗೂ ಕಾಂಗ್ರೆಸ್ ಎರಡು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದವು. ಕಳೆದ ಬಾರಿ ಗೆದ್ದ ಕ್ಷೇತ್ರಗಳನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡಲಾಗುವುದು ಎಂದು ಟಿಎಂಸಿ ಆರಂಭದಲ್ಲೇ ತಿಳಿಸಿತ್ತು. ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್ ಹಾಗೂ ಎಡಪಕ್ಷಗಳು ತ್ಯಾಗ ಮಾಡಿ ಸಹಕಾರ ನೀಡಬೇಕು ಎಂದೂ ಮಮತಾ ಹೇಳಿದ್ದರು. ಟಿಎಂಸಿ ಜತೆಗಿನ ಮೈತ್ರಿಗೆ ರಾಜ್ಯದ ಕಾಂಗ್ರೆಸ್ ನಾಯಕರು ಆರಂಭದಲ್ಲೇ ತಗಾದೆ ಎತ್ತಿದ್ದರು. ಕನಿಷ್ಠ 10ರಿಂದ 12 ಸ್ಥಾನಗಳನ್ನು ಪಕ್ಷಕ್ಕೆ ನೀಡಬೇಕು ಎಂದು ಕಾಂಗ್ರೆಸ್ ನಾಯಕರು ಪಟ್ಟು ಹಿಡಿದಿದ್ದರು. ‘ಕಾಂಗ್ರೆಸ್‌ಗೆ ರಾಜ್ಯದಲ್ಲಿ ನೆಲೆಯೇ ಇಲ್ಲ. ಕಾಂಗ್ರೆಸ್ 12 ಕ್ಷೇತ್ರಗಳಲ್ಲಿ ಸ್ಪರ್ಧಿಸಿದರೆ ಬಿಜೆಪಿಗೆ ಅನುಕೂಲವಾಗಲಿದೆ’ ಎಂದು ಟಿಎಂಸಿ ನಾಯಕರು ಹೇಳಿದ್ದರು. ಕನಿಷ್ಠ ಪಕ್ಷ 6–7 ಸ್ಥಾನಗಳನ್ನಾದರೂ ಪಕ್ಷಕ್ಕೆ ಬಿಡಬೇಕು ಎಂದು ಕಾಂಗ್ರೆಸ್ ಒತ್ತಡ ಹೇರಿತ್ತು.

ಅಸ್ಸಾಂನಲ್ಲಿ ಎರಡು, ಮೇಘಾಲಯದಲ್ಲಿ ಒಂದು ಹಾಗೂ ಗೋವಾದಲ್ಲಿ ಒಂದು ಕ್ಷೇತ್ರಗಳಲ್ಲಿ ಟಿಎಂಸಿ ಅಭ್ಯರ್ಥಿಗಳ ಸ್ಪರ್ಧೆಗೆ ಕಾಂಗ್ರೆಸ್ ಅನುವು ಮಾಡಿಕೊಟ್ಟರೆ, ಪಶ್ಚಿಮ ಬಂಗಾಳದಲ್ಲಿ ಮತ್ತೊಂದು ಕ್ಷೇತ್ರ (ಒಟ್ಟು ಮೂರು) ಬಿಡಲು ಸಿದ್ಧ ಎಂದು ಟಿಎಂಸಿ ನಾಯಕರು ಕಾಂಗ್ರೆಸ್‌ಗೆ ಸಂದೇಶ ರವಾನಿಸಿದ್ದರು.

ಟಿಎಂಸಿ, ಈ ಹಿಂದೆ 2001ರ ವಿಧಾನಸಭಾ ಚುನಾವಣೆ, 2009ರ ಲೋಕಸಭೆ ಚುನಾವಣೆ ಮತ್ತು 2011ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿತ್ತು.

ತೆಪ್ಪೋತ್ಸವ... ಕೊಪ್ಪಳದ ಗವಿಮಠದ ಜಾತ್ರಾ ಮಹೋತ್ಸವ ಅಂಗವಾಗಿ ಬುಧವಾರ ಮಠದ ಕೆರೆಯಲ್ಲಿ ನಡೆದ ತೆಪ್ಪೋತ್ಸವ ಕಾರ್ಯಕ್ರಮದಲ್ಲಿ ಕಂಡು ಬಂದ ಬೆಳಕಿನ ವೈಭವ
–ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಲಿಮ್ಕಾ ದಾಖಲೆಗೆ ಹೊರಟ್ಟಿ

ಪ್ರಜಾವಾಣಿ ವಾರ್ತೆ



ದೀರ್ಘಾವಧಿ ಪ್ರತಿನಿಧಿ

ಬೆಂಗಳೂರು: ಒಂದೇ ಕ್ಷೇತ್ರದಿಂದ ಸತತವಾಗಿ ಎಂಟನೇ ಸಲ ವಿಧಾನ ಪರಿಷತ್‌ಗೆ ಆಯ್ಕೆಯಾಗಿ ದಾಖಲೆ ನಿರ್ಮಿಸಿರುವ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಹೆಸರು ಲಿಮ್ಕಾ ವಿಶ್ವ ದಾಖಲೆ ಪುಸ್ತಕಕ್ಕೆ ಸೇರಿದೆ.

ಭಾರತದ ರಾಜಕೀಯಕ್ಕೆ ಸಂಬಂಧಿಸಿದಂತೆ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಯು ಪ್ರಕಟಿಸಿರುವ ಪುಸ್ತಕದಲ್ಲಿ ದೀರ್ಘಾವಧಿಗೆ ಚುನಾಯಿತ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸಿರುವ ಮೂವರು ರಾಜಕಾರಣಿಗಳ ಹೆಸರುಗಳನ್ನು ಪ್ರಕಟಿಸಲಾಗಿದೆ.

ಹೊರಟ್ಟಿ ಅವರು 1980ರಿಂದ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ಬುಧವಾರದವರೆಗೆ 43 ವರ್ಷ 201 ದಿನಗಳ ಕಾಲ ಒಂದೇ ಕ್ಷೇತ್ರದ ಪ್ರತಿನಿಧಿಯಾಗಿದ್ದಾರೆ. ಈ ದಾಖಲೆ ನಿರ್ಮಿಸಿರುವುದಕ್ಕಾಗಿ ಅವರ ಹೆಸರನ್ನು ಲಿಮ್ಕಾ ದಾಖಲೆ ಪುಸ್ತಕದಲ್ಲಿ ಸೇರಿಸಲಾಗಿದೆ.

24 ವರ್ಷ 165 ದಿನಗಳ ಕಾಲ ಸಿಕ್ಕಿಂ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಪವನ್ ಕುಮಾರ್ ಮತ್ತು 23 ವರ್ಷ 137 ದಿನಗಳ ಕಾಲ ಪಶ್ಚಿಮ ಬಂಗಾಳ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಜ್ಯೋತಿ ಬಸು ಅವರ ಹೆಸರುಗಳೂ ಲಿಮ್ಕಾ ದಾಖಲೆ ಪುಸ್ತಕದಲ್ಲಿವೆ.

ಕೆರೆಗೆ ತಳ್ಳಿ ತಂಗಿ ಕೊಂದ ಯುವಕ, ತಾಯಿಯೂ ನೀರುಪಾಲು

ಹುಣಸೂರು: ಮರ್ಯಾದೆಗೇಡು ಹತ್ಯೆ

ಪ್ರಜಾವಾಣಿ ವಾರ್ತೆ

ಧನುಶ್ರೀ

ಅನಿತಾ

ನಿತೀಶ್

ಹುಣಸೂರು (ಮೈಸೂರು ಜಿಲ್ಲೆ): ತಾಲ್ಲೂಕಿನ ಹಿರಿಕ್ಯಾತನಹಳ್ಳಿ ಗ್ರಾಮದ ನಿವಾಸಿ ನಿತೀಶ್ (22) ಎಂಬಾತ ತಂಗಿಯನ್ನು ಕೆರೆಗೆ ದೂಡಿ ಕೊಲೆ ಮಾಡಿದ್ದಾನೆ. ಆಕೆಯನ್ನು ರಕ್ಷಿಸಲು ಹೋದ ತಾಯಿಯೂ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಹಿರಿಕ್ಯಾತನಹಳ್ಳಿ ಗ್ರಾಮದ ನಿವಾಸಿ ಅನಿತಾ (43) ಮತ್ತು ಧನುಶ್ರೀ (19) ಮೃತರು. ಪೊಲೀಸರು ಇದೊಂದು ಮರ್ಯಾದೆಗೇಡು ಹತ್ಯೆ ಪ್ರಕರಣ ಎಂದು ಶಂಕಿಸಿದ್ದಾರೆ.

ಮಂಗಳವಾರ ರಾತ್ರಿ 8ರ ಸುಮಾರಿಗೆ ಮನೆಯಿಂದ ಅನಿತಾ ಹಾಗೂ ಧನುಶ್ರೀ ಅವರನ್ನು ಬೈಕ್‌ನಲ್ಲಿ ಕರೆದುಕೊಂಡು ಹೊರಟ ನಿತೀಶ್ ಮರೂರು ಗ್ರಾಮದ ಬಸವೇಶ್ವರ ದೇವಸ್ಥಾನ ಸಮೀಪದ ಕೆರೆಯ ಬಳಿ ಇಬ್ಬರನ್ನೂ ಕೆಳಗಿಳಿಸಿದ್ದಾನೆ. ತಂಗಿಯನ್ನು ಕೆರೆಗೆ ತಳ್ಳಿದ್ದಾನೆ. ತನ್ನನ್ನು ರಕ್ಷಿಸಲು ಬಂದ ತಾಯಿಯನ್ನು ಧನುಶ್ರೀ ತಬ್ಬಿಕೊಂಡಿದ್ದರಿಂದ ಇಬ್ಬರೂ ನೀರಿನಲ್ಲಿ ಮುಳುಗಿದ್ದಾರೆ. ರಾತ್ರಿ 10ರ ಸುಮಾರಿಗೆ ಮನೆಗೆ ಬಂದ ನಿತೀಶ್, ತಂದೆ ಸತೀಶ್ ಬಳಿ ವಿಚಾರ ತಿಳಿಸಿದ್ದಾನೆ ಎಂದು ಗೊತ್ತಾಗಿದೆ.

‘ತಂಗಿ ಒಬ್ಬಳನ್ನೇ ಕರೆದರೆ ಬರುವುದಿಲ್ಲ ಎಂಬ ಕಾರಣಕ್ಕೆ ತಾಯಿಯನ್ನೂ ಕರೆದುಕೊಂಡು ಹೋಗಿದ್ದ. ಸಂಬಂಧಿಕರ ಮನೆಗೆ ಹೋಗೋಣ ಎಂದು ತಿಳಿಸಿದ್ದ’ ಎಂದು ತಿಳಿದುಬಂದಿದೆ.

ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.

‘ಧನುಶ್ರೀಯು ಅಂತಿಮ ಪದವಿ ವ್ಯಾಸಂಗ ಮಾಡುತ್ತಿದ್ದು, ಆಕೆ ಮುಸ್ಲಿಂ ಧರ್ಮೀಯನನ್ನು ಪ್ರೀತಿಸುತ್ತಿದ್ದಳು. ನಮಗೆ ವಿಷಯ ತಿಳಿದಾಗ, ಆತನನ್ನು ಬಿಟ್ಟುಬಿಡುವಂತೆ ಮನವೊಲಿಸುವ ಪ್ರಯತ್ನ ಮಾಡಿದ್ದೆವು. ಎಚ್ಚರಿಕೆ ನೀಡಿದ್ದರೂ ಆಕೆ ಕೇಳಿರಲಿಲ್ಲ. ಇದೇ ವಿಚಾರವಾಗಿ ನಿತೀಶ್ ಆಕೆಯೊಂದಿಗೆ ಏಳು ತಿಂಗಳಿನಿಂದ ಮಾತು ಬಿಟ್ಟಿದ್ದ ಎಂದು ಸತೀಶ್ ದೂರಿನಲ್ಲಿ ತಿಳಿಸಿದ್ದಾರೆ. ಹೀಗಾಗಿ ಆರೋಪಿ ಮರ್ಯಾದೆಗೇಡು ಹತ್ಯೆ ನಡೆಸಿದ್ದಾನೆಯೇ ಎಂಬ ಬಗ್ಗೆಯೂ ತನಿಖೆ ನಡೆಸುತ್ತಿದ್ದೇವೆ’ ಎಂದು ಪೊಲೀಸರು ತಿಳಿಸಿದ್ದಾರೆ.

ತಂಗಿಯು ದೊಡ್ಡಹೆಜ್ಜೂರು ಜಾತ್ರೆಯಲ್ಲಿ ಪ್ರಿಯಕರನ ಜೊತೆ ಇದ್ದಿದ್ದನ್ನು ಕಂಡು ನಿತೀಶ್ ಸಿಟ್ಟಾಗಿದ್ದ. ಈ ವೇಳೆ ಆಕೆ ಪ್ರಿಯಕರನ ಪರವಾಗಿ ವಾದಿಸಿದ್ದಳು. ಹನಗೋಡಿನ ಯುವಕ, ಆತನ ಸ್ನೇಹಿತರು ಮತ್ತು ನಿತೀಶ್ ನಡುವೆ ಹೊಡೆದಾಟವೂ ನಡೆದಿತ್ತು. ಇದರಿಂದ ಮತ್ತಷ್ಟು ಕುಪಿತನಾಗಿದ್ದ ಎಂದು ತಿಳಿದುಬಂದಿದೆ.

5ನೇ ಪುಟ ನೋಡಿ

‘ಮತ್ತೆ 660 ಪಿಎಸ್‌ಐ ನೇಮಕಾತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 545 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ಮರು ಪರೀಕ್ಷೆ ಸುಗಮವಾಗಿ ನಡೆದಿದೆ. ಮುಂದಿನ ಹಂತದಲ್ಲಿ 403 ಹುದ್ದೆಗಳಿಗೆ ಪರೀಕ್ಷೆ ನಡೆಸಲಾಗುವುದು. ಈ ಎರಡೂ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಮತ್ತೆ 660 ಹುದ್ದೆಗಳಿಗೆ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘660 ಹುದ್ದೆಗಳ ನೇಮಕಾತಿಗೂ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ. ಮುಂದಿನ ಎರಡು ವರ್ಷಗಳ ಒಳಗೆ ಈ ಎಲ್ಲ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು’ ಎಂದರು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ರೆಡ್ಡಿ ವಿರುದ್ಧ ಹೊಸ ಪ್ರಕರಣಕ್ಕೆ ಸಿದ್ಧತೆ

₹500 ಕೋಟಿ ಮೌಲ್ಯದ 19.98 ಲಕ್ಷ ಟನ್ ಅದಿರು ಕಳ್ಳಸಾಗಣೆ ಆರೋಪ

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಅಕ್ರಮ ಗಣಿಗಾರಿಕೆ ನಡೆಸಿ ₹500 ಕೋಟಿ ಮೌಲ್ಯದ 19.98 ಲಕ್ಷ ಟನ್ ಕಬ್ಬಿಣದ ಅದಿರನ್ನು ವಿದೇಶಗಳಿಗೆ ಕಳ್ಳಸಾಗಣೆ ಮಾಡಿದ ಆರೋಪದ ಮೇಲೆ ಶಾಸಕ ಜಿ. ಜನಾರ್ದನ ರೆಡ್ಡಿ ಒಡೆತನದ ಓಬಳಾಪುರಂ ಮೈನಿಂಗ್ ಕಂಪನಿ (ಓಎಂಸಿ) ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಲೋಕಾಯುಕ್ತದ ವಿಶೇಷ ತನಿಖಾ ತಂಡ (ಎಸ್‌ಐಟಿ) ಸಿದ್ಧತೆ ನಡೆಸಿದೆ.

ಜನಾರ್ದನ ರೆಡ್ಡಿ

ಓಎಂಸಿ ವಹಿವಾಟುಗಳ ಕುರಿತು ತನಿಖೆ ನಡೆಸಿದ್ದ ಸಿಬಿಐ, ಹೈದರಾಬಾದ್ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರೋಪಪಟ್ಟಿ ಆಧರಿಸಿ ಎಸ್‌ಐಟಿ ತನಿಖೆ ಆರಂಭಿಸಿದೆ. ಈ ಸಂಬಂಧ ರಾಜ್ಯದ ಕೆಲವು ಗಣಿಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದ್ದು, ಜನಾರ್ದನ ರೆಡ್ಡಿ ಮತ್ತು ಇತರರನ್ನು ವಿಚಾರಣೆ ನಡೆಸಲು ಪೂರ್ವತಯಾರಿ ಆರಂಭಿಸಿದೆ.

ಪ್ರಜಾವಾಣಿ ವಿಶೇಷ

2006ರಿಂದ 2010ರ ಅವಧಿಯಲ್ಲಿ ಓಎಂಸಿ 49 ಶಿಪ್‌ಮೆಂಟ್‌ಗಳಿಂದ ಅಂದಾಜು ₹ 500 ಕೋಟಿ ಮೌಲ್ಯದ ಅದಿರನ್ನು ಚೆನ್ನೈ ಬಂದರಿನ ಮೂಲಕ ರಫ್ತು ಮಾಡಿತ್ತು. ರಾಜ್ಯದ ಆಗಿನ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಕೂಡ ತಮ್ಮ ವರದಿಯಲ್ಲಿ ಈ ಕುರಿತು ಉಲ್ಲೇಖಿಸಿದ್ದರು. ಓಎಂಸಿಯ ವಹಿವಾಟುಗಳ ಕುರಿತು ತನಿಖೆ ನಡೆಸಿದ್ದ ಸಿಬಿಐನ ಹೈದರಾಬಾದ್ ಘಟಕವು, ‘ಚೆನ್ನೈ ಬಂದರಿನ ಮೂಲಕ ರಫ್ತು ಮಾಡಿರುವ ಅದಿರನ್ನು ಕರ್ನಾಟಕದ ಎಂಬಿಟಿ ಮೈನ್ಸ್, ಹಿಂದ್ ಟ್ರೇಡರ್ಸ್, ಟಪಾಲ್ ನಾರಾಯಣ ರೆಡ್ಡಿ ಮೈನ್ಸ್ ಮತ್ತು ಇತರ ಗಣಿಗಳಿಂದ ಅಕ್ರಮವಾಗಿ ಉತ್ಪಾದನೆ ಮಾಡಲಾಗಿತ್ತು’ ಎಂದು ಆರೋಪಪಟ್ಟಿಯಲ್ಲಿ ಉಲ್ಲೇಖಿಸಿತ್ತು.

ಈ ಕುರಿತು ಲೋಕಾಯುಕ್ತದ ಎಸ್‌ಐಟಿ ಅಧಿಕಾರಿಗಳು, 2022ರ ಜೂನ್‌ನಲ್ಲಿ ಪ್ರಾಥಮಿಕ ವಿಚಾರಣೆ ಆರಂಭಿಸಿದ್ದರು. ದೀರ್ಘ ಕಾಲದಿಂದ ಈ ವಿಚಾರಣೆ ಕುಂಟುತ್ತಾ ಸಾಗಿತ್ತು. ಕೆಲವು ದಿನಗಳಿಂದ ವಿಚಾರಣೆಗೆ ವೇಗ ದೊರಕಿದ್ದು, ಆರೋಪಿಗಳು ಹಾಗೂ ಸಾಕ್ಷಿದಾರರ ವಿಚಾರಣೆ ಆರಂಭವಾಗಿದೆ.

‘ಎಂಬಿಟಿ ಮೈನ್ಸ್, ಹಿಂದ್ ಟ್ರೇಡರ್ಸ್, ಟಪಾಲ್ ನಾರಾಯಣ ರೆಡ್ಡಿ ಮೈನ್ಸ್ ಮತ್ತು ಇತರ ಗಣಿಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಕೆಲವರು ವಿಚಾರಣೆಗೆ ಹಾಜರಾಗಿದ್ದು, ಹೇಳಿಕೆ ದಾಖಲಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನೂ ಸಲ್ಲಿಸಿದ್ದಾರೆ’ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಭಾರತೀಯ ದಂಡ ಸಂಹಿತೆಯ ಜತೆಯಲ್ಲಿ ಗಣಿ ಮತ್ತು ಖನಿಜ ಕಾಯ್ದೆ (ಎಂಎಂಡಿಆರ್) ಅಡಿಯಲ್ಲೂ ಪ್ರಕರಣ ದಾಖಲಿಸಬೇಕಾಗುತ್ತದೆ. ಪ್ರಾಥಮಿಕ ವಿಚಾರಣೆ ಪೂರ್ಣಗೊಂಡ ಬಳಿಕ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಲಾಗುತ್ತದೆ. ನ್ಯಾಯಾಲಯದ ಆದೇಶ ಪಡೆದು ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಬೇಕಿದೆ ಎಂದು ಮೂಲಗಳು ಹೇಳಿವೆ.

ಮತ್ತಷ್ಟು ರಾಜಕಾರಣಿಗಳಿಗೆ ಸಂಕಷ್ಟ?

ಈ ಪ್ರಕರಣದಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಕೆಲವು ಪ್ರಭಾವಿ ರಾಜಕಾರಣಿಗಳ ನಂಟು ಇದೆ. ಜನಾರ್ದನ ರೆಡ್ಡಿ ಅವರೊಂದಿಗೆ ನಿಕಟವಾಗಿದ್ದು, ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾಗಿದ್ದ ರಾಜಕಾರಣಿಗಳು, ಅಧಿಕಾರಿಗಳ ವಿರುದ್ಧವೂ ಪ್ರಕರಣ ದಾಖಲಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಏರ್ ಇಂಡಿಯಾಕ್ಕೆ ₹1.10 ಕೋಟಿ ದಂಡ

ನವದೆಹಲಿ (ಪಿಟಿಐ): ಗುತ್ತಿಗೆಗೆ ಪಡೆದಿರುವ ಬೋಯಿಂಗ್ 777 ವಿಮಾನಗಳ ಕಾರ್ಯಾಚರಣೆಯಲ್ಲಿ ಸುರಕ್ಷತಾ ಮಾನದಂಡ ಉಲ್ಲಂಘಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ), ಏರ್ ಇಂಡಿಯಾ ಕಂಪನಿಗೆ ₹1.10 ಕೋಟಿ ದಂಡ ವಿಧಿಸಿದೆ.

ಒಂದು ವಾರದ ಒಳಗೆ, ಮಹಾನಿರ್ದೇಶನಾಲಯವು ಏರ್ ಇಂಡಿಯಾಗೆ ದಂಡ ವಿಧಿಸಿದ ಎರಡನೇ ಪ್ರಕರಣ ಇದಾಗಿದೆ. ಪ್ರತಿಕೂಲ (ಕಡಿಮೆ ದೃಷ್ಟಿ ಗೋಚರದ ವೇಳೆ) ಸನ್ನಿವೇಶದಲ್ಲೂ ವಿಮಾನ ಕಾರ್ಯಾಚರಿಸಲು ಪೈಲಟ್‌ಗಳನ್ನು ನಿಯೋಜಿಸಿದ್ದರಿಂದ ಜನವರಿ 17ರಂದು ₹30 ಲಕ್ಷ ದಂಡ ವಿಧಿಸಿತ್ತು.

ಲೋಪ ಏನು?: ಭಾರತದಿಂದ ಅಮೆರಿಕಕ್ಕೆ ಕಾರ್ಯಾಚರಿಸುತ್ತಿರುವ ಬೋಯಿಂಗ್ ವಿಮಾನಗಳಲ್ಲಿ ತುರ್ತು ಆಮ್ಲಜನಕ ಪೂರೈಕೆ ವ್ಯವಸ್ಥೆ ಇಲ್ಲ ಎಂದು ಏರ್ ಇಂಡಿಯಾದ ಮಾಜಿ ಪೈಲಟ್‌ವೊಬ್ಬರು, ಡಿಜಿಸಿಎಗೆ ದೂರು ನೀಡಿದ್ದರು. ಈ ಬಗ್ಗೆ ತನಿಖೆ ಕೈಗೊಂಡಿದ್ದ ಡಿಜಿಸಿಎ, ಲೋಪ ಪತ್ತೆ ಮಾಡಿ ಕಂಪನಿಗೆ ಷೋಕಾಸ್ ನೋಟಿಸ್ ನೀಡಿತ್ತು.

‘ಕಂಪನಿಯು ಸುರಕ್ಷತಾ ನಿಯಮಗಳನ್ನು ಪಾಲಿಸದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ವಾಹನ ತಯಾರಕರು ನಿಗದಿಪಡಿಸಿರುವ ಅಗತ್ಯ ಮಾನದಂಡಗಳನ್ನು ಗುತ್ತಿಗೆಗೆ ಪಡೆಯಲಾಗಿರುವ ವಿಮಾನಗಳು ಹೊಂದಿಲ್ಲ. ಹಾಗಾಗಿ, ದಂಡಾರ್ಹ ಕ್ರಮ ಕೈಗೊಳ್ಳಲಾಗಿದೆ’ ಎಂದು ಡಿಜಿಸಿಎ ತಿಳಿಸಿದೆ. ಆದರೆ, ಈ ಕುರಿತು ಏರ್ ಇಂಡಿಯಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.



ವಿಮಾನದಲ್ಲಿ ಇದ್ದಕ್ಕಿದ್ದಂತೆ ಗಾಳಿಯ ಒತ್ತಡ ಕಡಿಮೆಯಾದರೆ ಪ್ರಯಾಣಿಕರು ಆಮ್ಲಜನಕದ ಮಾಸ್ಕ್ ಧರಿಸಬೇಕಾಗುತ್ತದೆ. ಇದಕ್ಕಾಗಿ ಸಾಕಷ್ಟು ಆಮ್ಲಜನಕದ ಪೂರೈಕೆ ಸೌಲಭ್ಯ ಹೊಂದಿರುವುದು ಅತ್ಯಗತ್ಯ. ಆದರೆ, ಬೋಯಿಂಗ್ ವಿಮಾನಗಳಲ್ಲಿ ರಾಸಾಯನಿಕವಾಗಿ ಉತ್ಪಾದಿಸುವ ಆಮ್ಲಜನಕದ ವ್ಯವಸ್ಥೆ ಇದೆ. 12 ನಿಮಿಷಗಳ ಒಳಗೆ ಈ ಆಮ್ಲಜನಕದ ಪೂರೈಕೆ ಸ್ಥಗಿತವಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಕ್ಯಾಬಿನ್ ಒಳಗೆ ಗಾಳಿಯ ಒತ್ತಡ ಕಡಿಮೆಯಾದಾಗ ವಿಮಾನ ಹಾರಾಟದ ಎತ್ತರವನ್ನು 10,000 ಅಡಿಗೆ ಇಳಿಸಬೇಕಾಗುತ್ತದೆ. ಆದರೆ, ಪರ್ವತ ಶ್ರೇಣಿ ಪ್ರದೇಶದಲ್ಲಿ ಹಾರಾಟ ನಡೆಸುವಾಗ ಕೇವಲ 12 ನಿಮಿಷಗಳಲ್ಲಿ 10,000 ಅಡಿಗೆ ವಿಮಾನ ಹಾರಾಟದ ಎತ್ತರ ತಗ್ಗಿಸುವುದು ಕಷ್ಟಸಾಧ್ಯ. ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊದಿಂದ ನೇರವಾಗಿ ವಿವಿಧೆಡೆಗೆ ಕಾರ್ಯಾಚರಿಸುವ ವಿಮಾನಗಳಲ್ಲಿ ಈ ಆಮ್ಲಜನಕ ವ್ಯವಸ್ಥೆಯನ್ನು ಬಳಸುವಂತಿಲ್ಲ ಎಂದು ಆ ಮೂಲಗಳು ಸ್ಪಷ್ಟಪಡಿಸಿವೆ.

ಕಾರ್ಮಿಕ ಕಲ್ಯಾಣ ಮಂಡಳಿಯಿಂದ ರದ್ದತಿಗೆ ಕ್ರಮ

2.23 ಲಕ್ಷ ಕಾರ್ಮಿಕರ ನಕಲಿ ಕಾರ್ಡ್ ಪತ್ತೆ!

● ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಜಿಲ್ಲೆಯಲ್ಲಿ ಒಟ್ಟು 2.94 ಲಕ್ಷ ಕಾರ್ಮಿಕರ ಕಾರ್ಡ್‌ಗಳಿದ್ದು, ಇದರಲ್ಲಿ ಬರೋಬ್ಬರಿ 2.23 ಲಕ್ಷ ಕಾರ್ಡ್‌ಗಳು ನಕಲಿ ಎಂಬುದು ತನಿಖೆಯಿಂದ ಪತ್ತೆಯಾಗಿದೆ. ಅಂದರೆ ಶೇ 83ರಷ್ಟು ಅನರ್ಹರು ಕಾರ್ಮಿಕರ ಕಾರ್ಡ್‌ನ ಸೌಲಭ್ಯ ಪಡೆಯುತ್ತಿದ್ದರು ಎಂಬುದು ಈಗ ಬಯಲಾಗಿದೆ.

ಶಿಕ್ಷಕರು, ಪೊಲೀಸರು, ಖಾಸಗಿ ಕಂಪನಿ ನೌಕರರು, ವಾಹನ ಚಾಲಕರು, ಟೈಲರ್‌ಗಳು, ಕೃಷಿ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಹೋಟೆಲ್ ಕಾರ್ಮಿಕರು ಸೇರಿ ಸಾವಿರಾರು ಮಂದಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಕಟ್ಟಡ ಕಾರ್ಮಿಕರ ಕಾರ್ಡ್‌ಗಳನ್ನು ಪಡೆದಿದ್ದಾರೆ ಎಂಬುದು ತನಿಖೆಯಿಂದ ಬಹಿರಂಗವಾಗಿದೆ. ನೋಂದಣಿಯಾದವರಲ್ಲಿ 21,493 ಮಂದಿ ತನಿಖೆ ವೇಳೆ ಸಂಪರ್ಕಕ್ಕೆ ಸಿಕ್ಕಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ.

ರದ್ದತಿಗೆ ಕ್ರಮ: ರಾಜ್ಯದಲ್ಲಿ ನಕಲಿ ಕಾರ್ಮಿಕರ ಸಂಖ್ಯೆ ಮಿತಿಮೀರಿದ್ದು, ಸರ್ಕಾರಿ ಸೌಲಭ್ಯಗಳು ಅನರ್ಹರ ಪಾಲಾಗುತ್ತಿವೆ ಎಂಬ ದೂರು ಕೇಳಿಬಂದ ಕಾರಣ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಕಾರ್ಯಾಚರಣೆ ನಡೆಸಿದೆ. ನಕಲಿ ಕಾರ್ಮಿಕರ ಕಾರ್ಡ್‌ಗಳನ್ನು ಪತ್ತೆ ಮಾಡಿ, ರದ್ದುಗೊಳಿಸಲು ಮುಂದಾಗಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ಹಾವೇರಿ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ನಕಲಿ ಕಾರ್ಡ್‌ಗಳು ಇರುವುದು ಪತ್ತೆಯಾಗಿದೆ.

5ನೇ ಪುಟ ನೋಡಿ

ಹಾವೇರಿ ಜಿಲ್ಲೆಯ ಅನರ್ಹ ಕಾರ್ಮಿಕ ಕಾರ್ಡ್‌ಗಳ ವಿವರ

ತಾಲ್ಲೂಕು	ಒಟ್ಟು ಕಾರ್ಡ್‌ಗಳು	ಅರ್ಹರು	ಅನರ್ಹರು
ಸವಣೂರು	34,739	7,008	26,234
ಹಿರೇಕೆರೂರು	37,099	5,974	28,575
ಬ್ಯಾಡಗಿ	29,355	8,011	17,468
ಹಾನಗಲ್	49,632	9,194	34,303
ಹಾವೇರಿ	48,628	6,142	42,452
ಶಿಗ್ಗಾವಿ	44,475	3,853	33,777
ರಾಣೆಬೆನ್ನೂರು	50,910	9,933	40,421
ಒಟ್ಟು	2,94,838	50,115	2,23,230

ಆಕ್ಷೇಪಣೆಗೆ 7 ದಿನಗಳ ಅವಕಾಶ

‘ಕಾರ್ಮಿಕ ನಿರೀಕ್ಷಕರ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ಮಂಡಳಿಯ ವೆಬ್‌ಸೈಟ್‌ನಲ್ಲಿ ಅರ್ಹ ಮತ್ತು ಅನರ್ಹ ಕಾರ್ಮಿಕರ ಪಟ್ಟಿ ಪ್ರದರ್ಶಿಸುತ್ತೇವೆ. ಪ್ರದರ್ಶಿಸಿದ 7 ದಿನಗಳ ಒಳಗೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ. ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ, ಮೇಲ್ಮನವಿ ಪ್ರಾಧಿಕಾರದ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಹಾವೇರಿ ಜಿಲ್ಲಾ ಕಾರ್ಮಿಕ ಅಧಿಕಾರಿ ಮಹೇಶ ಕುಳಲಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಅಪಘಾತ: ಮಹಿಳೆ ಸಾವು

ಬೆಂಗಳೂರು: ಸೈಕಲ್‌ನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ತೆರಳುತ್ತಿದ್ದ ವೇಳೆ ಹಿಂಬದಿಯಿಂದ ವಾಟರ್ ಟ್ಯಾಂಕರ್ ವಾಹನವೊಂದು ಡಿಕ್ಕಿಯಾಗಿ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನೇಪಾಳ ಮೂಲದ ಜಾನಕಿ (30) ಮೃತಪಟ್ಟವರು. ಇವರ ಪತಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಕೆಲವು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ ದಂಪತಿ, ಓ ಫಾರಂ ಬಳಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು ಎಂದು ಪೊಲೀಸರು ಹೇಳಿದರು.

ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಗಣರಾಜ್ಯೋತ್ಸವಕ್ಕೆ ಸಿದ್ಧತೆ

1500 ಮಕ್ಕಳಿಂದ ಸಾಂಸ್ಕೃತಿಕ ನೃತ್ಯ ತಾಲೀಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಜ.26ರಂದು ಗಣರಾಜ್ಯೋತ್ಸವ ಸಮಾರಂಭ ನಡೆಯಲಿದ್ದು, ಎರಡು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ 1,500 ಮಕ್ಕಳು ಭಾಗವಹಿಸಲಿದ್ದಾರೆ.

ಮೈದಾನದಲ್ಲಿ ಪೂರ್ವಭಾವಿ ಸಿದ್ಧತೆಗಳನ್ನು ಬುಧವಾರ ಪರಿಶೀಲಿಸಿದ ನಂತರ ಮಾತನಾಡಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, 'ಈ ದೇಶವು ನಮಗಾಗಿಯೆ ಎಂದೆಂದಿಗೂ... ಹಾಡಿಗೆ ಹೆಗ್ಗನಹಳ್ಳಿ ಕರ್ನಾಟಕ ಪಬ್ಲಿಕ್ ಶಾಲೆಯ 700 ಮಕ್ಕಳು ಹಾಗೂ 'ಅಕ್ಷರದವ್ವ ಸಾವಿತ್ರಿಬಾಯಿ ಫುಲೆ' ಹಾಡಿಗೆ ಪಿಳ್ಳಣ್ಣಗಾರ್ಡನ್ ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜಿನ 700 ಮಕ್ಕಳು ನೃತ್ಯ ಮಾಡಲಿದ್ದಾರೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಸಮಾರಂಭಕ್ಕಾಗಿ ಮಕ್ಕಳು ಬುಧವಾರ ತಾಲೀಮು ನಡೆಸಿದರು –ಪ್ರಜಾವಾಣಿ ಚಿತ್ರ

ಕೇರಳ ಪೊಲೀಸ್, ಸ್ಕೌಟ್ಸ್–ಗೈಡ್ಸ್, ಎನ್‌ಸಿಸಿ, ಸೇವಾದಳ ಮತ್ತು ವಿವಿಧ ಶಾಲೆಗಳ ಮಕ್ಕಳು ಕವಾಯತು ಮತ್ತು ಬ್ಯಾಂಡ್‌ಗಳನ್ನು 38 ತುಕಡಿಗಳಲ್ಲಿ 1,150 ಮಂದಿ ನಡೆಸಿಕೊಡಲಿದ್ದಾರೆ. ಎಂಇಜಿ ತಂಡ 'ಕಳರಿಪಯಟ್ಟು', ಎಎಸ್‌ಸಿ ಸೆಂಟರ್‌ನ ಅನಿಲ್ ಥಾಮಸ್ ತಂಡದವರು 'ದ್ವಿಚಕ್ರ ವಾಹನ ಸಾಹಸ' ಪ್ರದರ್ಶನ ನೀಡಲಿದ್ದಾರೆ. ಎಎಸ್‌ಸಿ ವಿಶೇಷ ತಂಡದ ಜೆಮ್ಸ್ ಅವರು 'ಅಡಗು ತಾಣಗಳಲ್ಲಿ ಹೊಕ್ಕು ದಾಳಿ ಮಾಡುವ ನಿರೂಪಣೆ'ಯನ್ನು ನಡೆಸಿಕೊಡಲಿದ್ದಾರೆ ಎಂದು ಹೇಳಿದರು.

ನಗರ ಪೊಲೀಸ್ ಕಮಿಷನರ್ ದಯಾನಂದ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಉಪಸ್ಥಿತರಿದ್ದರು.

ವಾಹನ ಸಂಚಾರ ಮಾರ್ಗ ಬದಲಾವಣೆ: ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಜ.26ರಂದು ಗಣರಾಜ್ಯೋತ್ಸವ ಸಮಾರಂಭ ನಡೆಯಲಿದ್ದು, ಮೈದಾನದ ಸುತ್ತಮುತ್ತಲ ರಸ್ತೆಗಳಲ್ಲಿ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ಕಾರುಗಳ ಪಾಸ್ ಹೊಂದಿರುವ ಎಲ್ಲ ಆಹ್ವಾನಿತರು ನಿಗದಿತ ಗೇಟ್‌ಗಳಲ್ಲಿ ಪ್ರವೇಶಿಸಬೇಕು. ತುರ್ತುಸೇವಾ ವಾಹನಗಳಾದ ಆಂಬುಲೆನ್ಸ್, ಅಗ್ನಿಶಾಮಕದಳದ ವಾಹನಗಳು, ನೀರಿನ ಟ್ಯಾಂಕರ್, ಕೆಎಸ್‌ಆರ್‌ಪಿ, ಸಿಆರ್‌ಟಿ, ಬಿಬಿಎಂಪಿ, ಪಿಡಬ್ಲ್ಯುಡಿ ವಾಹನಗಳು ಪ್ರವೇಶ ದ್ವಾರ–2ರ ಮೂಲಕ ಪರೇಡ್ ಮೈದಾನಕ್ಕೆ ಪ್ರವೇಶಿಸಿ, ನಂತರ ಪೋರ್ಟ್ ವಾಲ್ ಹಿಂಭಾಗದಲ್ಲಿ (ದಕ್ಷಿಣ ಕಡೆಗೆ) ವಾಹನಗಳನ್ನು ನಿಲುಗಡೆ ಮಾಡಬೇಕು ಎಂದು ಸೂಚಿಸಲಾಗಿದೆ.

ಅಂದು ಬೆಳಿಗ್ಗೆ 8.30ರಿಂದ ಬೆಳಿಗ್ಗೆ 10.30ರ ವರೆಗೆ ಕಬ್ಬನ್ ರಸ್ತೆಯಲ್ಲಿ ಬರುವ ಜಂಕ್ಷನ್‌ನಿಂದ ಕಾಮರಾಜ ರಸ್ತೆ ಜಂಕ್ಷನ್‌ವರೆಗೆ ಎರಡೂ ದಿಕ್ಕುಗಳಲ್ಲಿನ ಸಂಚಾರವನ್ನು ನಿರ್ಬಂಧಿಸಿ, ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ.

'ಇನ್‌ಫೆಂಟ್ರಿ ರಸ್ತೆಯಲ್ಲಿ ಮಣಿಪಾಲ್ ಸೆಂಟರ್ ಕಡೆಗೆ ಸಂಚರಿಸುವ ವಾಹನಗಳು ನೇರವಾಗಿ ಇನ್‌ಫೆಂಟ್ರಿ ರಸ್ತೆ, ಸಫೀನಾ ಪ್ಲಾಜಾ– ಎಡ ತಿರುವು ಪಡೆದು ಮೈನ್‌ಗಾರ್ಡ್ ರಸ್ತೆ– ಅಲೀಸ್ ವೃತ್ತ– ಡಿಸ್ಪೆನ್ಸರಿ ರಸ್ತೆ– ಕಾಮರಾಜ ರಸ್ತೆ– ಕಬ್ಬನ್ ರಸ್ತೆ ಮತ್ತು ಕಾಮರಾಜ ರಸ್ತೆಯ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ಕಬ್ಬನ್ ರಸ್ತೆ ಮೂಲಕ ಮಣಿಪಾಲ್ ಸೆಂಟರ್ ಕಡೆಗೆ ಸಾಗಬಹುದು.

ಕಬ್ಬನ್ ರಸ್ತೆಯಲ್ಲಿ, ಮಣಿಪಾಲ್ ಸೆಂಟರ್ ಜಂಕ್ಷನ್‌ನಿಂದ ಬಿಆರ್‌ವಿ ಜಂಕ್ಷನ್ ಕಡೆಗೆ ಬರುವ ವಾಹನಗಳ ಸಂಚಾರವನ್ನು ಮಣಿಪಾಲ್ ಸೆಂಟರ್ ಬಳಿ ನಿರ್ಬಂಧಿಸಿದ್ದು, ವಾಹನಗಳು ವೆಬ್ಸ್ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದು ಎಂ.ಜಿ.ರಸ್ತೆಯ ಮೂಲಕ ಮೆಯೋಹಾಲ್, ಕಾವೇರಿ ಎಂಪೋರಿಯಂ, ಅನಿಲ್ ಕುಂಬ್ಳೆ ವೃತ್ತದಲ್ಲಿ ತಿರುವು ಪಡೆದು ಮುಂದಕ್ಕೆ ಸಾಗಬಹುದು.

ಅನಿಲ್ ಕುಂಬ್ಳೆ ವೃತ್ತದಿಂದ ಕಬ್ಬನ್‌ರಸ್ತೆ ಕಡೆಗೆ ಬರುವ ವಾಹನಗಳು ನೇರವಾಗಿ ಸೆಂಟ್ರಲ್ ಸ್ಟ್ರೀಟ್ ರಸ್ತೆಯಲ್ಲಿ ಸಾಗಿ, ಬಲಕ್ಕೆ ತಿರುವು ಪಡೆದು ಇನ್‌ಫೆಂಟ್ರಿ ರಸ್ತೆ–ಸಫೀನಾ ಪ್ಲಾಜಾ ಬಳಿ ಎಡಕ್ಕೆ ತಿರುವು ಪಡೆದು ಮೈನ್‌ಗಾರ್ಡ್ ರಸ್ತೆ – ಆಲಿ ಸರ್ಕಲ್– ಡಿಸ್ಪೆನ್ಸರಿ ರಸ್ತೆ– ಕಾಮರಾಜ ರಸ್ತೆ ಮತ್ತು ಕಾಮರಾಜ ರಸ್ತೆ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ಕಬ್ಬನ್ ರಸ್ತೆಯ ಮೂಲಕ ಮಣಿಪಾಲ್ ಸೆಂಟರ್ ಕಡೆಗೆ ವಾಹನಗಳು ಸಾಗಬಹುದು.

ಸೆಂಟ್ರಲ್ ಸ್ಟ್ರೀಟ್, ಅನಿಲ್ ಕುಂಬ್ಳೆ ವೃತ್ತದಿಂದ ಶಿವಾಜಿನಗರ ಬಸ್ ನಿಲ್ದಾಣದವರೆಗೆ, ಕಬ್ಬನ್ ರಸ್ತೆ, ಸಿಟಿಒ ವೃತ್ತದಿಂದ ಕೆ.ಆರ್ ರಸ್ತೆ ಮತ್ತು ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ, ಎಂ.ಜಿ .ರಸ್ತೆ, ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ಅಂದು ವಾಹನ ನಿಲುಗಡೆಯನ್ನು ನಿಷೇಧಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಅತಿ ಎತ್ತರದಲ್ಲಿ ಹಾರಲಿದೆ ತ್ರಿವರ್ಣ ಧ್ವಜ

ಬೆಂಗಳೂರು: ವಿಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಚಂದ್ರಾಲೇಔಟ್‌ನಲ್ಲಿರುವ ನಗರದ ಅತಿ ಎತ್ತರದ ಧ್ವಜಸ್ತಂಭದಲ್ಲಿ ಜ.26ರಂದು ತ್ರಿವರ್ಣ ಧ್ವಜ ಹಾರಲಿದೆ.

ಅಂದು ಬೆಳಿಗ್ಗೆ 8ಕ್ಕೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಅವರು ರಾಷ್ಟ್ರ ಧ್ವಜ ಸ್ತಂಭವನ್ನು ಲೋಕಾರ್ಪಣೆ ಮಾಡಿ, ಧ್ವಜಾರೋಹಣ ನೆರವೇರಿಸಲಿದ್ದಾರೆ. ವಿಜಯನಗರ ಶಾಸಕ ಎಂ. ಕೃಷ್ಣಪ್ಪ ಅಧ್ಯಕ್ಷತೆವಹಿಸಲಿದ್ದಾರೆ. ಗೋವಿಂದರಾಜನಗರ ಶಾಸಕ ಪ್ರಿಯ ಕೃಷ್ಣ ಪಾಲ್ಗೊಳ್ಳಲಿದ್ದಾರೆ.

ಆರಂಭದಲ್ಲಿ ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಾದ್ಯಗೋಷ್ಠಿ ಸಹಿತವಾಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ಪಥ ಸಂಚಲನ ನಡೆಯಲಿದೆ.

ಬೆಳಿಗ್ಗೆ 10ರಿಂದ ನಾಡಪ್ರಭು ವಾಣಿಜ್ಯ ಸಂಕೀರ್ಣ ಆವರಣದಲ್ಲಿ ರಕ್ತದಾನ ಶಿಬಿರ ಹಾಗೂ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಸಂಜೆ 6.30ಕ್ಕೆ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ನೇತೃತ್ವದಲ್ಲಿ ಗಾಯಕಿ ಶಮಿತಾ ಮಲ್ನಾಡ್ ತಂಡ ರಾಷ್ಟ್ರ ನಮನ ಸಂಗೀತ ಸಂಜೆ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಇದೇ ಸಂದರ್ಭದಲ್ಲಿ ಲೇಸರ್ ಶೋ ಪ್ರದರ್ಶನವನ್ನು ಆಯೋಜಿಸಲಾಗಿದೆ.

ವೈಶಿಷ್ಟ್ಯಗಳು: ಶಾಸಕ ಎಂ. ಕೃಷ್ಣಪ್ಪ ಅವರ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ₹ 1 ಕೋಟಿ ವೆಚ್ಚದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ 215 ಅಡಿ ಎತ್ತರದ ರಾಷ್ಟ್ರ ಧ್ವಜಸ್ತಂಭ ನಿರ್ಮಿಸಲಾಗಿದೆ.

ಇಲ್ಲಿವರೆಗೆ ರಾಜಭವನದ ಹಿಂಬದಿ ರಸ್ತೆಯ ರಾಷ್ಟ್ರೀಯ ಸೇನಾ ವಸ್ತು ಸಂಗ್ರಹಾಲಯ ಆವರಣದಲ್ಲಿರುವ 213 ಅಡಿ ಎತ್ತರದ ಧ್ವಜಸ್ತಂಭ ಅತಿ ಎತ್ತರದ ಸ್ತಂಭವೆಂದು ಹೆಸರಾಗಿತ್ತು. ಇದೀಗ ಅದಕ್ಕಿಂತ ಎರಡು ಅಡಿ ಎತ್ತರದ ಸ್ತಂಭ ಉದ್ಘಾಟನೆಗೆ ಸಿದ್ಧವಾಗಿದೆ. ಕಂಬ 19 ಟನ್ ತೂಕವಿದೆ. ಅಶೋಕ ಲಾಂಛನ ಐದು ಅಡಿ ಇದ್ದು, ಅದರ ನಾಲ್ಕು ಸಿಂಹಗಳು ವಿಜಯನಗರ ವಿಧಾನಸಭಾ ಕ್ಷೇತ್ರದ ನಿವಾಸಿಗಳಿಗಲ್ಲದೇ, ಸುತ್ತಮುತ್ತಲಿನ ಪ್ರದೇಶಳಿಗೂ ಕಾಣಿಸುತ್ತದೆ.

ರಾಷ್ಟ್ರಧ್ವಜವನ್ನು ಕೈಯಿಂದಲೂ, ಯಾಂತ್ರಿಕವಾಗಿಯೂ ಏರಿಸಿ ಹಾಗೂ ಇಳಿಸಲು ಅವಕಾಶ ಕಲ್ಪಿಸಲಾಗಿದೆ. ಧ್ವಜಸ್ತಂಭದ ಸುತ್ತ ನಿರ್ಮಿಸಿರುವ ಹುಲ್ಲು ಹಾಸು ಹಾಗೂ ಕಲ್ಲಿನ ಮೆಟ್ಟಿಲುಗಳು ವಿಶಿಷ್ಟ ಮೆರುಗು ನೀಡಿವೆ ಎಂದು ವಿಜಯನಗರದ ಪ್ರದೀಪ್ ಕೃಷ್ಣ ತಿಳಿಸಿದ್ದಾರೆ.

ಚರ್ಚಾಸ್ಪರ್ಧೆ: ಬೆಂಗಳೂರಿಗೆ ಪ್ರಶಸ್ತಿ

ಮೈಸೂರು: ನಗರದ ಮಾನಸ ಗಂಗೋತ್ರಿಯಲ್ಲಿ 'ರಾಜ್ಯ ಸಹಕಾರ ಮಹಾಮಂಡಳ' ಬುಧವಾರ ಆಯೋಜಿಸಿದ್ದ ರಾಜ್ಯಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಜಿಕೆವಿಕೆ ಬೆಂಗಳೂರು ತಂಡಗಳು ಕ್ರಮವಾಗಿ ಸ್ನಾತಕೋತ್ತರ ಹಾಗೂ ಪದವಿ ಕಾಲೇಜು ವಿಭಾಗದಲ್ಲಿ ಸಮಗ್ರ ಪಾರಿತೋಷಕ ಪ್ರಶಸ್ತಿ ಗೆದ್ದವು.

ಟೈಲರ್ ವೃತ್ತಿ ಬಾಂಧವರ ಸಮಾವೇಶ ಇದೇ 30ಕ್ಕೆ

ಬೆಂಗಳೂರು: ಕರ್ನಾಟಕ ಸ್ಟೇಟ್ ಟೈಲರ್ಸ್ ಅಸೋಸಿಯೇಷನ್ ರಜತ ಮಹೋತ್ಸವದ ಅಂಗವಾಗಿ ಇದೇ 30ರಂದು ಜಯನಗರದ 5ನೇ ಬ್ಲಾಕ್‌ನಲ್ಲಿರುವ ಶಾಲಿನಿ ಮೈದಾನದಲ್ಲಿ 'ರಾಜ್ಯಮಟ್ಟದ ಟೈಲರ್ ವೃತ್ತಿ ಬಾಂಧವರ ಸಮಾವೇಶ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ನಾರಾಯಣ ಬಿ.ಎ., 'ರಾಜ್ಯದಾದ್ಯಂತ ಟೈಲರ್ ವೃತ್ತಿಯಲ್ಲಿ 10 ಲಕ್ಷಕ್ಕೂ ಹೆಚ್ಚು ಜನ ತೊಡಗಿಸಿಕೊಂಡಿದ್ದಾರೆ. ಆದ್ದರಿಂದ, ಇವರ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಅನುದಾನ ನೀಡಬೇಕು. ಟೈಲರ್‌ಗಳ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಬೇಕು. ಭವಿಷ್ಯನಿಧಿ ಹಾಗೂ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕು. ಹೊಲಿಗೆ ಯಂತ್ರ ಖರೀದಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಬೇಕು' ಎಂದರು.

ಸಮಾವೇಶವನ್ನು ಸಿ.ಎಂ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಡಿಸಿಎಂ ಡಿ.ಕೆ. ಶಿವಕುಮಾರ್, ವಿಧಾನ ಸಭಾ ಅಧ್ಯಕ್ಷ ಯು.ಟಿ. ಖಾದರ್, ವಿಪಕ್ಷ ನಾಯಕ ಆರ್. ಅಶೋಕ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಭಾಗವಹಿಸಲಿದ್ದಾರೆ.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/19/2023–24 ದಿನಾಂಕ: 22–01–2024

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಅರ್ಜಿದಾರರು ಹಾಗೂ ಜಮೀನಿನ ಮಾಲೀಕರಾದ **ಶ್ರೀಮತಿ ಸೌಮ್ಯ ಕೆ.ಎಸ್. ಬಿನ್ ಸಿದ್ದಪ್ಪ ಕೊತ್ತುಂಬರಿ** ಇವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕಲ್ಲಹಳ್ಳಿ ಗ್ರಾಮದ ಸ.ನಂ. 170/2 ರಲ್ಲಿನ 01 ಎಕರೆ 38 ಗುಂಟೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಕೃಷಿ ವಲಯಕ್ಕೆ ಕಾಯ್ದಿರಿಸಲಾಗಿರುವ** ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/3238/ಅಡ್ವರ್ಟೋರ್/2023–24

ದರಖಾಸ್ತ ಪ್ರಕರಣ ನಂ. 28/2023
ಹಾವೇರಿ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ

ದರಖಾಸ್ತುದಾರ : ಶಿವಪ್ಪ ತಂದೆ ನಿಂಗಪ್ಪ ಗೋಪಾಳಿ, ಸಾ। ಹಳೆರಿತ್ರಿ, ತಾ। ಹಾವೇರಿ.

ವಿರುದ್ಧ : ಋಣೋಕೋದಾರರು: 3. ಅಕ್ಷಯ ತಂದೆ ಜಯರಾಮ ಮಾನ್ವಿ ವಿಲ್ಲಾ ನಂ. 203, ಹೆರಿಟೇಜ ಕೌಂಟಿ, ೩ಂಡ್ಲು, ಸರ್ಜಾಪುರ ರಸ್ತೆ ಹತ್ತಿರ, ಬೆಂಗಳೂರು.

ಇಸ್ತಿಹಾರ

ಮೇಲ್ಕಾಣಿಸಿದ ದರಖಾಸ್ತುದಾರರು ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು, ಹಾವೇರಿ ಇವರ ನ್ಯಾಯಾಲಯದಲ್ಲಿ ಮೇಲ್ಕಾಣಿಸಿದ ನಿಮ್ಮ ಹಾಗೂ ವಗೈರರ ವಿರುದ್ಧ ಅಸಲು ದಾವಾ ನಂ. 90/2014 ರಲ್ಲಿ ಆದಂತ ಡಿಕ್ರಿ ಮೇಲಿಂದ ದಾವೆಯ ದಾವಾ ಆಸ್ತಿ ಹಾವೇರಿ ತಾಲೂಕ ಹೊಸರಿತ್ತಿ ಗ್ರಾಮದ ರಿ.ಸ. ನಂ. 118/3 ಕ್ಷೇತ್ರ 04 ಎಕರೆ 38 ಗುಂಟೆ ನೇದ್ದನ್ನು ಕುರಿತು ಹಾವೇರಿ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಖರೀದಿ ಪತ್ರವನ್ನು ನೋಂದಾಯಿಸಿ ಕೊಡುವಂತೆ ಮೇಲ್ಕಾಣಿಸಿದ ಪ್ರಕರಣವನ್ನು ದಾಖಲಿಸಿದ್ದು ಇರುತ್ತದೆ. ಸದರಿ ದಾವೆಯಲ್ಲಿ ಋಣೋಕೋದಾರ 1 ಮತ್ತು 2ನೇದ್ದವರು ಹಾಜರ ಆಗಿದ್ದು ನೀವು ಇಲ್ಲಿಯವರೆಗೂ ಹಾಜರ ಆಗಿರುವುದಿಲ್ಲಾ. ಆ ಕಾರಣ ಸದರಿ ದಾವೇಯ ನೊಟೀಸನ್ನು ಈ ದಿನಪತ್ರಿಕೆಯ ಮುಖಾಂತರ ಕಳುಹಿಸಿದ್ದು, ಮೇಲ್ಕಾಣಿಸಿದ ನೀವು **ದಿನಾಂಕ: 04-03-2024** ರಂದು ಖುದ್ದಾಗಿ ಆಗಲಿ ಅಥವಾ ತಮ್ಮಿಂದ ಅಧಿಕಾರ ಪಡೆದಂತಹ ನ್ಯಾಯವಾದಿಗಳ ಮುಖಾಂತರ **ಮುಂಜಾನೆ 10-30 ಗಂಟೆಗೆ** ಮಾನ್ಯ ನ್ಯಾಯಾಲಯದಲ್ಲಿ ಹಾಜರಿರತಕ್ಕದ್ದು, ಒಂದು ವೇಳೆ ಹಾಜರಾಗದೇ ಇದ್ದಲ್ಲಿ ಪ್ರಕರಣವನ್ನು ಏಕತರ್ಫೀಯಿಂದ ನಿರ್ಧರಿಸಲಾಗುವದು.

ಈ ಹೊತ್ತು ದಿನಾಂಕ: 18-01-2024 ರಂದು ಈ ನ್ಯಾಯಾಲಯದ ಮೊಹರು ಹಾಕಿ ಕೊಡಲ್ಪಟ್ಟಿತು.

ನ್ಯಾಯಾಲಯದ ಆದೇಶದ ಮೇರೆಗೆ, ಶಿರಸ್ತೆದಾರರು, ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.
ಎಸ್.ಎಫ್. ವಡ್ನಿಕೊಪ, ದರಖಾಸ್ತುದಾರನ ಪರ ವಕೀಲರು

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ನಂ. 04/2024 ದಿನಾಂಕ : 19–01–2024

ಭಾರತದ ರಾಷ್ಟ್ರಪತಿಗಳ ಪರವಾಗಿ [illegible] ಕೆಲಸಗಳಿಗೆ [illegible]

ಕ್ರ.	ಸಂಕ್ಷಿಪ್ತ ವಿವರಣೆ
1	10 ವರ್ಷಗಳ [illegible] ಮೋಷನ್ [illegible] ಸ್ಥಾಪನೆ [illegible] ಸಂ. ಎಲ್8236927) (ಪ್ರಮಾಣ: 01 ಸಂಖ್ಯೆ)
2	ಡಿಪಿಡಬ್ಲ್ಯು [illegible] ಅವಶ್ಯಕವಾದ [illegible] ನ್ಯುಮ್ಯಾಟಿಕ್ [illegible] 9ಹೆಚ್‌ಸಿ [illegible] ಚಾಲಕನ [illegible] ಒಳಗೊಂಡ [illegible] ಎಲ್8245104) (ಪ್ರಮಾಣ: 01 ಸೆಟ್)

ಬಿಡ್ ಸಲ್ಲಿಸುವ ಕೊನೆಯ ದಿನಾಂಕ : 13–02–2024 ರಂದು 10:30 ಗಂಟೆಗಳವರೆಗೆ.
ಹೆಚ್ಚಿನ ವಿವರಗಳಿಗೆ www.ireps.gov.in [illegible]
ಪಿಯುಬಿ/643/[illegible]/2023-24 | South Western Railway - SWR | @SWRRLY

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602

ಸಂಖ್ಯೆ: ಡಿವೈಇಎಸ್/ಎಸ್‌ಎಸ್‌ಹೆಚ್/75/2023–24 ದಿನಾಂಕ: 23–01–2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್‌ನ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಕ್ರೀಡಾ ವಸತಿ ಶಾಲೆ/ ನಿಲಯ, ರಾಯಚೂರು ಇಲ್ಲಿನ ಕ್ರೀಡಾಪಟುಗಳಿಗೆ ಊಟೋಪಹಾರ ಸರಬರಾಜು ಮಾಡಲು.	36,56,250/-	73,125/-

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **05–02–2024 ರಂದು ಸಮಯ: 16.00 ಗಂಟೆಯವರೆಗೆ.**

ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ವಾಸಾಸಂಇ/ವಾ.ಪ್ರ/3222/ಅಡ್ವರ್ಟೋರ್/2023–24

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ನಂ. 55, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560020.
ದೂರವಾಣಿ: 23460085 / 8949 / 2436, ಫ್ಯಾಕ್ಸ್: 080–23567060
ಇಮೇಲ್: ksdb.ho@gmail.com, kscb_blr@rediffmail.com
ವೆಬ್‌ಸೈಟ್ : https://ksdb.karnataka.gov.in

ಸಂ: KSDB/EE/No. 1 Div/STT/IFT-7/2023-24/922 ದಿನಾಂಕ: 22.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು, ನಂ. 1ನೇ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರ ಕಛೇರಿಯಿಂದ 2023–24ನೇ ಸಾಲಿನ **ಸೆಸ್ ಕ್ರಿಯಾ ಯೋಜನೆಯಡಿಯಲ್ಲಿ** Sinking of Borewell and Providing pumping Machinery at 240(G+3) Housing Complex constructed under JnNurm-BSUP at Channasandra in Mahadevapura Constituency, Bengaluru. ಸದರಿ ಕಾಮಗಾರಿಗೆ KW-1 ರಂತೆ ಕಾಮಗಾರಿಯ ಅಂದಾಜು ಮೊತ್ತ : **ರೂ. 10.00 ಲಕ್ಷಗಳು.** ಟೆಂಡರ್‌ಗಿಟ್ಟ ಮೊತ್ತ: **ರೂ. 8.30 ಲಕ್ಷಗಳು** (ಜಿಎಸ್‌ಟಿ ಹೊರತುಪಡಿಸಿ). ಇಎಂಡಿ ಮೊತ್ತ: **ರೂ. 21,000/–ಗಳು ಹಾಗೂ ಮಂಡಳಿಯ ಬಾಡಿಗೆ ಲೆಕ್ಕಶೀರ್ಷಿಕೆ ಅಡಿಯಲ್ಲಿ** Additional Renovation work at various floors of Abhaya Complex, KSDB, Bengaluru city. ಸದರಿ ಕಾಮಗಾರಿಗೆ KW-1 ರಂತೆ ಕಾಮಗಾರಿಯ ಅಂದಾಜು ಮೊತ್ತ : **ರೂ. 19.96 ಲಕ್ಷಗಳು.** ಟೆಂಡರ್‌ಗಿಟ್ಟ ಮೊತ್ತ: **ರೂ. 16.90 ಲಕ್ಷಗಳು** (ಜಿಎಸ್‌ಟಿ ಹೊರತುಪಡಿಸಿ). ಇಎಂಡಿ ಮೊತ್ತ: **ರೂ. 42,300/–ಗಳು ಹಾಗೂ ಅಭಯ ಸಂಕೀರ್ಣ ಭವನದ ಬಾಡಿಗೆ ಲೆಕ್ಕಶೀರ್ಷಿಕೆಯ ಕ್ರಿಯಾ ಯೋಜನೆಯಡಿಯಲ್ಲಿ** Renovation work at Secretary chamber, Commissioner PA chamber and Chief Engineer Section in Abhaya Complex, KSDB, Bengaluru. ಸದರಿ ಕಾಮಗಾರಿಗೆ KW-1 ರಂತೆ ಕಾಮಗಾರಿಯ ಅಂದಾಜು ಮೊತ್ತ : **ರೂ. 22.00 ಲಕ್ಷಗಳು.** ಟೆಂಡರ್‌ಗಿಟ್ಟ ಮೊತ್ತ: **ರೂ. 18.63 ಲಕ್ಷಗಳು** (ಜಿಎಸ್‌ಟಿ ಹೊರತುಪಡಿಸಿ). ಇಎಂಡಿ ಮೊತ್ತ: **ರೂ. 46,600/–ಗಳು.** ಕಾಮಗಾರಿಗಳಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದ್ದು, ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **05.02.2024ರ ಸಂಜೆ 4.00 ಗಂಟೆಗಳು.** ಆಸಕ್ತಿಯುಳ್ಳ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗೆ/ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ದಿನಾಂಕ: **05.02.2024ರ ಸಂಜೆ 4.00 ಗಂಟೆಯೊಳಗೆ https://www.kppp.karnataka.gov.in** ರಲ್ಲಿ ವೀಕ್ಷಿಸಬಹುದಾಗಿರುತ್ತದೆ. ಟೆಂಡರ್ ವ್ಯತ್ಯಾಸದ ಮೊತ್ತ (ಡಿಡಿ) ಸಲ್ಲಿಸಲು ಕೊನೆಯ ದಿನಾಂಕ: **06.02.2024ರ ಸಂಜೆ 4.00 ಗಂಟೆ** ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07.02.2024ರ ಸಂಜೆ 4.00 ಗಂಟೆ** ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: **12.02.2024ರ ಸಂಜೆ 4.00 ಗಂಟೆಗೆ.** ಸದರಿ ಕಾಮಗಾರಿಗೆ/ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ದಿನಾಂಕ: **05.02.2024ರ ಸಂಜೆ 4.00 ಗಂಟೆಯೊಳಗೆ https://www.kppp.karnataka.gov.in** ರಲ್ಲಿ ವೀಕ್ಷಿಸಬಹುದಾಗಿರುತ್ತದೆ ಹಾಗೂ ಕಛೇರಿ ಸಮಯದಲ್ಲಿ **ನಂ. 1ನೇ ವಿಭಾಗ, ಕಕೊಅಮ, ಬೆಂಗಳೂರು** ಕಛೇರಿಗೆ ಭೇಟಿ ನೀಡಿ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ನಂ. 1ನೇ ವಿಭಾಗ, ಕಕೊಅಮ, ಬೆಂಗಳೂರು

DIPR/CP/YC/3228/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಕಛೇರಿ, ಯಲಹಂಕ ವಲಯ, ಬಳ್ಳಾರಿ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು–560 092.

ಸಂ: ಕಾಪಾಅ/ವಿ/ಯವ/ಟೆಂಡ್/ಜಿಎನ್/01/2023–24 ದಿನಾಂಕ: 25.01.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಯಲಹಂಕ ವಲಯ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

01.04.2024 ರಿಂದ 31.07.2024 ರ ಅವಧಿಗೆ ಯಲಹಂಕ ವಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ವಾರ್ಡ್‌ಗಳಲ್ಲಿ ಬೀದಿ ದೀಪದ ಅಳವಡಿಕೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗಳು.

ಕ್ರ. ಸಂ	ಕಾಮಗಾರಿಯ ಸ್ಥಳದ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಕೆಂಪೇಗೌಡ ವಾರ್ಡ್ ನಂ.01, ಪ್ಯಾಕೇಜ್ ವೈ–1 (ವರ್ಗ II ಮತ್ತು ಮೇಲಿನ ಗುತ್ತಿಗೆದಾರರು)	18.00	45,000/-
2	ಚೌಡೇಶ್ವರಿ ವಾರ್ಡ್ ನಂ.02, ಪ್ಯಾಕೇಜ್ ವೈ–2 (ವರ್ಗ II ಮತ್ತು ಮೇಲಿನ ಗುತ್ತಿಗೆದಾರರು)	21.67	43,400/-
3	ಅಟ್ಟೂರು ವಾರ್ಡ್ ನಂ.03, ಪ್ಯಾಕೇಜ್ ವೈ–3 (ವರ್ಗ I ಮತ್ತು ಮೇಲಿನ ಗುತ್ತಿಗೆದಾರರು)	30.63	61,300/-
4	ಯಲಹಂಕ ಸ್ಯಾಟಲೈಟ್ ಟೌನ್ ವಾರ್ಡ್ ನಂ.04, ಪ್ಯಾಕೇಜ್ ವೈ–4 (ವರ್ಗ I ಮತ್ತು ಮೇಲಿನ ಗುತ್ತಿಗೆದಾರರು)	35.75	71,500/-
5	ಕೋಗಿಲು ವಾರ್ಡ್ ನಂ.05, ಪ್ಯಾಕೇಜ್ ವೈ–5ಎ (ವರ್ಗ I ಮತ್ತು ಮೇಲಿನ ಗುತ್ತಿಗೆದಾರರು)	26.00	52,000/-
6	ಕೋಗಿಲು ವಾರ್ಡ್ ನಂ.05, ಪ್ಯಾಕೇಜ್ ವೈ–5ಬಿ (ವರ್ಗ II ಮತ್ತು ಮೇಲಿನ ಗುತ್ತಿಗೆದಾರರು)	23.53	47,100/-
7	ಜಕ್ಕೂರು ವಾರ್ಡ್ ನಂ.06, ಪ್ಯಾಕೇಜ್ ವೈ–6 (ವರ್ಗ I ಮತ್ತು ಮೇಲಿನ ಗುತ್ತಿಗೆದಾರರು)	30.00	60,000/-
8	ಥಣಿಸಂದ್ರ ವಾರ್ಡ್ ನಂ.07, ಪ್ಯಾಕೇಜ್ ವೈ–7 (ವರ್ಗ I ಮತ್ತು ಮೇಲಿನ ಗುತ್ತಿಗೆದಾರರು)	25.07	50,200/-
9	ಅಮೃತಹಳ್ಳಿ ವಾರ್ಡ್ ನಂ.08, ಪ್ಯಾಕೇಜ್ ವೈ–8 (ವರ್ಗ II ಮತ್ತು ಮೇಲಿನ ಗುತ್ತಿಗೆದಾರರು)	17.00	42,500/-
10	ಹೆಬ್ಬಾಳ–ಕೆಂಪಾಪುರ ವಾರ್ಡ್ ನಂ.09, ಪ್ಯಾಕೇಜ್ ವೈ–9 (ವರ್ಗ II ಮತ್ತು ಮೇಲಿನ ಗುತ್ತಿಗೆದಾರ)	18.00	45,000/
11	ಬ್ಯಾಟರಾಯನಪುರ ವಾರ್ಡ್ ನಂ.10, ಪ್ಯಾಕೇಜ್ ವೈ–10 (ವರ್ಗ II ಮತ್ತು ಮೇಲಿನ ಗುತ್ತಿಗೆದಾರರು)	19.30	48,250/-
12	ಕೊಡಿಗೇಹಳ್ಳಿ ವಾರ್ಡ್ ನಂ.11, ಪ್ಯಾಕೇಜ್ ವೈ–11 (ವರ್ಗ II ಮತ್ತು ಮೇಲಿನ ಗುತ್ತಿಗೆದಾರ)	14.25	35,650/-
13	ದೊಡ್ಡ ಬೊಮ್ಮಸಂದ್ರ ವಾರ್ಡ್ ನಂ.12,ಪ್ಯಾಕೇಜ್ ವೈ–12 (ವರ್ಗ II ಮತ್ತು ಮೇಲಿನ ಗುತ್ತಿಗೆದಾರರು)	10.50	26,300/-
14	ವಿದ್ಯಾರಣ್ಯಪುರ ವಾರ್ಡ್ ನಂ.13, ಪ್ಯಾಕೇಜ್ ವೈ–13, (ವರ್ಗ II ಮತ್ತು ಮೇಲಿನ ಗುತ್ತಿಗೆದಾರರು)	17.00	42,500/-
15	ಕುವೆಂಪುನಗರ ವಾರ್ಡ್ ನಂ.14, ಪ್ಯಾಕೇಜ್ ವೈ–14, (ವರ್ಗ II ಮತ್ತು ಮೇಲಿನ ಗುತ್ತಿಗೆದಾರರು)	18.60	46,500/-
	ವಾರ್ಡ್ ಸಂಖ್ಯೆ 02, 03 & 04 ರಲ್ಲಿ ಪಾರ್ಕ್ ಲೈಟ್ ಫಿಟ್ಟಿಂಗ್‌ಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ಕಾಮಗಾರಿ.		
16	ಪ್ಯಾಕೇಜ್ ವೈ–15, (ವರ್ಗ III ಮತ್ತು ಮೇಲಿನ ಗುತ್ತಿಗೆದಾರರು)	5.26	13,200/-

1)ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳು ದೊರೆಯುವ ದಿನಾಂಕ: **31.01.2024ರಿಂದ.** 2) ಬಿಡ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **12.02.2024ರ ಸಂಜೆ 4.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **14.02.2024ರ ಸಂಜೆ 4.00 ಗಂಟೆಗೆ.** 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **17.02.2024ರ ಸಂಜೆ 4.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಪಿಪಿ ಪೋರ್ಟಲ್ ಸಹಾಯವಾಣಿ: 080–22230960 / 22232115 ನ್ನು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಯಲಹಂಕ ವಲಯ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

BEST-INVESTMENT FOR Returns`Invest 5`to`50Lacs For`Petrol Bank`and Restaurant. 1.33%`to`1.5% Per_Month With_TDS 100%_Genuine Along_With PDC Call:9845558882

Business Offers

Finance

NRI'S INVESTMENTS and Finance through Banking Available On-low interest against Properties,Land&Building,Sites,Flat also take over Loans NPA cases from Any Banks:7204995189

JOB OPPORTUNITIES

Teachers/ Professors

SHREEMAHAVEER JAIN SHIKSHAN SANGH. No.84, KR Road, Shankarpuram, Bangalore- 560004.Web: www.cbbhandarijaincollege.ac.in. C B Bhandari Jain College Invites applications for the post of Director, Professor, Asst. professor in Departmentof Management (Marketing, HR, Finance etc.,).Qualifications & Experiencerequired are as per AICTE Norms. Candidates may attend walk-in interview withall original documents between 2 to 4 pm, (Mon-Fri) on all working days atCBBJC Campus, No.84, KR Road, Shankarpuram , Bangalore -560004. Resumes mayalso be sent to cbbjchr@gmail.com

PERSONAL

Change of Name

CHANGE OF NAME
I, KUMUDINI BHEEMA RAJ Residing at # 415, 4th 'C' Main Road, Behind Domino's Pizza OMBR Layout, Banaswadi, Kalyan Nagar, Bangalore-5600043, have changed my name to P KUMUDINI vide affidavit dated 22.1.2024 before notary Y.R Chandrasekar, Bangalore. Henceforth I shall be called P KUMUDINI only.

DH Classifieds More value, more impact | ಪ್ರಜಾವಾಣಿ | MATRIMONY
The Right Life Partner Is Just An Ad Away!
Book your ad with us now!
www.dhclassifieds.com
BOOK NOW
For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ADMISSION CORNER
SJIM St. Joseph's Institute of Management
28/1, Primrose Road (off M G Road), Bengaluru - 560 025
First - Ever Business School in Karnataka (Estd. 1968)
PGDM - MBA Admissions Open
AICTE approved, NBA accredited, NIRF ranked
Specialisations Offered: Finance, Marketing, HR, Business Analytics, Supply Chain Management
Exams Accepted: CAT XAT CMAT MAT
56 Years of Legacy, 10,000 + Alumni, 150 + Recruiters, Highest Package - 22 Lakhs
info@sjim.edu.in | +91 99722 52765 | www.sjim.edu.in
Top Recruiters: Morgan Stanley, TCS, Deloitte, EY, Accenture & many more

CHANGE OF NAME
I, Lalithamba.T.V, W/o Lokesha. C, R/at. No 21, 2nd Cross, Triveni Nagar, K.R. Puram, Bengaluru-560036, have changed my daughter's name from Bindu to Monvitha. L., vide affidavit dated 22/01/2024, before Notary Rajanna. S M., Bengaluru.

I,NITIKA CHORDIA W/o SIDDARTH GAUTHAMCHAND CHORDIA Residing at GF-002,Sai Siri Coral, Ravi Hill View Layout, Ittamadu,BSK 3rd-Stage, Bangalore-85 have_changed my name-to NITIKA_MANGILAL vide affidavit dtd:24.01.2024 Sworn_before Notary G.R.Rajanna, Bangalore.

CHANGE OF NAME
I, RAJA ISMAIL Residing R/at. #45 Krishna Northwood, Sampigehalli, Hegdenagar, Bangalore-560064 have changed my name to FARAZ ISMAIL vide affidavit dated 24.1.2024 before Notary A .Idinabba, Bangalore. Henceforth I shall be known as FARAZ ISMAIL only.

I,MANGALA W/O Shivegowda.K R/a No.A112,North Winds, Jakkur Main Road,Yelahanka, Bangalore-560 064 have changed my name from MANGALA SHIVE GOWDA to MANGALA.Henceforth i will be known as MANGALA only.Vide affidavit dated 23-01-2024 Sworn before Notary D.Sarala Kumari,Bangalore.

REAL ESTATE BUYING

Sites

Vishweshwariah Layout

URGENTLY REQUIRED BDA 30x40 Site or 60x40 Site in Vishweshwaraiah Layout (any block). Brokers Excuse. Contact: 9448018447.

PUBLIC NOTICE

PUBLIC NOTICE
Notice is hereby given that Mr. Zuheb Ulla Khan, aged 40 years, residing at 120, 11th Cross, Balaji Layout, Bangalore 560077 and is the rightful owner of the above mentioned property has recently lost a registered original sale deed bearing no. KCH - 3653/2015-16. It got lost while taking a photo copy of all the property documents or misplaced elsewhere in the recent past. He made efforts to trace the document, and is lost and beyond recovery. The same has been reported to Bangalore Police and it's lost report no. is 0895373/2024. Any person having found the above mentioned document will be rewarded and the same are to report at the below mentioned address. Also, should anyone have a claim on the above mentioned property should reach out to the below mentioned address within 7 days of this notice publication.
Sreeram Nayak, Advocate, #51, 9th Cross, 6th Main, Sadashivanagar, Bangalore 560080.Ph : 94800 12567

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರ ಪ್ರತಿಭಟನೆ

‘₹31 ಸಾವಿರ ಕನಿಷ್ಠ ವೇತನ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ(ಐಸಿಡಿಎಸ್) ಅನುದಾನ ಹೆಚ್ಚಿಸುವಂತೆ ಹಾಗೂ ಅಂಗನವಾಡಿ ನೌಕರರಿಗೆ ₹31 ಸಾವಿರ ಕನಿಷ್ಠ ವೇತನ ನೀಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

‘ಅಂಗನವಾಡಿ, ಬಿಸಿಯೂಟ ನೌಕರರು ಹಾಗೂ ಆಶಾ ಕಾರ್ಯಕರ್ತೆಯರಿಗೆ ನಿವೃತ್ತಿ ಸೌಲಭ್ಯಗಳು ಹಾಗೂ ₹10 ಸಾವಿರ ಪಿಂಚಣಿ ನೀಡಬೇಕು. ಸ್ಕೀಮ್ ಯೋಜನೆಗಳಲ್ಲಿ ಕಾರ್ಯನಿರ್ವಹಿಸುವ ಗುತ್ತಿಗೆ, ಒಳಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರನ್ನು ಕಾಯಂಗೊಳಿಸಿ, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಮಿನಿ ಅಂಗನವಾಡಿ ಕೇಂದ್ರಗಳನ್ನು ಪೂರ್ಣ ಅಂಗನವಾಡಿ ಕೇಂದ್ರಗಳಾಗಿ ಪರಿವರ್ತಿಸಬೇಕು. ಮೂರರಿಂದ ಆರು ವರ್ಷದೊಳಗಿನ ಮಕ್ಕಳಿಗೆ ಉಚಿತ, ಕಡ್ಡಾಯ ಮತ್ತು ಸಾರ್ವತ್ರಿಕವಾಗಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಅಂಗನವಾಡಿ ಕೇಂದ್ರಗಳಲ್ಲಿ ನೀಡಬೇಕು’ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

‘2022 ಏಪ್ರಿಲ್‌ನಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಂತೆ ಎಲ್ಲ ಅಂಗನವಾಡಿ ನೌಕರರನ್ನು ಉದ್ಯೋಗಸ್ಥರೆಂದು ಪರಿಗಣಿಸಿ ಗ್ರಾಚ್ಯುಟಿ ಕಾಯ್ದೆಯನ್ನು ಜಾರಿಗೊಳಿಸಬೇಕು. ದೇಶದಲ್ಲಿ ಎಲ್ಲ ಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ರಚಿಸಿರುವ ಸಾಮಾಜಿಕ ಭದ್ರತಾ ಮಂಡಳಿಯನ್ನು ಬಲಪಡಿಸಬೇಕು ಎಂದು ಒತ್ತಾಯಿಸಿದರು.

‘ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆರಂಭಿಸಿರುವ ಕೂಸಿನ ಮನೆಯನ್ನು ರದ್ದುಗೊಳಿಸಬೇಕು. ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು ಎಂದು ಹೇಳಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಹೃದ್ರೋಗ ತಜ್ಞನಾಗಿ ವೃತ್ತಿ ಮುಂದುವರಿಕೆ’

ಪ್ರಜಾವಾಣಿ ವಾರ್ತೆ

ಡಾ.ಸಿ.ಎನ್. ಮಂಜುನಾಥ್

ಬೆಂಗಳೂರು: ‘ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಮುಂದುವರಿಸುವುದು ನನ್ನ ಮೊದಲ ಆಯ್ಕೆಯಾಗಿದ್ದು, ರಾಜಕೀಯದಲ್ಲಿ ಯಾವುದೇ ಆಸಕ್ತಿ ಹೊಂದಿಲ್ಲ. ಆದ್ದರಿಂದ ಯಾವುದೇ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಲ್ಲ’ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ ಎಂಬ ವದಂತಿಗೆ ಸಂಬಂಧಿಸಿದಂತೆ ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟನೆ ನೀಡಿದ ಅವರು, ‘ನಿರ್ದೇಶಕನಾಗಿದ್ದ 16 ವರ್ಷಗಳ ಅವಧಿಯಲ್ಲಿ ಸಂಸ್ಥೆ ಶೇ 500ರಷ್ಟು ಪ್ರಗತಿ ಹೊಂದಿದೆ. ನಾನು ಅಧಿಕಾರ ವಹಿಸಿಕೊಂಡಾಗ ಸಂಸ್ಥೆ 300 ಹಾಸಿಗೆಗಳನ್ನು ಒಳಗೊಂಡಿತ್ತು. ಈಗ ಆ ಸಂಖ್ಯೆ ಎರಡು ಸಾವಿರಕ್ಕೆ ಏರಿಕೆಯಾಗಿದೆ. ಇಡೀ ದಕ್ಷಿಣ ಏಷ್ಯಾದಲ್ಲಿ ಅತೀ ದೊಡ್ಡ ಹೃದ್ರೋಗ ಸಂಸ್ಥೆಯಾಗಿ ಹೊರಹೊಮ್ಮಿದೆ. ನನ್ನ ಅಧಿಕಾರವಧಿ ಇದೇ 31ರಂದು ಮುಕ್ತಾಯವಾಗುತ್ತಿದ್ದು, ಹೃದ್ರೋಗ ತಜ್ಞನಾಗಿ ವೃತ್ತಿಯನ್ನು ಮುಂದುವರಿಸುತ್ತೇನೆ’ ಎಂದು ಹೇಳಿದರು.

‘ಈ ಸಂಸ್ಥೆಯನ್ನು ಪಂಚತಾರಾ ಆಸ್ಪತ್ರೆಯನ್ನಾಗಿ ಬೆಳೆಸಿ, ನಿರ್ವಹಣೆ ಮಾಡಬೇಕು ಎಂಬ ಕನಸನ್ನು ಹೊಂದಿದ್ದೆ. ಅದು ಸಾಕಾರಗೊಂಡಿದೆ. ಬಡವರು, ನಿರ್ಗತಿಕರಿಗೂ ಶ್ರೀಮಂತರಿಗೆ ದೊರೆಯುವ ಚಿಕಿತ್ಸೆ ಒದಗಿಸುವಲ್ಲಿ ಸಂಪೂರ್ಣ ಯಶಸ್ವಿಯಾಗಿದ್ದೇನೆ. ನನ್ನನ್ನು ಈ ಸ್ಥಾನದಲ್ಲಿ ಮುಂದುವರಿಸಲು ಯಾರ ಮೇಲೆಯೂ ಒತ್ತಡ ಹಾಕಿಲ್ಲ’ ಎಂದು ತಿಳಿಸಿದರು.

‘ನಿರ್ದೇಶಕನಾಗಿದ್ದ ಅವಧಿ ಯಲ್ಲಿ ಸಂಸ್ಥೆಯ ಮೂಲಕ 75 ಲಕ್ಷ ಹೊರರೋಗಿಗಳಿಗೆ ಚಿಕಿತ್ಸೆ ಒದಗಿಸಲಾಗಿದೆ. 8 ಲಕ್ಷ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿದೆ. ಕಳೆದ ವರ್ಷ ಮೇ 25ರಂದು ಇಲ್ಲಿಗೆ ಭೇಟಿ ನೀಡಿದ ಕೇಂದ್ರೀಯ ಸಂಸದೀಯ ಸಂಸ್ಥೆಯು ಇಲ್ಲಿಯ ಗುಣಮಟ್ಟದ ಚಿಕಿತ್ಸೆ, ಸ್ವಚ್ಛತೆ, ಪಾರದರ್ಶಕ ಆಡಳಿತ ವ್ಯವಸ್ಥೆಗೆ ಮೆಚ್ಚುಗೆ ವ್ಯಕ್ತಪಡಿಸಿ, ದೇಶದ ಎಲ್ಲ ಸರ್ಕಾರಿ ಆಸ್ಪತ್ರೆಗಳು ಈ ಮಾದರಿಯನ್ನು ಅಳವಡಿಸಿಕೊಳ್ಳಬೇಕೆಂದು ಸೂಚಿಸಿತ್ತು. ಇದು ಹೆಮ್ಮೆಯ ಸಂಗತಿ’ ಎಂದು ಹೇಳಿದರು.

‘ಕಲಬುರಗಿಯ ಜಯದೇವ ಶಾಖೆ ನಿರ್ಮಾಣ ಕಾರ್ಯ ಶೇ 85ರಷ್ಟಾಗಿದೆ. ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ನನ್ನ ಅವಧಿಯಲ್ಲಿಯೇ ಈ ಶಾಖೆ ಉದ್ಘಾಟನೆ ಆಗಬೇಕು ಎಂಬ ಕನಸನ್ನು ಹೊಂದಿದ್ದೆ’ ಎಂದು ತಿಳಿಸಿದರು.

ಶಾಶ್ವತ ಅಲೆಮಾರಿ ಆಯೋಗ ರಚನೆಗೆ ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಅಲೆಮಾರಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಕುರಿತು ಸಮಗ್ರ ಅಧ್ಯಯನ ಮಾಡಲು ‘ಶಾಶ್ವತ ಅಲೆಮಾರಿ ಆಯೋಗ’ವನ್ನು ರಚಿಸಬೇಕು ಎಂದು ಎಸ್.ಸಿ., ಎಸ್.ಟಿ ಅಲೆಮಾರಿ, ವಿಮುಕ್ತ ಬುಡಕಟ್ಟು ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಆದರ್ಶ್ ಯಲ್ಲಪ್ಪ, ‘ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದಿರುವ 27 ಅಲೆಮಾರಿ, ಅರೆಅಲೆಮಾರಿ, ವಿಮುಕ್ತ ಬುಟಕಟ್ಟು ಸಮುದಾಯಗಳನ್ನು ಗುರುತಿಸಿ ಸಿ.ಎಂ ಸಿದ್ದರಾಮಯ್ಯ ಅವರು 2016ರಲ್ಲಿ ₹120 ಕೋಟಿ ಅನುದಾನದಲ್ಲಿ ಎಸ್.ಸಿ., ಎಸ್.ಟಿ. ಅಲೆಮಾರಿಗಳ ಅಭಿವೃದ್ಧಿಗೆ ಕೋಶ ರಚಿಸಿದ್ದರು. ಆದರೆ, ನಮ್ಮ ಸಮಸ್ಯೆಗಳಿಗೆ ಇದುವರೆಗೂ ಪರಿಹಾರ ಸಿಕ್ಕಿಲ್ಲ. ಕೂಡಲೇ ಈ ಕೋಶಕ್ಕೆ ಅನುದಾನ ಬಿಡುಗಡೆಗೊಳಿಸಬೇಕು’ ಎಂದು ಒತ್ತಾಯಿಸಿದರು.

ಬಜೆಟ್ ದಿನಾಂಕ ಮುಂದೂಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯ ದಿನವೇ (ಫೆ.16) ಬಜೆಟ್ ಮಂಡಿಸುವುದು ಸರಿಯಲ್ಲ. ಆದ್ದರಿಂದ, ಬಜೆಟ್ ಮಂಡನೆ ದಿನಾಂಕವನ್ನೇ ಮುಂದೂಡುವಂತೆ ಸರ್ಕಾರಕ್ಕೆ ಸೂಚಿಸಬೇಕು ಎಂದು ಬಿಜೆಪಿ ಮುಖಂಡರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮನವಿ ಮಾಡಿದರು.

ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ನೇತೃತ್ವದ ನಿಯೋಗವು ಬುಧವಾರ ಈ ಸಂಬಂಧ ರಾಜ್ಯಪಾಲರಿಗೆ ಮನವಿಯೊಂದನ್ನು ಅರ್ಪಿಸಿತು.

ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ಮತದಾನದ ದಿನದಂದೇ ರಾಜ್ಯ ಸರ್ಕಾರ ಬಜೆಟ್ ಮಂಡಿಸಲಿದೆ. ಮಾದರಿ ನೀತಿ ಸಂಹಿತೆ ಮತ್ತು ಜನಪ್ರತಿನಿಧಿ ಕಾಯ್ದೆ ಪ್ರಕಾರ ಇದು ನ್ಯಾಯಬದ್ಧವಲ್ಲ. ಬಜೆಟ್ ದಿನವೇ ಚುನಾವಣೆ ಮಾಡುವ ಬದಲು ಬಜೆಟ್ ಮಂಡನೆ ದಿನಾಂಕವನ್ನು ಮುಂದಕ್ಕೆ ಹಾಕಲು ಕೋರಲಾಗಿದೆ ಎಂದು ತಿಳಿಸಿದರು.

ಕಾರ್ಮಿಕರ ವೇತನ ಹೆಚ್ಚಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಶೇ 35ರಷ್ಟು ಮೂಲ ವೇತನವನ್ನು 2024ರ ಜ.1ರಿಂದ ಹೆಚ್ಚಿಸಬೇಕೆಂದು ಅಖಂಡ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಕಾರ್ಮಿಕ ಮಹಾಮಂಡಳಿ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಮಂಡಳಿಯ ಪ್ರಧಾನ ಕಾರ್ಯದರ್ಶಿ ಎ.ವಿ. ಬೋರಶೆಟ್ಟಿ, ‘ರಾಜ್ಯ ಸರ್ಕಾರಿ ನೌಕರರಿಗೆ ನೀಡುತ್ತಿರುವ 6ನೇ ವೇತನ ಆಯೋಗದ ಅನ್ವಯದಂತೆ ನಾಲ್ಕು ಸಾರಿಗೆ ನಿಗಮಗಳ ಕಾರ್ಮಿಕರಿಗೂ 2020ರ ಜ. 1ರಿಂದಲೇ ವೇತನ ಪಾವತಿಸಬೇಕು. ನಿಗಮಗಳ ಕಾರ್ಮಿಕರನ್ನು ಸರ್ಕಾರಿ ನೌಕರರೆಂದು ಘೋಷಿಸಬೇಕು’ ಎಂದು ಒತ್ತಾಯಿಸಿದರು.

ನಾಲ್ಕು ನಿಗಮಗಳಲ್ಲಿರುವ ಕಾರ್ಮಿಕ ಸಂಘಟನೆಗಳಿಗೆ 30 ವರ್ಷಗಳಿಂದ ಚುನಾವಣೆ ನಡೆದಿಲ್ಲ. ಆದ್ದರಿಂದ ಕೂಡಲೇ ಕಾರ್ಮಿಕ ಸಂಘಗಳಿಗೆ ಚುನಾವಣೆ ನಡೆಸಬೇಕು. ಟ್ರೈನಿ ಪದ್ಧತಿಯನ್ನು ರದ್ದುಗೊಳಿಸಿ, ಸದ್ಯ ಕೆಲಸ ಮಾಡುತ್ತಿರುವ ಟ್ರೈನಿಗಳಿಗೆ ತಿಂಗಳಿಗೆ ಕನಿಷ್ಠ ₹30 ಸಾವಿರ ವೇತನ ನೀಡಬೇಕು. ಕಾರ್ಮಿಕರಿಗೆ ನೀಡುತ್ತಿರುವ ದಿನಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಹೆಚ್ಚಿಸಬೇಕು’ ಎಂದು ಅವರು ಆಗ್ರಹಿಸಿದರು.

‘ಸರ್ಕಾರಿ ನೌಕರರಿಗೆ ನೀಡುವ ವೈದ್ಯಕೀಯ ಸೌಲಭ್ಯಗಳನ್ನು ಸಾರಿಗೆ ಕಾರ್ಮಿಕರಿಗೂ ಜಾರಿಗೊಳಿಸಬೇಕು. ಇಲ್ಲದಿದ್ದರೆ ಪ್ರತಿಯೊಬ್ಬ ಕಾರ್ಮಿಕನಿಗೂ ಮಾಸಿಕ ₹3 ಸಾವಿರ ವೈದ್ಯಕೀಯ ಭತ್ಯೆ ನೀಡಬೇಕು’ ಎಂದು ಒತ್ತಾಯಿಸಿದರು.

‘ಮಂಡಳಿಯ ಈ ಬೇಡಿಕೆಗಳನ್ನು ಈಡೇರಿಸದಿದ್ದರೆ ಫೆ. 23ರಿಂದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು‘ ಎಂದು ತಿಳಿಸಿದರು.

‘ತಿಂಗಳಾಂತ್ಯಕ್ಕೆ ಜಾತಿ ಜನಗಣತಿ ವರದಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ತಿಂಗಳ ಅಂತ್ಯಕ್ಕೆ (ಜ. 31) ನಮ್ಮ ಅವಧಿ ಮುಗಿಯಲಿದೆ. ರಾಜ್ಯದಲ್ಲಿ ನಡೆದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿಯನ್ನು (ಜಾತಿ ಜನಗಣತಿ) ಅವಧಿ ಮುಗಿಯುವ ಒಳಗೆ ಸರ್ಕಾರಕ್ಕೆ ಸಲ್ಲಿಸಲಾಗುವುದು’ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ ಹೆಗ್ಡೆ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ವರದಿಯನ್ನು ಸಲ್ಲಿಸಲು ಮುಖ್ಯಮಂತ್ರಿ ಬಳಿ ಸಮಯ ಕೇಳಿದ್ದೇವೆ. ಅವರು ಈಗ ಬಜೆಟ್ ಸಿದ್ಧತೆಯಲ್ಲಿ ನಿರತರಾಗಿದ್ದಾರೆ’ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಹೆಗ್ಡೆ, ‘ಈ ವರದಿ ಜಯಪ್ರಕಾಶ್ ಹೆಗ್ಡೆ ಅಥವಾ ಕಾಂತರಾಜ (ಆಯೋಗದ ಹಿಂದಿನ ಅಧ್ಯಕ್ಷ) ವರದಿ ಎಂದೇನೂ ಇಲ್ಲ. ದತ್ತಾಂಶಗಳನ್ನು ವಿಶ್ಲೇಷಿಸಿ ವರದಿ ಸಿದ್ಧಪಡಿಸಬೇಕಿತ್ತು. ಅದಕ್ಕಾಗಿ ಸಮಯಾವಕಾಶ ಪಡೆದಿದ್ದೆವು. ವರದಿ ಸಿದ್ಧಪಡಿಸುವ ಕೆಲಸ ಮುಗಿಯುತ್ತಾ ಬಂದಿದೆ. ಇಲ್ಲಿ ವ್ಯಕ್ತಿ ಮುಖ್ಯ ಅಲ್ಲ. ಇದು ಆಯೋಗದ ವರದಿ’ ಎಂದರು.

‘ವರದಿ ಸಲ್ಲಿಕೆಯಾಗುವ ಮೊದಲೇ ಚರ್ಚೆಗಳು ನಡೆಯುತ್ತಿವೆ. ವರದಿ ಬಹಿರಂಗವಾದ ಬಳಿಕ ಪರ, ವಿರೋಧದ ಚರ್ಚೆ ನಡೆದರೆ ಒಳ್ಳೆಯದು. ವರದಿಯನ್ನು ಸರ್ಕಾರ ಸಚಿವ ಸಂಪುಟ ಸಭೆಯ ಮುಂದೆ ಇಡಲಿದೆ. ವರದಿ ಕೊಡುವುದಷ್ಟೆ ನಮ್ಮ ಕೆಲಸ. ಸಮುದಾಯಗಳ ಬೇಡಿಕೆ ಈಡೇರಿಸುವುದು ಸರ್ಕಾರದ ಕೆಲಸ’ ಎಂದರು.

‘ನಮ್ಮ ಅವಧಿಯನ್ನು ಮತ್ತೊಮ್ಮೆ ವಿಸ್ತರಿಸುವ ಬಗ್ಗೆ ಬಹಿರಂಗವಾಗಿ ಏನೂ ಹೇಳುವುದಿಲ್ಲ. ಅದು ನಮ್ಮ ಮತ್ತು ಸರ್ಕಾರದ ಆಂತರಿಕ ವಿಚಾರ’ ಎಂದರು.

SBI ಭಾರತೀಯ ಸ್ಟೇಟ್ ಬ್ಯಾಂಕ್, ಆವರಣ ಮತ್ತು ಸಂಪತ್ತು ವಿಭಾಗ,
ಸ್ಥಳೀಯ ಪ್ರಧಾನ ಕಛೇರಿ #65,ಸಂತ ಮಾರ್ಕರ ರಸ್ತೆ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080 25943867

ಭಾರತೀಯ ಸ್ಟೇಟ್ ಬ್ಯಾಂಕ್, ಕರ್ನಾಟಕದ ಬೆಂಗಳೂರು ವೃತ್ತದ ಸುಮಾರು 800 ಎಟಿಎಮ್ ನಿವೇಶನಗಳಲ್ಲಿ, ನೋಡಿಕೊಳ್ಳುವ/ಆಂತರಿಕ ಲೆಕ್ಕಪತ್ರ ನಿರ್ವಹಣೆ ಮತ್ತು ನಿರ್ವಹಣಾ ಸೇವೆಗಾಗಿ ಎರಡು ಲಕೋಟೆ ವ್ಯವಸ್ಥೆಯಲ್ಲಿ (ತಾಂತ್ರಿಕ ಮತ್ತು ಬೆಲೆ ಬಿಡ್) ಅರ್ಜಿಗಳನ್ನು ಆಮಂತ್ರಿಸುತ್ತದೆ.

ಅರ್ಜಿನಮೂನೆಯನ್ನು, ಸಲ್ಲಿಸಲು ಅರ್ಹತಾ ಮಾನದಂಡ, ನೀಡುವ ಸೇವೆಗಳ ವ್ಯಾಪ್ತಿ, ಕರಾರಿನ ಷರತ್ತುಗಳು ಹಾಗೂ ನಿಬಂಧನೆಗಳು ಮತ್ತು ವಿವರವಾದ ಮಾದರಿ ಇತ್ಯಾದಿ ಮತ್ತು ಈ ಉದ್ದೇಶಕ್ಕಾಗಿ ಬೆಲೆ ಬಿಡ್–ಇವುಗಳನ್ನು ನಮ್ಮ ವೆಬ್ ಸೈಟ್ “bank.sbi under SBI in the news=>procurement news” ಇಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಈ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ 14.02.2024 ಮತ್ತು ಸಮಯ ಮಧ್ಯಾಹ್ನ 3.00 ಗಂಟೆ. ಸಲ್ಲಿಕೆಯ ವಿಳಾಸ: ಸಹಾಯಕ ಪ್ರಧಾನ ವ್ಯವಸ್ಥಾಪಕರು (P&E), ಆವರಣ ಮತ್ತು ಸಂಪತ್ತು ವಿಭಾಗ, ಭಾರತೀಯ ಸ್ಟೇಟ್ ಬ್ಯಾಂಕ್, 2ನೇ ಮಹಡಿ, ಹೊಸ ಅನೆಕ್ಸ್ ಕಟ್ಟಡ, ಸ್ಥಳೀಯ ಪ್ರಧಾನ ಕಚೇರಿಯ ಆವರಣ, #65, ಸಂತ ಮಾರ್ಕರ ರಸ್ತೆ, ಬೆಂಗಳೂರು 560 001.

ಸಹಿ/–
ಸ್ಥಳ: ಬೆಂಗಳೂರು, ದಿನಾಂಕ: 25.01.2024 ಸಹಾಯಕ ಪ್ರಧಾನ ವ್ಯವಸ್ಥಾಪಕರು (P&E)

‘ಭ್ರಮೆಗಳ ಸಂಭ್ರಮದಲ್ಲಿ ಭಾರತೀಯರು’

ಪ್ರಧಾನಿ ಮೋದಿಗೆ ನಿರುದ್ಯೋಗಿಗಳ ಸಂಖ್ಯೆ ಗೊತ್ತಿಲ್ಲ; ಪರಕಾಲ ಪ್ರಭಾಕರ್

ಪ್ರಜಾವಾಣಿ ವಾರ್ತೆ

ಪರಕಾಲ ಪ್ರಭಾಕರ್

ಬೆಂಗಳೂರು: ಸ್ವಾತಂತ್ರ್ಯ ಹಾಗೂ ಸಂವಿಧಾನ ರೂಪಿಸಿದ ಆಶಯಗಳಿಗೆ ವಿರುದ್ಧವಾಗಿ ದೇಶ ಸಾಗುತ್ತಿದೆ. ಜನರು ಭ್ರಮೆಗಳನ್ನೇ ವಾಸ್ತವವೆಂದು ನಂಬಿಕೊಂಡು ಸಂಭ್ರಮಿಸುತ್ತಿದ್ದಾರೆ ಎಂದು ರಾಜಕೀಯ ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ್ ಹೇಳಿದರು.

‘ಜಾಗೃತ ಕರ್ನಾಟಕ’ ಬುಧವಾರ ಹಮ್ಮಿಕೊಂಡಿದ್ದ ‘2014ರ ನಂತರದ ಭಾರತದ ಭ್ರಮೆ ಮತ್ತು ವಾಸ್ತವ’ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ಹೇಳಿಕೆ–ಘೋಷಣೆಗಳಿಗೂ ವಾಸ್ತವದಲ್ಲಿ ಅನುಸರಿಸುವ ವಿಧಾನಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಗುಪ್ತ ಕಾರ್ಯಸೂಚಿಗಳನ್ನು ಜನರಿಗೆ ಗೊತ್ತೇ ಆಗದಂತೆ ಅನುಷ್ಠಾನಗೊಳಿಸಲಾಗುತ್ತಿದೆ. ಅವರ ಘೋಷಣೆಗಳನ್ನು ಇತರೆ ದೇಶಗಳಿಗೂ ನಿಜವೆಂದು ನಂಬಿಸುವ ಚಾಕಚಕ್ಯತೆ ಬಿಜೆಪಿಗಿದೆ. ಜಿ–20 ಶೃಂಗದ ವೇಳೆ ‘ವಸುದೇವ ಕುಟುಂಬಕಂ’ ಘೋಷಣೆ ಮಾಡಲಾಗಿತ್ತು. ಅಂದರೆ ಬಿಜೆಪಿ ಹಾಗೂ ಕೇಂದ್ರ ಸರ್ಕಾರ ವಿಶ್ವವನ್ನೇ ಒಂದು ಕುಟುಂಬವೆಂದು ಕಾಣುತ್ತಿವೆ ಎನ್ನುವ ಭ್ರಮೆಯನ್ನು ತೇಲಿಬಿಡಲಾಗಿತ್ತು. ವಾಸ್ತವದಲ್ಲಿ ಸಮಾಜದ ಜಾತಿ, ಧರ್ಮಗಳ ಮಧ್ಯೆ ಗೋಡೆಕಟ್ಟುವ ಕೆಲಸ ನಿರಂತರವಾಗಿ ಇದೇ ಬಿಜೆಪಿ ಮಾಡುತ್ತಿದೆ ಎಂದು ಆರೋಪಿಸಿದರು.

ದೇಶದಲ್ಲಿ ಎಷ್ಟು ನಿರುದ್ಯೋಗಿಗಳಿದ್ದಾರೆ. ಕೋವಿಡ್ ಸಮಯದಲ್ಲಿ ಎಷ್ಟು ಜನರು ಪ್ರಾಣ ಕಳೆದುಕೊಂಡರು ಎಂಬಂತಹ ಪ್ರಶ್ನೆಗಳಿಗೆ ಉತ್ತರ ನೀಡದ ಪ್ರಧಾನಿಗಳು ತಮ್ಮ ರಾಜಕೀಯ ವಿರೋಧಿಗಳು 99 ಬಾರಿ ತಮ್ಮನ್ನು ನಿಂದಿಸಿದ್ದರು ಎಂದು ಹೇಳುತ್ತಾರೆ. ಸಂಸತ್‌ನಲ್ಲಿ 10 ನಿಮಿಷ ಚರ್ಚಿಸದೇ ಕೃಷಿಯಂತಹ ಮಸೂದೆ ಅಂಗೀಕರಿಸುತ್ತಾರೆ. ಪಂಜಾಬ್‌ನಲ್ಲಿ ರಾಜಕೀಯ ಲಾಭ ಮಾಡಿಕೊಳ್ಳಲು ಕಾರಣ ನೀಡದೇ ಕಾಯ್ದೆ ವಾಪಸ್ ಪಡೆಯುತ್ತಾರೆ. ಯಾರಾದರೂ ಪ್ರಶ್ನಿಸಿದ ತಕ್ಷಣ ಪ್ರಜಾತಂತ್ರ ಅಪಾಯದಲ್ಲಿದೆ. ಪಾಕಿಸ್ತಾನ್ ಏಜೆಂಟರಿದ್ದಾರೆ ಎಂದು ಜನರ ಗಮನ ಬೇರೆಡೆ ಸೆಳೆಯುತ್ತಾರೆ. ಪ್ರಧಾನಿಯ ಮಾತು–ಕೃತಿಯಲ್ಲೇ ಭಿನ್ನತೆ ಕಾಣಬಹುದು ಎಂದು ಟೀಕಿಸಿದರು.

ಕೇಂದ್ರ ಸರ್ಕಾರ ತಂತ್ರಗಳ ಮೂಲಕ ಸುಳ್ಳುಗಳನ್ನೇ ಸತ್ಯ ಮಾಡುತ್ತಿದೆ. ಒಂದು ಕಿ.ಮೀ ಚತುಷ್ಪದ ರಸ್ತೆಯನ್ನು ನಾಲ್ಕು ಕಿ.ಮೀ ಎಂದು, ಹಸಿವಿನ ಸೂಚ್ಯಂಕದಲ್ಲಿ ಭಾರತ 142 ಸ್ಥಾನದಲ್ಲಿದ್ದರೂ ದೇಶದಲ್ಲಿ ಒಬ್ಬರೂ ಹಸಿವಿನಿಂದ ಬಳಲುತ್ತಿಲ್ಲವೆಂದು ಮೋದಿ ಅವರ ಸಂಪುಟದ ಸಚಿವರೇ ಹೇಳುತ್ತಾರೆ. ದೊಡ್ಡ ಮಾತುಗಳು, ಸಂಸ್ಕೃತ ಬಳಕೆಯ ಮೂಲಕ ಸತ್ಯ ಜನರಿಗೆ ಅರ್ಥವಾಗದಂತೆ ಮಾಡುತ್ತಾರೆ. ಜನರಿಗೆ ಹಸಿವೇ ಇಲ್ಲದ ಮೇಲೆ 83 ಕೋಟಿ ಜನರಿಗೆ ಐದು ವರ್ಷಗಳು ಆಹಾರ ಧಾನ್ಯ ಪೂರೈಸುತ್ತಿದ್ದೇವೆ ಎನ್ನುವುದು ಸುಳ್ಳೇ ಎಂದು ಪ್ರಶ್ನಿಸಿದರು.

‘ಸದ್ಯದ ಪರಿಸ್ಥಿತಿಯಲ್ಲಿ ಬಹುತ್ವದ ಭಾರತವು ಬಹುಸಂಖ್ಯಾವಾದದ ಕಗ್ಗಂಟಿನ ಕಡೆ ವಾಲುತ್ತಿದೆ. ಜಾತ್ಯತೀತರು ಎಂದು ಬೀಗುತ್ತಿದ್ದವರೂ ‘ನಾವು ಹಿಂದುಗಳೇ’ ಎಂದು ಪ್ರತಿಕ್ರಿಯಿಸುವ ಸ್ಥಿತಿಗೆ ಬಂದಿದ್ದೇವೆ’ ಎಂದು ವಿಷಾದಿಸಿದರು.

ಜಾಗೃತ ಕರ್ನಾಟಕದ ಸಂಚಾಲಕ ಬಿ.ಸಿ. ಬಸವರಾಜು, ವಕೀಲರಾದ ಗಂಗಾಧರ್ ಮುಳುಗುಂದ್, ಪೂರ್ಣಾ ಉಪಸ್ಥಿತರಿದ್ದರು.

ದೇವಸ್ಥಾನ ಉದ್ಘಾಟನೆಗೆ ಸಾವಿರಾರು ಕೋಟಿ ಖರ್ಚು

ಒಂದು ದೇವಸ್ಥಾನದ ಉದ್ಘಾಟನೆಯ ವಿಷಯವನ್ನು ಭಾರತದ ಮಾಧ್ಯಮಗಳು ಒಂದು ತಿಂಗಳು ಬಿತ್ತರಿಸಿದವು. ಅದಕ್ಕಾಗಿ ಕೇಂದ್ರ ಸರ್ಕಾರ ಸಾವಿರಾರು ಕೋಟಿ ಹಣ ಖರ್ಚು ಮಾಡಿದೆ ಎಂದು ಪರಕಾಲ ಪ್ರಭಾಕರ್ ಆರೋಪಿಸಿದರು.

ಕೇಂದ್ರದ ಯೋಜನೆಗಳ ಶೇ 80ರಷ್ಟು ಹಣವನ್ನು ಪ್ರಚಾರಕ್ಕೇ ಬಳಸಲಾಗುತ್ತಿದೆ. ಪ್ರಶ್ನಿಸಿದವರನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಭಿನ್ನಾಭಿಪ್ರಾಯಕ್ಕೆ ಅವಕಾಶ ನೀಡುತ್ತಿಲ್ಲ. ದೇಶದ ಕೆಲ ರಾಜ್ಯಗಳಲ್ಲಿ ಕೆಟ್ಟ ಪರಿಸ್ಥಿತಿ ಇದೆ. ಮಣಿಪುರ ಉರಿಯುತ್ತಿದ್ದರೂ ಅದು ಪ್ರಮುಖ ವಿಷಯವೇ ಅಲ್ಲ ಎನ್ನುವಂತಹ ಸ್ಥಿತಿ ನಿರ್ಮಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಸಾರ್ವಜನಿಕರ ಬಳಕೆಗೆ ರೆಸ್ಟೋರೆಂಟ್, ಹೋಟೆಲ್‌ಗಳ ಶೌಚಾಲಯ

‘ಕ್ರಮ ವಹಿಸಲು ಆರೋಗ್ಯ ಆಯುಕ್ತರಿಗೆ ಸೂಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರ್ವಜನಿಕ ರೆಸ್ಟೊರೆಂಟ್ ಮತ್ತು ಹೋಟೆಲ್‌ಗಳಲ್ಲಿನ ಶೌಚಾಲಯಗಳನ್ನು ಸಾರ್ವಜನಿಕರೂ ಬಳಸುವಂತಾಗಬೇಕು. ಈ ದಿಸೆಯಲ್ಲಿ ಸೂಕ್ತ ಆದೇಶ ಹೊರಡಿಸಲು ಅಗತ್ಯ ಕ್ರಮ ಜರುಗಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಆರೋಗ್ಯ ಆಯುಕ್ತರಿಗೆ ಸೂಚಿಸಲಾಗಿದೆ‘ ಎಂದು ಬಿಬಿಎಂಪಿ ಹೈಕೋರ್ಟ್‌ಗೆ ತಿಳಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ, 'ಲೆಟ್ಸ್ ಕಿಟ್ ಫೌಂಡೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, ಈ ಕುರಿತ ವಸ್ತುಸ್ಥಿತಿ ವರದಿಯನ್ನು ನ್ಯಾಯಪೀಠಕ್ಕೆ ಒದಗಿಸಿದರು. ವರದಿಯಲ್ಲಿ ‘ನಗರ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮತ್ತು ನಿರ್ವಹಣೆ ಮಾಡಲು ಬಿಬಿಎಂಪಿ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಈ ಸಮಿತಿಯು 2023ರ ನವೆಂಬರ್ 29ರಂದು ಸಭೆ ನಡೆಸಿದೆ ಮತ್ತು ಸಾರ್ವಜನಿಕ ರೆಸ್ಟೊರೆಂಟ್ ಮತ್ತು ಹೋಟೆಲ್‌ಗಳಲ್ಲಿನ ಶೌಚಾಲಯಗಳನ್ನು ಸಾರ್ವಜನಿಕರೂ ಬಳಸುವಂತಾಗಬೇಕೆಂದು ತಿಳಿಸಲಾಗಿದೆ‘ ಎಂದು ವಿವರಿಸಲಾಗಿದೆ.

ವರದಿಯಲ್ಲಿ ಏನಿದೆ?

‘ನಗರದಲ್ಲಿರುವ 172 ಇಂದಿರಾ ಕ್ಯಾಂಟೀನ್‌ಗಳಲ್ಲಿರುವ ಶೌಚಾಲಯಗಳನ್ನು ಸಾರ್ವಜನಿಕರ ಬಳಕೆಗೆ ಅನುಮತಿಸುವಂತೆ ಸಮಿತಿ ಅಧ್ಯಕ್ಷರು ಪಾಲಿಕೆಯ ಆರೋಗ್ಯ ವಿಭಾಗದ ವಿಶೇಷ ಆಯುಕ್ತರಿಗೆ ಸೂಚಿಸಿದ್ದಾರೆ‘ ಎಂದು ವರದಿಯಲ್ಲಿ ತಿಳಿಸಲಾಗಿದೆ.

‘ಪಾಲಿಕೆ ವ್ಯಾಪ್ತಿಯಲ್ಲಿ ಹೊಸದಾಗಿ 246 ಸಾರ್ವಜನಿಕ ಶೌಚಾಲಯ, 85 ಹಾಲಿ ಶೌಚಾಲಯಗಳನ್ನು ಮೇಲ್ದರ್ಜೆಗೇರಿಸಲು ಮತ್ತು 229 ಇ-ಶೌಚಾಲಯಗಳ ಕಾರ್ಯಚರಣೆ ಹಾಗೂ ನಿರ್ವಹಣೆಗೆ ಟೆಂಡರ್ ಕರೆಯಲಾಗಿದೆ’ ಎಂದು ತಿಳಿಸಲಾಗಿದೆ.

‘ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ 100 ಶೀ (ಮಹಿಳೆಯರ ಬಳಕೆಗೆ) ನಿರ್ಮಿಸಲು ಶೀಘ್ರ ಟೆಂಡರ್ ಆಹ್ವಾನಿಸಲಾಗುವುದು. ಅದಕ್ಕಾಗಿ ₹ 25 ಕೋಟಿ ಅನುದಾನವನ್ನು 2024-25ನೇ ಸಾಲಿನ ಬಜೆಟ್‌ನಲ್ಲಿ ಮೀಸಲಿಡಲು ಪ್ರಸ್ತಾವಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಹೊಸದಾಗಿ 246 ಸಾರ್ವಜನಿಕ ಶೌಚಾಲಯ ನಿರ್ಮಿಸಲು ಈಗಾಗಲೇ ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ. 46 ಒಡಿಎಫ್ + + ನಿರ್ಮಾಣಕ್ಕೆ ಖಾಸಗಿ ಕಂಪನಿಯೊಂದಕ್ಕೆ ಗುತ್ತಿಗೆ ನೀಡಲಾಗಿದೆ. ಹೊಸ ಶೌಚಾಲಯಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಮತ್ತು ಅಂಗವಿಕಲರ ಬಳಕೆಗೆ ಪ್ರತ್ಯೇಕ ಶೌಚಾಲಯ ಬ್ಲಾಕ್ ಒದಗಿಸಲು ಕ್ರಮ ವಹಿಸಲಾಗಿದೆ. 185 ಹಾಲಿ ಶೌಚಾಲಯಗಳನ್ನು ಮೇಲ್ದರ್ಜೆಗೇರಿಸಲು ಟೆಂಡರ್ ಕರೆಯಲಾಗಿದೆ. 229 ಇ-ಶೌಚಾಲಯಗಳ ಕಾರ್ಯಾಚರಣೆ ಅಥವಾ ನಿರ್ವಹಣೆಗೆ ಟೆಂಡರ್ ಕರೆಯಲಾಗಿದೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಮನೆ, ನಿವೇಶನ ಕಬಳಿಸಲು ಸಂಚು • ಆಸ್ತಿಗಳ ಮೇಲೆ ಕೋಟ್ಯಂತರ ರೂಪಾಯಿ ಸಾಲ ಪಡೆದಿರುವ ವಂಚಕರು

ನಕಲಿ ದಾಖಲೆ: ವಂಚನೆ ಜಾಲ ಸಕ್ರಿಯ

• ಆದಿತ್ಯ ಕೆ.ಎ.

ಬೆಂಗಳೂರು: ಮನೆ, ನಿವೇಶನ ಮತ್ತಿತರ ಆಸ್ತಿಗಳ ಮೇಲೆ ನಕಲಿ ದಾಖಲೆ ಸೃಷ್ಟಿಸಿ ವಂಚಿಸುತ್ತಿರುವ ಜಾಲ ರಾಜಧಾನಿಯಲ್ಲಿ ಮತ್ತೆ ಸಕ್ರಿಯವಾಗಿದೆ. ಈ ಜಾಲಕ್ಕೆ ಸಿಲುಕಿ ಹಲವರು ನಿವೇಶನ ಕಳೆದುಕೊಳ್ಳುವ ಸ್ಥಿತಿಗೆ ಬಂದಿದ್ದಾರೆ.

ನಿವೇಶನದ ಮೂಲ ಮಾಲೀಕರು ದಾಖಲೆ ಪರಿಶೀಲಿಸಿದಾಗ ನಿವೇಶನದ ಮೇಲೆಯೇ ವಂಚಕರು ಕೋಟ್ಯಂತರ ರೂಪಾಯಿ ಸಾಲ ಪಡೆದುಕೊಂಡಿರುವುದು ಪತ್ತೆಯಾಗುತ್ತಿದೆ. ಈ ಜಾಲಕ್ಕೆ ಬ್ಯಾಂಕ್ ವ್ಯವಸ್ಥಾಪಕರು, ಉಪ ನೋಂದಣಿ ಕಚೇರಿಯ ಅಧಿಕಾರಿಗಳು ಸಹ ಕೈಜೋಡಿಸಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ವಂಚನೆಗೆ ಒಳಗಾದ ಹಲವರು ಪೊಲೀಸ್ ಠಾಣೆ ಮೆಟ್ಟಿಲೇರುತ್ತಿದ್ದಾರೆ. ಬೇರೊಬ್ಬರ ನಿವೇಶನಕ್ಕೆ ನಕಲಿ ದಾಖಲೆ ಸೃಷ್ಟಿಸಿ, ಸಾಲ ಪಡೆದಿರುವ ಸಂಬಂಧ

ಜೆ.ಪಿ.ನಗರ, ಪುಟ್ಟೇನಹಳ್ಳಿ ಹಾಗೂ ಹುಳಿಮಾವು ಪೊಲೀಸ್ ಠಾಣೆಗಳಲ್ಲಿ ಇತ್ತೀಚೆಗೆ ಎಫ್.ಐ.ಆರ್ ಆಗಿದ್ದು ಪ್ರಕರಣಗಳನ್ನು ಸಿಸಿಬಿ ವರ್ಗಾವಣೆ ಮಾಡಲಾಗಿದೆ.

ಸಿಸಿಬಿ ಪೊಲೀಸರು ಕಾರ್ಯಾಚರಣೆ ಚುರುಕುಗೊಳಿಸಿ ಐವರು ಮಧ್ಯವರ್ತಿಗಳು ಹಾಗೂ ನಾಲ್ವರು ಬ್ಯಾಂಕ್ ಅಧಿಕಾರಿಗಳನ್ನು ಬಂಧಿಸಿದ್ದಾರೆ. ಜಾಲ ವಿಸ್ತಾರಗೊಂಡಿರುವ ಅನುಮಾನ ವ್ಯಕ್ತವಾಗಿದೆ.

2022ರಲ್ಲೂ ನಗರದಲ್ಲಿ ಇದೇ ರೀತಿಯ ಜಾಲ ವ್ಯಾಪಿಸಿತ್ತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಇತರೆ ಸಂಸ್ಥೆಗಳು ಅಭಿವೃದ್ಧಿ ಪಡಿಸಿದ್ದ ನಿವೇಶನಗಳ ನಕಲಿ ದಾಖಲೆ ಸೃಷ್ಟಿಸುತ್ತಿದ್ದ ಜಾಲ, ಅದೇ ನಿವೇಶನಗಳನ್ನು ಕೋಟಿಗೂ ಹೆಚ್ಚು ಮೊತ್ತಕ್ಕೆ ಮಾರಾಟ ಮಾಡಿತ್ತು. ಜಾಲದ ಸುಳಿವು ಪತ್ತೆ ಮಾಡಿದ್ದ ಮಾಲೀಕರು ದೂರು ನೀಡಿದ್ದರು. ಶೇಷಾದ್ರಿಪುರ, ಮಾರತ್‌ಹಳ್ಳಿ ಕುಮಾರಸ್ವಾಮಿ ಲೇಔಟ್, ಕೆಂಪೇಗೌಡ ನಗರ, ಯಲಹಂಕ ನ್ಯೂಟೌನ್, ಜಿಗಣಿ ಪೊಲೀಸರು ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಿದ್ದರು. 15 ಕಡೆ ಪ್ರಕರಣಗಳು ದಾಖಲಾಗಿದ್ದವು. ಕೆಲವು ತಿಂಗಳಿಂದ ಈ ರೀತಿಯ ವಂಚನೆ ಜಾಲ ತಣ್ಣಗಾಗಿತ್ತು. ಈಗ ಮತ್ತೆ ತಲೆಯೆತ್ತಿದೆ.

ಹೇಗೆ ನಡೆಯುತ್ತಿದೆ ವಂಚನೆ?: ಮನೆ ಹಾಗೂ ಆಸ್ತಿ ಖರೀದಿಸುವ ವೃದ್ಧರನ್ನು ಮಧ್ಯವರ್ತಿಗಳು ಪತ್ತೆ ಹಚ್ಚುತ್ತಾರೆ. ಸಾಮಾಜಿಕ ಮಾಧ್ಯಮದಲ್ಲಿ 'ಆಸ್ತಿ ಮಾರಾಟಕ್ಕಿದೆ' ಎಂದು ಯಾರಾದರೂ ಮಾಹಿತಿ ಹಾಕಿದ್ದರೆ ಅಂತಹವರನ್ನೂ ಪತ್ತೆ ಮಾಡುತ್ತಾರೆ. ಅವರ ಮನೆಗೆ ತೆರಳಿ, ಆಸ್ತಿ ಖರೀದಿಸುವ ನೆಪದಲ್ಲಿ ಮುಂಗಡವಾಗಿ ಸ್ವಲ್ಪ ಹಣ ನೀಡಿ ದಾಖಲಾತಿ ಪರಿಶೀಲಿಸಿ ಅದರ ಫೋಟೊ ತೆಗೆದುಕೊಳ್ಳುತ್ತಾರೆ. ಅದೇ ಮಾದರಿಯಲ್ಲಿ ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್ ಸಲ್ಲಿಸುತ್ತಾರೆ. ಬ್ಯಾಂಕ್‌ನವರು ದಾಖಲೆಗಳ ನೈಜತೆ ಪರಿಶೀಲಿಸದೆ ಸಾಲ ನೀಡುತ್ತಿದ್ದಾರೆ. ಮೂಲ ಮಾಲೀಕರು ದಾಖಲೆ ಪರಿಶೀಲನೆ ವೇಳೆ ಮೋಸಕ್ಕೆ ಒಳಗಾಗಿರುವುದು ಗೊತ್ತಾಗುತ್ತಿದೆ ಎಂದು ಮೂಲಗಳು ಹೇಳಿವೆ.

2 ಬ್ಯಾಂಕ್‌ಗಳಿಂದ ₹2.22 ಕೋಟಿ ಸಾಲ

ನಕಲಿ ದಾಖಲೆ, ಸೇಲ್ ಡೀಡ್ ಸೃಷ್ಟಿಸಿ, ಸೋಮಶೆಟ್ಟಿಹಳ್ಳಿ ನಿವಾಸಿ ಬಿ.ಪ್ರಶಾಂತ್‌ಕುಮಾರ್ ಎಂಬಾತ ಎಸ್‌ಬಿಐ ಬ್ಯಾಂಕ್‌ನಿಂದ ₹1.22 ಕೋಟಿ ಸಾಲ ಪಡೆದುಕೊಂಡಿದ್ದಾನೆ. ಈ ಸಂಬಂಧ ಬ್ಯಾಂಕ್‌ನ ಸಿಬ್ಬಂದಿ ಕೆ.ಶ್ರೀನಿವಾಸ್ ಅವರು ಜ.8ರಂದು ದೂರು ನೀಡಿದ್ದು, ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬನಶಂಕರಿ 2ನೇ ಹಂತದ ಟೀಚರ್ಸ್ ಕಾಲೊನಿಯ ಬಿ.ಪಿ.ಮೋಹನ್‌ಚಂದ್ ಅವರ ನಿವೇಶನಕ್ಕೆ ನಕಲಿ ದಾಖಲೆ ಸೃಷ್ಟಿಸಿ ಬೇರೊಬ್ಬರ ಹೆಸರಿಗೆ ಕ್ರಯಪತ್ರ ಮಾಡಿಕೊಟ್ಟು ಎಂ.ಜಿ.ರಸ್ತೆಯ ಡಿಸಿಬಿ ಬ್ಯಾಂಕ್‌ನಿಂದ ₹1 ಕೋಟಿ ಸಾಲ ಪಡೆದುಕೊಂಡಿದ್ದು ಜೆಪಿ ನಗರ ಠಾಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಪ್ರಕರಣದಲ್ಲಿ ಚಿಕ್ಕಬಳ್ಳಾಪುರದ ಟಿ.ವಿ.ರಾಮಕೃಷ್ಣರೆಡ್ಡಿ ಎಂಬ ಆರೋಪಿಯನ್ನು ಬಂಧಿಸಲಾಗಿದೆ. ತನಿಖೆ ನಡೆಯುತ್ತಿದೆ.

'ಬ್ಯಾಂಕ್ ಅಧಿಕಾರಿಗಳಿಗೆ ಕಮಿಷನ್'

'ಪ್ರಕರಣದಲ್ಲಿ ಬ್ಯಾಂಕ್ ಅಧಿಕಾರಿಗಳು ಶಾಮೀಲಾಗುತ್ತಿದ್ದಾರೆ. ಪುಟ್ಟೇನಹಳ್ಳಿ ಹಾಗೂ ಹುಳಿಮಾವು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ಬ್ಯಾಂಕ್ ಅಧಿಕಾರಿಗಳ ಪಾತ್ರವಿರುವುದು ಸಾಬೀತಾಗಿದೆ. ಮಧ್ಯವರ್ತಿಗಳಿಗೆ ಬ್ಯಾಂಕ್ ಸಿಬ್ಬಂದಿಯೇ ಬ್ಯಾಂಕ್ ಖಾತೆ ಸೃಷ್ಟಿಸಿ ಕೊಡುತ್ತಿದ್ದರು. ಅಲ್ಲದೇ ಮಧ್ಯವರ್ತಿಗಳು ತಂದುಕೊಡುವ ನಕಲಿ ದಾಖಲೆಗಳನ್ನು ಪರಿಶೀಲಿಸದೆ ಸಾಲ ಮಂಜೂರು ಮಾಡುತ್ತಿದ್ದರು. ಅದಾದ ಮೇಲೆ ಕಮಿಷನ್ ಪಡೆಯುತ್ತಿದ್ದರು' ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ತಲೆಮರೆಸಿಕೊಂಡಿದ್ದ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಇಬ್ಬರು ರೌಡಿಶೀಟರ್ ಹಾಗೂ ಒಬ್ಬ ಸಹಚರನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ವಿವೇಕನಗರ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿಶೀಟರ್ ಪಿ.ಜಾರ್ಜ್ ಅಲಿಯಾಸ್ ಮೈಕಲ್ ಜಾರ್ಜ್, ಮುತ್ತುರಾಜ್ ಹಾಗೂ ಆರ್.ಆರ್. ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರೌಡಿ ಚಟುವಟಿಕೆಯಲ್ಲಿ ಭಾಗಿಯಾಗಿದ್ದ ಲೋಕೇಶ್ ಬಂಧಿತರು.

ಮೈಕಲ್ ಜಾರ್ಜ್ ವಿರುದ್ಧ ಒಂದು ಕೊಲೆ, ಒಂದು ಡಕಾಯಿತಿ ಪ್ರಕರಣ ದಾಖಲಾಗಿದ್ದವು. ಈತ ನಾಲ್ಕು ವರ್ಷಗಳಿಂದ ವಿಚಾರಣೆಗೆ ಹಾಜರಾಗದೆ ತಲೆ ಮರೆಸಿಕೊಂಡಿದ್ದ. ಮುತ್ತುರಾಜ್ ಮೇಲೆ ಎರಡು ಕೊಲೆ, ನಾಲ್ಕು ಕೊಲೆ ಯತ್ನ, ಒಂದು ಹಲ್ಲೆ, ಎರಡು ಎನ್‌ಡಿಪಿಎಸ್, ಮೂರು ದರೋಡೆ, ಒಂದು ದರೋಡೆಗೆ ಸಿದ್ಧತೆ ನಡೆಸಿದ ಪ್ರಕರಣಗಳು ಸೇರಿದಂತೆ ಒಟ್ಟು 13 ಪ್ರಕರಣಗಳು ದಾಖಲಾಗಿದ್ದವು. ಅವುಗಳಲ್ಲಿ ಎಂಟು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದು, ಈತ ಆರು ಪ್ರಕರಣಗಳಲ್ಲಿ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಲೋಕೇಶ್ ವಿರುದ್ಧ ಪೀಣ್ಯ, ಶ್ರೀರಾಂಪುರ, ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ ಎಂದು ಸಿಸಿಬಿ ಪೊಲೀಸರು ಹೇಳಿದರು.

ಬಡ್ಡಿ ಆಮಿಷವೊಡ್ಡಿ ವಂಚನೆ: ನಾಲ್ವರ ಬಂಧನ

ಆಂಧ್ರಪ್ರದೇಶದ ಇಬ್ಬರಿಂದ ₹2.5 ಕೋಟಿ ಹೂಡಿಕೆ ಮಾಡಿಸಿಕೊಂಡಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಇಬ್ಬರಿಂದ ₹2.5 ಕೋಟಿ ಹೂಡಿಕೆ ಮಾಡಿಸಿಕೊಂಡು ವಂಚಿಸಿದ್ದ ಕೆ.ಆರ್.ಪುರ ಕಸ್ತೂರಿನಗರದ ಎಸ್5ಎಸ್ ಗ್ಲೋಬಲ್ ಡೆವಲಪರ್ಸ್ ಕಂಪನಿ ಮಾಲೀಕ ಸೇರಿದಂತೆ ನಾಲ್ವರು ಆರೋಪಿಗಳನ್ನು ಕಾಟನ್‌ಪೇಟೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕಂಪನಿಯ ಮುಖ್ಯಸ್ಥ ಪ್ರತಾಪ್, ಕಂಪನಿ ಕಾನೂನು ಸಲಹೆಗಾರ ಓಬಳೇಶ್, ಲೆಕ್ಕ ವಿಭಾಗದ ಮಣಿ, ಚಾಲಕ ಗೋಪಿ ಬಂಧಿತರು.

'ಪ್ರತಾಪ್ ಅವರ ಪತ್ನಿ ಶ್ವೇತಾ ಅವರನ್ನು ವಿಚಾರಣೆ ನಡೆಸಲಾಗಿದೆ. ಈ ವಂಚನೆ ಪ್ರಕರಣದಲ್ಲಿ ಅವರ ಪಾತ್ರ ಕಂಡುಬಂದರೆ ಅವರನ್ನೂ ಬಂಧಿಸಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಂಧ್ರಪ್ರದೇಶದ ಕಡಪದ ಸಂದಡಿ ನರಸಿಂಹರೆಡ್ಡಿ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ.

ಹೇಗೆ ವಂಚನೆ?: ಆಂಧ್ರಪ್ರದೇಶದ ಕಡಪದ ರೈತ, ದೂರುದಾರ ಸಂದಡಿ ನರಸಿಂಹ ರೆಡ್ಡಿಗೆ ಒಂದೂವರೆ ವರ್ಷದ ಹಿಂದೆ ಬೆಂಗಳೂರಿನ ಮಹಮದ್ ಮುಸ್ತಾಫ ಎಂಬಾತನ ಪರಿಚಯವಾಗಿತ್ತು. ಅದಾದ ಮೇಲೆ 2023ರ ಜನವರಿಯಲ್ಲಿ ಮುಸ್ತಾಫ, ಕಂಪನಿ ಮಾಲೀಕ ಪ್ರತಾಪ್‌ನನ್ನು ತಿರುಪತಿಯಲ್ಲಿ ನರಸಿಂಹರೆಡ್ಡಿ ಅವರಿಗೆ ಪರಿಚಯಿಸಿದ್ದ. ಆಗ ಪ್ರತಾಪ್, 'ನಾನು ಬೆಂಗಳೂರಿನಲ್ಲಿ ಅಧಿಕ ಬಡ್ಡಿ ಬರುವ ಪ್ಯಾಕೇಜ್‌ಗಳನ್ನು ನಡೆಸುತ್ತಿದ್ದು, ನೀವು ನನಗೆ ₹1 ಲಕ್ಷ ನೀಡಿದರೆ 10 ತಿಂಗಳ ಬಳಿಕ ₹1.90 ಲಕ್ಷ ವಾಪಸ್ ನೀಡುತ್ತೇನೆಂದು ಹೇಳಿದ್ದ. ಅದನ್ನೇ ನಂಬಿ, ಹಣ ಹೂಡಿಕೆ ಮಾಡಲಾಗಿತ್ತು' ಎಂದು ಮೂಲಗಳು ಹೇಳಿವೆ.

'2023ರ ಫೆ.14ರಂದು ಮುಸ್ತಾಫ ಮತ್ತು ನರಸಿಂಹರೆಡ್ಡಿ ಮೆಜೆಸ್ಟಿಕ್‌ನ ಹೋಟೆಲ್‌ವೊಂದರಲ್ಲಿ ಪ್ರತಾಪ್‌ನನ್ನು ಭೇಟಿಯಾಗಿ ₹5 ಲಕ್ಷ ನೀಡಿದ್ದರು. ಈ ವೇಳೆ ಮುಸ್ತಾಫ, ನೀನು ಹಣ ಹೂಡಿಕೆ ಮಾಡು, ₹ 1 ಲಕ್ಷಕ್ಕೆ ಪ್ರತಿ ತಿಂಗಳು ₹19 ಸಾವಿರ ಬಡ್ಡಿ ನೀಡುತ್ತಾರೆ ಎಂದು ನರಸಿಂಹ ರೆಡ್ಡಿಗೆ ಒತ್ತಾಯಿಸಿದ್ದ. ಮುಸ್ತಾಫನ ಒತ್ತಾಯಕ್ಕೆ ಮಣಿದ ನರಸಿಂಹ ರೆಡ್ಡಿ ಹಾಗೂ ಅವರ ಸ್ನೇಹಿತ ಪಂದೇಟಿ ವೆಂಕಟೇಶಯ್ಯ ಮೇನಿಂದ ಸೆಪ್ಟೆಂಬರ್‌ವರೆಗೆ ₹2.5 ಕೋಟಿಯನ್ನು ಕಂಪನಿಗೆ ಹೂಡಿಕೆ ಮಾಡಿದ್ದರು. ಕಂಪನಿ ಜೊತೆಗೆ ಒಪ್ಪಂದ ಸಹ ಮಾಡಿಕೊಂಡಿದ್ದರು' ಪೊಲೀಸರು ಹೇಳಿದರು.

'ಕೆಲವು ತಿಂಗಳು ಕಳೆದ ಮೇಲೆ ಪ್ರತಾಪ್, ಹೂಡಿಕೆದಾರರಿಗೆ ಕರೆ ಮಾಡಿ 'ನನ್ನ ಮನೆಯ ಮೇಲೆ ಇಡಿ ದಾಳಿ ನಡೆದಿದ್ದು, ಎಲ್ಲ ವಶಕ್ಕೆ ಪಡೆದುಕೊಂಡಿದ್ದಾರೆ. ನಿಮಗೆ ಮೋಸ ಮಾಡುವುದಿಲ್ಲ. ಸದ್ಯಕ್ಕೆ ಎಲ್ಲರಿಗೂ ಹಣ ನೀಡಲು ಸಾಧ್ಯವಾಗುವುದಿಲ್ಲ. ಮುಂದಿನ ದಿನಗಳಲ್ಲಿ ಹಣ ನೀಡುತ್ತೇನೆ' ಎಂದು ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದ. ಸಂದೇಶದಿಂದ ಗಾಬರಿಗೊಂಡ ನರಸಿಂಹರೆಡ್ಡಿ, ವೆಂಕಟೇಶಯ್ಯ ಬೆಂಗಳೂರಿಗೆ ಬಂದು ವಿಚಾರಿಸಿದ್ದರು. ಆರೋಪಿಗಳು ಬೆದರಿಕೆ ಹಾಕಿದ್ದರು' ಎಂದು ತಿಳಿಸಿದರು.

ಹಣ ಪಾವತಿ ನೆಪದಲ್ಲಿ ವಂಚನೆ

ಬೆಂಗಳೂರು: ಎಟಿಎಂ ಕೇಂದ್ರಗಳಿಗೆ ಹಣ ಡ್ರಾ ಮಾಡಲು ಹಾಗೂ ಹಣ ಠೇವಣಿಯಿಡಲು ಬರುತ್ತಿದ್ದವರ ಮನವೊಲಿಸಿ ವಂಚನೆ ಮಾಡುತ್ತಿದ್ದ ಆರೋಪಿಯನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

ಆರ್.ಟಿ.ನಗರದ ನಿವಾಸಿ ಸಾಯಿಲ್ (24) ಬಂಧಿತ.

'ಎಟಿಎಂ ಕೇಂದ್ರಗಳ ಎದುರು ನಿಂತು, ಹಣ ಹಾಕಲು ಬಂದವರ ಬಳಿ ತುರ್ತು ಹಣ ಬೇಕಾಗಿದ್ದು ಆನ್‌ಲೈನ್ ಮೂಲಕ ನಿಮಗೆ ಹಣ ಕಳಿಸುವುದಾಗಿ ಮನವಿ ಮಾಡುತ್ತಿದ್ದ. ಆರೋಪಿಯ ಮಾತು ನಂಬಿ ಕೆಲವರು ಹಣ ಕೊಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ವಂಚಿಸಲೆಂದೇ ಸೃಷ್ಟಿಸಿದ್ದ ನಕಲಿ ಅಪ್ಲಿಕೇಷನ್ ಮೂಲಕ ಹಣ ಕಳುಹಿಸಿರುವ ರೀತಿ ಸಂದೇಶ ಕಳುಹಿಸುತ್ತಿದ್ದ. ತಮ್ಮ ಮೊಬೈಲ್‌ಗೆ ಸಂದೇಶ ಬಂದಿರುವುದನ್ನು ನೋಡಿ, ಹಣ ಬಂದಿದೆ ಎಂದು ಜನರು ನಂಬುತ್ತಿದ್ದರು. ಆದರೆ, ನೈಜವಾಗಿ ಅವರ ಖಾತೆಗೆ ದುಡ್ಡು ಜಮೆ ಆಗುತ್ತಿರಲಿಲ್ಲ. ಸಾಯಿಲ್ ಕೈಗೆ ದುಡ್ಡು ಬರುತ್ತಿದ್ದಂತೆ ಕೈಗೆ ಸಿಗದೇ ಪರಾರಿಯಾಗುತ್ತಿದ್ದ' ಎಂದು ಹೇಳಿದರು.

ಪಿಎಸ್‌ಐ ಮೇಲೆ ಕಾರು ಹತ್ತಿಸಲು ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಿನಲ್ಲಿ ಕುಳಿತು ಅಸಭ್ಯವಾಗಿ ವರ್ತಿಸುತ್ತಿದ್ದ ಜೋಡಿಯನ್ನು ಪ್ರಶ್ನಿಸಿದ್ದಕ್ಕೆ ಸಿಟ್ಟಿಗೆದ್ದ ಯುವಕ, ಪಿಎಸ್‌ಐ ಮೇಲೆ ಕಾರು ಹತ್ತಿಸಲು ಯತ್ನಿಸಿದ್ದು ಈ ಸಂಬಂಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಶ್ಚಿಮ ವಿಭಾಗದ ಸಶಸ್ತ್ರ ಮೀಸಲು ಪಡೆಯ ರಿಸರ್ವ್ ಸಬ್ ಇನ್‌ಸ್ಪೆಕ್ಟರ್ ಮಹೇಶ್ ಗಾಯಗೊಂಡಿದ್ದು ಅಪಾಯದಿಂದ ಪಾರಾಗಿದ್ದಾರೆ.

'ಜ.20ರಂದು ಮಹೇಶ್ ಅವರು ಜ್ಞಾನಭಾರತಿಯ ಉಪಕಾರ್ ಲೇಔಟ್‌ನ ಉದ್ಯಾನದಲ್ಲಿ ವಾಯುವಿಹಾರ ನಡೆಸುತ್ತಿದ್ದರು. ಪಾರ್ಕ್ ಎಡಬದಿಯಲ್ಲಿ ನಿಂತಿದ್ದ ಕಾರಿನಲ್ಲಿ ಜೋಡಿಯೊಂದು ಅಸಭ್ಯವಾಗಿ ನಡೆದುಕೊಳ್ಳುತ್ತಿತ್ತು. ಇದನ್ನು ಕಂಡ ಪಿಎಸ್‌ಐ ಮಹೇಶ್, ಆ ಜೋಡಿಗೆ ಬುದ್ಧಿಹೇಳಲು ಮುಂದಾಗಿದ್ದಾರೆ. ಆಗ ಕಾರಿನಲ್ಲಿದ್ದ ಯುವಕ, ಹಿಂದಿನ ಸೀಟಿನಿಂದ ಮುಂದಕ್ಕೆ ಬಂದು ಏಕಾಏಕಿ ಕಾರು ಚಲಾಯಿಸಿದ್ದಾನೆ. ಕಾರಿನ ಮುಂಭಾಗದಲ್ಲಿ ನಿಂತಿದ್ದ ಮಹೇಶ್ ಆತಂಕಗೊಂಡು, ಬಾನೆಟ್ ಮೇಲೆ ಹತ್ತಿದ್ದರು. ಕಾರು ನಿಲ್ಲಿಸುವಂತೆ ಸೂಚಿಸಿದ್ದರೂ ಚಾಲಕ, ವೇಗವಾಗಿ ರಿವರ್ಸ್ ಗೇರ್ ಹಾಕಿ ಕೆಳಕ್ಕೆ ಬೀಳಿಸಲು ಪ್ರಯತ್ನಿಸಿದ್ದ. ಕೆಳಕ್ಕೆ ಬಿದ್ದ ಮಹೇಶ್ ಅವರ ತಲೆ ಹಾಗೂ ದೇಹದ ಇತರೆ ಭಾಗಗಳಿಗೆ ಗಾಯವಾಗಿತ್ತು. ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾದ ಕಾರಿನ ನೋಂದಣಿ ಸಂಖ್ಯೆ ಆಧಾರದ ಮೇರೆಗೆ ಆರೋಪಿ ಪತ್ತೆ ಮಾಡಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಫಲಪುಷ್ಪ ಪ್ರದರ್ಶನ: 26ರಂದು ಮೆಟ್ರೊ ಪೇಪರ್ ಟಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ಏರ್ಪಡಿಸಲಾಗಿರುವ ಫಲಪುಷ್ಪ ಪ್ರದರ್ಶನಕ್ಕೆ ಜ.26ರಂದು ಭೇಟಿ ನೀಡಲಿರುವ ಜನರ ಅನುಕೂಲಕ್ಕಾಗಿ 'ನಮ್ಮ ಮೆಟ್ರೊ' ರಿಟರ್ನ್ ಜರ್ನಿ ಪೇಪರ್ ಟಿಕೆಟ್‌ಗಳನ್ನು ನೀಡಲಿದೆ.

'ಅಂದು ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ ಲಾಲ್‌ಬಾಗ್ ಮೆಟ್ರೊ ನಿಲ್ದಾಣದಿಂದ ಯಾವುದೇ ಮೆಟ್ರೊ ನಿಲ್ದಾಣಕ್ಕೆ ಪ್ರಯಾಣಿಸಲು ₹ 30 ದರ ನಿಗದಿಪಡಿಸಲಾಗಿದೆ' ಎಂದು ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ..

ಒಂದು ದಿನಕ್ಕೆ ಮಾತ್ರ ಮಾನ್ಯವಾಗಿರುವ ಪೇಪರ್ ಟಿಕೆಟ್ ಅನ್ನು ಜ.26ರಂದು ಬೆಳಿಗ್ಗೆ 8ರಿಂದ ಸಂಜೆ 6ರ ವರೆಗೆ ಎಲ್ಲ ಮೆಟ್ರೊ ನಿಲ್ದಾಣಗಳಲ್ಲಿ ಖರೀದಿಸಬಹುದು. ಲಾಲ್‌ಬಾಗ್ ಮೆಟ್ರೊ ನಿಲ್ದಾಣದಲ್ಲಿ ಮಾತ್ರ ಪೇಪರ್ ಟಿಕೆಟ್ ರಾತ್ರಿ 8ರವರೆಗೆ ಲಭ್ಯವಿರಲಿದೆ.

ಸ್ಮಾರ್ಟ್ ಕಾರ್ಡ್, ಎನ್‌ಸಿಎಂಸಿ ಕಾರ್ಡ್‌ಗಳು, ಕ್ಯೂಆರ್ ಟಿಕೆಟ್‌ಗಳ ಮೂಲಕ ಪ್ರಯಾಣಿಸಬಹುದು ಎಂದು ತಿಳಿಸಿದ್ದಾರೆ.

ಭ್ರೂಣ ಹತ್ಯೆ ತಡೆಗೆ ಕಠಿಣ ಕ್ರಮ: ದಿನೇಶ್ ಗುಂಡೂರಾವ್

ಬೆಂಗಳೂರು: 'ಹೆಣ್ಣು ಭ್ರೂಣ ಹತ್ಯೆ ತಡೆಗೆ ಆರೋಗ್ಯ ಇಲಾಖೆಯು ಈಗಾಗಲೇ ಕಾರ್ಯಪಡೆಗಳನ್ನು ರಚಿಸಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಬಿಗಿಯಾದ ಕ್ರಮಗಳನ್ನು ಜಾರಿಗೊಳಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಇಲಾಖೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ರಾಜ್ಯದಲ್ಲಿ ಭ್ರೂಣ ಹತ್ಯೆ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಇವತ್ತಿನ ಕಾಲಘಟ್ಟದಲ್ಲೂ ಹೆಣ್ಣು ಮಕ್ಕಳ ಸುರಕ್ಷತೆ ಬಗ್ಗೆ ನಾವು ಜಾಗೃತಿ ಮೂಡಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ವಿಪರ್ಯಾಸ. ಹೆಣ್ಣು ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ' ಎಂದು ಹೇಳಿದರು.

'ಭ್ರೂಣ ಹತ್ಯೆಗಳನ್ನು ತಡೆಯಲು ಈಗಾಗಲೇ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕಾರ್ಯಪಡೆಗಳನ್ನು ರಚಿಸಲಾಗಿದೆ. ಭ್ರೂಣ ಹತ್ಯೆ ನಡೆಸುವವರ ವಿರುದ್ಧ ಕಾರ್ಯಾಚರಣೆಗಳನ್ನು ಇನ್ನಷ್ಟು ಹೆಚ್ಚಿಸಲಾಗುವುದು. ನಕಲಿ ವೈದ್ಯರು ಹಾಗೂ ಕ್ಲಿನಿಕ್‌ಗಳ ಮೇಲೆಯೂ ದಾಳಿ ನಡೆಸಲಾಗುತ್ತಿದೆ' ಎಂದರು.

ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ಆಯುಕ್ತ ಡಿ. ರಂದೀಪ್ ಹಾಗೂ ಅಧಿಕಾರಿಗಳು ಪಾಲ್ಗೊಂಡಿದ್ದರು.

ರಾತ್ರಿ ಮನೆಗೆ ನುಗ್ಗಿ ರೌಡಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಯಾ ಬಜಾರ್‌ನಲ್ಲಿ ರಾತ್ರಿ ವೇಳೆ ಮನೆಗೆ ನುಗ್ಗಿದ ದುಷ್ಕರ್ಮಿಗಳು, ರೌಡಿಗೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿ ಯಾಗಿದ್ದಾರೆ.

ಮಾಯಾ ಬಜಾರ್ ನಿವಾಸಿ ಸತೀಶ್ (30) ಕೊಲೆಯಾದ ರೌಡಿಶೀಟರ್. ಈ ಸಂಬಂಧ ವಿವೇಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಂಗಳವಾರ ರಾತ್ರಿ ಊಟ ಮಾಡಿ ಮನೆಯ ಹಾಲ್‌ನಲ್ಲಿ ಸತೀಶ್ ಮಲಗಿದ್ದರು. ಇವರ ಪತ್ನಿ ಹಾಗೂ ಮಕ್ಕಳು ಮತ್ತೊಂದು ಕೊಠಡಿಯಲ್ಲಿ ಮಲಗಿದ್ದರು. ತಡರಾತ್ರಿ 2.30ರ ಸುಮಾರಿಗೆ ಮನೆಗೆ ನುಗ್ಗಿದ ದುಷ್ಕರ್ಮಿಗಳು ಸತೀಶ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಹೊಟ್ಟೆ, ಕೈಕಾಲು ಸೇರಿದಂತೆ ದೇಹದ ಇತರೆ ಭಾಗಗಳ ಮೇಲೆ ಹಲ್ಲೆ ನಡೆಸಿದ ಪರಿಣಾಮ ಸತೀಶ್ ಗಂಭೀರವಾಗಿ ಗಾಯಗೊಂಡಿದ್ದರು. ಚೀರಾಟ ಕೇಳಿ ಪತ್ನಿ ಹಾಗೂ ಮಕ್ಕಳು ಎಚ್ಚರಗೊಂಡು ನೋಡಿದಾಗ ಸತೀಶ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಮಧ್ಯದಲ್ಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ವಿವಿಧ ಪೊಲೀಸ್ ಠಾಣೆಗಳಲ್ಲಿ ಸತೀಶ್ ವಿರುದ್ಧ ಕೊಲೆ ಯತ್ನ, ಡಕಾಯಿತಿಗೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿದ್ದವು. ವಿವೇಕನಗರ ಪೊಲೀಸ್ ಠಾಣೆಯಲ್ಲಿ ರೌಡಿಶೀಟರ್ ಪಟ್ಟಿ ತೆರೆಯಲಾಗಿತ್ತು. ಇತ್ತೀಚೆಗೆ ಸತೀಶ್ ಹಾಗೂ ಮತ್ತೊಂದು ಗುಂಪಿನ ನಡುವೆ ಗಲಾಟೆ ನಡೆದಿತ್ತು. ಸತೀಶ್ ಬೆದರಿಕೆ ಹಾಕಿದ್ದರು ಎನ್ನಲಾಗಿದೆ. ಇದೇ ದ್ವೇಷಕ್ಕೆ ಮನೆಗೆ ನುಗ್ಗಿ ಕೊಲೆ ಮಾಡಲಾಗಿದೆ ಎಂಬ ಶಂಕೆ ವ್ಯಕ್ತವಾಗಿದೆ.

'ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿದೆ. ಅಕ್ಕಪಕ್ಕದ ಮನೆಗಳು ಹಾಗೂ ಪ್ರಮುಖ ಜಂಕ್ಷನ್‌ನಲ್ಲಿ ಅಳವಡಿಸಿರುವ ಸಿಸಿ ಟಿ.ವಿ. ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ಸುಳಿವು ದೊರೆತಿದೆ' ಎಂದು ಪೊಲೀಸರು ಹೇಳಿದರು.

ಕಲ್ಲು ಎತ್ತಿಹಾಕಿ ಯುವಕನ ಕೊಲೆ: ಇಬ್ಬರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಯುವಕನ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ನಗರದ ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ರಾಮನಗರ ಟಿಪ್ಪುನಗರ ನಿವಾಸಿಗಳಾದ ಸೈಯದ್ ಇಲಿಯಾಸ್ (20) ಮತ್ತು ಜಹೀರ್ ಅಲಿಯಾಸ್ ಕಾಲು (20) ಬಂಧಿತರು. ಇಬ್ಬರು ಅರ್ಬಾಜ್ (26) ಎಂಬುವರನ್ನು ಕೊಲೆ ಮಾಡಿ ಪರಾರಿಯಾಗಿದ್ದರು.

'ಆರೋಪಿಗಳು ಹಾಗೂ ಕೊಲೆಯಾದ ಅರ್ಬಾಜ್ ರೇಷ್ಮೆ ನೇಯ್ಗೆ ಕೆಲಸ ಮಾಡಿಕೊಂಡಿದ್ದರು. ಈ ಮಧ್ಯೆ ಜಹೀರ್‌ನ ತಂಗಿಯನ್ನು ಅಬಾರ್ಜ್ ಚುಡಾಯಿಸುತ್ತಿದ್ದ. ಆತನ ತಾಯಿಯ ಬಗ್ಗೆಯೂ ಕೀಳಾಗಿ ಮಾತನಾಡಿದ್ದ. ಇದರಿಂದ ಕುಪಿತಗೊಂಡ ಜಹೀರ್, ಸೈಯದ್ ಇಲಿಯಾಸ್ ಜೊತೆ ನಡೆದಿರುವ ವಿಷಯ ತಿಳಿಸಿ ಕೊಲೆಗೆ ಸಂಚು ರೂಪಿಸಿದ್ದ' ಎಂದು ಪೊಲೀಸರು ಹೇಳಿದರು.

'ಜ.20ರಂದು ಅರ್ಬಾಜ್‌ಗೆ ಕರೆ ಮಾಡಿ ಮದ್ಯಪಾನ ಮಾಡಲು ಆಹ್ವಾನಿಸಿದ್ದ. ಬಳಿಕ, ಮೂವರು ರಾಮನಗರದ ಬಾರ್‌ವೊಂದರಲ್ಲಿ ಮದ್ಯ ಸೇವಿಸಿದ್ದರು. ಈ ವೇಳೆ ಜಹೀರ್ ತನ್ನ ತಂಗಿ ಮತ್ತು ತಾಯಿಯ ವಿಚಾರ ಪ್ರಸ್ತಾಪಿಸಿ ಅರ್ಬಾಜ್‌ನನ್ನು ಬೆದರಿಸಿದ್ದ. ಆಗ ಗಲಾಟೆ ನಡೆದು ರಾಮನಗರದ ರೈಲು ನಿಲ್ದಾಣ ಸಮೀಪದ ರೈಲ್ವೆ ಹಳಿ ಬಳಿ ಕರೆದೊಯ್ದು ಹಾಕಿ ಸ್ಟಿಕ್‌ನಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದರು. ಮೃತದೇಹದ ಗುರುತು ಸಿಗದಿರಲಿ ಎಂದು ಪೆಟ್ರೋಲ್ ಸುರಿದು ಸುಟ್ಟು ಹಾಕುವ ಪ್ರಯತ್ನ ಮಾಡಿದ್ದರು' ಎಂದು ರೈಲ್ವೆ ಪೊಲೀಸರು ಹೇಳಿದರು.

ಚಿನ್ನ ಕಳವು: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ನಡೆಯುತ್ತಿದ್ದ ಕಲ್ಯಾಣ ಮಂಟಪಕ್ಕೆ ನುಗ್ಗಿ, ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ದೋಚಿ ಪರಾರಿಯಾಗುತ್ತಿದ್ದ ಆರೋಪಿಯನ್ನು ಮಾಗಡಿ ರಸ್ತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಿಖಿಲ್ ಬಂಧಿತ ಆರೋಪಿ. ಆರೋಪಿಯಿಂದ ₹1.80 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಹೊಸ ಬಟ್ಟೆ ಧರಿಸಿ ಕಲ್ಯಾಣ ಮಂಟಪಕ್ಕೆ ಸಂಬಂಧಿಕರಂತೆ ತೆರಳಿ, ವಧು–ವರರಿಗೆ ಶುಭ ಕೋರುತ್ತಿದ್ದ. ಅದಾದ ಮೇಲೆ ವಧು ಅಥವಾ ವರರ ಕೊಠಡಿಗೆ ತೆರಳುತ್ತಿದ್ದ. ಅಲ್ಲಿದ್ದ ಚಿನ್ನಾಭರಣ ದೋಚಿ ಪರಾರಿಯಾಗುತ್ತಿದ್ದ' ಎಂದು ಪೊಲೀಸರು ಹೇಳಿದರು.

ಕಲ್ಯಾಣ ಮಂಟಪದಲ್ಲಿ ಆರೋಪಿ.

'ಪಶ್ಚಿಮ ಕಾರ್ಡ್ ರಸ್ತೆಯಲ್ಲಿರುವ ಜಲರಾಂ ಭವನ ಕಲ್ಯಾಣ ಮಂಟಪದಲ್ಲಿ ನ.28ರಂದು ರಾತ್ರಿ ವಿವಾಹ ಸಮಾರಂಭಕ್ಕೆ ತೆರಳಿದ್ದ. ಜನಸಂದಣಿಯಿದ್ದ ಸಮಯದಲ್ಲಿ ಮಧುವಿನ ಕೋಣೆಗೆ ನುಗ್ಗಿ ₹1.81 ಲಕ್ಷ ಬೆಲೆ ಬಾಳುವ ಚಿನ್ನಾಭರಣ ಕಳವು ಮಾಡಿದ್ದ' ಎಂದು ಪೊಲೀಸರು ಹೇಳಿದರು.

ರಾಮೇಗೌಡಗೆ 'ಅನಿಕೇತನ ಪ್ರಶಸ್ತಿ'

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 'ಅನಿಕೇತನ ಪ್ರಶಸ್ತಿ'ಗೆ ವಿಮರ್ಶಕ ಬೈರಮಂಗಲ ರಾಮೇಗೌಡ ಆಯ್ಕೆಯಾಗಿದ್ದಾರೆ.

ಬೈರಮಂಗಲ ರಾಮೇಗೌಡ

ಕರೀಗೌಡ ಬೀಚನಹಳ್ಳಿ

ಸೂರ್ಯಕೀರ್ತಿ

'ಕುವೆಂಪು ಚಿರಂತನ ಪ್ರಶಸ್ತಿ'ಗೆ ಸಾಹಿತಿ ಕರೀಗೌಡ ಬೀಚನಹಳ್ಳಿ ಹಾಗೂ 'ಯುವಕವಿ ಪ್ರಶಸ್ತಿ'ಗೆ ಸೂರ್ಯಕೀರ್ತಿ ಆಯ್ಕೆಯಾಗಿದ್ದಾರೆ. ಇದೇ 31ರಂದು ಆಯೋಜಿಸಿರುವ ಕುವೆಂಪು ಹಾಗೂ ಬೇಂದ್ರೆ ಅವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ಲೇಖಕಿ ಬಿ.ಟಿ. ಲಲಿತಾ ನಾಯಕ್ ಅಧ್ಯಕ್ಷತೆವಹಿಸುತ್ತಾರೆ ಎಂದು ಸಮಿತಿ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ತಿಳಿಸಿದ್ದಾರೆ.

ಬಾಲಕ ಹೈದರಾಬಾದ್‌ನಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ವೈಟ್‌ಫೀಲ್ಡ್‌ನಿಂದ ಭಾನುವಾರ ಮಧ್ಯಾಹ್ನ ನಾಪತ್ತೆಯಾಗಿದ್ದ 12 ವರ್ಷದ ಬಾಲಕ ಹೈದರಾಬಾದ್ ನಾಂಪಲ್ಲಿ ಮೆಟ್ರೊ ನಿಲ್ದಾಣದಲ್ಲಿ ಪತ್ತೆಯಾಗಿದ್ದು ಪೋಷಕರು ನಿಟ್ಟುಸಿರು ಬಿಟ್ಟಿದ್ದಾರೆ.

ಬಾಲಕ ಪತ್ತೆಯಾದ ಕೂಡಲೇ ಹೈದರಾಬಾದ್ ಪೊಲೀಸರು ಬಾಲಕನನ್ನು ರಕ್ಷಿಸಿ, ವೈಟ್‌ಫೀಲ್ಡ್ ಠಾಣೆ ಪೊಲೀಸರು ಹಾಗೂ ಪೋಷಕರಿಗೆ ಮಾಹಿತಿ ನೀಡಿದ್ದರು.

ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯ ವಿಜಯನಗರದಲ್ಲಿ ಬಾಲಕನ ಪೋಷಕರು ನೆಲೆಸಿದ್ದಾರೆ. ಬಾಲಕ ಶಾಲೆಯೊಂದರಲ್ಲಿ 6ನೇ ತರಗತಿಯಲ್ಲಿ ಓದುತ್ತಿದ್ದ. ಭಾನುವಾರ ಮಧ್ಯಾಹ್ನ ಟ್ಯೂಷನ್ ಸೆಂಟರ್‌ನಿಂದ ನಾಪತ್ತೆಯಾಗಿದ್ದ.

'ವೈಟ್‌ಫೀಲ್ಡ್‌ನ ಟ್ಯೂಷನ್ ಸೆಂಟರ್‌ಗೆ ಮಗನನ್ನು ತಂದೆ ಕಳುಹಿಸಿ, ಮನೆಗೆ ಬಂದಿದ್ದರು. ಮಧ್ಯಾಹ್ನ ಕರೆತರಲು ಹೋಗುವುದು ತಡವಾಗಿದ್ದರಿಂದ ಅವನು ನಾಪತ್ತೆಯಾಗಿದ್ದ' ಎನ್ನಲಾಗಿದೆ.

'ಟ್ಯೂಷನ್ ಸೆಂಟರ್‌ನಿಂದ ಮಾರತ್ತಹಳ್ಳಿವರೆಗೆ ಬಾಲಕ ನಡೆದು ಸಾಗಿದ್ದು ನಂತರ ಬಿಎಂಟಿಸಿ ಬಸ್ ಹತ್ತಿ ತೆರಳಿದ್ದು ಸಿಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ತಂದೆ ನೀಡಿದ ದೂರು ಆಧರಿಸಿ, ಪ್ರಕರಣ ದಾಖಲು ಮಾಡಿಕೊಂಡಿದ್ದ ವೈಟ್‌ಫೀಲ್ಡ್ ಠಾಣೆ ಪೊಲೀಸರು, ನಾಲ್ಕು ತಂಡ ರಚಿಸಿ ಬಾಲಕನ ಪತ್ತೆಗೆ ಕಾರ್ಯಾಚರಣೆ ನಡೆಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಬಾಲಕ ಅರಿಶಿಣ ಬಣ್ಣದ ಟೀ–ಶರ್ಟ್ ಧರಿಸಿದ್ದ. ಬಾಲಕ ಒಂಟಿಯಾಗಿ ತೆರಳಿದ್ದು, ಮಾರತ್ತಹಳ್ಳಿ, ಯಮಲೂರು ಮತ್ತು ಮೆಜೆಸ್ಟಿಕ್‌ನಲ್ಲಿರುವ ವಿವಿಧ ಸಿಸಿ ಟಿ.ವಿ ಕ್ಯಾಮೆರಾಗಳಲ್ಲಿ ದೃಶ್ಯ ಸೆರೆಯಾಗಿತ್ತು.

ಪೆನ್ನು ಮಾರಾಟ: ಬಾಲಕನ ಕೈಯಲ್ಲಿ ಹಣ ಇರಲಿಲ್ಲ. ಹಣಕ್ಕಾಗಿ ತನ್ನ ಬಳಿಯಿದ್ದ ಪಾರ್ಕರ್ ಪೆನ್ನು ಮಾರಾಟ ಮಾಡಿರುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಮೂಲಗಳು ತಿಳಿಸಿವೆ.

'ಯಾವ ಕಾರಣಕ್ಕೆ ಬಾಲಕ ನಾಪತ್ತೆಯಾಗಿದ್ದ ಎಂಬುದು ಸ್ಪಷ್ಟವಾಗಿಲ್ಲ. ಬಾಲಕ ಸುರಕ್ಷಿತವಾಗಿದ್ದು ಹೈದರಾಬಾದ್‌ಗೆ ತಂದೆ ತೆರಳಿದ್ದಾರೆ' ಎಂದು ಪೊಲೀಸರು ಹೇಳಿದರು.

ಅರಣ್ಯ ಇಲಾಖೆಯ ಅಧಿಕಾರಿಗಳು ರೈತರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ರೈತರು ಕಗ್ಗಲೀಪುರ ಅರಮನೆ ಮೈದಾನದಲ್ಲಿ ಪ್ರತಿಭಟನಾ ಸಭೆ ನಡೆಸಿದರು

ಅರಣ್ಯಾಧಿಕಾರಿಗಳ ಕಿರುಕುಳ ರೈತ ಸಂಘದಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಭಾವಿಗಳು ಅರಣ್ಯದಿಂದಲೇ ಮರ ಕಳವು ಮಾಡಿದರೂ ಕಣ್ಣುಮುಚ್ಚಿ ಕುಳಿತಿರುವ ಅರಣ್ಯಾಧಿಕಾರಿಗಳು ರೈತರ ಜಮೀನಿನ ಮೇಲೆ ಕಣ್ಣು ಹಾಕಿದ್ದಾರೆ ಎಂದು ಕಗ್ಗಲೀಪುರ ಸೇರಿದಂತೆ ವಿವಿಧ ಗ್ರಾಮಗಳ ಜನರು ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯ ಇಲಾಖೆಯ ಅಧಿಕಾರಿಗಳು ರೈತರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಕಗ್ಗಲೀಪುರ ಅರಮನೆ ಮೈದಾನದಲ್ಲಿ ರೈತರು ಪ್ರತಿಭಟನಾ ಸಭೆ ನಡೆಸಿದರು.

ಗಿರಿಗೌಡದೊಡ್ಡಿ, ಸುಂಕದಕಟ್ಟೆ, ಮುಕೂಡ್ಲು, ಸೋಮನಹಳ್ಳಿ, ರಾಯರದೊಡ್ಡಿ, ರಾವುಗೋಡ್ಲು, ಕುಂಚಿಗೆರೆಪಾಳ್ಯ, ವಾಸುದೇವಪುರ, ಗುಟ್ಟೆಪಾಳ್ಯ, ನೆಟ್ಟಿಗೆರೆ, ಗುಳಕಮಳೆ, ವಡ್ಡರಪಾಳ್ಯ, ನಲ್ಲಕ್ಕನದೊಡ್ಡಿ, ಕಗ್ಗಲೀಪುರ, ಸೋಮಹಳ್ಳಿ, ನೆಲಗುಳಿ, ತರಳು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ರೈತರನ್ನು ಒಕ್ಕಲೆಬ್ಬಿಸಲು ಅರಣ್ಯ ಇಲಾಖೆ ಒತ್ತಡ ಹಾಕುತ್ತಿದೆ. ತಾತಂದಿರ ಕಾಲದಿಂದಲೂ ಪಹಣಿ ಖಾತೆ ಇದ್ದರೂ ಅರಣ್ಯ ಭೂಮಿ ಎಂದು ನೋಟಿಸ್ ನೀಡುತ್ತಿದೆ. ಬೇರೆ ಕಡೆಗೆ ನಾವು ಹೋಗಲೇಬೇಕಿದ್ದರೆ ಒಳ್ಳೆಯ ಪ್ರದೇಶದಲ್ಲಿ ಜಮೀನು ನೀಡಿ ಎಂದು ಆಗ್ರಹಿಸಿದರು.

ಅಧಿಕಾರಿಗಳಿಗೆ ಅನ್ನ ತಿನ್ನುವಾಗ, ಇದನ್ನು ರೈತರು ನೀಡಿದ್ದು ಎನ್ನುವ ನೆನಪು ಇರಬೇಕು. ಒಳಗೆ ಅಂತಃಕರಣ ಇರಬೇಕು. ದಶಕಗಳಿಂದ ಪಹಣಿ ಇದ್ದರೂ ಕ್ಯಾತೆ ತೆಗೆಯಲು ನಿಮಗೆ ವೇತನ ನೀಡುತ್ತಿರುವುದಲ್ಲ ಎಂದು ತಿಳಿಸಿದರು.

ಅರಣ್ಯಾಧಿಕಾರಿಗಳು, ಗ್ರಾಮ ಪಂಚಾಯಿತಿ, ಸಂತ್ರಸ್ತರು, ಜನಪ್ರತಿನಿಧಿಗಳು ಸೇರಿ ಸಭೆ ನಡೆಸಿ ಸಮಸ್ಯೆಗಳ ಬಗ್ಗೆ ಚರ್ಚಿಸಲು ನಿರ್ಧರಿಸಲಾಯಿತು.

ರೈತ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ, ಸೋಮನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಯಶೋದಮ್ಮ ದಾಸಪ್ಪ, ಉಪಾಧ್ಯಕ್ಷ ಕೇಶವ, ನೆಲಗುಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಆರ್. ಸಂಪತ್‌ರಾಜು, ಸದಸ್ಯ ಶಿವದಾಳಯ್ಯ, ಮುಖಂಡರಾದ ಅಣ್ಣಯ್ಯಪ್ಪ, ಎ. ಶಿವಕುಮಾರ್, ನಾಗೇಶ್, ತಮ್ಮಯ್ಯ, ಅಂತೋನಿಸ್ವಾಮಿ, ನದೀಮ ಪಾಷ, ಸಿ. ಚಲುವಮೂರ್ತಿ, ಗುಂಡಪ್ಪ ಭಾಗವಹಿಸಿದ್ದರು.

ನಗರದಲ್ಲಿ ಇಂದು

ರಾಷ್ಟ್ರೀಯ ಪ್ರವಾಸೋದ್ಯಮದ ದಿನಾಚರಣೆ: ಅತಿಥಿಗಳು: ಎಚ್. ಕೆ. ಪಾಟೀಲ, ಮಹಮ್ಮದ್ ಫಾರೂಕ್, ಕಮಲಾ ಬಾಯಿ ಬಿ., ಆಯೋಜನೆ ಮತ್ತು ಸ್ಥಳ: ಸೇಂಟ್ ಕ್ಲಾರೆಟ್ ಕಾಲೇಜು, ಜಾಲಹಳ್ಳಿ, ಬೆಳಿಗ್ಗೆ 9.30

'ಗಣರಾಜ್ಯದ ರಕ್ಷಣೆ' ಪ್ರಜಾಪ್ರಭುತ್ವದಲ್ಲಿ ಭಾರತದ ಭವಿಷ್ಯ: ಪರಕಾಲ ಪ್ರಭಾಕರ್, ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ಸ್ ಕಾಲೇಜ್ ಆಫ್ ಕಾಮರ್ಸ್, ಬ್ರಿಗೇಡ್ ರಸ್ತೆ, ಬೆಳಿಗ್ಗೆ 10.30

ಸಂಗೀತೋತ್ಸವ: ಯುಗಳ ಗಾಯನ: ತ್ರಿವೇಣಿ, ಕವಿತ, ಪಿಟೀಲು: ಅರ್ಜುನ್ ದಿನಕರ್, ಮೃದಂಗ: ಬಿ.ಎಸ್. ಪ್ರಶಾಂತ್, ಖಂಜೀರಾ: ಜಿ.ಆರ್. ಹರಿಶ್ಚಂದ್ರ, ಘಟ: ಬಿ.ಎಸ್. ರಘುನಂದನ್, ಗಾಯನ: ಆರ್.ಕೆ. ಪದ್ಮನಾಭ, ಪಿಟೀಲು: ಎಸ್. ಯಶಸ್ವಿ, ಮೃದಂಗ: ಸಿ. ಚೆಲುವರಾಜು, ಖಂಜೀರಾ: ಲತಾ ರಾಮಾಚಾರ್, ಘಟ: ಎನ್. ಗುರುಮೂರ್ತಿ, ಆಯೋಜನೆ: ಸದ್ಗುರು ಶ್ರೀ ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯ ಟ್ರಸ್ಟ್, ಸ್ಥಳ: ಶಂಕರಮಠ, ಚಾಮರಾಜಪೇಟೆ, ಸಂಜೆ 5

'ಫ್ಯೂಷನ್ ಸಂಗೀತ ಮತ್ತು ನೃತ್ಯೋತ್ಸವ': 'ಲಕ್ಷ್ಯಾ ಕ್ವಾರ್ಟೆಟ್' ಪಿಟೀಲು: ಕೆ.ಜೆ. ದಿಲೀಪ್, ಗಾಯನ, ಪಿಟೀಲು: ಎಸ್. ದಿಲೀಪ್, ಪಿಯಾನೊ: ಅಮನ್ ಮಹಾಜನ್, ತಾಳವಾದ್ಯ: ಸುನಾದ್ ಆನೂರು, 'ಸಂಯಾನ': ಜಯದೇವನ ಗೀತಗೋವಿಂದದ ಆಧಾರದ ಮೇಲೆ ಕೂಚಿಪುಡಿ, ಒಡಿಸ್ಸಿ ಮತ್ತು ಭರತನಾಟ್ಯ ಪ್ರದರ್ಶನ: ವಿದ್ಯಾ ಅಂಗಾರ, ಗೌರಿ ಸಾಗರ್, ಶುಭಾ ನಾಗರಾಜನ್, ಅತಿಥಿಗಳು: ಘನಶ್ಯಾಮ್ ಅಗರ್‌ವಾಲ್, ವಿಶ್ವೇಶ್ವರ್ ಭಟ್, ಆಯೋಜನೆ: ಇನ್ಫೊಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ನಾಟ್ಯ ತರಂಗಿಣಿ–2024: ಉದ್ಘಾಟನೆ: ಎಸ್.ಎಲ್. ಕೃಷ್ಣಮೂರ್ತಿ, ಅತಿಥಿಗಳು: ಎಸ್.ಟಿ. ಸೋಮಶೇಖರ್, ವಿಶ್ವನಾಥ್ ಕೆ.ವಿ., ರಾಜೇಂದ್ರ ಕುಮಾರ್ ಕೆ.ಟಿ., ಅಭಿಜಿತ್, ಅನೀಶ್ ಪೂಜಾರಿ, ಸತೀಶ ಎಂ. ಹೊಸಳ್ಳಿ, ವೇಣುಗೋಪಾಲ್, ಆಯೋಜನೆ ಮತ್ತು ಸ್ಥಳ: ಅನೂಪಮ ವಿದ್ಯಾಮಂದಿರ, ಪೀಣ್ಯ 2ನೇ ಹಂತ, ಸಂಜೆ 5.30

'ಷೇಕ್ಸ್‌ಪಿಯರ್‌ನ ಶ್ರೀಮತಿ' ಏಕವ್ಯಕ್ತಿ ಪ್ರದರ್ಶನ: ಪ್ರಸ್ತುತಿ: ಲಕ್ಷ್ಮೀ ಚಂದ್ರಶೇಖರ್, ರಚನೆ: ಉದಯ ಇಟಗಿ, ವಿನ್ಯಾಸ ಮತ್ತು ನಿರ್ದೇಶನ: ವಿಶ್ವರಾಜ ಪಾಟೀಲ್, ಸೆಟ್ಸ್ ಮತ್ತು ಪ್ರಾಪ್ಸ್: ವಿಶ್ವನಾಥ ಮಂಡಿ, ವೇಷಭೂಷಣ: ಮಂಗಳ ಎನ್., ಶಿಲ್ಪಾ, ಧ್ವನಿ: ಗಜಾನನ ಟಿ. ನಾಯಕ್, ಬೆಳಕು: ಮುದ್ದಳ ರಟ್ಟೇಹಳ್ಳಿ, ಮೇಕಪ್: ರಾಮಕೃಷ್ಣ ಕನ್ನರಪಾಡಿ, ರಂಗಪ್ರಬಂಧನ: ಗೌತಮ್ ಉಪಾಧ್ಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 4ರಿಂದ

'ಆರಂಭ' ಸಂಗೀತೋತ್ಸವ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಟಿ.ಎಸ್. ನಾಗಾಭರಣ, ಗುರುಕಿರಣ್, ಗಾಯನ: ಸಾಕ್ಷಿ ಜಗದೀಶ್, ಭಾರ್ಗವಿ ಎಚ್.ಸಿ., ಮೋಹಿತ್ ಪಿ., ಆಯೋಜನೆ: ಅಶ್ವಗಾನ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6

ಜಾನಪದ ರಸಸಂಜೆ ಸಿರಿಸಂಪಿಗೆ 'ಹುಣ್ಣಿಮೆ ಹಾಡು': ಅತಿಥಿಗಳು: ಗೊ.ರು. ಚನ್ನಬಸಪ್ಪ, ಬಿ.ಕೆ. ಶಿವರಾಂ, ಬಾಲಚಂದ್ರ, ಗಾಯನ: ವೇಮಗಲ್ ನಾರಾಯಣಸ್ವಾಮಿ, ಕೋಲಾರ ರಾಜಪ್ಪ, ಸವಿತಾ ಗಣೇಶ್ ಪ್ರಸಾದ್, ಕಡಬಗೆರೆ ಮುನಿರಾಜು, ಜಯಂತಿ ಶ್ರೀನಿವಾಸ್, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

ಯಾಮಿನಿ–2024: ಗಾಯನ: ಬೇಗಂ ಪರ್ವಿನ್ ಸುಲ್ತಾನ, ಮಲ್ಲಾಡಿ ಬ್ರದರ್ಸ್, ಕೊಳಲು: ಪ್ರವೀಣ್ ಗೋಡ್ಖಿಂಡಿ, ಪಿಟೀಲು: ಎ. ಕನ್ಯಾಕುಮಾರಿ, ಆಯೋಜನೆ: ಸ್ಪಿಕ್ ಮೆಕೆ, ಸ್ಥಳ: ಐಐಎಂಬಿ, ಬಿಳೇಕಹಳ್ಳಿ, ಬನ್ನೇರುಘಟ್ಟ ರಸ್ತೆ, ಸಂಜೆ 6.30

'ಕನ್ನಡ ಪದಗಳ ಬಳಕೆ ಮತ್ತು ರಕ್ಷಣೆ' ಕುರಿತು ಉಪನ್ಯಾಸ: ಕಾಕೋಳು ಶೈಲೇಶ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ನೀಲಿ ಪರದೆ' ಮೂರು ಕನ್ನಡ ಕಿರುಚಿತ್ರಗಳ ಪ್ರದರ್ಶನ: ಗೋಷ್ಠಿಯಲ್ಲಿ: ಮಣಿ, ಸೂರ್ಯ ಸಾಥಿ, ಎಂ.ಕೆ. ಅಭಿಲಾಷ್, ಪ್ರದರ್ಶನಗೊಳ್ಳುವ ಕಿರುಚಿತ್ರಗಳು: ಶವಗಳು, ಒಳಬರಲೇ?, ಕೂಕ್ ಆ?, ಆಯೋಜನೆ: ನೀಲಾವರಣ, ಸ್ಥಳ: ಗೋಥೆ ಇನ್‌ಸ್ಟಿಟ್ಯೂಟ್, ಮ್ಯಾಕ್ಸ್ ಮುಲ್ಲರ್ ಭವನ, ಇಂದಿರಾನಗರ, ಸಂಜೆ 6.30

ಹರಿದಾಸ ವಾಣಿ: ಗಾಯನ: ಆದಿತ್ಯ ಶ್ರೀನಿಧಿ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸುಗಮ ಸಂಚಾರ: ಹಣ ಬಿಡುಗಡೆಗೆ ನಕಾರ

ವಾಹನ ದಟ್ಟಣೆ ನಿವಾರಣೆಗೆ ನೂರಾರು ಕೋಟಿ ಮೊತ್ತದ ಯೋಜನೆಗಳು ಬಿಬಿಎಂಪಿ ಬಜೆಟ್ ಘೋಷಣೆಯಲ್ಲೇ ಭದ್ರ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ಸುಗಮ ಸಂಚಾರಕ್ಕೆ ₹700 ಕೋಟಿ ಮೊತ್ತದ ಹತ್ತಾರು ಯೋಜನೆಗಳನ್ನು ಬಿಬಿಎಂಪಿ ಬಜೆಟ್‌ನಲ್ಲಿ ಘೋಷಿಸಿದಾಗ, ವಾಹನ ದಟ್ಟಣೆ ಒಂದಷ್ಟು ನಿಯಂತ್ರಣಕ್ಕೆ ಬರಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಈ ಯೋಜನೆಗಳೆಲ್ಲ ಇನ್ನೂ ಬಜೆಟ್‌ನಲ್ಲೇ ಉಳಿದಿವೆ.

ನಗರದ ವಾಹನ ದಟ್ಟಣೆಯನ್ನು ಹೆಚ್ಚಿನ ಮಟ್ಟದಲ್ಲಿ ಕಡಿತಗೊಳಿಸಲು ಹೊಸ ಮೇಲ್ಸೇತುವೆ, ಕೆಳಸೇತುವೆಗಳ ನಿರ್ಮಾಣ ಯೋಜನೆಗಾಗಿಯೇ ₹210 ಕೋಟಿ ಮೀಸಲಿಡಲಾಗಿತ್ತು. ಜೆ.ಸಿ. ರಸ್ತೆ, ಕನಕಪುರ ರಸ್ತೆ ಜಂಕ್ಷನ್ ಸೇರಿದಂತೆ ವಿವಿಧೆಡೆ ಈ ಯೋಜನೆಗಳು ಆರಂಭವಾಗುವ ಸೂಚನೆ ನೀಡಲಾಗಿತ್ತು. ಆದರೆ, ಒಂದೇ ಒಂದು ಮೇಲ್ಸೇತುವೆ ಅಥವಾ ಕೆಳಸೇತುವೆಯ ವಿಸ್ತೃತ ಯೋಜನಾ ವರದಿಯೂ (ಡಿಪಿಆರ್) ಇನ್ನೂ ಅಂತಿಮವಾಗಿಲ್ಲ. ಯಾವ ರಸ್ತೆಯಲ್ಲಿ ಯಾವ 'ಸೇತುವೆ'ಗಳು ಆಗಬೇಕೆಂಬುದನ್ನೂ ಬಿಬಿಎಂಪಿ ಅಂತಿಮಗೊಳಿಸಿಲ್ಲ.

ಹೊಸ ಮೇಲ್ಸೇತುವೆಗಳು ಆರಂಭವಾಗದಿರುವುದು ಒಂದೆಡೆಯಾದರೆ, ಪ್ರಗತಿಯಲ್ಲಿರುವ ಮೇಲ್ಸೇತುವೆಗಳ ನಿರ್ಮಾಣ ಕಾಮಗಾರಿ ಆಗಾಗ್ಗೆ ತಿಂಗಳುಗಟ್ಟಲೆ ಸ್ಥಗಿತಗೊಂಡು ನಾಗರಿಕರಿಗೆ ಕಿರಿಕಿರಿ ಉಂಟು ಮಾಡುತ್ತಲೇ ಇವೆ. ಇದರಿಂದ ನಗರದ ಹಲವು ಭಾಗಗಳಲ್ಲಿ ಸಂಚಾರ ದಟ್ಟಣೆಯ ಸಮಸ್ಯೆ ಹೆಚ್ಚಾಗುತ್ತಲೇ ಇದೆ.

ಮೇಲ್ಸೇತುವೆಗಳ ಕಾಮಗಾರಿ ಆಗಾಗ ಸ್ಥಗಿತಗೊಳ್ಳಲು ಭೂಸ್ವಾಧೀನ ವಿಳಂಬ, ಬೆಸ್ಕಾಂ, ಜಲಮಂಡಳಿ ಕೆಲಸಗಳು ಕಾರಣವಾದರೂ ಇದಕ್ಕಿಂತಲೂ ಪ್ರಮುಖ ಸಮಸ್ಯೆ ಎಂದರೆ ಹಣ ಬಿಡುಗಡೆಯಾಗದಿರುವುದು. ಬಜೆಟ್‌ನಲ್ಲಿ ಹಣ ಹಂಚಿಕೆಯಾಗಿದ್ದರೂ, ಬಿಡುಗಡೆಗೆ ಅಧಿಕಾರಿಗಳು ಮನಸ್ಸು ಮಾಡಿಲ್ಲ.

'ಯಲಹಂಕ ಮೇಲ್ಸೇತುವೆ ಕಾಮಗಾರಿಗೆ ನಿಗದಿತ ಅವಧಿಯಲ್ಲಿ ಹಣ ಬಿಡುಗಡೆ ಮಾಡಿಲ್ಲ, ಬಿಲ್ ನೀಡಿ ಎರಡು ಮೂರು ತಿಂಗಳು ಹಣವನ್ನೇ ನೀಡಿಲ್ಲ. ಹೀಗಾಗಿ ಇನ್ನೂ ಒಂದೂವರೆ ವರ್ಷ ಕಾಮಗಾರಿ ಮುಗಿಸಲು ಸಮಯ ಬೇಕು' ಎಂದು ಗುತ್ತಿಗೆದಾರರೇ ಪತ್ರ ಬರೆದಿದ್ದಾರೆ. ರಾಜರಾಜೇಶ್ವರಿ ನಗರ ಆರ್ಚ್ ಬಳಿಯ ಮೇಲ್ಸೇತುವೆ ಕಾಮಗಾರಿ ವಿಧಾನಸಭೆ ಚುನಾವಣೆ ಫಲಿತಾಂಶದ ನಂತರ ಸ್ಥಗಿತಗೊಂಡಿದೆ. ಪ್ರತಿನಿತ್ಯವೂ ಇಲ್ಲಿ ವಾಹನ-ದಟ್ಟಣೆಯಿಂದ ನಾಗರಿಕರು ಹೈರಾಣರಾಗುತ್ತಿದ್ದಾರೆ.

ಈಜಿಪುರ ಮೇಲ್ಸೇತುವೆ ಕಾಮಗಾರಿ ಸ್ಥಗಿತಗೊಂಡು ಎರಡು ವರ್ಷಗಳಾಗಿತ್ತು. ಕೊನೆಗೆ ಟೆಂಡರ್ ಅಂತಿಮವಾಗಿ ಗುತ್ತಿಗೆ ನೀಡಿ ಎರಡು ತಿಂಗಳಾಗಿದ್ದರೂ ಆ ಗುತ್ತಿಗೆದಾರರಿಗೆ ಮುಂಗಡ ಹಣವನ್ನೂ ಬಿಬಿಎಂಪಿ ಪಾವತಿಸಿಲ್ಲ. ಜೊತೆಗೆ ಭೂಸ್ವಾಧೀನದ ಪ್ರಕ್ರಿಯೆಯನ್ನೂ ನಡೆಸಿಲ್ಲ.

ರೈಲ್ವೆ ಹಳಿಗಳಿಂದ ನಗರದ ಮಧ್ಯಭಾಗದಲ್ಲೇ ಹಲವು ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗುತ್ತಿದೆ. ಇದನ್ನು ನಿವಾರಿಸಲು ಮೇಲ್ಸೇತುವೆ, ಕೆಳಸೇತುವೆ ನಿರ್ಮಿಸಲು ಯೋಜಿಸಿ, ಬಿಬಿಎಂಪಿ ಬಜೆಟ್‌ನಲ್ಲಿ ಹಣ ಹಂಚಿಕೆ ಮಾಡಲಾಗಿದೆ. ಆದರೂ ಯೋಜನೆ ಕಾರ್ಯಗತಕ್ಕೆ ಬಿಬಿಎಂಪಿ ಮುಂದಾಗಿಲ್ಲ. ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳ ನಿರ್ವಹಣೆಗೆಂದೇ ಕೋಟ್ಯಂತರ ರೂಪಾಯಿ ಮೀಸಲಿಡಲಾಗಿದೆ.

ಬಜೆಟ್‌ನಲ್ಲಿ ಅನುದಾನ ಹಂಚಿಕೆ (ಕೋಟಿಗಳಲ್ಲಿ)

ಮೇಲ್ಸೇತುವೆ, ಕೆಳ ಸೇತುವೆಗಳ ನಿರ್ಮಾಣ	₹210
ಪ್ರಗತಿಯಲ್ಲಿರುವ 9 ಮೇಲ್ಸೇತುವೆಗಳ ಕಾಮಗಾರಿ	₹195
75 ಜಂಕ್ಷನ್‌ಗಳ ಅಭಿವೃದ್ಧಿ	₹150
ಮುಖ್ಯ– ಉಪ ಮುಖ್ಯರಸ್ತೆಗಳ ನಿರ್ವಹಣೆ	₹60.10
10 ಹೊಸ ಪ್ಲಾಜಾ ಅಭಿವೃದ್ಧಿಗೆ	₹50
ಬೀದಿಬದಿ ವ್ಯಾಪಾರಿಗಳ ವಲಯ	₹25
ರೈಲ್ವೆ ಮೇಲ್ಸೇತುವೆ, ಕೆಳಸೇತುವೆ ನಿರ್ಮಾಣ	₹23.11
ಅಂಡರ್ ಗ್ರೌಂಡ್ ಪಾರ್ಕಿಂಗ್ ನಿರ್ಮಾಣ	₹5

ಭಾಷಣವೇ ಭೂಷಣ ಅಭಿವೃದ್ಧಿ ಗೌಣ

ನಿಧಾನಗತಿಯಲ್ಲಿ ಕಾಮಗಾರಿ ಸಾಗುತ್ತಿರುವ ಯಲಹಂಕ ಮೇಲ್ಸೇತುವೆ

ಎಂಟು ತಿಂಗಳಿಂದ ಕಾಮಗಾರಿ ನಡೆಯದೆ ಅವಶೇಷದಂತೆ ಕಾಣುತ್ತಿರುವ ಮೈಸೂರು ರಸ್ತೆ–ರಾಜರಾಜೇಶ್ವರಿನಗರ ಆರ್ಚ್ ಸಮೀಪದ ಮೇಲ್ಸೇತುವೆ

ಸೌಂದರ್ಯ ಕಾಣದ ಜಂಕ್ಷನ್‌ಗಳು!

ನಗರದ ಜಂಕ್ಷನ್‌ಗಳನ್ನು ವಿಶ್ವಮಟ್ಟದ ಸೌಲಭ್ಯಗಳೊಂದಿಗೆ ಸೌಂದರ್ಯೀಕರಣ ಮಾಡುವ ಯೋಜನೆಗೆ ಬಜೆಟ್‌ಗಿಂತ ಮುನ್ನವೇ ಚಾಲನೆ ದೊರೆತಿತ್ತು. ಅದಕ್ಕೆ ಬಜೆಟ್‌ನಲ್ಲಿ ₹150 ಕೋಟಿ ಹಣವನ್ನು ಹಂಚಿಕೆ ಮಾಡಲಾಗಿದೆ. ಈವರೆಗೂ ಜಂಕ್ಷನ್‌ಗಳ ಅಭಿವೃದ್ಧಿಯ ಟೆಂಡರ್ ಕರೆಯಲಾಗಿಲ್ಲ.

ಕಿಯೋಸ್ಕ್, ವಿಶ್ರಾಂತಿ ತಾಣ, ಕುಡಿಯುವ ನೀರು, ಮೊಬೈಲ್ ಚಾರ್ಜಿಂಗ್ ಸ್ಟೇಷನ್, ಓದಲು ಸ್ಥಳಾವಕಾಶ, ಮಕ್ಕಳ ಆಟದ ತಾಣ, ಹೈಟೆಕ್ ಶೌಚಾಲಯ, ಆಟೊರಿಕ್ಷಾ ಪಿಕ್‌ಅಪ್ ಝೋನ್, ಝೀಬ್ರಾ ಕ್ರಾಸಿಂಗ್, ಪಾದಚಾರಿ ಸಿಗ್ನಲ್, ರ್‍ಯಾಂಪ್ ಸೇರಿದ ಸೌಲಭ್ಯವಿರುವ 10 ಪ್ಲಾಜಾ ನಿರ್ಮಿಸಲು ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಶಿವಾನಂದ ವೃತ್ತದ ಬಳಿ ಇನ್ನೂ ಕಾಮಗಾರಿ ಹಂತದಲ್ಲಿರುವ ಒಂದು ಪ್ಲಾಜಾ ಬಿಟ್ಟರೆ ಇನ್ನುಳಿದ ಒಂಬತ್ತು ಪ್ಲಾಜಾ ಎಲ್ಲಿ ಬರುತ್ತವೆ ಎಂಬ ಪ್ರಕಟಣೆಯನ್ನೂ ಬಿಬಿಎಂಪಿ ಇನ್ನೂ ಘೋಷಿಸಿಲ್ಲ.

ಪರಿತಪಿಸುತ್ತಿರುವ ಬೀದಿ ಬದಿ ವ್ಯಾಪಾರಿಗಳು

ರಸ್ತೆ, ಪಾದಚಾರಿ ಮಾರ್ಗದಲ್ಲಿ ಬೀದಿ ಬದಿ ವ್ಯಾಪಾರಿಗಳಿಂದ ಸಂಚಾರಕ್ಕೆ ತೊಂದರೆಯಾಗುತ್ತದೆ ಎಂದು ತೆರವು ಕಾರ್ಯ ಕೈಗೊಳ್ಳಲಾಗುತ್ತಿದೆ. ಇದು ಉತ್ತಮ ಕಾರ್ಯವಾದರೂ, ಅವರಿಗೆ ಪ್ರತ್ಯೇಕ ಸೌಲಭ್ಯ ಕಲ್ಪಿಸುವ ಕೆಲಸಕ್ಕೆ ಮುನ್ನುಡಿಯನ್ನೂ ಬರೆಯಲಾಗುತ್ತಿಲ್ಲ. ಬೀದಿ ಬದಿ ವ್ಯಾಪಾರಿಗಳಿಗೆ ಪ್ರತ್ಯೇಕ ವಲಯ ಸ್ಥಾಪಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಿ ಅದಕ್ಕೆ ಹಣವನ್ನೂ ಹಂಚಿಕೆ ಮಾಡಲಾಗಿದೆ. ಆದರೆ ಈವರೆಗೆ ಬೀದಿಬದಿ ವ್ಯಾಪಾರಿಗಳೊಂದಿಗೆ ಸ್ಥಳೀಯ ಮಟ್ಟದಲ್ಲಿ ಸಭೆ ನಡೆಸಿ, ವ್ಯಾಪಾರ ನಡೆಸಲು ರಸ್ತೆಗಳನ್ನು ಗುರುತಿಸುವ ಕೆಲಸವನ್ನೂ ಅಧಿಕಾರಿಗಳು ಮಾಡಿಲ್ಲ. ಬೀದಿಬದಿ ವ್ಯಾಪಾರಿಗಳು ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ 'ಮುಂದಿನವಾರ ಸಭೆ ನಡೆಸಲಾಗುತ್ತದೆ' ಎಂಬ ಭರವಸೆ ಮಾತ್ರ ದೊರೆಯುತ್ತಿದೆ.

ಗುಬ್ಬಿ ತೋಟದಪ್ಪ ಜಂಕ್ಷನ್ ಮಾದರಿ

ಶೋಷಿತರ ಜಾಗೃತಿಗಾಗಿ 28ಕ್ಕೆ ಚಿತ್ರದುರ್ಗದಲ್ಲಿ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೋಷಿತರ ಜಾಗೃತಿಗಾಗಿ ಚಿತ್ರದುರ್ಗದಲ್ಲಿ ಇದೇ 28ರಂದು ರಾಜ್ಯಮಟ್ಟದ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಶೋಷಿತ ಸಮುದಾಯದ ಸಚಿವರು, ಮುಖಂಡರು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ' ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ತಿಳಿಸಿದೆ.

'ಸಮಾವೇಶದಲ್ಲಿ ದಲಿತ, ಹಿಂದುಳಿದ, ಅಲೆಮಾರಿ, ಆದಿವಾಸಿ, ಅಲ್ಪಸಂಖ್ಯಾತರು ಮತ್ತು ಜನಪರ ಸಂಘಟನೆಗಳ 10 ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದೆ' ಎಂದೂ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ, ಸಂಚಾಲಕರಾದ ಮಾವಳ್ಳಿ ಶಂಕರ್, ಎಣ್ಣೆಗೆರೆ ಆರ್. ವೆಂಕಟರಾಮಯ್ಯ ತಿಳಿಸಿದ್ದಾರೆ.

'ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ ಅವರ ಅವಧಿಯಲ್ಲಿ ರಾಜ್ಯದಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ವರದಿಯನ್ನು ಸ್ವೀಕರಿಸಿ, ಸಾರ್ವಜನಿಕ ಚರ್ಚೆಗೆ ಬಿಟ್ಟು ಅಂಗೀಕರಿಸಬೇಕು ಸೇರಿದಂತೆ 12 ಹಕ್ಕೊತ್ತಾಯಗಳನ್ನು ಸಮಾವೇಶದಲ್ಲಿ ಮಂಡಿಸಲಾಗುವುದು' ಎಂದು ಅವರು ಹೇಳಿದ್ದಾರೆ.

'ಕೇಂದ್ರ ಸರ್ಕಾರ ದೇಶದಾದ್ಯಂತ ಜಾತಿವಾರು ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಬೇಕು, ಆರ್ಥಿಕ ದುರ್ಬಲ ವರ್ಗದವರಿಗೆ ಜಾರಿಗೊಳಿಸಿರುವ ಶೇ 10 ಮೀಸಲಾತಿ ರದ್ದುಗೊಳಿಸಬೇಕು, ಎಸ್‌ಸಿ, ಎಸ್‌ಟಿ, ಒಬಿಸಿ ಆದಾಯ ಮಿತಿ ಹೆಚ್ಚಿಸಬೇಕು, ಮಹಿಳಾ ರಾಜಕೀಯ ಮೀಸಲಾತಿ ಕಾಯ್ದೆ ಜಾರಿ ಮಾಡಬೇಕು, ಲೋಕಸಭೆ, ವಿಧಾನ ಸಭೆಗಳಲ್ಲಿ ಹಿಂದುಳಿದ ಜಾತಿಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ರಾಜಕೀಯ ಮೀಸಲಾತಿ ನೀಡುವ ಕಾನೂನು ರೂಪಿಸಬೇಕು, ಎಸ್‌ಸಿ, ಎಸ್‌ಟಿ ಜನಸಂಖ್ಯೆಗೆ ಅನುಗುಣವಾಗಿ ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಹೆಚ್ಚಿಸಬೇಕು ಮುಂತಾದ ಹಕ್ಕೊತ್ತಾಯ ಮಂಡಿಸಲಾಗುವುದು' ಎಂದೂ ತಿಳಿಸಿದ್ದಾರೆ.

ಶಿಲ್ಪಿ ಅರುಣ್ ಯೋಗಿರಾಜ್‌ಗೆ ಅದ್ಧೂರಿ ಸ್ವಾಗತ

ಬೆಂಗಳೂರು: ಅಯೋಧ್ಯೆಯಿಂದ ನಗರಕ್ಕೆ ಬುಧವಾರ ರಾತ್ರಿ ಆಗಮಿಸಿದ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಬಿಜೆಪಿ ಮುಖಂಡರು ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಅದ್ಧೂರಿಯಾಗಿ ಸ್ವಾಗತಿಸಿದರು.

ಬಾಲರಾಮನ ಮೂರ್ತಿಯ ಕೆತ್ತಿದ ಶಿಲ್ಪಿ ಅರುಣ್ ಅವರು, ಅಯೋಧ್ಯೆಯಿಂದ ವಿಮಾನದ ಮೂಲಕ ದೇವನಹಳ್ಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಬಿಜೆಪಿ ಮುಖಂಡರು, ವಿವಿಧ ಸಂಘಟನೆಗಳ ಸದಸ್ಯರು ಅವರಿಗೆ ಪುಷ್ಪಗುಚ್ಛ ನೀಡಿ, ಸಿಹಿ ತಿನಿಸಿ ಸಂಭ್ರಮಿಸಲಾಯಿತು.

'ಮೂರ್ತಿ ಕೆತ್ತನೆಗೆ ಅವಕಾಶ ಸಿಕ್ಕಿದ್ದು ನನ್ನ ಪುಣ್ಯ. ನಾನು ಕೆತ್ತಿದ ಮೂರ್ತಿಯೇ ಆಯ್ಕೆ ಆಗಿದ್ದು ನನ್ನ ಸಂಭ್ರಮನ್ನು ಹೆಚ್ಚಿಸುವಂತೆ ಮಾಡಿದೆ. ರಾಮಮಂದಿರ ನಿರ್ಮಾಣಕ್ಕೆ ಸಾಕಷ್ಟು ಮಂದಿ ಶ್ರಮಿಸಿದ್ದಾರೆ. ನನ್ನದು ಪುಟ್ಟ ಸೇವೆ' ಎಂದು ಅರುಣ್ ಈ ಸಂದರ್ಭದಲ್ಲಿ ಹೇಳಿದರು.

'ಪೀಪಲ್ಸ್ ಫೋರಂ ಫಾರ್ ಕರ್ನಾಟಕ ಎಜುಕೇಷನ್'ನಿಂದ ವರದಿ ಸಲ್ಲಿಕೆ

'ಎನ್‌ಇಪಿ ತಿರಸ್ಕಾರ: ವಿದ್ಯಾರ್ಥಿಗಳಿಗೆ ಹಿನ್ನಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಉಳಿಸಿಕೊಳ್ಳಬೇಕು. ಇಲ್ಲವಾದರೆ ನಮ್ಮ ವಿದ್ಯಾರ್ಥಿಗಳು ಸಾಕಷ್ಟು ಅನುಕೂಲಗಳಿಂದ ವಂಚಿತರಾಗುತ್ತಾರೆ ಮತ್ತು ಅವರ ಶೈಕ್ಷಣಿಕ ಭವಿಷ್ಯಕ್ಕೂ ಹಿನ್ನಡೆಯಾಗುತ್ತದೆ' ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಅವರು ಆತಂಕ ವ್ಯಕ್ತಪಡಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ– 2020 (ಎನ್‌ಇಪಿ) ಅನ್ನು ರಾಜ್ಯದಲ್ಲಿ ಮುಂದುವರಿಸುವಂತೆ ಒತ್ತಾಯಿಸಿ 'ಪೀಪಲ್ಸ್ ಫೋರಂ ಫಾರ್ ಕರ್ನಾಟಕ ಎಜುಕೇಷನ್' ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಸಿರುವ ಸಹಿ ಸಂಗ್ರಹದ ವರದಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಸಲ್ಲಿಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಕೇವಲ ರಾಜಕೀಯ ಕಾರಣಕ್ಕೆ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿ ತಿರಸ್ಕರಿಸಿದರೆ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಶೈಕ್ಷಣಿಕ ಪಾವಿತ್ರ್ಯ ಉಳಿಸಿಕೊಳ್ಳಬೇಕು. ಈ ಎಲ್ಲಾ ವಿಷಯಗಳನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ. ವರದಿ ಸ್ವೀಕರಿಸಿದ ರಾಜ್ಯಪಾಲರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರನ್ನು ಕರೆಸಿ ಚರ್ಚಿಸಲಾಗುವುದು' ಎಂದು ಭರವಸೆ ನೀಡಿದ್ದಾಗಿ ಅವರು ತಿಳಿಸಿದರು.

ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳ 168 ತಾಲ್ಲೂಕುಗಳಲ್ಲಿ ಸಹಿ ಸಂಗ್ರಹದ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. 2,630 ಶಾಲೆ, ಕಾಲೇಜುಗಳ 83,600 ಶಿಕ್ಷಕರು, ಆಡಳಿತ ಮಂಡಳಿ ಸದಸ್ಯರು, 26,980 ಪೋಷಕರು, 8,88,173 ವಿದ್ಯಾರ್ಥಿಗಳು ಅಭಿಯಾನದಲ್ಲಿ ಭಾಗವಹಿಸಿದ್ದರು ಎಂದು ಮಲ್ಲೇಪುರಂ ವಿವರಿಸಿದರು.

ಪ್ರೊ. ರವೀಂದ್ರ ರೇಷ್ಮೆ ಮಾತನಾಡಿ, 2017-18 ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರವೇ ಎನ್‌ಇಪಿ ಕರಡು ಪ್ರತಿಗೆ ಸಹಿ ಹಾಕುವ ಮೂಲಕ ಅನುಮೋದಿಸಿದ್ದರು. ವಿವಿಧ ಹಂತಗಳಲ್ಲಿ ಸಾಕಷ್ಟು ಸಭೆಗಳನ್ನು ಮಾಡಿ, ಚರ್ಚಿಸಿದ ನಂತರವೇ ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಕೊನೆಯ ಪತ್ರಕ್ಕೂ ಅಂದಿನ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ ಸಹಿ ಹಾಕಿದ್ದರು. ವಿಚಿತ್ರ ಎಂದರೆ, ಅಂದು ಅನುಮೋದನೆ ನೀಡಿದವರೇ ಇಂದು ಎನ್‌ಇಪಿ ತಿರಸ್ಕರಿಸಿ, ವಿರೋಧಿಸುತ್ತಿದ್ದಾರೆ. ಈ ನಿಲುವು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಅಪಚಾರ ಮಾಡಿದಂತೆ ಎಂದು ಹೇಳಿದರು.

ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ನೇತೃತ್ವದ ನಿಯೋಗ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಎನ್‌ಇಪಿ ಸಹಿ ಸಂಗ್ರಹದ ವರದಿಯನ್ನು ಸಲ್ಲಿಸಿತು. ನಿಯೋಗದಲ್ಲಿ ಮಾಜಿ ಸಚಿವ ಬಿ.ಸಿ.ನಾಗೇಶ್, ವಿಧಾನಪರಿಷತ್‌ನ ಮಾಜಿ ಸದಸ್ಯ ಅರುಣ್ ಶಹಾಪುರ, ಪ್ರೊ.ನಂದಿನಿ ಲಕ್ಷ್ಮೀಕಾಂತ್, ಪ್ರೊ.ವೀರೇಶ್ ಬಾಳಿಕಾಯ್, ಪ್ರೊ.ಸಂದೀಪ್ ಬೂದಿಹಾಳ್, ಡಾ.ಟಿ.ಎಂ.ಗಿರೀಶ್ ಇದ್ದರು

ಪದವಿಪೂರ್ವ ಶಿಕ್ಷಣದ 'ಅಸ್ಮಿತೆ'ಗೆ ತಜ್ಞರ ಸಾಥ್

ಸರ್ಕಾರ, ರಾಜ್ಯ ಶಿಕ್ಷಣ ನೀತಿ ಆಯೋಗಕ್ಕೆ ಮನವಿ ಸಲ್ಲಿಸಲು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣದ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಂಡು ಸಮಗ್ರ ಶಿಕ್ಷಣದ ಪರಿಕಲ್ಪನೆಯ ನೀತಿ ರೂಪಿಸಲು ಸರ್ಕಾರ ಹಾಗೂ ರಾಜ್ಯ ಶಿಕ್ಷಣ ನೀತಿ ಆಯೋಗಕ್ಕೆ ಮನವಿ ಸಲ್ಲಿಸಲು ಶಿಕ್ಷಣ ತಜ್ಞರು ಹಾಗೂ ಉಪನ್ಯಾಸಕರು ನಿರ್ಧರಿಸಿದರು.

ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಬುಧವಾರ ಹಮ್ಮಿಕೊಂಡಿದ್ದ 'ರಾಜ್ಯ ಶಿಕ್ಷಣ ನೀತಿಯಲ್ಲಿ ಪದವಿಪೂರ್ವ ಶಿಕ್ಷಣದ ಅಸ್ಮಿತೆ' ಕುರಿತ ಚಿಂತನಾ ಸಭೆಯಲ್ಲಿ ಒಕ್ಕೊರಲಿನ ಅಭಿಪ್ರಾಯ ವ್ಯಕ್ತವಾಯಿತು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, 'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡೆಗಳಿಂದಾಗಿ ಪದವಿಪೂರ್ವ ಶಿಕ್ಷಣ ಇತ್ತೀಚಿನ ದಿನಗಳಲ್ಲಿ ತನ್ನ ಅಸ್ಮಿತೆ ಕಳೆದುಕೊಳ್ಳುತ್ತಿದೆ. ಹಿಂದೆ ಒಂದೇ ವರ್ಷಕ್ಕೆ ಸೀಮಿತವಾಗಿದ್ದ ಪದವಿಪೂರ್ವ ಶಿಕ್ಷಣವನ್ನು ಎರಡು ವರ್ಷಗಳ ಅವಧಿಗೆ ನಿಗದಿ ಮಾಡುವ ಮುನ್ನ ಸಾಕಷ್ಟು ಚಿಂತನೆಗಳು ನಡೆದಿವೆ. ಇಂದು ಪರಿಸ್ಥಿತಿ ಬದಲಾಗಿದೆ. ಕೇಂದ್ರ ಪಠ್ಯಕ್ರಮ ಅನುಸರಿಸುವ ಶಾಲೆಗಳ ಸಂಖ್ಯೆ ಹೆಚ್ಚಾಗಿವೆ. ರಾಜ್ಯ ಸರ್ಕಾರವೂ ಪಬ್ಲಿಕ್ ಶಾಲೆಗಳ ಸಂಖ್ಯೆ ಹೆಚ್ಚಳ ಮಾಡುತ್ತಿದೆ. ಈಗಾಗಲೇ ಪದವಿಪೂರ್ವ ಪರೀಕ್ಷಾ ಮಂಡಳಿಯನ್ನು ವಿಲೀನಗೊಳಿಸಲಾಗಿದೆ. ಹಂತಹಂತವಾಗಿ ಪದವಿಪೂರ್ವ ಶಿಕ್ಷಣ ಅಸ್ತಿತ್ವ ಕಳೆದುಕೊಳ್ಳುತ್ತಿದೆ' ಎಂದರು.

ಶಿಕ್ಷಣ ತಜ್ಞ ನಿರಂಜನಾರಾಧ್ಯ ಮಾತನಾಡಿ, 'ಯಾವುದೇ ಶಿಕ್ಷಣ ನೀತಿಯನ್ನು ಬದಲಿಸುವ ಮೊದಲು ಸಾಕಷ್ಟು ಚರ್ಚೆಗಳು ನಡೆಯಬೇಕು. ವಿಮರ್ಶೆಗೆ ಒಳಪಡಿಸಬೇಕು. ಶಿಕ್ಷಣ ಕ್ಷೇತ್ರದ ಎಲ್ಲ ವಲಯಗಳ ಅಭಿಪ್ರಾಯ ಸಂಗ್ರಹಿಸಬೇಕು. ಈ ಯಾವ ಕೆಲಸಗಳನ್ನೂ ಮಾಡದೆ ರಾಷ್ಟ್ರೀಯ ಶಿಕ್ಷಣ ನೀತಿ–2020ನ್ನು ರೂಪಿಸಲಾಗಿದೆ. ಎನ್‌ಇಪಿಯಿಂದ ಏನೆಲ್ಲಾ ತೊಂದರೆಯಾಗಿದೆ ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ' ಎಂದು ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಎ.ಎಚ್.ನಿಂಗೇಗೌಡ ಅಧ್ಯಕ್ಷತೆ ವಹಿಸಿದ್ದರು. ಚಿಂತಕರಾದ ಜಿ. ರಾಮಕೃಷ್ಣ, ಶ್ರೀಪಾದ್ ಭಟ್, ಎಚ್.ಎಲ್. ಪುಷ್ಪಾ, ಎಲ್.ಎನ್. ಮುಕುಂದರಾಜ್, ತಿಮ್ಮಯ್ಯ ಪುರ್ಲೆ, ನಂದೀಶ್ ಕುಮಾರ್, ಆರ್. ರಾಜಗೋಪಾಲ್, ಪ್ರವೀಣ್ ಮಹಿಷಿ, ಸಂಧ್ಯಾ ಮೆನೆಂಜೆಸ್, ಗೋಪಾಲಕೃಷ್ಣ, ಎಸ್. ಬೈರೇಗೌಡ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಪದವಿಪೂರ್ವ ಶಿಕ್ಷಣ ಇತ್ತೀಚಿನ ದಿನಗಳಲ್ಲಿ ತನ್ನ ಅಸ್ಮಿತೆ ಕಳೆದುಕೊಳ್ಳುತ್ತಿದೆ
- ಶಿಕ್ಷಣ ನೀತಿ ಬದಲಿಸುವ ಮೊದಲು ಸಾಕಷ್ಟು ಚರ್ಚೆಗಳು ನಡೆಯಬೇಕು

ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಆಯೋಜಿಸಿದ್ದ ಸಭೆಯಲ್ಲಿ ಶ್ರೀಪಾದ್ ಭಟ್, ಎಲ್.ಎನ್. ಮುಕುಂದರಾಜ್, ಎಚ್.ಎಲ್. ಪುಷ್ಪಾ, ಜಿ.ರಾಮಕೃಷ್ಣ, ಬರಗೂರು ರಾಮಚಂದ್ರಪ್ಪ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'ಹಿಜಾಬ್ ನಿಷೇಧ ಹಿಂಪಡೆಯಿರಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ರಾಜ್ಯದಲ್ಲಿ ತರಗತಿಗಳಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧಿಸಿದ ವಿವಾದಾತ್ಮಕ ಆದೇಶವನ್ನು ಸರ್ಕಾರ ಹಿಂಪಡೆಯಬೇಕು' ಎಂದು ಬುಧವಾರ ಇಲ್ಲಿ ನಡೆದ ಕರ್ನಾಟಕ ರಾಜ್ಯ ಸುನ್ನೀ ಯುವಜನ ಸಂಘದ 30ನೇ ವಾರ್ಷಿಕ ಮಹಾಸಮ್ಮೇಳನ ಆಗ್ರಹಿಸಿತು.

ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಮುಸ್ಲಿಮರ ಮೀಸಲಾತಿ ಪ್ರಮಾಣವನ್ನು ಶೇ 4 ರಿಂದ ಶೇ7 ಕ್ಕೆ ಹೆಚ್ಚಿಸಬೇಕು. ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಸಿದ್ಧಪಡಿಸಿರುವ ಜಾತಿ ಗಣತಿ ವರದಿಯನ್ನು ಬಿಡುಗಡೆಮಾಡಿ, ಅದರ ಶಿಫಾರಸು ಜಾರಿಗೆ ತರಬೇಕು ಎಂಬುದು ಸೇರಿದಂತೆ ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಮಂಗಳೂರಿನಲ್ಲಿ 2019ರ ಗೋಲಿಬಾರ್‌ನಲ್ಲಿ ಮೃತರಾದ ಇಬ್ಬರು ವ್ಯಕ್ತಿಗಳ ಕುಟುಂಬಗಳಿಗೆ ಸರ್ಕಾರ ಪರಿಹಾರ ಬಿಡುಗಡೆ ಮಾಡಬೇಕು. ಮಂಗಳೂರು ಗೋಲಿಬಾರ್, ಬೆಂಗಳೂರಿನ ಡಿ.ಜೆ. ಹಳ್ಳಿ, ಕೆ.ಜೆ.ಹಳ್ಳಿ ಗಲಭೆ ಹಾಗೂ ಹುಬ್ಬಳ್ಳಿಯ ಗಲಭೆಗಳಲ್ಲಿ ಅನೇಕ ಅಮಾಯಕರನ್ನು ಬಂಧಿಸಲಾಗಿದೆ. ಅಂತಹವರು ಯಾವುದೇ ಜಾತಿಯವರಾದರೂ ತಕ್ಷಣ ಬಿಡುಗಡೆ ಮಾಡಬೇಕು. ಅಮಾಯಕರ ವಿರುದ್ಧ ದಾಖಲಾದ ಸುಳ್ಳು ಪ್ರಕರಣ ಹಿಂಪಡೆಯಬೇಕು. ಬಾಬಾಬುಡನ್ ಗಿರಿ ಸಮಿತಿಯಲ್ಲಿ ಮುಸ್ಲಿಮರಿಗೆ ಅವಕಾಶ ನೀಡದೇ ಅನ್ಯಾಯ ಮಾಡಲಾಗಿದ್ದು, ಅದನ್ನು ಸರಿಪಡಿಸಬೇಕು. ಬಜೆಟ್ ಗಾತ್ರದ ಶೇ 10 ರಷ್ಟು ಅನುದಾನವನ್ನು ಮುಸ್ಲಿಮರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮೀಸಲಿಡಬೇಕು ಎಂಬ ನಿರ್ಣಯ ಕೈಗೊಳ್ಳಲಾಯಿತು.

'ಶೆಟ್ಟರ್ ಬಿಜೆಪಿಗೆ ಮರಳುವುದಿಲ್ಲ'

ಮಂಗಳೂರು: 'ಜಗದೀಶ್ ಶೆಟ್ಟರ್ ಬಿಜೆಪಿಗೆ ಮರಳುತ್ತಾರೆ ಎಂಬುದು ಸುಳ್ಳು ಸುದ್ದಿ. ಅವರು ನಮ್ಮ ಪಕ್ಷದ ಹಿರಿಯ ನಾಯಕರು. ಅವರ ಮೇಲೆ ಅನುಮಾನ ಮೂಡಲಿ ಎಂದು ಬಿಜೆಪಿಯವರು ಸಂಚು ರೂಪಿಸಿದ್ದಾರೆ. ಆದರೆ ಇದು ಫಲಿಸದು' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಬಿಜೆಪಿಯಲ್ಲಿ ಆಂತರಿಕ ಸಮಸ್ಯೆಗಳು ಬಹಳಷ್ಟಿವೆ. ಶೆಟ್ಟರ್ ಅವರನ್ನು ಸುಮ್ಮನೆ ಕರೆಯುತ್ತಿದ್ದಾರೆ. ಬಿಜೆಪಿಗೆ ಮರಳಲು ಜಗದೀಶ್ ಶೆಟ್ಟರ್ ಏನು ದಡ್ಡರಾ. ಶೆಟ್ಟರ್ ಅವರಿಗೆ ಆಗಿದ್ದ ಅವಮಾನ, ನೋವು ಎಲ್ಲ ಯೋಚನೆ ಮಾಡಿ ಕಾಂಗ್ರೆಸ್ ಸೇರಿದ್ದಾರೆ. ನಮಗೆ ದೊಡ್ಡ ಸಹಾಯ ಮಾಡಿದ್ದಾರೆ' ಎಂದು ಅವರು ಹೇಳಿದರು.

ಕಲೆ ನಿಂತ ನೀರಲ್ಲ: ರವೀಂದ್ರ ಕಾಟೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲೆ ನಿಂತ ನೀರಲ್ಲ. ನಿರಂತರ ಚಲನಶೀಲತೆಯಿಂದ ತನ್ನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾ ಸಾಗುತ್ತದೆ' ಎಂದು ವಿದ್ವಾನ್ ರವೀಂದ್ರ ಕಾಟೋಟಿ ಹೇಳಿದರು.

ಭಾರತೀಯ ವಿದ್ಯಾಭವನ, ಇನ್ಫೊಸಿಸ್ ಪ್ರತಿಷ್ಠಾನ ಮತ್ತು 'ಪ್ರಜಾವಾಣಿ' ಮಾಧ್ಯಮ ಸಹಯೋಗದೊಂದಿಗೆ ಆಯೋಜಿಸಿದ್ದ 'ಫ್ಯೂಷನ್ ಸಂಗೀತ ಮತ್ತು ನೃತ್ಯೋತ್ಸವ' ಸಪ್ತಾಹದಲ್ಲಿ ಗೌರವ ಸ್ವೀಕರಿಸಿ ಅವರು ಮಾತನಾಡಿದರು.

'ಕಲಾವಿದರು ತಮ್ಮ ಕಲಾ ನೈಪುಣ್ಯದಿಂದ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ. ಭಿನ್ನ ಸಂಸ್ಕೃತಿ, ಪರಿಸರ, ಸಮುದಾಯಗಳ ಸಂಯೋಗ ಕೂಡ ಸಾಂಸ್ಕೃತಿಕ ಪರಿಧಿಗಳನ್ನು ವಿಸ್ತರಿಸಲು ಸಾಧ್ಯವಾಗುತ್ತದೆ' ಎಂದರು.

ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್, 'ಭಾರತೀಯ ವಿದ್ಯಾಭವನ, ದೇಶದ ಏಳು ನಗರಗಳಲ್ಲಿ ಬೇರೆ ಬೇರೆ ವಿಷಯಗಳನ್ನಿಟ್ಟುಕೊಂಡು ಕಾರ್ಯಕ್ರಮಗಳನ್ನು ಏರ್ಪಡಿಸಿದ್ದೆವು. ಈಗ ಬೆಂಗಳೂರಿನಲ್ಲಿ ಹೊಸ ಬಗೆಯ ಪ್ರಯೋಗ ಮಾಡುತ್ತಿದ್ದೇವೆ. ಕಲಾವಿದರು ಮತ್ತು ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ' ಎಂದರು.

ಇನ್ಫೊಸಿಸ್ ಪ್ರತಿಷ್ಠಾನದ ಪ್ರಶಾಂತ ಹೆಗಡೆ, ಭಾರತೀಯ ವಿದ್ಯಾಭವನದ ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ಕೆ.ರಾವ್, ಬೆಂಗಳೂರು ಮುದ್ರಣಾಲಯದ ಎಚ್. ಕೆ.ಅನಂತ್, ಅನನ್ಯ ರಾಘವೇಂದ್ರ, ಸಂಗೀತ ವಿದುಷಿ ಟಿ.ಎಸ್.ಸತ್ಯವತಿ, ಸೀತಾರಾಮಚಂದ್ರ, ಅಭಿನವ ರವಿಕುಮಾರ್, ಗಾಯತ್ರಿ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಭಿಷೇಕ್ ಅಯ್ಯಂಗಾರ್ ಅವರು ರಚಿಸಿ ನಿರ್ದೇಶಿಸಿದ 'ಬೈಟು ನಾಟಕ' ಪ್ರದರ್ಶನಗೊಂಡಿತು.

ರವೀಂದ್ರ ಕಾಟೋಟಿ ಮತ್ತು ತಂಡ ಹಾರ್ಮೋನಿಯಂ ಮತ್ತು ಅಕಾರ್ಡಿಯಂ ಫ್ಯೂಷನ್ ಸಂಗೀತ ಪ್ರಸ್ತುತಪಡಿಸಿತು. ರವೀಂದ್ರ ಕಾಟೋಟಿ– ಹಾರ್ಮೋನಿಯಂ ನುಡಿಸಿದರು. ಎಂ.ಬಿ.ಪ್ರಕಾಶ್, ರವಿ ಬೆಣ್ಣೆ ಮತ್ತು ಸಾಗರ್ ಸಾಥೆ ಅವರು ಅಕಾರ್ಡಿಯನ್ ವಾದನದೊಂದಿಗೆ ಸಾಥ್ ನೀಡಿದರು ಪ್ರಜಾವಾಣಿ ಚಿತ್ರ

ಸರೋಜಾ, ರಾಜೇಶ್ವರಿಗೆ 'ಕಸಾಪ ದತ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ'ಗೆ ಲೇಖಕಿಯರಾದ ಸರೋಜಾ ನಾಗರಾಜ್ ಮತ್ತು ಕೆ.ವಿ.ರಾಜೇಶ್ವರಿ ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ 2023 ಮತ್ತು 2024ನೇ ಸಾಲಿಗೆ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿಯ ಸರೋಜಾ ನಾಗರಾಜ್, 'ಸೂರ್ಯನ ಪಿಸುಮಾತು', 'ಹಸಿಮಣ್ಣಿನಲ್ಲಿ ಹೊಸ ಹೆಜ್ಜೆ', 'ಬಿಂಕದ ಕಾಡಿಗೆ' ಸೇರಿದಂತೆ ಇವರೆಗೆ ಏಳು ಕೃತಿಗಳನ್ನು ಪ್ರಕಟಿಸಿದ್ದಾರೆ.

ಬೆಂಗಳೂರಿನ ಕೆ.ವಿ. ರಾಜೇಶ್ವರಿ, ಅಂಚೆ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. 70ಕ್ಕೂ ಹೆಚ್ಚು ಕಾದಂಬರಿಗಳು, 12 ವೈಚಾರಿಕ ಕೃತಿಗಳು, ತಲಾ ಆರು ಕಥಾ ಸಂಕಲನ ಹಾಗೂ ಪ್ರವಾಸ ಕಥನಗಳು, 38 ಮಕ್ಕಳ ಕೃತಿಗಳನ್ನು ರಚಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸರೋಜಾ

ಕೆ.ವಿ.ರಾಜೇಶ್ವರಿ

ಬೆಂಗಳೂರು ರೇಸ್

ನಾಟಿ ಲೆಜೆಂಡ್ ಗೆಲ್ಲುವ ನಿರೀಕ್ಷೆ

ಜಿ.ನಿತ್ಯಾನಂದ ಮೆಮೋರಿಯಲ್ ಬೆಂಗಳೂರು ವಿಂಟರ್ ಮಿಲಿಯನ್ ಗುರುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಟಿ ಲೆಜೆಂಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:15ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸನ್‌ಲಿಟ್ ಪಾತ್ 8, ಪಲೊಮಿನೊ 5, ಸನ್‌ಗಾಡ್ 3
2ನೇ ರೇಸ್: ಡಾನ್ ರೈಸಿಂಗ್ 5, ಬೆಲ್ಲಿಸಿಮೊ 6, ಏರ್ ಬ್ಲಾಸ್ಟ್ 3
3ನೇ ರೇಸ್: ಮ್ಯಾಪ್ಲ್ ಲೀಫ್ 4, ಎಕ್ಸಲೆಂಟ್ ರೇ 7, ಕ್ಲಾಸಿಕ್ ಚಾರ್ಮ್ 1
4ನೇ ರೇಸ್: ಲಾಸ್ಟ್ ವಿಶ್ 4, ಪೆಯೊ 5, ಸಾಲೆಂಟೊ 2
5ನೇ ರೇಸ್: ನಾಟಿ ಲೆಜೆಂಡ್ 1, ಫಿನ್ಲೆ 6, ರೀಕೊ 2, ಆಸ್ಪೀಸಿಯಸ್ ಕ್ವೀನ್ 4
6ನೇ ರೇಸ್: ಶ್ಯಾಮ್‌ರಾಕ್ 1, ಸಾಂಟೊರಿನೊ 3, ಆಸ್ಪೀಸಿಯಸ್ ಕ್ವೀನ್ 4
7ನೇ ರೇಸ್: ಇಂಡಿಯನ್ ಬ್ಲೂಸ್ 3, ಕಲ್ಲು ಸಕ್ಕರೆ 5, ದಿ ಸ್ಟ್ರೈಕಿಂಗ್ಲಿ 7
8ನೇ ರೇಸ್: ರೀಗಲ್ ಅರಿಸ್ಟೊಕ್ರಸಿ 8, ಇಸಾಬೆಲ್ 4, ನೆವೆಡ ಗೋಲ್ಡ್ 7

ಉತ್ತಮ ಬೆಟ್: ಶ್ಯಾಮ್‌ರಾಕ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಜೋಸ್ ಅಲುಕ್ಕಾಸ್ ಹೊಸ ಮಳಿಗೆ ಉದ್ಘಾಟನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆರ್.ಆರ್. ನಗರದಲ್ಲಿ ಜನವರಿ 26ರಂದು ಬೆಳಿಗ್ಗೆ 10.30ಗಂಟೆಗೆ ಜೋಸ್ ಅಲುಕ್ಕಾಸ್‌ನ ಹೊಸ ಆಭರಣ ಮಳಿಗೆಯ ಉದ್ಘಾಟನಾ ಸಮಾರಂಭ ನಡೆಯಲಿದೆ.

ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಈ ಮಳಿಗೆ ತೆರೆಯಲಾಗುತ್ತಿದೆ.

ಮದುವೆ ಅಭರಣ, ಹಗುರ ಆಭರಣ ಸೇರಿದಂತೆ ಹರಳಿನ ಆಭರಣಗಳು ದೊರೆಯಲಿವೆ ಎಂದು ಜೋಸ್ ಅಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಸ್ ಅಲುಕ್ಕ ತಿಳಿಸಿದ್ದಾರೆ.

'ಇಂದಿನ ಮಾಧ್ಯಮ ಮತ್ತು ಜನತಂತ್ರ ವ್ಯವಸ್ಥೆ' ವಿಚಾರಗೋಷ್ಠಿಯಲ್ಲಿ ನ್ಯಾ. ಗೋಪಾಲಗೌಡ

'ಅಲುಗಾಡುತ್ತಿದೆ ಪ್ರಜಾಪ್ರಭುತ್ವ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಪತ್ರಿಕಾರಂಗ ಸೇರಿ ಎಲ್ಲ ಅಂಗಗಳು ವಿಫಲವಾಗಿವೆ. ಪ್ರಜಾತಂತ್ರ ವ್ಯವಸ್ಥೆ ಅಲುಗಾಡುತ್ತಿದೆ ಎಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಜಲ ಸಂರಕ್ಷಣಾ ಸಮಿತಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಇಂದಿನ ಮಾಧ್ಯಮ ಮತ್ತು ಜನತಂತ್ರ ವ್ಯವಸ್ಥೆ' ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜನ ಪರವಾಗಿ ಕಾನೂನು, ಯೋಜನೆ ರೂಪಿಸಬೇಕಾದ ಶಾಸಕಾಂಗ ಅಸಂವಿಧಾನಿಕ ಕೆಲಸಗಳನ್ನೇ ಮಾಡುತ್ತಿದೆ. ಸಂವಿಧಾನ ಬದ್ಧವಾದ ಆಡಳಿತವನ್ನು ಸಮಸ್ತ ನಾಗರಿಕರಿಗೆ ತಲುಪಿಸುವಲ್ಲಿ ರಾಜಕೀಯ ಪಕ್ಷಗಳ ಪಾತ್ರ ಬಹಳ ದೊಡ್ಡದು. ಆದರೆ, ರಾಜಕಾರಣಿಗಳು ಅಧಿಕಾರಕ್ಕಾಗಿ ಮಾತ್ರ ಕೆಲಸ ಮಾಡುತ್ತಿದ್ದಾರೆ. ಸಂವಿಧಾನ ಬದ್ಧವಾದ ಸಂಸತ್ತಿನಲ್ಲಿ ಸಂಸದರನ್ನೇ ಅನರ್ಹಗೊಳಿಸಿ ತಮಗೆ ಬೇಕಾದ ಆದರೆ, ಜನವಿರೋಧಿಯಾದ ಕಾಯ್ದೆಗಳನ್ನು ತರುತ್ತಿದ್ದಾರೆ ಎಂದು ಟೀಕಿಸಿದರು.

ಐಎಎಸ್, ಐಪಿಎಸ್ ಅಧಿಕಾರಿಗಳು ತಾವು ಜನರ ಸೇವೆಗಾಗಿ ಇರುವವರು ಎಂಬುದನ್ನು ಮರೆತು ತಾವೇ ಮೇಧಾವಿಗಳು ಎಂಬಂತೆ ಮೆರೆಯುತ್ತಿದ್ದಾರೆ. ಶಾಸಕಾಂಗ, ಕಾರ್ಯಾಂಗ ಕೈಕೊಟ್ಟಾಗ ಕಾನೂನುಗಳನ್ನು, ಜನರ ಮೂಲಭೂತ ಹಕ್ಕುಗಳನ್ನು ರಕ್ಷಣೆ ಮಾಡಬೇಕಾದ ಸ್ವತಂತ್ರ ಅಂಗವಾದ ನ್ಯಾಯಾಂಗವು ವಿಫಲವಾಗಿದೆ. ಇವೆಲ್ಲದರ ಬಗ್ಗೆ ಟೀಕೆ, ಟಿಪ್ಪಣಿ ಮಾಡಿ ವ್ಯವಸ್ಥೆ ಸರಿಪಡಿಸಬೇಕಾದ ಮಾಧ್ಯಮಗಳು ಜನರ ದಾರಿತಪ್ಪಿಸುವ ಕೆಲಸದಲ್ಲಿ ನಿರತವಾಗಿವೆ ಎಂದು ವಿಷಾದಿಸಿದರು.

ರೈತರು, ಯುವಕರು, ಬುದ್ಧಿಜೀವಿಗಳು, ಮಹಿಳೆಯರು, ವಕೀಲರು ಹೀಗೆ ಎಲ್ಲರ ಹೋರಾಟದಿಂದ ಜನತಂತ್ರ ವ್ಯವಸ್ಥೆಯನ್ನು ಪಡೆಯಲಾಗಿದೆ. ಅದನ್ನು ಬದಲಾಯಿಸುವವರನ್ನು ಅಧಿಕಾರದಿಂದ ದೂರ ಇಡಬೇಕು. ಜನವಿರೋಧಿಯಾಗಿ ಕೆಲಸ ಮಾಡುವ ಸರ್ಕಾರಗಳನ್ನು ಕಿತ್ತು ಹಾಕಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಜಲ ಸಂರಕ್ಷಣಾ ಸಮಿತಿ ಸಂಚಾಲಕ ಮುಖ್ಯಮಂತ್ರಿ ಚಂದ್ರು ಮಾತನಾಡಿ, 'ರಾಮಮಂದಿರ ಮುಖ್ಯವೋ, ರಾಮರಾಜ್ಯ ಮುಖ್ಯವೋ ಎಂಬ ಪ್ರಶ್ನೆ ಈಗ ಮೂಡಿದೆ' ಎಂದು ಹೇಳಿದರು.

ಕರ್ನಾಟಕ ಜಲ ಸಂರಕ್ಷಣಾ ಸಮಿತಿ ಸಂಚಾಲಕ ಕುರುಬೂರು ಶಾಂತಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಜೆಡಿಯು ರಾಜ್ಯ ಅಧ್ಯಕ್ಷ ಮಹಿಮ ಪಟೇಲ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಪತ್ರಕರ್ತರಾದ ಪೂರ್ಣಿಮಾ ಆರ್., ಸಿ.ಜಿ. ಮಂಜುಳಾ, ವಿಜಯಲಕ್ಷ್ಮೀ ಶಿಬರೂರು, ಶಿಕ್ಷಣದ ಹಕ್ಕಿಗಾಗಿ ಜನಾಂದೋಲನದ ಸಮನ್ವಯ ಸಂಘಟನೆಯ ನಿರಂಜನಾರಾಧ್ಯ ವಿ.ಪಿ., ಕನ್ನಡ ಚಳವಳಿ ಕೇಂದ್ರದ ಅಧ್ಯಕ್ಷ ಗುರುದೇವ್ ನಾರಾಯಣ ಕುಮಾರ್, ಖಾಸಗಿ ಶಾಲಾ–ಕಾಲೇಜು ಪೋಷಕ ಸಂಘಟನೆಗಳ ಸಮನ್ವಯ ಸಮಿತಿ ಅಧ್ಯಕ್ಷ ಬಿ.ಎನ್. ಯೋಗಾನಂದ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಶಿವಣ್ಣ ಭಾಗವಹಿಸಿದ್ದರು.



ನಗರದಲ್ಲಿ ಬುಧವಾರ ಆಯೋಜಿಸಿದ್ದ 'ಇಂದಿನ ಮಾಧ್ಯಮ ಮತ್ತು ಜನತಂತ್ರ ವ್ಯವಸ್ಥೆ' ವಿಚಾರ–ವಿಮರ್ಶಾ ಗೋಷ್ಠಿಯಲ್ಲಿ ಕುರುಬೂರು ಶಾಂತಕುಮಾರ್, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, 'ಮುಖ್ಯಮಂತ್ರಿ' ಚಂದ್ರು ಭಿತ್ತಿಪತ್ರ ಬಿಡುಗಡೆ ಮಾಡಿದರು ಪ್ರಜಾವಾಣಿ ಚಿತ್ರ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ದೇಸಿ ಬಿತ್ತನೆ ಬೀಜ ಉತ್ಸವ



ಗುರುಶಂಕರ್ ಕೆ.ಪಿ.

ಆಕ್ಷನ್ ಏಡ್ ಎನ್ನುವ ಸರ್ಕಾರೇತರ ಸಂಸ್ಥೆಯು ಈಚೆಗೆ ಪಶ್ಚಿಮ ಬಂಗಾಳದಲ್ಲಿ ದೇಸಿ ಬಿತ್ತನೆ ಬೀಜ ಉತ್ಸವವನ್ನು ಹಮ್ಮಿಕೊಂಡಿತ್ತು. ಗ್ರಾಮಮಟ್ಟದ ಬಿತ್ತನೆ ಬೀಜ ಬ್ಯಾಂಕ್‌ಗಳನ್ನು ಸ್ಥಾಪನೆ ಮಾಡುವ ಉದ್ದೇಶದಿಂದ ಮತ್ತು ಇತ್ತೀಚಿನ ಹವಾಮಾನ ಬದಲಾವಣೆ ಮತ್ತು ಅದಕ್ಕೆ ಅನುಗುಣವಾದ ಸಾವಯವ ಕೃಷಿ ಕ್ರಮಗಳ ಬಗ್ಗೆ ಅರಿವನ್ನು ಮೂಡಿಸಲು ಈ ಉತ್ಸವವನ್ನು ಆಯೋಜಿಸಲಾಗಿತ್ತು. ದೇಸಿ ತಳಿಗಳ ಸಂರಕ್ಷಣೆ, ಸಾಂಪ್ರದಾಯಿಕ ಜ್ಞಾನದ ವಿನಿಮಯ ಮತ್ತು ಸುಸ್ಥಿರ ಕೃಷಿ ಪದ್ಧತಿಗಳ ಬಗ್ಗೆ ಪರಸ್ಪರ ಮಾಹಿತಿ ಹಂಚಲಾಯಿತು.

ಸುಸ್ಥಿರ ಕೃಷಿ

- ಸುಸ್ಥಿರ ಕೃಷಿ ಎಂದರೆ ಕೃಷಿ ಮತ್ತು ಆಹಾರ ಉತ್ಪಾದನೆಯ ಗುರಿಗಳನ್ನು ಸಮಗ್ರತೆಯ ದೃಷ್ಟಿಕೋನದಲ್ಲಿ ಸಾಧಿಸುವುದು. ಯಾವುದೇ ನೈಸರ್ಗಿಕ ಸಂಪನ್ಮೂಲಗಳಿಗೆ ಹಾನಿಯಾಗದ ರೀತಿಯಲ್ಲಿ ಕೃಷಿ ಮಾಡುವುದು.
- ಪರಿಸರ ಸಂರಕ್ಷಣೆ, ಆರ್ಥಿಕ ಲಾಭ, ಸಾಮಾಜಿಕ ಸಮಾನತೆ, ಮಿಶ್ರ ಬೆಳೆಗಳಿಗೆ ಆದ್ಯತೆ ನೀಡುವುದು, ಸಾವಯವ ಕೃಷಿ ಮತ್ತು ಸಮುದಾಯ ಕೇಂದ್ರಿತ ಕೃಷಿ ಚಟುವಟಿಕೆಗಳನ್ನು ಮತ್ತು ಆಚರಣೆಗಳನ್ನು ಪರಿಪಾಲಿಸುವ ಉದ್ದೇಶವನ್ನು ಹೊಂದಿರುತ್ತದೆ.

ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮಗಳು

- ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಣಕಾಸಿನ ಭತ್ಯೆಗಳನ್ನು ಮತ್ತು ಸಹಾಯಧನ ಕಲ್ಪಿಸಿ ಸುಸ್ಥಿರ ಕೃಷಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಉತ್ತೇಜಿಸಬಹುದು.
- ಸುಸ್ಥಿರ ಕೃಷಿ ವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲು ಸಂಶೋಧನೆ ಮತ್ತು ಅಭಿವೃದ್ಧಿಗೆ ಸರ್ಕಾರ ಹೂಡಿಕೆಯನ್ನು ಹೆಚ್ಚಿಸಬಹುದು.
- ರೈತರಿಗೆ ಅವಶ್ಯಕ ತರಬೇತಿ ಮತ್ತು ಅರಿವನ್ನು ಮೂಡಿಸುವುದರ ಜತೆಗೆ ಸುಸ್ಥಿರ ಕೃಷಿಯನ್ನು ಕೈಗೊಳ್ಳಲು ರೈತ ಸಮುದಾಯದ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಅವಶ್ಯಕ ಮೂಲಸೌಕರ್ಯಗಳು ಮತ್ತು ಮಾರುಕಟ್ಟೆಯ ಬೆಂಬಲವನ್ನು ನೀಡುವುದಲ್ಲದೆ ಗ್ರಾಹಕರಲ್ಲಿಯೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಕೃಷಿ ವಲಯದಲ್ಲಿ ಮಹಿಳೆಯರನ್ನು ಮತ್ತಷ್ಟು ಸಬಲೀಕರಣಗೊಳಿಸಿ, ಸುಸ್ಥಿರ ಕೃಷಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಮಹಿಳೆಯರಿಗೆ ಉತ್ತೇಜನ ನೀಡುವುದು.

ಸುಸ್ಥಿರ ಕೃಷಿಯ ಉಪಯುಕ್ತತೆಗಳು

- **ಪರಿಸರ ಸಂರಕ್ಷಣೆ:** ಸುಸ್ಥಿರ ಕೃಷಿಯನ್ನು ಅಳವಡಿಸಿಕೊಂಡರೆ ಮಣ್ಣಿನ ಸಂರಕ್ಷಣೆ, ಜಲ ಸಂರಕ್ಷಣೆ ಮತ್ತು ಜೈವಿಕ ವೈವಿಧ್ಯಗಳನ್ನು ಕಾಪಾಡಲು ಉಪಯುಕ್ತವಾಗುತ್ತದೆ. ರಾಸಾಯನಿಕಗಳ ಮತ್ತು ಕೀಟನಾಶಕಗಳ ಬಳಕೆ ಸೀಮಿತ ಪ್ರಮಾಣದಲ್ಲಿರುವುದರಿಂದ ಪರಸರಕ್ಕೆ ಆಗುವ ಹಾನಿಯನ್ನು ತಪ್ಪಿಸಬಹುದು.
- **ಆರ್ಥಿಕ ಉಪಯುಕ್ತತೆ:** ಸುಸ್ಥಿರ ಕೃಷಿಯನ್ನು ಅಳವಡಿಸಿಕೊಂಡರೆ ರೈತರ ಆದಾಯ ದೀರ್ಘಾವಧಿಯಲ್ಲಿ ಹೆಚ್ಚಳವಾಗುವ ಸಾಧ್ಯತೆಗಳಿರುತ್ತದೆ. ವೆಚ್ಚ ಕಡಿಮೆಯಾದ ಕಾರಣದಿಂದ ಜೀವನಮಟ್ಟ ವೃದ್ಧಿಸುತ್ತದೆ.
- **ಹವಾಮಾನದ ಮೇಲಿನ ಪರಿಣಾಮ:** ಸುಸ್ಥಿರ ಕೃಷಿಯನ್ನು ಅಳವಡಿಸಿಕೊಂಡರೆ ಹಸಿರು ಮನೆ ಅನಿಲ ಹೊರಸೂಸುವಿಕೆ ಕಡಿಮೆಯಾಗಿ ಇತ್ತೀಚೆಗೆ ಎದುರಿಸುತ್ತಿರುವ ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯಂತಹ ಸಮಸ್ಯೆಗಳಿಂದ ಮುಕ್ತವಾಗಬಹುದು.
- **ಜೈವಿಕ ವೈವಿಧ್ಯದ ಸಂರಕ್ಷಣೆ:** ಸುಸ್ಥಿರ ಕೃಷಿ ಅಳವಡಿಸಿಕೊಂಡರೆ ಬೆಳೆಗಳ ವೈವಿಧ್ಯ, ಪರಿಸರ ವೈವಿಧ್ಯ ಮತ್ತು ಜಾನುವಾರು ವೈವಿಧ್ಯಗಳನ್ನು ಸಂರಕ್ಷಿಸಲು ಸಾಧ್ಯವಾಗುತ್ತದೆ. ಕೀಟಗಳ ಮತ್ತು ರೋಗಗಳ ಸಮಸ್ಯೆ ಗಣನೀಯವಾಗಿ ಕಡಿಮೆಯಾಗುತ್ತದೆ.

ಇತಿಮಿತಿಗಳು

- ಸುಸ್ಥಿರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಮಾನವ ಸಂಪನ್ಮೂಲಗಳು ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುತ್ತದೆ. ಇದರಿಂದ ಕೀಟನಾಶಕಗಳ ಮತ್ತು ರಾಸಾಯನಿಕಗಳ ವೆಚ್ಚ ಕಡಿಮೆಯಾದರೂ ಮಾನವ ಸಂಪನ್ಮೂಲಗಳ ಮೇಲೆ ತಗಲುವ ವೆಚ್ಚದಿಂದ ಉತ್ಪಾದನೆಯ ವೆಚ್ಚ ಹೆಚ್ಚಳವಾಗಬಹುದು.
- ಸುಸ್ಥಿರ ಕೃಷಿ ಪದ್ಧತಿಯಲ್ಲಿ ಫಲಿತಾಂಶ ದೊರಕಬೇಕಾದರೆ ಹೆಚ್ಚಿನ ಸಮಯ ಬೇಕಾಗುತ್ತದೆ ಇದರಿಂದ ರೈತ ಸಮುದಾಯಕ್ಕೆ ತ್ವರಿತ ಗತಿಯಲ್ಲಿ ಲಾಭವಾಗದೆ ಅಥವಾ ಹವಾಮಾನ, ಮಾರುಕಟ್ಟೆಯಲ್ಲಿ ಉಂಟಾಗುವ ಬದಲಾವಣೆಗಳು ಮತ್ತು ಸರ್ಕಾರದ ನೀತಿಗಳಲ್ಲಿ ಉಂಟಾಗುವ ಬದಲಾವಣೆಗಳ ಕಾರಣದಿಂದ ರೈತರು ಹಿಂದೇಟು ಹಾಕುವ ಸಾಧ್ಯತೆ ಇರುತ್ತದೆ.
- ಭಾರತದಲ್ಲಿ ಜನಸಂಖ್ಯೆ ಹೆಚ್ಚಳವಾಗುತ್ತಿದ್ದು ಅಪೌಷ್ಟಿಕತೆ ಹಾಗೂ ಆಹಾರ ಭದ್ರತೆಯ ಸಮಸ್ಯೆಗಳಿದ್ದು, ಸುಸ್ಥಿರ ಕೃಷಿ ಪದ್ಧತಿಯಿಂದ ಬೇಡಿಕೆಗೆ ಅನುಸಾರ ಆಹಾರ ಧಾನ್ಯ ಪೂರೈಸಲು ಸಾಧ್ಯವಾಗದೇ ಇರಬಹುದು.
ಉದಾಹರಣೆ- ಶ್ರೀಲಂಕಾದಲ್ಲಿ ಸಾವಯವ ಕೃಷಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳಲು ಮುಂದಾದಾಗ ಶೇ 30ರಷ್ಟು ಉತ್ಪಾದನೆಯಲ್ಲಿ ಇಳಿಮುಖವಾಯಿತು. ಇದರಿಂದ ಶ್ರೀಲಂಕಾದ ಆರ್ಥಿಕ ವ್ಯವಸ್ಥೆ ಬಿಕ್ಕಟ್ಟು ಎದುರಿಸಿತು.
- ಪ್ರಾಥಮಿಕ ಹಂತದಲ್ಲಿ ಮೂಲಸೌಕರ್ಯಗಳು, ಸಲಕರಣೆಗಳು, ನೀರಾವರಿ ವ್ಯವಸ್ಥೆಗಳು, ಸೂಕ್ಷ್ಮ ನೀರಾವರಿ ವ್ಯವಸ್ಥೆಯಲ್ಲಿ ಬಳಸುವ ಸಲಕರಣೆಗಳು, ಸಾವಯವ ಗೊಬ್ಬರ ಮತ್ತು ದೇಸಿ ತಳಿಗಳ ಮೇಲಿನ ಹೂಡಿಕೆ ಹೆಚ್ಚಿಸಬೇಕಾಗುತ್ತದೆ.
- ಸುಸ್ಥಿರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡರೆ ಸಮರ್ಪಕ ದಾಸ್ತಾನು ನಿರ್ವಹಣೆ ಮತ್ತು ಮಾರುಕಟ್ಟೆಯ ಲಭ್ಯತೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗುತ್ತದೆ.

ಸರ್ಕಾರದ ಯೋಜನೆಗಳು

- **ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ :** ಹವಾಮಾನ ಬದಲಾವಣೆಗೆ ಅನುಗುಣವಾಗಿ ಕೃಷಿ ವಲಯದಲ್ಲಿ ಬದಲಾವಣೆಗಳನ್ನು ತರಲು ಯೋಜನೆಯು ಕಾರ್ಯನಿರ್ವಹಿಸುತ್ತದೆ. ಸುಸ್ಥಿರ ಕೃಷಿಯನ್ನು ಅಳವಡಿಸಿಕೊಳ್ಳಲು ಪಾಲಿಸಬೇಕಾದ ತಂತ್ರಗಳನ್ನು ರೈತ ಸಮುದಾಯಕ್ಕೆ ತಿಳಿಸಲಾಗುತ್ತದೆ.
- **ಪರಂಪರಾಗತ್ ಕೃಷಿ ವಿಕಾಸ್ ಯೋಜನೆ :** ಪರಂಪರಾಗತ್ ಕೃಷಿ ವಿಕಾಸ್ ಯೋಜನೆಯನ್ನು 2015ರಲ್ಲಿ ಜಾರಿಗೆ ತರಲಾಯಿತು.

❖

ರೈಲ್ವೆಯಲ್ಲಿ 5,696 ಹುದ್ದೆ

ಸಹಾಯಕ ಲೊಕೊ ಪೈಲಟ್

ಮಂಜುನಾಥ್ ಭದ್ರಶೆಟ್ಟಿ

'ರೈಲ್ವೆ ನೇಮಕಾತಿ ಮಂಡಳಿಗಳಿಂದ'(RRBs) 5,696 ಸಹಾಯಕ ಲೊಕೊ ಪೈಲಟ್‌ಗಳ (ALP) ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಅರ್ಹ ಪುರುಷ, ಮಹಿಳೆ, ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಬಹುದು.

ದೇಶದಲ್ಲಿರುವ ಒಟ್ಟು 21 ರೈಲ್ವೆ ನೇಮಕಾತಿ ಮಂಡಳಿಗಳು ಒಟ್ಟಾರೆ ಹುದ್ದೆಗಳಲ್ಲಿನ ತಮ್ಮ ವ್ಯಾಪ್ತಿಯ ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ನಡೆಸುತ್ತವೆ. ಅಭ್ಯರ್ಥಿಗಳು ತಮ್ಮ ಇಷ್ಟದ ಮಂಡಳಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಒಬ್ಬ ಅಭ್ಯರ್ಥಿ ಒಂದು ಕಡೆಗೆ ಮಾತ್ರ ಅರ್ಜಿ ಸಲ್ಲಿಸಲು ಅರ್ಹ.

ಈ ಹುದ್ದೆಗಳಿಗೆ ನೇಮಕಾತಿಯು ಬಹು ಹಂತದಲ್ಲಿ ನಡೆಯಲಿದೆ. ವಿಶೇಷಚೇತನ (ಅಂಗವಿಕಲ) ಅಭ್ಯರ್ಥಿಗಳಿಗೆ ಹುದ್ದೆಗಳು ಮೀಸಲು ಇರುವುದಿಲ್ಲ. ಆರ್‌ಆರ್‌ಬಿ ಬೆಂಗಳೂರಲ್ಲಿ 473 ಸಹಾಯಕ ಲೊಕೊ ಪೈಲಟ್ ಹುದ್ದೆಗಳಿವೆ. ಇದಕ್ಕಾಗಿ ಎಲ್ಲ ಮಂಡಳಿಗಳಿಗೂ ಅನ್ವಯವಾಗುವಂತೆ ಏಕೀಕೃತ ವಿವರಾಣಾತ್ಮಕ ಅಧಿಸೂಚನೆ (CEN) ಹೊರಡಿಸಲಾಗಿದೆ.

ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಾರಂಭ: ಈಗಾಗಲೇ ಜನವರಿ 20 ರಿಂದ ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು, ಫೆಬ್ರುವರಿ 19 ಕಡೆಯ ದಿನ. ಜನರಲ್, ಒಬಿಸಿ ಅವರಿಗೆ ₹500, ಎಸ್.ಸಿ/ಎಸ್‌ಟಿ, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹250 ಅರ್ಜಿ ಶುಲ್ಕವಿದೆ.

ವಿದ್ಯಾರ್ಹತೆ ಏನಿದೆ?

ಮೆಟ್ರಿಕುಲೇಷನ್ (ಎಸ್‌ಎಸ್‌ಎಲ್‌ಸಿ) ಜೊತೆಗೆ ಐಟಿಐ ಮಾಡಿದವರು (ಆಯ್ದ ಕ್ಷೇತ್ರಗಳಲ್ಲಿ) ಅಥವಾ ಮೆಟ್ರಿಕುಲೇಷನ್ ಜೊತೆಗೆ ಮೂರು ವರ್ಷದ ಡಿಪ್ಲೊಮಾ, ಎಂಜಿನಿಯರಿಂಗ್ ಪದವಿ (ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಆಟೊಮೊಬೈಲ್ ಎಂಜನಿಯರಿಂಗ್ ಮಾತ್ರ) ಮಾಡಿದವರು ಅರ್ಜಿ ಸಲ್ಲಿಸಲು ಅರ್ಹ. ಆರಂಭಿಕ ವೇತನ ₹19,900.

ವಯೋಮಾನ

18 ರಿಂದ 30 ವರ್ಷ ವಯೋಮಾನದವರು ಅರ್ಜಿ ಸಲ್ಲಿಸಲು ಅರ್ಹರು. ಎಸ್.ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ಮತ್ತು ಒಬಿಸಿ ಅವರಿಗೆ 3 ವರ್ಷ ವಯೋಮಾನದಲ್ಲಿ ಸಡಿಲಿಕೆ ಇದೆ. ನಿವೃತ್ತ ಸೈನಿಕರಿಗೂ ನಿಯಮಾನುಸಾರ ಸಡಿಲಿಕೆ ಇದೆ.

ನೇಮಕಾತಿ ಪ್ರಕ್ರಿಯೆ ಹೇಗಿದೆ?

ಕಠಿಣ ಹಾಗೂ ದೀರ್ಘ ಹಂತದ ಪ್ರಕ್ರಿಯೆ ಹೊಂದಿರುತ್ತದೆ. ಒಟ್ಟು 3 ಹಂತಗಳಲ್ಲಿ ಪರೀಕ್ಷೆ ನಡೆಯಲಿದೆ. ಆ ನಂತರ ನಿಗದಿಪಡಿಸಿದ ವೈದ್ಯಕೀಯ ಮಾನದಂಡಗಳನ್ನು ಅಭ್ಯರ್ಥಿಗಳು ಪೂರೈಸಬೇಕಾಗುತ್ತದೆ.

CBT–1: ಮೊದಲಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆ–1 (CBT-1) ನಡೆಯಲಿದೆ. ಇದರಲ್ಲಿ 75 ಅಂಕಗಳಿಗೆ 75 ನಿಮಿಷದ ಒಂದೇ ಪತ್ರಿಕೆ ಇರುತ್ತದೆ. ತಲಾ ಮೂರು ತಪ್ಪು ಉತ್ತರಗಳಿಗೆ ಒಂದು ಅಂಕ ಕಳೆಯಲಾಗುತ್ತದೆ. ಮುಂದಿನ ಹಂತಕ್ಕೆ ಹೋಗಬೇಕಾದರೆ ಇದರಲ್ಲಿ ಕನಿಷ್ಠ ಅಂಕಗಳನ್ನು ಪಡೆಯಲೇಬೇಕು. ಇದರ ಅಂಕಗಳನ್ನು ಮೆರಿಟ್ ಪಟ್ಟಿಗೆ ಪರಿಗಣಿಸುವುದಿಲ್ಲ. ಕೇವಲ ಅರ್ಹತಾ ಪರೀಕ್ಷೆ ಇದಾಗಿರುತ್ತದೆ.

CBT–2: ಇದರಲ್ಲಿ 2.30 ಗಂಟೆಯ 175 ಪ್ರಶ್ನೆಗಳ ಎರಡು ಪತ್ರಿಕೆ ಇರುತ್ತವೆ. ಇದಕ್ಕೂ ಕೂಡ ನೆಗಟಿವ್ ಮಾರ್ಕ್ಸ್ ಇರುತ್ತವೆ. ಈ ಪರೀಕ್ಷೆಯಲ್ಲಿನ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳು 1:15 ರಲ್ಲಿ ಮುಂದಿನ ಹಂತಕ್ಕೆ ಹೋಗುತ್ತಾರೆ.

CABT: ಕಂಪ್ಯೂಟರ್ ಬೇಸ್ಡ್ ಆಪ್ಟಿಟ್ಯೂಡ್ ಟೆಸ್ಟ್ ಇದು ಮೂರನೇ ಹಂತವಾಗಿದ್ದು ವಿವರಣಾತ್ಮಕವಾಗಿರುತ್ತದೆ. ಇದಕ್ಕೆ ದೃಷ್ಟಿ ತಪಾಸಣೆಯ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯ.

ಸಿಬಿಟಿ–2, ಸಿಎಬಿಟಿ ಪರೀಕ್ಷೆಯ ಅಂಕಗಳನ್ನು ಪರಿಗಣಿಸಿ ಆರ್‌ಆರ್‌ಬಿಗಳು ವೇಟೇಜ್ ಆಧಾರದ ಮೇಲೆ ಆಯ್ಕೆ ಪಟ್ಟಿ ಪ್ರಕಟಿಸುತ್ತವೆ. ಸಿಬಿಟಿ–1, ಸಿಬಿಟಿ–2 ಪರೀಕ್ಷೆಗಳು ಇಂಗ್ಲಿಷ್, ಹಿಂದಿ, ಕನ್ನಡ ಸೇರಿದಂತೆ ಇತರ ಆಯ್ದ ಪ್ರಾದೇಶಿಕ ಭಾಷೆಗಳಲ್ಲಿ ಇರುತ್ತವೆ. ಸಿಎಬಿಟಿ ಇಂಗ್ಲಿಷ್ ಹಿಂದಿಯಲ್ಲಿ ಮಾತ್ರ ಇರುತ್ತದೆ.

ತಮ್ಮ ವ್ಯಾಪ್ತಿಯ ಮಂಡಳಿಯ ವೆಬ್‌ಸೈಟ್‌ಗಳಿಗೆ ಹೋಗಿ (ಬೆಂಗಳೂರು– www.rrbbnc.gov.in) ಹುದ್ದೆಗಳ ವರ್ಗೀಕರಣ, ಪರೀಕ್ಷಾ ಪಠ್ಯಕ್ರಮ ಹೆಚ್ಚಿನ ಮಾಹಿತಿಗೆ ಸಂಪೂರ್ಣ ಅಧಿಸೂಚನೆ (CEN) ನೋಡಿಕೊಂಡು ಅರ್ಜಿ ಸಲ್ಲಿಸಬೇಕು.

❖

21 ರೈಲ್ವೆ ನೇಮಕಾತಿ ಮಂಡಳಿಗಳು

ಭಾರತೀಯ ರೈಲ್ವೆಯ 17 ವಲಯಗಳಲ್ಲಿ ಒಟ್ಟು 21 ರೈಲ್ವೆ ನೇಮಕಾತಿ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು, ಅಜ್ಮೀರ್, ಅಹಮದಾಬಾದ್, ಭೋಪಾಲ್, ಭುವನೇಶ್ವರ, ಬಿಲಾಸ್‌ಪುರ, ಚಂಡೀಗಢ, ಚೆನ್ನೈ, ಗೋರಖಪುರ, ಗುವಾಹಟಿ, ಜಮ್ಮು , ಶ್ರೀನಗರ, ಕೋಲ್ಕತ್ತ, ಮಾಲ್ಡಾ, ಮುಂಬೈ, ಮುಜಾಫರ್‌ಪುರ, ಪಟ್ನಾ, ಪ್ರಯಾಗರಾಜ್, ರಾಂಚಿ, ಸಿಕಂದರಾಬಾದ್, ಸಿಲಿಗುರಿ, ತಿರುವನಂತಪುರ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

SECOND LANGUAGE- ENGLISH

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

26. How does the poet Marina de Bellagenta express the feelings of the land?

Ans:- The Poetess herself being the earth and says what are the things she had to tolerate and challenged the man that he cannot put a fence around the planet earth (her). Earth as a whole planet is very big and the man cannot put a fence and it is impossible for him. She can wait because she is the mother (land.)

27. In the darkness swamy felt something was moving down. What did he do then?

Ans : Swamy saw something was moving down, he thought that his end had come, why should he wait? As it came nearer, he hugged it and bite it with all his strength like a mortal weapons to escape from it.

28. Satish saw a bird through the window. How did the bird appear to him?

Ans : Satish saw a bird through the window, it was a rare bird and he had never seen that type of bird before. That bird had a longish tail and black crest. It had restless energy. Its eyes always kept moving here and there and bird was ready for flight at any moment. So he was attracted by it.

29. Smitha, on seeing the newspaper, almost shouted with excitement why she did react so?

Ans : Smitha read the news that Pandit Ravi Shankar will give a concert, at shanmukha kannada Auditorium next day. She and her brother was fan Ravishnkar, so she shouted with excitement because it was the life time importunately for them.

30. What reward does a scientist get from the study of science? How is it different from those of lawyers and business people in this respect?

Ans : Science is an exciting adventure where major reward comes from the discovery itself. Scientist get freedom, camaraderie and independence. The honours and promotions will depend on himself more than in other occupations like layers and business people.

31. What is uncommon about the desire or the quality of the grand mother? How does the poet term this uncommon quality or desire?

Ans : Grandma had the desire of climbing the tree. It is uncommon or unusual because even at the age of 62 she climbed a tree. The poet termed this uncommon quality as genius.

32. Give at least two descriptions of the jazz player to show that he is sad while not playing the instrument.

Ans : when the Jazz Player was not playing the instruments he was sad because he lost his on tersest in the life. He didn't care to wore the term dress. He had more pain that could be seen in each wrinkle of his face.

33. The sailors in the 'Ballad of the Tempest' shuddered in silence. When did they do so ?

Ans:-When the ship was to break apart by the gust of wind. The sailors heard the rattling sound of the trumpet and some one thundered to cut away the most. All sailors shuddered in silence out of fear.

VI. Read the following extracts and answer the questions that follow:

34. 'Friend', he said, 'I do not like to have you speak to me in that manner'.

a. Who is the speaker?

Ans:- Don Anselmo is the speaker.

b. Who did he address as friend?

Ans:- He addressed the author (mediator) as a friend.

c. Why didn't he like the manner of speaking?

Ans:- The authors way by talking and the proposal made by him was not liked because Don Anselmo was a man of principles. He didn't agree to take more money. The author's offer made him insult.

35. 'I've-I've.......... always wanted to hear him and see him ..... '

a. Who is 'I' here?

Ans:- Here 'I' refer to sick boy Anant.

b. Who does 'him' refer to

Ans:- 'him' refers to Pandit Ravishankar.

c. Why did he want to hear him and see him?

Ans:- He wanted to hear Pandit Ravishankar's sitar playing and see him in the musical concert.

36. 'They are simple men and must have their relaxation.'

a. Who is the speaker here?

Ans:- Here the speaker was Don Pedro.

b. Who are 'simple men' according to the speaker?

Ans:- According to the speaker the Sailors (seamen) are simple men.

c. Why did the speaker say so?

Ans:- When Columbus told to Don Pedro the seamen were drink too much, so they were singing, that singing irritated him. So the speaker wanted to balance the situation on both the side the said he above words.

(Contd.....)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC MATHEMATICS

MATHEMATICS

REVISION : MODEL QUESTIONS

32. Evaluate $\int \frac{dx}{x+x\log x}$

Ans :– $\int \frac{dx}{x(1+\log x)}$

$\Rightarrow \int \frac{dx}{(1+\log x)}\frac{dx}{x}$ $\left\{\text{let } 1+\log x = t \text{ d.r.t.x } \frac{1}{x}dx = dt\right\}$

$\Rightarrow \int \frac{1}{t}dt = \log t + c = \log(1+\log x) + c$

33. Find the area of the region bounded by curve $y^2 = x$, $x = 4$ $x = 9$, **X axis. In first Quadrant**

Ans :– $A = \int_4^9 y\,dx = \int_4^9 \sqrt{x}\,dx = \int_4^9 x^{\frac{1}{2}}\,dx = \frac{2}{3}x^{\frac{3}{2}}\Big]_4^9$

$A = \frac{38}{3}$ sq units



34. Form the differential equation of family of circles touching the Y axis at origin.

Ans:- Required equation of circle

$$x^2 + y^2 - 2ax = 0 \quad (2ax = x^2 + y^2)$$

$$\text{d.r.t.x}, \quad 2x + 2y\frac{dy}{dx} = 2a$$

$$2x^2 + 2xy\frac{dy}{dx} = 2ax \quad (x \text{ by } x)$$

$$2x^2 + 2xy\frac{dy}{dx} = x^2 + y^2$$

$$x^2 + 2xy\frac{dy}{dx} = y^2$$

35. If $\vec{a} = 2i + 2j + 3k$; $\vec{b} = -i + 2j + k$ **and** $\vec{c} = 3i + j$ **are such that** $\vec{a} + \lambda\,\vec{b}$ **is perpendicular to** $\vec{c}$ **then find the value of λ**

Ans:- $(\vec{a} + \lambda\vec{b}).\ \vec{c} = 0$

$3(2-\lambda) + 1\,(2+2\lambda) + 0\,(3+\lambda) = 0$

$\Rightarrow 6 - 3\lambda + 2 + 2\lambda = 0 \Rightarrow \lambda = 8$

36. Find the area of triangle ABC, position vectors of A,B,C are $\hat{i} - \hat{j} + 2\hat{k}$, **and** $2\hat{j} + \hat{k}$ **and** $\hat{k} + 3\hat{k}$

Ans:- $\overrightarrow{OA} = \hat{i} - \hat{j} + 2\hat{k}$, $\overrightarrow{OB} = 2\hat{j} + \hat{k}$ & $\overrightarrow{OC} = \hat{j} + 3\hat{k}$

$\overrightarrow{AB} = \overrightarrow{OB} - \overrightarrow{OA} = -\hat{i} + 3\hat{j} - \hat{k}$

$\overrightarrow{AC} = \overrightarrow{OC} - \overrightarrow{OA} = -\hat{i} + 2\hat{j} + \hat{k}$

$\overrightarrow{AB} \times \overrightarrow{AC} = 5\hat{i} + 2\hat{j} + \hat{k}$

$\left|\overrightarrow{AB} \times \overrightarrow{AC}\right| = \sqrt{30}$ and Area $= \frac{1}{2}\left|\overrightarrow{AB} \times \overrightarrow{AC}\right|$

Area $= \frac{\sqrt{30}}{2}$ sq.units

37. Find the vector and Cartesian equation of line passing through the points (3, -2, -5) and (3, -2, 6)

Ans:-Let $\vec{a} = 3\hat{i} - 2\hat{j} - 2\hat{k}$, $\vec{b} = 3\hat{i} - 2\hat{j} + 6\hat{k}$

$\vec{b} - \vec{a} = 11\hat{k}$

$\vec{r} = \vec{a} + \lambda(\vec{b} - \vec{a})$

$\vec{r} = 3\hat{i} - 2\hat{j} - 5\hat{k} + \lambda\,(11\hat{k})$ is the vector equation of the line.

Cartesian form : $\frac{x-3}{0} = \frac{y+2}{0} = \frac{z+5}{11}$

38. Consider the experiment of tossing two fair coins simultaneously, find the probability that both are head given that at least one of them is a head.

Ans:- S = {HH, HT, TH, TT} & events A = {HH}; B={HH, HT, TH}

$A \cap B = \{HH\}$ $P(A \cap B) = \frac{1}{4}$ $P(B) = \frac{1}{4}$ $P(A) = \frac{1}{4}$

$P(A/B) = \frac{P(A \cap B)}{P(B)} = \frac{\frac{1}{4}}{\frac{3}{4}} = \frac{1}{3}$

39. Prove that the function : N → Y defined by f(x) = x² where Y = (y : y = x², x ε N} is invertible also write the inverse of f(x).

Ans:- Let $x^2 = y : x = \sqrt{y}$

Define $g : Y \Rightarrow N$ by $g(y) = \sqrt{y}$, $y \in Y$

Consider $gof(x) = g[f(x)] = g(x^2) = \sqrt{x^2} = x = I_N$

Consider $fog(y) = f(g(y)) = f(\sqrt{y}) = (\sqrt{y})^2 = y = I_y$

$\therefore$ gof (x) = I_N and fog(x) = I_Y hence inverse of f exist and its inverse is g (x)

$\Rightarrow f^1(x) = \sqrt{x}$

40. If $A = \begin{bmatrix}1 & 2\\2 & 1\end{bmatrix}, B = \begin{bmatrix}2 & 0\\1 & 3\end{bmatrix}, C = \begin{bmatrix}1 & 1\\2 & 3\end{bmatrix}$

Calculate AB, AC, A(B+C)

Verify that AB+AC=A(B+C)

Ans :– $AC = \begin{bmatrix}1 & 2\\2 & 1\end{bmatrix}\begin{bmatrix}1 & 1\\2 & 3\end{bmatrix} = \begin{bmatrix}1+4 & 1+6\\2+2 & 2+3\end{bmatrix} = \begin{bmatrix}5 & 7\\4 & 5\end{bmatrix}$

$BC = \begin{bmatrix}2 & 0\\1 & 3\end{bmatrix}\begin{bmatrix}1 & 1\\2 & 3\end{bmatrix} = \begin{bmatrix}2+0 & 2+0\\1+6 & 1+9\end{bmatrix} = \begin{bmatrix}2 & 2\\7 & 10\end{bmatrix}$

$AC + BC = \begin{bmatrix}5 & 7\\4 & 5\end{bmatrix} + \begin{bmatrix}2 & 2\\7 & 10\end{bmatrix} = \begin{bmatrix}7 & 9\\11 & 5\end{bmatrix}$ ....(1)

$A + B = \begin{bmatrix}1 & 2\\2 & 1\end{bmatrix} + \begin{bmatrix}2 & 0\\1 & 3\end{bmatrix} = \begin{bmatrix}3 & 2\\3 & 4\end{bmatrix}$

$(A+B)C = \begin{bmatrix}3 & 2\\3 & 4\end{bmatrix}\begin{bmatrix}1 & 1\\2 & 3\end{bmatrix} = \begin{bmatrix}7 & 9\\11 & 15\end{bmatrix}$ ....(2)

From (1) and (2) (Ab + AC) = A(B+C)

'ನಾನೂ ಸಿ.ಎಂಗೆ ಪಟ್ಟಿ ಕೊಟ್ಟಿದ್ದೇನೆ'

ನಿಗಮ, ಮಂಡಳಿಗಳಿಗೆ ಆದಷ್ಟು ಬೇಗ ನೇಮಕ ಮಾಡಿದರೆ ಒಳ್ಳೆಯದು: ಸತೀಶ್ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಬೆಂಗಳೂರು: 'ಜಿಲ್ಲೆಯಲ್ಲಿ ಪಕ್ಷದ ಕೆಲಸ ಮಾಡಿದವರನ್ನು ನಿಗಮ ಮಂಡಳಿಗೆ ನೇಮಕ ಮಾಡುವಂತೆ ನಾನೂ ಹೇಳಿದ್ದೇನೆ. ಮುಖ್ಯಮಂತ್ರಿಗೆ ಪಟ್ಟಿಯನ್ನೂ ಕೊಟ್ಟಿದ್ದೇನೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ ನಿಗಮ, ಮಂಡಳಿಗಳಿಗೆ ಆದಷ್ಟು ಬೇಗ ನೇಮಕ ಮಾಡಿದರೆ ಒಳ್ಳೆಯದು' ಎಂದು ಅಭಿಪ್ರಾಯಪಟ್ಟರು.

'ನೇಮಕ ಯಾಕೆ ವಿಳಂಬವಾಗುತ್ತಿದೆ ಎನ್ನುವುದು ಗೊತ್ತಿಲ್ಲ. ಇದರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಮೂಗು ತೂರಿಸಿದ್ದಾರೆಂಬ ವಿಚಾರದ ಬಗ್ಗೆಯೂ ಮಾಹಿತಿ ಇಲ್ಲ. ನಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ಕೊಟ್ಟಿರುವ ಪಟ್ಟಿಯಂತೆ ನೇಮಕ ಮಾಡಲು ಹೇಳಿದ್ದೇವೆ' ಎಂದರು.

ಸಮೀಕ್ಷೆಯ ಬಳಿಕ ಟಿಕೆಟ್ ಹಂಚಿಕೆ: 'ಲೋಕಸಭೆಗೆ ಅಭ್ಯರ್ಥಿಗಳ ಆಯ್ಕೆ ವಿಚಾರಕ್ಕೆ ಸಂಬಂಧಿಸಿದಂತೆ ಒಂದು ಸುತ್ತಿನ ಸಭೆ ಆಗಿದೆ. ಇನ್ನೂ ಒಂದೆರಡು ಸುತ್ತಿನ ಸಭೆ ಆಗಬಹುದು. ಬೆಳಗಾವಿ ಕ್ಷೇತ್ರದಿಂದಲೂ 2-3 ಹೆಸರು ಕೊಡಲಾಗಿದೆ. ಎಐಸಿಸಿ ಅಲ್ಲದೆ ಪಕ್ಷದ ಅಧ್ಯಕ್ಷರು ಸಹ ಸಮೀಕ್ಷೆ ಮಾಡಿಸುತ್ತಾರೆ. ಯಾರ ಕಡೆಗೆ ಹೆಚ್ಚು ಒಲವು ಇದೆಯೋ ಅವರಿಗೆ ಟಿಕೆಟ್ ಸಿಗಲಿದೆ' ಎಂದರು.

'ಸಚಿವೆ ಲಕ್ಷ್ಮೀ ಹೆಬ್ಬಾಳಕರ ಕೂಡ ತಮ್ಮ ಪುತ್ರನಿಗೆ ಟಿಕೆಟ್‌ಗಾಗಿ ಅರ್ಜಿ ಹಾಕಿದ್ದಾರೆ. ಆದರೆ, ಅವರು ಈ ಬಗ್ಗೆ ಮುಕ್ತವಾಗಿ ಎಲ್ಲೂ ಹೇಳಿಲ್ಲ. ಸಮೀಕ್ಷೆಯಲ್ಲಿ ಒಲವು ವ್ಯಕ್ತವಾದರೆ ಅವರಿಗೇ ಟಿಕೆಟ್ ಕೊಡುತ್ತಾರೆ ಅಷ್ಟೆ' ಎಂದು ಸಾಧ್ಯತೆಯನ್ನು ಬಿಚ್ಚಿಟ್ಟರು.

'ಬಿಜೆಪಿಗೆ ಜಗದೀಶ ಶೆಟ್ಟರ್ ಮರಳುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಅವರು ಬಿಜೆಪಿಗೆ ವಾಪಸ್ ಹೋಗುವುದಿಲ್ಲ. ಅವರಿಗೆ ಅಲ್ಲಿ ಸ್ಥಾನಮಾನ ಇಲ್ಲ ಎಂದು ಇಲ್ಲಿಗೆ (ಕಾಂಗ್ರೆಸ್) ಬಂದಿದ್ದಾರೆ. ಚುನಾವಣೆಯಲ್ಲಿ ಸೋತರೂ ಪರಿಷತ್ ಸದಸ್ಯರನ್ನಾಗಿ ಮಾಡಿದ್ದೇವೆ' ಎಂದರು.

'ಹೀಗೆ ಆಗಬಾರದಿತ್ತು'

ಕಂಪ್ಲಿ (ಬಳ್ಳಾರಿ ಜಿಲ್ಲೆ): ನಿಗಮ ಮಂಡಳಿಗಳ ಅಧ್ಯಕ್ಷರ ಪಟ್ಟಿ ಗೊಂದಲ ಕುರಿತಂತೆ 'ಹೀಗೆ ಆಗಬಾರದಿತ್ತು' ಎಂದು ಶಾಸಕ ಜೆ.ಎನ್.ಗಣೇಶ್ ಬೇಸರ ವ್ಯಕ್ತಪಡಿಸಿದರು.

ತಾಲ್ಲೂಕಿನ ಸಣಾಪುರ ಗ್ರಾಮದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ನಿಗಮ ಮಂಡಳಿ ಪಟ್ಟಿಯಲ್ಲಿ ನನ್ನ ಹೆಸರು ಇದ್ದರೇನು? ಇಲ್ಲದಿದ್ದರೇನು?' ಎಂದು ಬೇಸರ ವ್ಯಕ್ತಪಡಿಸಿದರು.

'ಸಂಭಾವ್ಯರ ಮೊದಲ ಪಟ್ಟಿಯಲ್ಲಿ ಶಾಸಕ ಗಣೇಶ್ ಅವರಿಗೆ ಖಾದಿ ನಿಗಮ ನೀಡಲಾಗುವುದು ಎಂದು ಕೇಳಿ ಬಂದಿತ್ತು. ಆ ವಿಷಯವು ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡಿತ್ತು. ಆದರೆ, ಶಾಸಕರು ಕೇಳಿದ ನಿಗಮ ಮಂಡಳಿ ನೀಡದಿರುವುದೇ ಈ ಅಸಮಾಧಾನಕ್ಕೆ ಕಾರಣವಿರಬಹುದು' ಎಂದು ಹೆಸರು ಹೇಳಲಿಚ್ಛಿಸದ ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದರು.

ಉದ್ಯಮಿ ಮನೆ ಮೇಲೆ ಐಟಿ ದಾಳಿ

ಹುಬ್ಬಳ್ಳಿ: ನಗರದ ಉದ್ಯಮಿ ಗಣೇಶ ಸೇಠ್ ಅವರ ಮನೆ, ಕಚೇರಿ, ಹೋಟೆಲ್ ಮೇಲೆ ಐಟಿ ಅಧಿಕಾರಿಗಳು ಮಂಗಳವಾರ ಮತ್ತು ಬುಧವಾರ ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲಿಸಿದರು.

ಇಲ್ಲಿನ ಅಶೋಕನಗರದ ಅವರ ನಿವಾಸ, ಗಣೇಶಪೇಟೆಯ ಕೆಜಿಪಿ ಆಭರಣ ಮಳಿಗೆ, ಲ್ಯಾಮಿಂಗ್ಟನ್ ರಸ್ತೆಯ ಮಹಾದೇವಿ ಸಿಲ್ಕ್ ಆ್ಯಂಡ್ ಸ್ಯಾರೀಸ್, ಅಮರಗೋಳದ ರಾಯಲ್ ರಿಟ್ಜ್ ರೆಸಾರ್ಟ್ ಮೇಲೆ ಏಕಕಾಲಕ್ಕೆ 50ಕ್ಕೂ ಹೆಚ್ಚು ಅಧಿಕಾರಿಗಳು ದಾಳಿ ನಡೆಸಿದರು.

ಹೊಸಪೇಟೆಯಲ್ಲಿರುವ ತಾರಾ ಪ್ಯಾಲೇಸ್, ಸಿಲ್ಕ್ ಸ್ಯಾರೀಸ್ ಮಳಿಗೆಗಳ ಮೇಲೂ ದಾಳಿ ನಡೆದಿದೆ. ಹುಬ್ಬಳ್ಳಿ, ಬೆಳಗಾವಿ ಮತ್ತು ಗೋವಾದ ಅಧಿಕಾರಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕೆಜಿಪಿ ಜ್ಯುವೆಲರ್ಸ್ ಮಳಿಗೆಗೆ ಗಣೇಶ್ ಶೇಠ್ ಪುತ್ರ ಶ್ರೀಗಂಧ ಸೇಠ್ ಅವರನ್ನು ಕರೆಸಿದ ಅಧಿಕಾರಿಗಳು, ಕೆಲ ಸಮಯ ವಿಚಾರಣೆ ನಡೆಸಿದರು.

ಹಿಂದೂ ಧರ್ಮೀಯರಿಗೆ ಅಪಮಾನ ಮುಸ್ಲಿಂ ಯುವಕನಿಗೆ ಥಳಿತ

ಪ್ರಜಾವಾಣಿ ವಾರ್ತೆ

ಬೀದರ್: ಭಗವಾಧ್ವಜವನ್ನು ಒಳ ಉಡುಪಿನಲ್ಲಿ ಇಟ್ಟುಕೊಂಡು, ಹಿಂದೂ ಧರ್ಮೀಯರನ್ನು ಹೀಯಾಳಿಸಿ ಅಪಮಾನಿಸಿರುವ ಘಟನೆಗೆ ಸಂಬಂಧಿಸಿದಂತೆ ಗಡಿ ಭಾಗದ ಮೋರಗಿ ಗ್ರಾಮದಲ್ಲಿ ಯುವಕನೊಬ್ಬನನ್ನು ತೆಲಂಗಾಣ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಬಂಧಿತನನ್ನು ಅಬ್ಬಾಸ್ ಅಲಿ ಮೊಹಮ್ಮದ್ ರಸೂಲ್ ಎಂದು ಗುರುತಿಸಲಾಗಿದೆ. ಯುವಕ ತೆಲಂಗಾಣ ರಾಜ್ಯದ ಸಂಗಾರೆಡ್ಡಿ ಜಿಲ್ಲೆ ನಾರಾಯಣಖೇಡ ತಾಲ್ಲೂಕಿನ ಮೋರಗಿ ಗ್ರಾಮದವನು. ಘಟನೆ ಕೂಡ ಅದೇ ಗ್ರಾಮದಲ್ಲಿ ನಡೆದಿದೆ. ಈ ಗ್ರಾಮವು ಬೀದರ್ ಗಡಿಗೆ ಹೊಂದಿಕೊಂಡಿದೆ. ಘಟನೆ ಬೆನ್ನಲ್ಲೇ ಗ್ರಾಮಸ್ಥರು ರಸೂಲ್‌ನನ್ನು ಹಿಡಿದು, ವಿವಸ್ತ್ರಗೊಳಿಸಿ 'ಜೈಶ್ರೀರಾಮ್' ಎಂದು ಘೋಷಣೆ ಕೂಗುತ್ತ ಹೊಡೆದಿದ್ದಾರೆ. ಈ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಅಬ್ಬಾಸ್ ಅಲಿ ಧ್ವಜವನ್ನು ಒಳ ಉಡುಪಿನಲ್ಲಿ ಇಟ್ಟುಕೊಂಡು, ಅವಮಾನಿಸಿ ವಿಡಿಯೊ ಮಾಡಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದ. ಈ ವಿಷಯವನ್ನು ಬೀದರ್ ತಾಲ್ಲೂಕಿನ ಚಿಲ್ಲರ್ಗಿ ಗ್ರಾಮಸ್ಥರು ಸ್ಥಳೀಯರ ಗಮನಕ್ಕೆ ತಂದಿದ್ದಾರೆ. ಬಳಿಕ ಆತನನ್ನು ವಿವಸ್ತ್ರಗೊಳಿಸಿ ಹಲ್ಲೆ ನಡೆಸಲಾಗಿದೆ. ಆರೋಪಿಯನ್ನು ನಾಗಲಗಿದ್ದ ಠಾಣೆ ಪೊಲೀಸರು ಬಂಧಿಸಿದ್ದಾರೆ. ಥಳಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಅದು ಬೀದರ್ ಜಿಲ್ಲೆಗೆ ಸಂಬಂಧಿಸಿದ್ದಲ್ಲ. ಹೆಚ್ಚಿನ ಮಾಹಿತಿ ಕಲೆ ಹಾಕಲು ಜನವಾಡ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಅವರನ್ನು ನಾಗಲಗಿದ್ದ ಠಾಣೆಗೆ ಕಳಿಸಿಕೊಡಲಾಗಿದೆ' ಎಂದು ಎಸ್‌ಪಿ ಚನ್ನಬಸವಣ್ಣ ಎಸ್.ಎಲ್. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕಾರ್ಮಿಕರ ನಕಲಿ ಕಾರ್ಡ್ ಪತ್ತೆ!

ಒಂದನೇ ಪುಟದಿಂದ

ದಿಢೀರ್ ಏರಿಕೆ: 'ಕೋವಿಡ್‌ಗೂ ಮುನ್ನ ಹಾವೇರಿ ಜಿಲ್ಲೆಯಲ್ಲಿ 50 ಸಾವಿರ ಕಾರ್ಮಿಕರ ಕಾರ್ಡ್‌ಗಳಿದ್ದವು. ಕೋವಿಡ್ ಬಂದ ನಂತರ ಕಾರ್ಡ್‌ಗಳ ಸಂಖ್ಯೆ 2.94 ಲಕ್ಷಕ್ಕೆ ದಿಢೀರ್ ಏರಿಕೆಯಾಯಿತು. ಕೋವಿಡ್ ವೇಳೆ ಕಾರ್ಮಿಕ ಇಲಾಖೆ ನೀಡಿದ ಆಹಾರ ಕಿಟ್ ಮತ್ತು ಕಾರ್ಮಿಕರ ಖಾತೆಗೆ ₹3 ಸಾವಿರ ಪ್ರೋತ್ಸಾಹಧನವನ್ನು ಕಾರ್ಮಿಕರಲ್ಲದವರೂ ಕಾರ್ಡ್ ಮಾಡಿಸಿಕೊಂಡು, ಸೌಲಭ್ಯಕ್ಕೆ ಮುಗಿಬಿದ್ದರು. ಗ್ರಾಮಗಳಲ್ಲೂ ಏಜೆಂಟರು ಹುಟ್ಟಿಕೊಂಡರು' ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದರು.

7 ತಂಡಗಳ ರಚನೆ: 'ಕಾರ್ಮಿಕ ಕಲ್ಯಾಣ ಮಂಡಳಿಯು ಕಾರ್ಮಿಕ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು ಹಾಗೂ ಸಿಬ್ಬಂದಿ ಒಳಗೊಂಡ 7 ತಂಡಗಳನ್ನು ರಚಿಸಿ, ಹಾವೇರಿ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಕಳುಹಿಸಿತ್ತು. ಈ ತಂಡಗಳು ನವೆಂಬರ್ 21ರಿಂದ ಡಿಸೆಂಬರ್ 2ರವರೆಗೆ ಸ್ಥಳ ಪರಿಶೀಲಿಸಿತು. ಗ್ರಾಮ ಪಂಚಾಯಿತಿ ಮತ್ತು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿತು. ನೋಂದಾಯಿತ ಕಾರ್ಮಿಕರ ಉದ್ಯೋಗ ವಿವರಗಳ ಮಾಹಿತಿ ಕಲೆ ಹಾಕಿ, ಅರ್ಹ ಮತ್ತು ಅನರ್ಹರ ಪಟ್ಟಿ ತಯಾರಿಸಿದೆ' ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಮಹೇಶ ಕುಳಲಿ 'ಪ್ರಜಾವಾಣಿ'ಗೆ ತಿಳಿಸಿದರು.

> ಅರ್ಹ ಕಾರ್ಮಿಕರಿಗೆ ಸೌಲಭ್ಯ ಸಿಗಲಿ ಎಂದು ನಕಲಿ ಕಾರ್ಡ್ ಪತ್ತೆಗೆ ಕ್ರಮ ಕೈಗೊಂಡಿದ್ದೇವೆ. ಹಂತಹಂತವಾಗಿ ಎಲ್ಲ ಜಿಲ್ಲೆಗಳಲ್ಲೂ ತನಿಖಾ ಕಾರ್ಯ ನಡೆಯಲಿದೆ
> **ಸಂತೋಷ್ ಲಾಡ್**, ಕಾರ್ಮಿಕ ಸಚಿವ

'ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ 18.49 ಲಕ್ಷ ಮಹಿಳಾ ಕಾರ್ಮಿಕರು, 27.83 ಲಕ್ಷ ಪುರುಷ ಕಾರ್ಮಿಕರು ಹಾಗೂ 9,076 ಇತರೆ ಸೇರಿ ಒಟ್ಟು 46.42 ಲಕ್ಷ ಕಾರ್ಮಿಕರು ನೋಂದಣಿ ಮಾಡಿಕೊಂಡು, 'ಕಾರ್ಮಿಕರ ಕಾರ್ಡ್' ಪಡೆದಿದ್ದಾರೆ. ಇವರಲ್ಲಿ ನಕಲಿ ಕಾರ್ಮಿಕರನ್ನು ಪತ್ತೆ ಮಾಡಿ, ನೈಜ ಕಾರ್ಮಿಕರ ಪಟ್ಟಿ ಸಿದ್ಧಪಡಿಸಲು ಮಂಡಳಿ ಕ್ರಮ ಕೈಗೊಂಡಿದೆ' ಎಂದು ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು.

ಮರ್ಯಾದೆಗೇಡು ಹತ್ಯೆ

ಒಂದನೇ ಪುಟದಿಂದ

ಧನುಶ್ರೀ ಪ್ರಿಯಕರ ನೊಂದಿಗೆ ಕೆಲ ಹಾಡುಗಳಿಗೆ ರೀಲ್ಸ್ ಕೂಡ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು ಎನ್ನಲಾಗಿದೆ.

ಅಮ್ಮನನ್ನು ಕಾಪಾಡಲಿಲ್ಲ: 'ತಂಗಿಯನ್ನು ನಾನೇ ತಳ್ಳಿದೆ. ಕಾಪಾಡಲು ಹೋದ ಅಮ್ಮನೂ ಮುಳುಗಿದರು. ಅಮ್ಮನನ್ನು ಕಾಪಾಡಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ' ಎಂದು ಆರೋಪಿ ತಂದೆ ಬಳಿ ಹೇಳಿಕೊಂಡಿದ್ದಾನೆ. ಬೈಕ್‌ನಲ್ಲಿ ತಂದೆಯನ್ನು ಕೆರೆಯ ಬಳಿಗೆ ಕರೆದೊಯ್ದು ತೋರಿಸಿದ್ದ' ಎಂದೂ ಹೇಳಲಾಗುತ್ತಿದೆ.

ಸತೀಶ್ ಅವರು ಬುಧವಾರ ಗ್ರಾಮಾಂತರ ಠಾಣೆಗೆ ಬಂದು, ಮಗ ಎಸಗಿದ ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಇದನ್ನು ಆಧರಿಸಿ ಅಗ್ನಿಶಾಮಕ ದಳದವರು ಕಾರ್ಯಾಚರಣೆ ನಡೆಸಿದರು. ಈ ವೇಳೆ ಕೆರೆಯ ಬಳಿ ಸಾವಿರಾರು ಮಂದಿ ಜಮಾಯಿಸಿದ್ದರು. ಆರೋಪಿ ನಿತೀಶ್‌ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ ವೇಳೆ ಆತ ಕೃತ್ಯ ಎಸಗಿದ್ದನ್ನು ಒಪ್ಪಿಕೊಂಡಿದ್ದಾನೆ ಎಂದು ತಿಳಿದುಬಂದಿದೆ. ಮೈಸೂರಿನಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

'ತಂಗಿಯ ವಿಷಯದಲ್ಲಿ ನಿತೀಶ್ ಹಲವು ಬಾರಿ ಗಲಾಟೆ ನಡೆಸಿದ್ದ. ಕೆಲವು ತಿಂಗಳಿಂದ ಆಕೆಯೊಂದಿಗೆ ಮಾತು ಬಿಟ್ಟಿದ್ದ. ಮರ್ಯಾದೆ ಕಳೆಯಬೇಡ ಎಂದು ನಾನೂ ಮಗಳಿಗೆ ಹೇಳಿದ್ದೆ. ಈ ವಿಚಾರವಾಗಿ ಗಲಾಟೆ ನಡೆಯುತ್ತಲೇ ಇತ್ತು. ಈಗ ತಂಗಿಯನ್ನೇ ಸಾಯಿಸಿದ್ದಾನೆ' ಎಂದು ಸತೀಶ್ ಹೇಳಿದರು.

'ತಂಗಿಯನ್ನು ನಾನೇ ಕೆರೆಗೆ ತಳ್ಳಿದೆ ಎಂದು ಆರೋಪಿ ವಿಚಾರಣೆ ವೇಳೆ ಹೇಳಿದ್ದಾನೆ. ತನಿಖೆ ನಡೆಯುತ್ತಿದೆ' ಎಂದು ಎಸ್ಪಿ ಸೀಮಾ ಲಾಟ್ಕರ್ ಪ್ರತಿಕ್ರಿಯಿಸಿದರು.

'ಇಂಡಿಯಾ' ಮೈತ್ರಿಯಲ್ಲಿ ಕಂಪನ

ಒಂದನೇ ಪುಟದಿಂದ

ಯಾತ್ರೆ ಕುರಿತು ಜನವರಿ 13ರಂದೇ ತಮಗೆ ಆಹ್ವಾನ ಬಂದಿದೆ ಎಂದು ಮಮತಾ ಬ್ಯಾನರ್ಜಿ ಅವರು ಸ್ಪಷ್ಟಪಡಿಸಿದ್ದಾರೆ. ಬಂಗಾಳದಲ್ಲಿನ ವಾಸ್ತವ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಕೈ ಪಾಳಯ ವಿಫಲವಾಗಿದೆ ಎಂದು ಟಿಎಂಸಿ ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೈದರಾಬಾದ್‌ನಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಕಾಂಗ್ರೆಸ್ ನಾಯಕಿ ದೀಪಾ ದಾಸ್‌ಮುನ್ಷಿ, 'ಮಮತಾ ಅವರು ಪರೋಕ್ಷವಾಗಿ ಬಿಜೆಪಿಗೆ ಸಹಾಯ ಮಾಡುತ್ತಿದ್ದಾರೆ' ಎಂದು ದೂರಿದ್ದಾರೆ.

'ಮಮತಾ ಅವರಿಲ್ಲದೆ ವಿಪಕ್ಷಗಳ ಮೈತ್ರಿಯನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಪಶ್ಚಿಮ ಬಂಗಾಳದಲ್ಲಿ ಇಂಡಿಯಾ ಮೈತ್ರಿಕೂಟ ಜತೆಗೂಡಿ ಚುನಾವಣೆ ಎದುರಿಸಲಿವೆ' ಎಂದು ಕಾಂಗ್ರೆಸ್ ಹೇಳಿದೆ.

ಮುಖ್ಯಮಂತ್ರಿ ಮಮತಾ ಅವರೊಂದಿಗೆ ಕಾಂಗ್ರೆಸ್‌ನ ಉನ್ನತ ನಾಯಕರು ಶೀಘ್ರ ಮಾತುಕತೆ ನಡೆಸುವ ಸಾಧ್ಯತೆ ಇದೆ. ಇನ್ನೊಂದೆಡೆ, ಸೀಟು ಹಂಚಿಕೆ ಕಸರತ್ತಿನ ವಿಳಂಬದ ವಿರುದ್ಧ ಜೆಡಿಯು ಸಹ ಧ್ವನಿ ಎತ್ತಿದೆ. ವಿಪಕ್ಷಗಳ ಮೈತ್ರಿಕೂಟವು ಛಿದ್ರಗೊಂಡಿದೆ ಎಂದು ಬಿಜೆಪಿ ನಾಯಕರು ವ್ಯಂಗ್ಯವಾಡಿದ್ದಾರೆ.

ಪಂಜಾಬ್‌ನಲ್ಲಿ ಏನಿದು ಜಟಾಪಟಿ

ಪಂಜಾಬ್‌ನಲ್ಲಿ ಜತೆಗೂಡಿ ಲೋಕಸಭಾ ಚುನಾವಣೆ ಎದುರಿಸುವುದಕ್ಕೆ ಕಾಂಗ್ರೆಸ್ ಹಾಗೂ ಎಎಪಿಯ ರಾಜ್ಯ ಘಟಕಗಳು ಆರಂಭದಲ್ಲೇ ವಿರೋಧ ವ್ಯಕ್ತಪಡಿಸಿದ್ದವು. ಪಂಜಾಬ್‌ನಲ್ಲಿ ಎಎಪಿ ನಿಲುವು ಕಾಂಗ್ರೆಸ್‌ಗೆ ಆಘಾತ ತಂದಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರ ಭೇಟಿಯ ಸಂದರ್ಭದಲ್ಲಿ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್, 'ಪಂಜಾಬ್‌ನಲ್ಲಿ ಮೈತ್ರಿ ಕಷ್ಟ' ಎಂದು ಸೂಚ್ಯವಾಗಿ ಹೇಳಿದ್ದರು.

ದೆಹಲಿಯ ಏಳು ಲೋಕಸಭಾ ಕ್ಷೇತ್ರಗಳ ಸೀಟು ಹಂಚಿಕೆ ಬಗ್ಗೆ ಕಾಂಗ್ರೆಸ್‌ನ ರಾಷ್ಟ್ರೀಯ ಮೈತ್ರಿ ಸಮಿತಿಯ ಸದಸ್ಯರು ಎಎಪಿ ನಾಯಕರೊಂದಿಗೆ ಇತ್ತೀಚೆಗೆ ಮಾತುಕತೆ ನಡೆಸಿದ್ದರು. ಪಂಜಾಬ್‌ನಲ್ಲಿ ಮೈತ್ರಿ ಮಾತುಕತೆ ನಡೆಸಲು ಸಾಧ್ಯವಿಲ್ಲ ಎಂದೂ ಎರಡೂ ಪಕ್ಷಗಳ ರಾಜ್ಯ ನಾಯಕರು ಸ್ಪಷ್ಟಪಡಿಸಿದ್ದರು. ಪಂಜಾಬ್‌ನಲ್ಲಿ ಉಭಯ ಪಕ್ಷಗಳು ಮೈತ್ರಿ ಮಾಡಿಕೊಂಡರೆ ಬಿಜೆಪಿಗೆ ಅನುಕೂಲ ಆಗುತ್ತದೆ ಎಂಬುದು ಎರಡೂ ಪಕ್ಷಗಳ ರಾಷ್ಟ್ರೀಯ ನಾಯಕರ ಆತಂಕ. ಆದರೆ, ಚಂಡೀಗಢ ಮೇಯರ್ ಚುನಾವಣೆಗೆ ಉಭಯ ಪಕ್ಷಗಳು ಮೈತ್ರಿ ಮಾಡಿಕೊಂಡಿವೆ. ಪಂಜಾಬ್‌ನಲ್ಲಿ ಬಿಜೆಪಿಗೆ ಪ್ರಬಲ ನೆಲೆ ಇಲ್ಲ. ರಾಜ್ಯದಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲು ಕಮಲ ಪಾಳಯವು ಸಿದ್ಧತೆ ನಡೆಸಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಶಿರೋಮಣಿ ಅಕಾಲಿ ದಳದೊಂದಿಗೆ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿತ್ತು. ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಅಕಾಲಿ ದಳವು ಬಿಜೆಪಿಯಿಂದ ದೂರವಾಗಿತ್ತು.

ಕಾಡಾನೆ ದಾಳಿಗೆ ಸಿಲುಕಿ ಕಾರ್ಮಿಕ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಕೊಡಗು ಜಿಲ್ಲೆ): ಇಲ್ಲಿನ ಹೊಸೂರು ಬೆಟ್ಟಗೇರಿಯಲ್ಲಿ ಬುಧವಾರ ಕಾಡಾನೆ ದಾಳಿಗೆ ಸಿಲುಕಿ ಕಾರ್ಮಿಕ ಮಹಿಳೆ ಬೇಬಿ (55) ಎಂಬುವವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಅವರು ಸಂಜೆ ವೇಳೆ ಕಾಫಿಯನ್ನು ಸಾಗಿಸುತ್ತಿದ್ದರು. ಈ ವೇಳೆ ಕಾಡಾನೆ ದಾಳಿ ನಡೆಸಿದೆ. ತೀವ್ರ ಗಾಯಗೊಂಡ ಅವರು ಸ್ಥಳದಲ್ಲೇ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಸಿದ್ದಾಪುರ ಪೊಲೀಸರು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಮತ್ತೆ 660 ಪಿಎಸ್‌ಐ ನೇಮಕಾತಿ'

ಒಂದನೇ ಪುಟದಿಂದ

'ಪಿಎಸ್‌ಐ 545 ಹುದ್ದೆಗಳಿಗೆ ನಡೆದ ಪರೀಕ್ಷೆಯ ಮೌಲ್ಯಮಾಪನವನ್ನು ಆದಷ್ಟು ಬೇಗ ಮುಗಿಸಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. 54 ಸಾವಿರ ಅಭ್ಯರ್ಥಿಗಳು ಈ ಪರೀಕ್ಷೆ ಬರೆಯಬೇಕಿತ್ತು. ಕೆಲವರು ಗೈರಾಗಿದ್ದಾರೆ. ಯಾವುದೇ ರೀತಿಯ ಪರೀಕ್ಷಾ ಅಕ್ರಮ ಘಟನೆಗಳು ನಡೆದಿಲ್ಲ' ಎಂದರು.

'ಮುಂದಿನ ಹಂತದಲ್ಲಿ 403 ಹುದ್ದೆಗಳ ನೇಮಕಾತಿಗೆ ಈಗಾಗಲೇ ದೈಹಿಕ ಪರೀಕ್ಷೆ ಮುಗಿದಿದೆ. ಪರೀಕ್ಷೆ ಬಾಕಿ ಇದೆ. ಇದನ್ನು ಕೂಡ ಕೆಇಎಗೆ ವಹಿಸುವ ಚಿಂತನೆಯಿದೆ. ಈ ಎರಡೂ ನೇಮಕಾತಿ ಪ್ರಕ್ರಿಯೆ ಮುಗಿದರೆ ಇಲಾಖೆಗೆ ಒಟ್ಟು 948 ಪಿಎಸ್‌ಐಗಳು ಲಭ್ಯವಾಗುತ್ತಾರೆ' ಎಂದರು.

ತನಿಖೆಯಿಂದ ಸತ್ಯಾಸತ್ಯತೆ ಗೊತ್ತಾಗಲಿದೆ: 'ಕಲಬುರಗಿಯಲ್ಲಿ ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಮಾಡಿದ ಪ್ರಕರಣದಲ್ಲಿ ನಾಲ್ವರನ್ನು ಬಂಧಿಸಲಾಗಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಎಲ್ಲವನ್ನು ಪರಿಶೀಲನೆ ನಡೆಸಲಾಗುವುದು. ಕೃತ್ಯದ ಉದ್ದೇಶ ಏನೆಂಬುವುದು ತನಿಖೆಯಿಂದ ಹೊರಬರಬೇಕಿದೆ. ಯಾರದ್ದಾದರೂ ಕುಮ್ಮಕ್ಕು ಇದೆಯಾ ಎಂಬುದೂ ತನಿಖೆಯಿಂದ ಗೊತ್ತಾಗಲಿದೆ' ಎಂದರು.

'ಆಧಾರ್ ದೃಢೀಕರಣ ಕಡ್ಡಾಯಕ್ಕೆ ಚಿಂತನೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ನಕಲಿ ದಾಖಲೆಗಳನ್ನು ಬಳಸಿಕೊಂಡು ಆಸ್ತಿಗಳ ನೋಂದಣಿ ಮಾಡಿಸಿ ಪರರ ಆಸ್ತಿಗಳನ್ನು ಕಬಳಿಸುವವರನ್ನು ನಿಯಂತ್ರಿಸಲು ಆಸ್ತಿಗಳ ನೋಂದಣಿಗೆ ಆಧಾರ್ ದೃಢೀಕರಣ ಕಡ್ಡಾಯ ಮಾಡುವ ಚಿಂತನೆ ಇದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆಸ್ತಿ ಕಬಳಿಕೆ ನಿಯಂತ್ರಣಕ್ಕೆ ಸುಪ್ರೀಂಕೋರ್ಟ್ ಸಲಹೆ ನೀಡಿದೆ. ಈ ಹಿನ್ನೆಲೆಯಲ್ಲಿ ಆಸ್ತಿ ನೋಂದಣಿಗೆ ಆಧಾರ್ ದೃಢೀಕರಣ ಕಡ್ಡಾಯ ಮಾಡುವುದರಿಂದ ಆಸ್ತಿ ವಂಚನೆಯ ಪ್ರಕರಣಗಳನ್ನು ನಿಯಂತ್ರಣಕ್ಕೆ ತರಬಹುದು. ಈ ಬಗ್ಗೆ ಗಂಭೀರ ಚಿಂತನೆ ನಡೆಯುತ್ತಿದ್ದು, ಅನುಷ್ಠಾನಕ್ಕಾಗಿ ಒಂದು ತಿಂಗಳಿಂದ ಕಾನೂನು ತಜ್ಞರ ಸಲಹೆ ಪಡೆಯಲಾಗುತ್ತಿದೆ' ಎಂದರು.

'748 ಪರವಾನಗಿ ಭೂಮಾಪಕರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಈ ತಿಂಗಳಲ್ಲಿ ಎಲ್ಲ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗುವುದು. 347 ಸರ್ಕಾರಿ ಭೂಮಾಪಕರ ನೇಮಕಾತಿಗೆ ಅನುಮತಿ ಸಿಕ್ಕಿದ್ದು, ಶೀಘ್ರವೇ ಪ್ರಕ್ರಿಯೆ ಆರಂಭವಾಗಲಿದೆ. ಹೆಚ್ಚುವರಿಯಾಗಿ 592 ಭೂಮಾಪಕರ ನೇಮಕಾತಿಗೂ ಮುಖ್ಯಮಂತ್ರಿ ಮೌಖಿಕ ಅನುಮತಿ ಕೊಟ್ಟಿದ್ದಾರೆ. ಬಾಕಿ ಉಳಿದ ನೋಂದಣಿ ಪ್ರಕ್ರಿಯೆಯನ್ನು ವೇಗಗೊಳಿಸಲು ಎಲ್ಲ ತಾಲ್ಲೂಕುಗಳ ನೋಂದಣಿ ಕಚೇರಿಗಳಿಗೆ ₹ 10 ಕೋಟಿ ವೆಚ್ಚದ ಅತ್ಯಾಧುನಿಕ ಉಪಕರಣಗಳನ್ನು ಪೂರೈಕೆ ಮಾಡಲಾಗುವುದು ಎಂದರು.

ಟೆಂಡರ್ ಹಾಗೂ ಬಹಿರಂಗ ಹರಾಜು

ವಲಯ ಕೃಷಿ ಸಂಶೋಧನಾ ಕೇಂದ್ರ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು –65 ಇಲ್ಲಿ ದಿನಾಂಕ: 30–01–2024 ರಂದು ಮಂಗಳವಾರ ಬೆಳಿಗ್ಗೆ 10–30 ಗಂಟೆಗೆ 2023–24ನೇ ಸಾಲಿನ ಮಾವಿನ ಫಸಲನ್ನು ನಿರ್ದಿಷ್ಟ ಅವಧಿಗೆ ಟೆಂಡರ್ ಹಾಗೂ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಹಿರಿಯ ಕ್ಷೇತ್ರ ಅಧೀಕ್ಷಕರು, ವ.ಕೃ.ಸಂ.ಕೇ., ಗಾ.ಕೃ.ವಿ.ಕೇ. ದೂರವಾಣಿ ಸಂಖ್ಯೆ:– 23330153/315 ಮೊಬೈಲ್ ಸಂ. 9449864251 ಇಲ್ಲಿ ಸಂಪರ್ಕಿಸಿ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009

ಸಂ: ಕಾಪಾಅ/ಪಂರಾಇವಿ/ಬೆಂಗ್ರಾಂ/ಟೆಂ–09/ತಾಂಶಾ/2023–24 ದಿನಾಂಕ: 23.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 09/2023–24 (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದಡಿ ಅನುಮೋದನೆಯಾದ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 31.01.2024 ಸಂಜೆ 5.00 ಗಂಟೆಯವರೆಗೆ** ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು **http://kppp.karnataka.gov.in** ವೆಬ್‌ಸೈಟ್ ನಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು

DIPR/CP/3226/SPAN/2023-24

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(27ಇ):(24ಇ):2023–24:ಜೆಇ–3 ದಿನಾಂಕ: 24.01.2024

ಟೆಂಡರ್ ಪ್ರಕಟಣೆ / 2ನೇ ಕರೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ–ಪ್ರೊಕ್ಯುರ್‌ಮೆಂಟ್ ಮೂಲಕ **ಮಂಗಳೂರು ವಿಭಾಗ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 4059–80–051–0–29–386 ಇಲಾಖಾ ಕಟ್ಟಡಗಳ ನಿರ್ಮಾಣ ರಡಿ** ಇಂಡೆಂಟ್ ನಂ.5719 ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ **ಕೊನೆಯ ದಿನಾಂಕ: 09.02.2024 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ: 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆಯಡಿ ಇಂಡೆಂಟ್ ನಂ.7176 ಮತ್ತು **ಲೆಕ್ಕಶೀರ್ಷಿಕೆ: 5054–03–101–0–02–132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು ರಡಿ** ಇಂಡೆಂಟ್ ನಂ. 7183 ಈ ಕಾಮಗಾರಿಗಳಿಗೆ **2ನೇ ಕರೆಯಾಗಿ ಟೆಂಡರ್ ಕರೆಯಲಾಗಿದ್ದು,** ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 01.02.2024 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ. ಮೀಸಲಾತಿ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿದುಕೊಳ್ಳುವುದು.

ಕೆ,ಡಬ್ಲ್ಯೂ–1 & ಕೆ.ಡಬ್ಲ್ಯೂ–2 ಬಿಡ್ ಡೊಕ್ಯೂಮೆಂಟ್ ಪ್ರಕಾರ ಟೆಂಡರ್ ಕರೆಯಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **kppp.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

DIPR/MNG/KSMCA/1165/23-24 dt.24.01.2024 ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

ಪೊಲೀಸ್ ಅಧೀಕ್ಷಕರವರ ಕಛೇರಿ, ಠೇವಣಿ ವಂಚನೆ ವಿಭಾಗ, ಸಿಐಡಿ, ಬೆಂಗಳೂರು

ಪ್ರಕಟಣೆ

ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೆ॥ **ಟಿಪಾರ್ಫ್ ಟ್ರೇಡಿಂಗ್ ಸರ್ವೀಸಸ್ ಪ್ರೈ.ಲಿ.** ಮತ್ತು ಇದಕ್ಕೆ ಸಂಬಂಧಿಸಿದ ಇತರೆ ಖಾಸಗಿ ಹಣಕಾಸು ಸಂಸ್ಥೆಗಳು ಸಾರ್ವಜನಿಕರಿಂದ ಅನಧಿಕೃತವಾಗಿ ಠೇವಣಿ ರೂಪದಲ್ಲಿ ಹಣ ಸಂಗ್ರಹಿಸಿ, ಲಾಭಾಂಶ ಮತ್ತು ಅಸಲು ಹಣವನ್ನು ನೀಡದೆ ಮೋಸ ಮಾಡಿರುತ್ತಾರೆ. ಈ ಬಗ್ಗೆ ತಿಲಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದು, ಪ್ರಸ್ತುತ ಸಿ.ಐ.ಡಿ.ಯಲ್ಲಿ ತನಿಖೆಯಲ್ಲಿರುತ್ತವೆ. ಈ ಪ್ರಕರಣದಲ್ಲಿನ ಆರೋಪಿತರಾದ ಹಬೀಬುಲ್ಲಾ ಷರೀಫ್ ಬಿನ್ ರಹೆಮತುಲ್ಲಾ ಷರೀಫ್, ಮಂಜುನಾಥ್.ಬಿ ಬಿನ್ ಬಾಲರಾಜ್, ಮಸೀವುಲ್ಲಾ ಷರೀಫ್ ಬಿನ್ ರಹಮತುಲ್ಲಾ ಷರೀಫ್, ತಿರುಮಲೇಶ್.ವಿ.ಜಿ ಬಿನ್ ಗಂಗೇಗೌಡ, ಪ್ರವೀಣ್ ಜಿ ನರಸಿಂಹನ್ ಬಿನ್ ನರಸಿಂಹನ್ ಜಿ.ಆರ್, ಹರೀಶ್ ಗಾಳಿ ಎಸ್. ಬಿನ್ ಕರಿಯಪ್ಪ ಶರಣಪ್ಪ, ಆರ್.ವಿ. ನಿಯಾಮತ್ ಉಲ್ಲಾ ಬಿನ್ ಆರ್.ವಿ. ಮೊಹಮ್ಮದ್, ಫಹಾದ್ ಷರೀಫ್ ಬಿನ್ ಫಯಾಜುಲ್ಲಾ ಷರೀಫ್ ಮತ್ತು ಅಮೀನ್ ಷರೀಫ್ ಬಿನ್ ಅಲೀಂವುಲ್ಲಾ ಷರೀಫ್ ಇವರುಗಳ ಹೆಸರಿನಲ್ಲಿರುವ ಚರಾಸ್ತಿ ಮತ್ತು ಸ್ಥಿರಾಸ್ತಿಗಳನ್ನು ಸ್ವಾಧೀನಪಡಿಸಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ–2004 ಕಾಯ್ದೆಯಂತೆ ಕ್ರಮ ಜರುಗಿಸಬೇಕಾಗಿರುವುದರಿಂದ ಇವರುಗಳ ಹೆಸರಿನಲ್ಲಿರುವ ಚರ ಮತ್ತು ಸಿರಾಸ್ತಿಗಳ ಬಗ್ಗೆ ಮಾಹಿತಿ ತಿಳಿದಿದ್ದಲ್ಲಿ, ಈ ಕೆಳಕಂಡ ಅಧಿಕಾರಿಗಳಿಗೆ ಮಾಹಿತಿ ನೀಡಲು ಕೋರಿದೆ. ಮಾಹಿತಿದಾರರ ಹೆಸರನ್ನು ಗೌಪ್ಯವಾಗಿರಿಸಲಾಗುವುದು.

ಸಹಿ/– (ಶ್ರೀನಿವಾಸ ವಿ.ಟಿ.), ಪೊಲೀಸ್ ಇನ್ಸ್‌ಪೆಕ್ಟರ್, ಠೇವಣಿ ವಂಚನೆ ವಿಭಾಗ, ಸಿಐಡಿ, ಬೆಂಗಳೂರು. ದೂ.ಸಂಖ್ಯೆ: 080–22094567

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, (ಗುಭ/ಗುನಿ) ವಿಭಾಗ, ಯಲಹಂಕ ವಲಯ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು–560002

ನಂ.: ಕಾಪಾಅ(ಗುಭ/ಗುನಿ)/ಯಲಹಂಕ/ಟೆಂಡರ್/02/ತಿದ್ದುಪಡಿ–01/2023–24 ದಿನಾಂಕ: 23.01.2024

ತಿದ್ದುಪಡಿ–1

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ(ಗುಭ/ಗುನಿ)/ಯಲಹಂಕ/ಟೆಂಡರ್/01/2023–24 ದಿನಾಂಕ: 11.01.2024ಕ್ಕೆ ಸಂಬಂಧಿಸಿದಂತೆ ಟೆಂಡರ್ ದಸ್ತಾವೇಜು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಟೆಂಡರ್ ತೆರೆಯುವ ದಿನಾಂಕವನ್ನು ಈ ಕೆಳಗಿನಂತೆ ಮುಂದೂಡಲಾಗಿದೆ.

ವೇಳಾಪಟ್ಟಿ ಈ ಕೆಳಗಿನಂತಿವೆ:

ಕ್ರ. ಸಂ.	ವಿವರ	ದಿನಾಂಕ	ಮುಂದೂಡಿದ ದಿನಾಂಕ
1	ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	24.01.2024	03.02.2024
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	25.01.2024	05.02.2024

ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು ಮತ್ತು ಇತರೆ ಎಲ್ಲಾ ನಿಯಮ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಗುಭ/ಗುನಿ ವಿಭಾಗ, ಯಲಹಂಕ ವಲಯ, ಬಿಬಿಎಂಪಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆ.ವಿಜಯನಗರ ಜಿಲ್ಲೆ

ಸಂಖ್ಯೆ: EE/RWS&SD/HPT/e-tender/Tech/2023-24/1046
ದಿನಾಂಕ:23–01–2024.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ–12/2023–24.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರು 2022–23ನೇ ಸಾಲಿನ ಜೆ.ಜೆ.ಎಂ ಯೋಜನೆಯಡಿ ಅನುಮೋದನೆಯಾದ ಹೂವಿನಹಡಗಲಿ ತಾಲ್ಲೂಕಿನ 02 & ಹರಪನಹಳ್ಳಿ ತಾಲ್ಲೂಕಿನ 01 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ 23–01–2024 ರಿಂದ 30.01.2024ರ ಸಾಯಂಕಾಲ 05.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ: 31.01.2024ರಂದು ಸಾಯಂಕಾಲ 05.05 ಗಂಟೆಗೆ ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.kppp.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರ್,
ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.ವಿಜಯನಗರ ಜಿಲ್ಲೆ

ಡಿಐಪಿಆರ್/ವಿಜಯನಗರ/348/ಕೆಎಸ್ಎಂಸಿಎ/2023–24

ಪೊಲೀಸ್ ಅಧೀಕ್ಷಕರವರ ಕಛೇರಿ, ಠೇವಣಿ ವಂಚನೆ ವಿಭಾಗ, ಸಿಐಡಿ, ಬೆಂಗಳೂರು

ಪ್ರಕಟಣೆ

ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೆ॥ **ಪಾಪ್ಯೂಲರ್ ಫೈನಾನ್ಸ್** ಮತ್ತು ಇದಕ್ಕೆ ಸಂಬಂಧಿಸಿದ ಇತರೆ ಖಾಸಗಿ ಹಣಕಾಸು ಸಂಸ್ಥೆಗಳು ಸಾರ್ವಜನಿಕರಿಂದ ಅನಧಿಕೃತವಾಗಿ ಠೇವಣಿ ರೂಪದಲ್ಲಿ ಹಣ ಸಂಗ್ರಹಿಸಿ, ಲಾಭಾಂಶ ಮತ್ತು ಅಸಲು ಹಣವನ್ನು ನೀಡದೆ ಮತ್ತು ಚಿನ್ನವನ್ನು ಅಡಮಾನ ಮಾಡಿಸಿಕೊಂಡು ಸಾರ್ವಜನಿಕರಿಗೆ ಹಿಂದಿರುಗಿಸದೇ ಮೋಸ ಮಾಡಿರುತ್ತಾರೆ. ಈ ಬಗ್ಗೆ ಬೆಂಗಳೂರು ನಗರ ಯಶವಂತಪುರ ಪೊಲೀಸ್ ಠಾಣೆ ಮತ್ತು ಇತರೆ ಪೊಲೀಸ್ ಠಾಣೆಗಳಲ್ಲಿ ಒಟ್ಟು 66 ಪ್ರಕರಣಗಳು ದಾಖಲಾಗಿದ್ದು, ಪ್ರಸ್ತುತ ಸಿ.ಐ.ಡಿ.ಯಲ್ಲಿ ತನಿಖೆಯಲ್ಲಿರುತ್ತವೆ. ಈ ಪ್ರಕರಣಗಳಲ್ಲಿನ ಆರೋಪಿತರಾದ ಥಾಮಸ್ ಡ್ಯಾನಿಯಲ್ ಬಿನ್ ಲೇಟ್ ಟಿ.ಕೆ. ಡ್ಯಾನಿಯಲ್, ಪ್ರಭಾ ಥಾಮಸ್ ಕೋಂ ಥಾಮಸ್ ಡ್ಯಾನಿಯಲ್, ರಿನು ಮಾರಿಯಮ್ ಥಾಮಸ್ ಬಿನ್ ಥಾಮಸ್ ಡ್ಯಾನಿಯಲ್, ರಿಯಾ ಅನ್ ಥಾಮಸ್ ಬಿನ್ ಥಾಮಸ್ ಡ್ಯಾನಿಯಲ್, ರಿಬಾ ಮೇರಿ ಥಾಮಸ್ ಬಿನ್ ಥಾಮಸ್ ಡ್ಯಾನಿಯಲ್ ಮತ್ತು ಮೇರಿ ಕುಟ್ಟಿ ಎಂ ಜಾನ್ ಕೋಂ ಟಿ.ಕೆ. ಡ್ಯಾನಿಯಲ್ ಇವರುಗಳ ಹೆಸರಿನಲ್ಲಿರುವ ಚರಾಸ್ತಿ ಮತ್ತು ಸ್ಥಿರಾಸ್ತಿಗಳನ್ನು ಸ್ವಾಧೀನಪಡಿಸಿಕೊಂಡು ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಅಧಿನಿಯಮ, 2019 ರಂತೆ ಕ್ರಮ ಜರುಗಿಸಬೇಕಾಗಿರುವುದರಿಂದ ಇವರುಗಳ ಹೆಸರಿನಲ್ಲಿರುವ ಚರ ಮತ್ತು ಸ್ಥಿರಾಸ್ತಿಗಳ ಬಗ್ಗೆ ಮಾಹಿತಿ ತಿಳಿದಿದ್ದಲ್ಲಿ, ಈ ಕೆಳಕಂಡ ಅಧಿಕಾರಿಗಳಿಗೆ ಮಾಹಿತಿ ನೀಡಲು ಕೋರಿದೆ. ಮಾಹಿತಿದಾರರ ಹೆಸರನ್ನು ಗೌಪ್ಯವಾಗಿರಿಸಲಾಗುವುದು.

ಸಹಿ/– (ಶ್ರೀನಿವಾಸ ವಿ.ಟಿ.), ಪೊಲೀಸ್ ಇನ್ಸ್‌ಪೆಕ್ಟರ್, ಠೇವಣಿ ವಂಚನೆ ವಿಭಾಗ, ಸಿಐಡಿ, ಬೆಂಗಳೂರು. ದೂ.ಸಂಖ್ಯೆ: 080–22094567

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
3ನೇ ಮಹಡಿ, ಟಿ.ಟಿ.ಎಂ.ಸಿ 'ಬಿ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027.
ದೂರವಾಣಿ: 080–22223753/58 ಇ–ಮೇಲ್: dduttl.1980@gmail.com

ಸಂಖ್ಯೆ:ಡಿಡಿಯುಟಿಟಿಎಲ್/ತಾಂ.ವಿ/ಟೆಂಡರ್/2023–24/847 ದಿನಾಂಕ: 24–01–2024

ಟೆಂಡರ್ / ಇ–ಹರಾಜು ಪ್ರಕಟಣೆ

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್, ಬೆಂಗಳೂರು ಕಂಪನಿಯ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ ಪಡೆಯುವ, ವಾಣಿಜ್ಯ ನಿವೇಶನಗಳ ಹರಾಜು, ಟ್ರಕ್ ಟರ್ಮಿನಲ್‌ನ ಸ್ಥಿರ ನಿಲುಗಡೆ ಜಾಗದ ಶುಲ್ಕ ವಸೂಲಾತಿ ಪರವಾನಿಗೆ ನೀಡುವ **"ಹೇಗಿದೆಯೋ ಹಾಗೆ"** ಕಾರ್ಯಗಳಿಗೆ ಸಂಬಂಧಿಸಿದಂತೆ ನೋಂದಾಯಿತ ಗುತ್ತಿಗೆದಾರರಿಂದ / ಅರ್ಹ ಅಭ್ಯರ್ಥಿಗಳಿಂದ ನೂತನ ಇ–ತಂತ್ರಾಂಶದಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್: **https://kppp.karnataka.gov.in** ಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಲು ಕೋರಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಗಳನ್ನು ಪ್ರತ್ಯೇಕವಾಗಿ ಪ್ರತಿ ಕಾರ್ಯಗಳಿಗೆ ನಿಗಧಿಪಡಿಸಲಾಗಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಡಿಡಿಯುಟಿಟಿಎಲ್, ಬೆಂಗಳೂರು.

ವಾಸಾಸಂಇ/ವಾ.ಪ್ರ/3236/ಅಡ್ವರ್ಟೋರ್/2023–24

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
Ph No: 0821-2449772 Fax No: 0821-2449772
E-mail:-khsdrp.divmys@gmail.com

ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–4/ಟೆಂಡರ್–23/2023–24
ದಿನಾಂಕ: 20.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಸಿವಿಲ್ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ

ಕ್ರ.ಸಂ.1 ಕಾಮಗಾರಿಯ ಹೆಸರು: Disbursement Unit of Bio Medical Waste and approach Road near Pediatric Building at Cheluvamba Hospital, MMC&RI, Mysuru. **ಅಂದಾಜುಮೊತ್ತ** (ರೂ.ಲಕ್ಷಗಳಲ್ಲಿ): 45.00 **ಇ.ಎಂ.ಡಿ ಮೊತ್ತ** (ರೂ.ಗಳಲ್ಲಿ): 90,000.00 **ಕಾಲಾವಧಿ (ಮಳೆಗಾಲ ಸೇರಿದಂತೆ):** 2 ತಿಂಗಳು (ಮಳೆಗಾಲ ಸೇರಿದಂತೆ) **ಗುತ್ತಿಗೆದಾರರ ಅರ್ಹತೆ:** ಮೂರನೇ ದರ್ಜೆ & ಮೇಲ್ಪಟ್ಟು

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು Kppp ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 05.02.2024 ಸಂಜೆ 16.00 ಘಂಟೆಯವರೆಗೆ. **2)** Kppp ನಲ್ಲಿ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 06.02.2024 ಸಂಜೆ 16.30 ಘಂಟೆಗೆ.

ಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು Kppp ನಲ್ಲಿ (https://kppp.karnataka.gov.in.) ಮಾತ್ರ ಪ್ರಕಟಿಸಲಾಗುವುದು.

DIPR/DDMYS/KSMCA/944/2023-24 ಸಹಿ/– ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2023–24/2436
ದಿನಾಂಕ : 24–01–2024

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW- 1 [ಏಕಲಕೋಟಿ ಪದ್ಧತಿ]

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-1ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್** ಮುಖಾಂತರ 07 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. **ಲೆಕ್ಕ ಶೀರ್ಷಿಕೆ: 2022–23ನೇ ಸಾಲಿನ ಸಿ.ಡಿ.ಪಿ.ಓ ಅನುದಾನ ಮತ್ತು ಎಂ.ಜಿ.ಎನ್.ಆರ್.ಇ.ಜಿ ಒಗ್ಗೂಡುವಿಕೆ ಯೋಜನೆ ಅಡಿ** ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in)** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent Nos: RDPR/2023-24/WORK_INDENT : **3761, 3760, 3759, 3555, 3556, 3557, 3558**

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **9.22** ಲಕ್ಷ ದಿಂದ **16.23** ಲಕ್ಷ

ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ:– ಅರ್ಜಿ ಬೆಲೆ **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್** ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **25–01–2024** ರಿಂದ **15–02–2024** ರಂದು 16.00 ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : **16–02–2024** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ದತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ,
ಗದಗ

ವಾಸಾಸಂಇ/ಗದಗ/ಕೆಎಸ್ಎಂಸಿಎ/488/2023–24

ಕರ್ನಾಟಕ ಸರ್ಕಾರ
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು)
ಜಿಲ್ಲಾ ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ.
ದೂರವಾಣಿ 08194–234710, ಇ–ಮೇಲ್: dschitradurga@gmail.com

ಸಂಖ್ಯೆ:ಜಿಆಚಿ/ಅಭಿವೃದ್ಧಿ/11/2023–24 ದಿನಾಂಕ:22/01/2024

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗದ ಆರ್ಥೋ ವಿಭಾಗದ ಶಸ್ತ್ರಚಿಕಿತ್ಸಾ ಘಟಕಕ್ಕೆ ಅಗತ್ಯವಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳನ್ನು (ಆರ್ಥೋಇಂಪ್ಲಾಂಟ್ಸ್) ಸರಬರಾಜು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯುವ ಬಗ್ಗೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯ 1999–2000ರ ಪ್ರಕಾರ ಇ–ಪ್ರೊಕ್ಯೂರ್ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. (1) ಟೆಂಡರ್ ಪ್ರಕಟಣೆ ಸಂಖ್ಯೆ:– ಸಂ: ಜಿಆಚಿ/ಇ–ಟೆಂಡರ್/11/2023–24 (2) ಸರಬರಾಜು ಸಾಮಾಗ್ರಿಗಳು /ಔಷಧಿ ರಾಸಾಯನಿಕಗಳು:– Orthoimplants (3) ಟೆಂಡರ್ ಮೊತ್ತ:– ರೂ. 30.00 ಲಕ್ಷ (4)ಇ.ಎಂ.ಡಿ ಮೊತ್ತ:– ರೂ. 75,000/– (4) ಇ–ಟೆಂಡರ್ ದಾಖಲೆಗಳ ಇ–ಟೆಂಡರ್‌ಗಳಲ್ಲಿ ದಾಖಲಿಸುವ ಅವಧಿ ದಿನಾಂಕ: 24/01/2024 (6) ಇ–ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 24/01/2024 ರಿಂದ 23/02/2024 (7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26/02/2024 ಇ–ಟೆಂಡರ್ ಸಲ್ಲಿಸಿದ ಟೆಂಡರ್ ದಾರರ ತಾಂತ್ರಿಕ ಬಿಡ್ ತೆರೆದು ಪರಿಶೀಲಿಸಿ ಅರ್ಹ ಟೆಂಡರ್‌ದಾರರ ಆರ್ಥಿಕ ಬಿಡ್‌ಅನ್ನು ತೆರೆಯಲಾಗುವುದು. ಎಲ್ಲಾ ಟೆಂಡರ್ ಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು.

RO.No.503:DIPR/CTA/KSMCA/2023-24

ಸಹಿ/– ಜಿಲ್ಲಾ ಶಸ್ತ್ರ ಚಿಕಿತ್ಸಕರು,
ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)
ವ್ಯವಸ್ಥಾಪಕ ನಿರ್ದೇಶಕರ ಕಛೇರಿ,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.
ಕಛೇರಿಯ ಸಹಾಯವಾಣಿ ಸಂಖ್ಯೆ: 9448442463

ಸಂಖ್ಯೆ: A8/KTBS/ADM/OTEN/2/2023 E-15960 ದಿನಾಂಕ:24.01.2024
(ಟೆಂಡರ್ ಸಂಖ್ಯೆ: KTBS/2023-24/SE0002)

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು ಈ ಕಛೇರಿ ಕೆಲಸಗಳಿಗೆ ಎರಡು ವರ್ಷಗಳ ಅವಧಿಗೆ ಹೊರಗುತ್ತಿಗೆ ಆಧಾರದಲ್ಲಿ ಕಂಪ್ಯೂಟರ್ ಪ್ರೋಗ್ರಾಮರ್, ಅಕೌಂಟ್ಸ್ ಅಂಡ್ ಆಡಿಟ್ ಕೊ–ಆರ್ಡಿನೇಟರ್, ಅಕೌಂಟ್ಸ್ ಅಸಿಸ್ಟೆಂಟ್, ಡಾಟಾ ಎಂಟ್ರಿ ಆಪರೇಟರ್, 'ಡಿ' ದರ್ಜೆ ಕೆಲಸಗಾರರು, ವಾಹನ ಚಾಲಕರು, ಪರಿಚಾರಕರು ಮತ್ತು ಕಾವಲುಗಾರರ ಸೇವೆ ಪಡೆಯಲು ಇ–ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ವಿವರಗಳನ್ನು ಇ–ಪೋರ್ಟಲ್‌ನಲ್ಲಿರುವ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ವಿವರವಾಗಿ ಒದಗಿಸಿದೆ. ಅರ್ಹ ಸಂಸ್ಥೆಗಳು **ದಿನಾಂಕ:02.02.2024ರಂದು ಸಂಜೆ 5.30ವರೆಗೆ** ಬಿಡ್‌ಗಳನ್ನು ಸಲ್ಲಿಸಲು ಅವಕಾಶ ಇರುತ್ತದೆ. ವಿವರವಾದ ಟೆಂಡರ್ ದಸ್ತಾವೇಜನ್ನು https://kppp.karnataka.gov.in, https:www.ktbs.kar.nic.in ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ–ಪೋರ್ಟಲ್‌ನ ಸಹಾಯವಾಣಿ 080–46010000/080–68948777

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು

ಸುಭಾಷಿತ

ಯಶಸ್ಸು ಪಡೆಯಲು ತಾಳ್ಮೆ ಅತ್ಯಗತ್ಯ.

-ಬಿಲ್ ಗೇಟ್ಸ್

ಏಕಕಾಲದಲ್ಲಿ ಚುನಾವಣೆ ಪ್ರಸ್ತಾವ ಒಳಿತಿಗಿಂತ ಸಮಸ್ಯೆಗಳೇ ಹೆಚ್ಚು

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಪ್ರಸ್ತಾವದ ಬಗ್ಗೆ ಪರಿಶೀಲನೆ ನಡೆಸಿ, ಶಿಫಾರಸುಗಳನ್ನು ಮಾಡಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದಲ್ಲಿ ರಚಿಸಿರುವ ಉನ್ನತಾಧಿಕಾರ ಸಮಿತಿಯು ಚುರುಕಿನಿಂದ ಮುಂದಡಿ ಇರಿಸಿದೆ. ಈ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ತಮ್ಮ ಅನಿಸಿಕೆಗಳನ್ನು, ಸಲಹೆಗಳನ್ನು ನೀಡುವಂತೆ ಸಮಿತಿಯು ಸಾರ್ವಜನಿಕರಲ್ಲಿ ಮನವಿ ಮಾಡಿತ್ತು. ಅವರಿಗೆ ಸಲಹೆ, ಅನಿಸಿಕೆ ಸಲ್ಲಿಸಲು ಜನವರಿ 5ರಿಂದ 15ರವರೆಗೆ ಕಾಲಾವಕಾಶ ಕೂಡ ನೀಡಿತ್ತು. ಸಮಿತಿಯು 20,972 ಪ್ರತಿಕ್ರಿಯೆಗಳನ್ನು ಸ್ವೀಕರಿಸಿದೆ ಹಾಗೂ ಅವುಗಳ ಪೈಕಿ ಶೇಕಡ 81ರಷ್ಟು ಮಂದಿ ಪ್ರಸ್ತಾವದ ಪರವಾಗಿ 'ಇದ್ದಾರೆ' ಎಂದು ವರದಿಯಾಗಿದೆ. 17 ರಾಜಕೀಯ ಪಕ್ಷಗಳು ಕೂಡ ಈ ಪ್ರಸ್ತಾವದ ಕುರಿತಾಗಿ ತಮ್ಮ ನಿಲುವನ್ನು ಸಮಿತಿಗೆ ತಿಳಿಸಿವೆ. ಕೋವಿಂದ್ ಅವರು ಪ್ರಸ್ತಾವದ ವಿಚಾರವಾಗಿ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು, ನಿವೃತ್ತ ಮುಖ್ಯ ಚುನಾವಣಾ ಆಯುಕ್ತರು (ಸಿಇಸಿ), ಹಿರಿಯ ನ್ಯಾಯಶಾಸ್ತ್ರಜ್ಞರು ಮತ್ತು ಉದ್ಯಮ ಸಂಘಟನೆಗಳ ಜೊತೆ ಮಾತುಕತೆ ಆರಂಭಿಸಿದ್ದಾರೆ. ಸಮಿತಿಯ ಮುಂದಿನ ಸಭೆಯು ಜನವರಿ 27ರಂದು ನಡೆಯಲಿದೆ. 'ಒಂದು ದೇಶ, ಒಂದು ಚುನಾವಣೆ' ಪ್ರಸ್ತಾವವನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನಕ್ಕೆ ಚುರುಕು ನೀಡಲಾಗಿದೆ, ಪ್ರಸ್ತಾವವು ನಿರೀಕ್ಷೆಗೂ ಮೊದಲೇ ಅನುಷ್ಠಾನಕ್ಕೆ ಬರಬಹುದು ಎಂಬ ಸೂಚನೆಯನ್ನು ಈ ಎಲ್ಲ ಬೆಳವಣಿಗೆಗಳು ನೀಡುತ್ತಿವೆ.

ಸೂಕ್ತವಾದ ಸಮಾಲೋಚನೆ ಇಲ್ಲದೆ ಈ ಪ್ರಸ್ತಾವವನ್ನು ಅವಸರದಲ್ಲಿ ಮುಂದಕ್ಕೆ ಒಯ್ಯುವುದು ತಪ್ಪಾಗುತ್ತದೆ

'ಒಂದು ದೇಶ, ಒಂದು ಚುನಾವಣೆ' ಪ್ರಸ್ತಾವಕ್ಕೆ ನೀತಿ ಆಯೋಗ ಮತ್ತು ಕೇಂದ್ರ ಕಾನೂನು ಆಯೋಗ ಬೆಂಬಲ ಸೂಚಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು 2019ರ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಸೇರಿದಂತೆ ಹಲವು ಬಾರಿ ಈ ಪ್ರಸ್ತಾವದ ಪರವಾಗಿ ಮಾತನಾಡಿದ್ದಾರೆ. ಕೋವಿಂದ್ ಅವರು 'ಒಂದು ದೇಶ, ಒಂದು ಚುನಾವಣೆ' ಬಗ್ಗೆ 2017ರಲ್ಲಿ ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವಾಗ ಉಲ್ಲೇಖಿಸಿದ್ದರು. ಉನ್ನತಾಧಿಕಾರ ಸಮಿತಿಯ ಇತರ ಸದಸ್ಯರು ಕೂಡ ಈ ಪ್ರಸ್ತಾವದ ಪರವಾಗಿ ಒಲವು ಹೊಂದಿದ್ದಾರೆ ಎನ್ನಲಾಗಿದೆ. ಸಮಿತಿಯಲ್ಲಿ ಇರುವ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಮಾತ್ರ ಅಲ್ಲಿ ಈ ಪ್ರಸ್ತಾವಕ್ಕೆ ವಿರೋಧ ಸೂಚಿಸಬಹುದು. ಆದರೆ ಅವರು ಸಮಿತಿಯ ಕಲಾಪಗಳಲ್ಲಿ ಪಾಲ್ಗೊಳ್ಳುತ್ತಿಲ್ಲ. ಉನ್ನತಾಧಿಕಾರ ಸಮಿತಿಯ ರಚನೆ ಹಾಗೂ ಅದಕ್ಕೆ ಸದಸ್ಯರ ನೇಮಕದ ರೀತಿ, ಸರ್ಕಾರವು ಸಮಿತಿಯಿಂದ ಪೂರಕವಾದ ವರದಿಯನ್ನು ನಿರೀಕ್ಷಿಸುತ್ತಿದೆ ಎಂಬುದನ್ನು ಸೂಚಿಸುವಂತಿತ್ತು.

ಆದರೆ ಸೂಕ್ತವಾದ ಸಮಾಲೋಚನೆ ಇಲ್ಲದೆ ಈ ಪ್ರಸ್ತಾವವನ್ನು ಅವಸರದಲ್ಲಿ ಮುಂದಕ್ಕೆ ಒಯ್ಯುವುದು ತಪ್ಪಾಗುತ್ತದೆ. ಕಾಂಗ್ರೆಸ್ ಸೇರಿದಂತೆ ಹಲವು ವಿರೋಧ ಪಕ್ಷಗಳು ಈ ಪ್ರಸ್ತಾವವನ್ನು ಬೇರೆ ಬೇರೆ ಕಾರಣಗಳಿಗಾಗಿ ವಿರೋಧಿಸಿವೆ. ಈ ಪ್ರಸ್ತಾವವು ಕಾರ್ಯರೂಪಕ್ಕೆ ಬಂದಲ್ಲಿ, ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವ ಪ್ರಬಲ ರಾಜಕೀಯ ಪಕ್ಷಕ್ಕೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುತ್ತದೆ. ಪ್ರಸ್ತಾವವು ದೇಶದ ಒಕ್ಕೂಟ ವ್ಯವಸ್ಥೆಗೆ ಪೂರಕವಾಗಿಲ್ಲ.

2029ಕ್ಕೂ ಮೊದಲು ಏಕಕಾಲದಲ್ಲಿ ಚುನಾವಣೆ ನಡೆಸಲು ಆಗದು ಎಂಬ ಅಭಿಪ್ರಾಯವನ್ನು ಚುನಾವಣಾ ಆಯೋಗವು ವ್ಯಕ್ತಪಡಿಸಿದೆ ಎನ್ನಲಾಗಿದೆ. ಏಕೆಂದರೆ, ಎಲೆಕ್ಟ್ರಾನಿಕ್ ಮತಯಂತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗುತ್ತವೆ ಎಂಬ ಕಾರಣವನ್ನು ಅದು ನೀಡಿದೆ ಎನ್ನಲಾಗಿದೆ. ಈ ಪ್ರಸ್ತಾವವು ಹಲವು ಗಂಭೀರವಾದ ಕಾನೂನು ಮತ್ತು ರಾಜಕೀಯ ಸಮಸ್ಯೆಗಳನ್ನು ಕೂಡ ಒಳಗೊಂಡಿದೆ. ಪ್ರಸ್ತಾವವು ಜಾರಿಗೆ ಬರಬೇಕು ಎಂದಾದರೆ ದೇಶದ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ಬರಬೇಕಾಗುತ್ತದೆ. ದೇಶದ ರಾಜಕೀಯ ಹಾಗೂ ಸಾಮಾಜಿಕ ಭಿನ್ನತೆಗಳಿಗೆ ಹೊಂದಿಕೆ ಆಗುವಂತೆ ಚುನಾವಣಾ ವ್ಯವಸ್ಥೆಯನ್ನು ಕಟ್ಟಬೇಕಾಗುತ್ತದೆ. ಪ್ರಜಾತಂತ್ರವು ಇನ್ನೂ ವಿಕಾಸ ಹೊಂದುತ್ತಿರುವ ಈ ದೇಶದಲ್ಲಿ 'ಒಂದು ದೇಶ, ಒಂದು ಚುನಾವಣೆ' ಆಲೋಚನೆಯು ರಾಜಕೀಯ ಪ್ರಕ್ರಿಯೆಗಳ ಸಹಜ ಹರಿವಿಗೆ ಅಡ್ಡಿಯುಂಟು ಮಾಡುವಂತಿದೆ. ಈ ಪ್ರಸ್ತಾವವನ್ನು ಜಾರಿಗೆ ತಂದರೆ ಎದುರಾಗುವ ಸಮಸ್ಯೆಗಳು ಹಲವು. ಈ ಸಮಸ್ಯೆಗಳ ಎದುರು, ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಕೆಲವು ಕೋಟಿಗಳಷ್ಟು ಹಣ ಉಳಿತಾಯ ಆಗುತ್ತದೆ ಹಾಗೂ ಇನ್ನೂ ಕೆಲವು ಪ್ರಯೋಜನಗಳು ಆಗುತ್ತವೆ ಎನ್ನುವುದು ಹೆಚ್ಚು ಮಹತ್ವ ಪಡೆಯುವುದಿಲ್ಲ. ಈ ವ್ಯವಸ್ಥೆಯಿಂದಾಗಿ ಚುನಾವಣಾ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ.

ಅಧಿಕಾರ ರಾಜಕಾರಣ, ಚುನಾವಣೆ ಗೆಲ್ಲುವುದೇ ಮುಖ್ಯವಾದಾಗ...

ಹಿಮ್ಮುಖ ಚಲನೆಯ ಚಿಂತನಾಕ್ರಮ!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಅಯೋಧ್ಯೆಯ ವಿದ್ಯಮಾನಗಳ ಹಿಂದೆ ದೇವರು, ಧರ್ಮ, ಭಕ್ತಿ, ಇತಿಹಾಸ, ಸಂಸ್ಕೃತಿಯ ಪಾಲು ಅಥವಾ ಪಾತ್ರ ಮೀರಿದ ಸಮಕಾಲೀನ ರಾಜಕೀಯ ಲೆಕ್ಕಾಚಾರ ಇರುವುದು ಆಡುವ ಮಗುವಿಗೂ ಅರ್ಥವಾಗುವ ಸತ್ಯ. ಈ ಕಾರ್ಯಕ್ಕೆ ಆಯ್ದುಕೊಂಡ ಸಮಯ, ಸಂದರ್ಭ ಹಾಗೂ ಪ್ರಚಾರದ ವೈವಿಧ್ಯ-ವೈಖರಿ ಬಹಳಷ್ಟು ವಿಚಾರಗಳನ್ನು ಹೊರಚೆಲ್ಲಿವೆ.

ನಿಜಕ್ಕೂ ಶ್ರದ್ಧಾಭಕ್ತಿ ಹೊಂದಿದವರ ಸಂಭ್ರಮದ ಅಭಿವ್ಯಕ್ತಿಗೆ ಸಹಜವಾಗಿ ಮುಗ್ಧತೆ ಮತ್ತು ಸಂಯಮದ ಸಹಯೋಗವಿರುತ್ತದೆ. ಆದರೆ ಜನಸಾಮಾನ್ಯರಲ್ಲಿ ಸಮೂಹಸನ್ನಿ ಸೃಷ್ಟಿಸಲು ಪಣ ತೊಟ್ಟವರಿಗೆ ಇಡೀ ವಾತಾವರಣವನ್ನು ಹೇಗೆ ಭಾವನಾತ್ಮಕವಾಗಿ ಬಳಸಿಕೊಳ್ಳಬೇಕೆಂಬ ತಂತ್ರಮಂತ್ರಗಳು ಕರತಲಾಮಲಕ ಆಗಿರುತ್ತವೆ. ಇಂಥ ಚಟುವಟಿಕೆಗಳಲ್ಲಿ ವ್ಯಕ್ತಿಗಳು, ಸಂಘಗಳು, ಸಂಘಟನೆಗಳು ನಿರತವಾಗುವುದಕ್ಕೆ ಒಂದು ಮಿತಿ ಇರಲು ಸಾಧ್ಯ. ಆದರೆ ಒಂದು ಪ್ರಭುತ್ವವೇ ಇಂಥ ಪ್ರಕ್ರಿಯೆಗೆ ತನ್ನೆಲ್ಲಾ ಸಂಪನ್ಮೂಲಗಳ ಸಮೇತ ಚಾಲನೆ ನೀಡಿದರೆ ಏನಾಗಬೇಡ...!

ಈ ಮಾತಿಗೆ ನಿದರ್ಶನವಾಗಿ ವಿವಿಧ ನಾಯಕಮಣಿಗಳು ನೀಡುತ್ತಿರುವ ಹೇಳಿಕೆಗಳು, ಮಾಡುತ್ತಿರುವ ಪ್ರಚೋದನೆಗಳು ಮತ್ತು ವ್ಯಾಖ್ಯಾನಗಳನ್ನು ಗಮನಿಸಬಹುದು. 'ಐನೂರು ವರ್ಷಗಳ ಕಾಯುವಿಕೆಯ ನಂತರ ಅಯೋಧ್ಯೆಯಲ್ಲಿ ಬಾಲರಾಮನ ಪ್ರತಿಷ್ಠಾಪನೆ ಆಗಿದೆ. ಮತ್ತೆ ತ್ರೇತಾಯುಗಕ್ಕೆ ಕಾಲಿಟ್ಟಂತೆ ಅನ್ನಿಸುತ್ತಿದೆ' ಎನ್ನುತ್ತಾರೆ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ. ಇದು, ಮಂಗಳನ ಅಂಗಳಕ್ಕೆ ಕಾಲಿಟ್ಟ ಕಾಲದಲ್ಲಿ ಮತ್ತೆ ತ್ರೇತಾಯುಗಕ್ಕೆ ಕರೆದೊಯ್ಯುವ ಹಿಮ್ಮುಖ ಚಲನೆಯ ಚಿಂತನೆಯಾಗುತ್ತದೆ!

ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಈ ಕ್ಷಣಕ್ಕಾಗಿ ಹಲವಾರು ತಲೆಮಾರುಗಳು ತ್ಯಾಗ ಮಾಡಿವೆ. ಶ್ರೀರಾಮ ಜನ್ಮಭೂಮಿಯಲ್ಲಿ ಮತ್ತೆ ಮಂದಿರ ನಿರ್ಮಾಣ ಮಾಡುವ ಸಂಕಲ್ಪವನ್ನು ಅಲುಗಾಡಿಸಲು ಯಾವ ಬೆದರಿಕೆಗೂ ಸಾಧ್ಯವಾಗಲಿಲ್ಲ' ಎಂದು ವಿವರಿಸಿದ್ದಾರೆ. 'ರಾಮದ್ವೇಷಿಗಳಿಗೆ ತಕ್ಕ ಪಾಠ ಆಗಲಿದೆ' ಎಂದು ಎಚ್ಚರಿಕೆ ನೀಡಿದ್ದಾರೆ ಕರ್ನಾಟಕದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ.

ಈ ವಿಷಯದಲ್ಲಿ ಬಿಜೆಪಿ ಪರಿವಾರದ ನಿಲುವು, ಉದ್ದೇಶ, ಗುರಿಯು ಕಮಲದ ಪಕಳೆ ಮೇಲಿನ ಹನಿಯಷ್ಟೇ ನಿಚ್ಚಳ; ಅವರದು ಘೋಷಿತ ಬಲಪಂಥೀಯ ಹಾದಿ. ಆದರೆ ಇಡೀ ದೇಶವನ್ನು ಭಾವನಾತ್ಮಕ ಅಲೆಯಲ್ಲಿ ತೇಲಿಸುತ್ತಿರುವ ಈ ರಾಜಕೀಯ ಪಕ್ಷ ಮತ್ತು ಅದರ ಸಹವರ್ತಿ ಸಂಘಟನೆಗಳಿಗೆ ಪರ್ಯಾಯವನ್ನೋ ಪ್ರತಿರೋಧವನ್ನೋ ಒಡ್ಡಬೇಕಾದ ಇತರ ರಾಜಕೀಯ ಪಕ್ಷಗಳು ಏನು ಮಾಡುತ್ತಿವೆ? ತಾತ್ವಿಕವಾಗಿ, ತಾರ್ಕಿಕವಾಗಿ ಬಲಚಿಂತನೆಗೆ ಸಶಕ್ತ ಮುಖಾಮುಖಿ ಆಗಬೇಕಿದ್ದ ಪ್ರಮುಖ ಎಡಪಂಥೀಯ ರಾಜಕೀಯ ಪಕ್ಷಗಳು ಹೆಚ್ಚುಕಡಿಮೆ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ಕುಳಿತಿವೆ. ಅವು ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಪಕ್ಷದ ನೆರಳನ್ನು ಆಶ್ರಯಿಸುವ ಅನಿವಾರ್ಯದ ಹಂತ ತಲುಪಿರುವುದು ಒಳ್ಳೆಯ ಬೆಳವಣಿಗೆಯೇನಲ್ಲ. ತಮ್ಮದೇ ಆದ ಸೀಮಿತ ಶಕ್ತಿ ಮತ್ತು ವ್ಯಾಪ್ತಿಯ ಅಡಚಣೆಯಲ್ಲಿ ತೊಳಲಾಡುತ್ತಿರುವ ಪ್ರಾದೇಶಿಕ ಪಕ್ಷಗಳ ನಡುವೆ ಹಿತಾಸಕ್ತಿ ಸಂಘರ್ಷವೂ ತೀಕ್ಷ್ಣವಾಗಿದೆ. ಹಾಗಾಗಿ, ಇವುಗಳಿಂದ ಸಂದರ್ಭದ ಬೇಡಿಕೆಗೆ ತಕ್ಕುದಾದ ಮಹತ್ವದ ಪಾತ್ರವನ್ನು ನಿರೀಕ್ಷಿಸುವುದು ಕಷ್ಟಸಾಧ್ಯ.

ಇನ್ನು, ದೇಶವ್ಯಾಪಿ ಅಷ್ಟಿಷ್ಟು ಅಸ್ತಿತ್ವ, ಪ್ರಭಾವ ಹೊಂದಿರುವ ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಕೂಡ ಬಸವಳಿದಂತೆ ಕಾಣಿಸುತ್ತಿದೆ. ಚುನಾವಣಾ ರಾಜಕಾರಣಕ್ಕಾಗಿ ಹಿಂದೂ ಮತಗಳ ಕ್ರೋಡೀಕರಣ ಪ್ರಕ್ರಿಯೆಯಲ್ಲಿ ತೀವ್ರವಾಗಿ ತೊಡಗಿರುವ ಬಿಜೆಪಿಯ ಪ್ರತಿಯೊಂದು ಹೆಜ್ಜೆಯೂ ಕಾಂಗ್ರೆಸ್ ಪಕ್ಷವನ್ನು ಸಂದಿಗ್ಧದಲ್ಲಿ ಮುಳುಗಿಸುತ್ತಿರುವುದು ಕಳವಳಕಾರಿಯಾದುದು. ಜಾತಿ, ಧರ್ಮ, ಭಾಷೆಯಂಥ ವಿಷಯಗಳಲ್ಲಿ ತುಸುವೇ ಎಚ್ಚರ ತಪ್ಪಿದರೂ ಭವಿಷ್ಯಕ್ಕೆ ಮುಳುವಾಗುವ ಅಪಾಯ ಶತಮಾನ ಪೂರೈಸಿದ ಪಕ್ಷಕ್ಕೆ ತಿಳಿಯದ್ದೇನಲ್ಲ. ಈ ಪಕ್ಷಕ್ಕೆ ತನ್ನ ರಾಜಕೀಯ ನಡಿಗೆಯುದ್ದಕ್ಕೂ ಇಂಥ ಆಟಗಳನ್ನೇ ಸೌಮ್ಯ ರೂಪದಲ್ಲಿ ಆಡುತ್ತಾ ಬಂದ ಬಹಳಷ್ಟು ಅನುಭವ ಕೂಡ ಇದೆ. ಆದಾಗ್ಯೂ ವರ್ತಮಾನದಲ್ಲಿ ಬಿಜೆಪಿ ಅಳವಡಿಸಿಕೊಂಡಿರುವ ಉಗ್ರ ಹಾಗೂ ಆಕ್ರಮಣಶೀಲ ನಡೆ ಕಾಂಗ್ರೆಸ್ಸನ್ನೂ ದಂಗುಬಡಿಸಿದಂತೆ ಕಾಣುತ್ತಿದೆ.

ಪತ್ರಕರ್ತೆ ನೀರಜಾ ಚೌಧರಿ ಅವರ 'ಹೌ ಪ್ರೈಮ್ ಮಿನಿಸ್ಟರ್ಸ್ ಡಿಸೈಡ್' ಕೃತಿಯಲ್ಲಿ ಕಾಂಗ್ರೆಸ್ಸಿನ ಚಿಂತಕರ ಚಾವಡಿ ಹೇಗೆ ಆಲೋಚಿಸುತ್ತದೆ ಎಂಬುದರ ಸೂಚನೆ ಸಿಗುವಂತಹ ಪ್ರಸಂಗದ ಉಲ್ಲೇಖವಿದೆ. ಅದು 1985ರ ಸಮಯ. ಸೋದರಸಂಬಂಧಿ ಅರುಣ್ ನೆಹರೂ ಅವರು ರಾಜೀವ್ ಗಾಂಧಿ ಅವರಿಗೆ ನೀಡಿದ ಸಲಹೆ: 'ನೀನು ಮತ್ತೆ ಅಧಿಕಾರಕ್ಕೆ ಬರಬೇಕೆಂದರೆ ಮೂರು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವಾಗಬೇಕು, ಸಮಾನ ನಾಗರಿಕ ಸಂಹಿತೆ ಜಾರಿಗೆ ಕ್ರಮ ಕೈಗೊಳ್ಳಬೇಕು ಮತ್ತು 370ನೇ ವಿಧಿ ರದ್ದಾಗಬೇಕು'. ಆ ಮೂಲಕ ಬಹುಸಂಖ್ಯಾತ ಹಿಂದೂಗಳ ಮತಗಳನ್ನು ಕ್ರೋಡೀಕರಿಸಿ ಗೆಲುವು ಸಾಧಿಸಬಹುದೆಂಬ ಲೆಕ್ಕಾಚಾರ ಅರುಣ್ ನೆಹರೂ ಅವರದಾಗಿತ್ತು.

ಇತಿಹಾಸದ ಗರಿಗಳನ್ನು ಸರಿಯಾಗಿ ಓದಿದರೆ, ಸೈದ್ಧಾಂತಿಕವಾಗಿ ಕಾಂಗ್ರೆಸ್ ಪಕ್ಷ ಖಡಕ್ ಆಗಿ ಎಡ ಅಥವಾ ಬಲ ಪಂಥಕ್ಕೆ ಸೇರದೆ ಮಧ್ಯದ ಹಾದಿ ಸವೆಸಿರುವುದು ಗೋಚರಿಸುತ್ತದೆ. ಅದು ಆರಂಭಿಕ ಕಾಲಘಟ್ಟದಲ್ಲಿ ಖಚಿತವಾಗಿ ಎಡಮಧ್ಯಮ ಮಾರ್ಗ ಅನುಸರಿಸಿದ್ದು ನಿಜ. ನಂತರದ ಅವಧಿಯನ್ನು ಹೊಯ್ದಾಟದ ಕಾಲ ಎಂದು ಗುರುತಿಸಬಹುದು. ಇತ್ತೀಚೆಗೆ ಬಲಮಧ್ಯಮದ ಕಡೆ ವಾಲುತ್ತಿರುವ ಸ್ಪಷ್ಟ ಲಕ್ಷಣಗಳನ್ನು ಕಾಣುತ್ತಿದ್ದೇವೆ. ರಾಹುಲ್ ಗಾಂಧಿಯವರ ಸರಣಿ ದೇವಾಲಯಗಳ ಭೇಟಿ, ಗೀತೆಯ ಉಲ್ಲೇಖ, ಹಿಂದುತ್ವ ಕುರಿತ ಮೃದುತ್ವವನ್ನು ಗಮನಿಸಬಹುದು. ಮೈಸೂರಿನ ವಿಚಾರವಾದಿ ಕೆ.ರಾಮದಾಸ್, ಹೋರಾಟಗಾರ ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಸಮಾಜವಾದಿ ಪ.ಮಲ್ಲೇಶ, ವಿಮರ್ಶಕ ಜಿ.ಎಚ್.ನಾಯಕ ಅವರ ಒಡನಾಟ, ಪ್ರಭಾವದಲ್ಲಿ ವ್ಯಕ್ತಿತ್ವವನ್ನು ರೂಪಿಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಇತ್ತೀಚೆಗಿನ ಅವೈಚಾರಿಕ ವರ್ತನೆಗಳು ತಾತ್ವಿಕ ಶರಣಾಗತಿಗೆ ದ್ಯೋತಕವಾಗಿವೆ.

ಎಡಪಂಥೀಯ ಚಿಂತಕ ಎಂ.ಎನ್.ರಾಯ್ ಅವರ ಅನುಯಾಯಿಯಾದ ಎಸ್.ಆರ್.ಬೊಮ್ಮಾಯಿ ಅವರ ಪುತ್ರ ಬಸವರಾಜ ಬೊಮ್ಮಾಯಿ ಅವರಂತೂ ಆರ್‌ಎಸ್‌ಎಸ್ ಸದಸ್ಯರು ಕೂಡ ನಾಚುವಷ್ಟು ಕಟು ಹಿಂದುತ್ವವಾದಿ ಆಗಿಬಿಟ್ಟಿದ್ದಾರೆ. ಅವರು 'ರಾಮನಿಗೂ ಕರ್ನಾಟಕಕ್ಕೂ ದೊಡ್ಡ ನಂಟಿದೆ. ಆಂಜನೇಯನ ಜನ್ಮಭೂಮಿ ಅಭಿವೃದ್ಧಿಪಡಿಸುವುದು ನಮ್ಮ ಮುಂದಿನ ಗುರಿ' ಎಂದು ಈಗಾಗಲೇ ಘೋಷಿಸಿಬಿಟ್ಟಿದ್ದಾರೆ. ಇನ್ನು ಎಚ್.ಡಿ.ದೇವೇಗೌಡರ ಕುಟುಂಬಕ್ಕೂ ಅವರ ಪಕ್ಷಕ್ಕೂ ವೈಚಾರಿಕತೆಗೂ ಸಾವಯವ ಸಂಬಂಧವೇ ಇರಲಾರದು ಬಿಡಿ. ಈ ಗೊಂದಲ, ಸ್ಥಿತ್ಯಂತರಕ್ಕೆ ಅವರದೇ ಆದ ನಾನಾ ಕಾರಣಗಳು, ಸಮರ್ಥನೆಗಳು, ಸ್ವಾರ್ಥಗಳು ಇರುವುದೇನೋ ಸರಿ. ಆದರೆ ಒಬ್ಬ ಗಂಭೀರ ಸಾರ್ವಜನಿಕ ವ್ಯಕ್ತಿಯಾಗಿ, ಒಂದು ಜವಾಬ್ದಾರಿಯುತ ರಾಜಕೀಯ ಪಕ್ಷವಾಗಿ ವ್ಯಕ್ತಿತ್ವಕ್ಕೆ, ಘನತೆಗೆ ಚ್ಯುತಿ ತಂದುಕೊಳ್ಳಬಾರದಲ್ಲವೇ?

ಪ್ರಗತಿಪರ ವಿಚಾರಧಾರೆಯ ಹಿನ್ನೆಲೆಯಲ್ಲಿ ರೂಪುಗೊಂಡ ಇಂಥ ಅನೇಕ ಮನಸ್ಸುಗಳ ಹೊರಳುವಿಕೆಗೆ ಕಾರಣವಾಗಿ ಎದ್ದುಕಾಣುವುದು ಅಧಿಕಾರ ರಾಜಕಾರಣ. ಹೇಗಾದರೂ ಸರಿ ಚುನಾವಣೆ ಗೆಲ್ಲಬೇಕು, ಅಧಿಕಾರಕ್ಕೆ ಹತ್ತಿರವಾಗಬೇಕು. ಇಷ್ಟೇ ಲಾಜಿಕ್ಕು. ಈ ವಿಷಯದಲ್ಲಿ ವ್ಯಕ್ತಿಗಳನ್ನು ತೆಗಳುವುದೋ ವ್ಯವಸ್ಥೆಯನ್ನು ದೂರುವುದೋ ಗೊತ್ತಿಲ್ಲ.

ಒಟ್ಟಾರೆ, ದೇಶದ ಪ್ರಜೆಗಳೆಲ್ಲಾ ಹಿಗ್ಗಿನಲ್ಲಿ ಮೆರೆಯುತ್ತಿರುವಾಗ ದೇಶ ಮಾತ್ರ ಅಸಹಾಯಕತೆಯಿಂದ ಕುಗ್ಗಿ ಕುಳಿತಿರುವ ಸನ್ನಿವೇಶವಿದು!

ಚುರುಮುರಿ



ಗೂಟದ ಕಾರು!

● ಗುರು ಪಿ.ಎಸ್.

'**ನನ್ ಸೂಟ್** ಎಲ್ಲಿ ಇಟ್ಟಿದ್ದೀಯ? ಇಸ್ತ್ರಿ ಮಾಡಿಸಿದ್ದೀಯ ತಾನೆ?' ಹೆಂಡತಿಗೆ ಕೇಳಿದೆ.

'ಎಷ್ಟು ಸಲ ಇಸ್ತ್ರಿ ಮಾಡಿ ಇಡೋದು, ನನಗಂತೂ ಸಾಕಾಗಿ ಹೋಯ್ತು. ಎಲ್ಲ ಹೊಸದಾಗಿಯೇ ಇದೆ, ಅದನ್ನೇ ಹಾಕಿಕೊಂಡು ಹೋಗಿ' ಸಿಟ್ಟಿನಲ್ಲಿಯೇ ಹೇಳಿದಳು ಮಡದಿ.

'ಯಾಕ್ ಸಿಟ್ ಮಾಡ್ತೀಯ? ಎಲ್ಲದಕ್ಕೂ ಕಾಲ ಬರುತ್ತೆ' ಸಮಾಧಾನದಿಂದ ಹೇಳಿದೆ.

'ಕಾಲ ಬರುತ್ತೆ, ಬೇರೆಯವರಿಗೆ ನಿಮಗಲ್ಲ'.

'ಇಷ್ಟೇಕೆ ಬೇಸರ ಮಾಡಿಕೊಂಡಿದ್ದೀಯ?'

'ನಿಮ್ ಸರ್ಕಾರ ಅಧಿಕಾರಕ್ಕೆ ಬಂದ ತಿಂಗಳೊಳಗೇ ನಿಮಗೆ ಗೂಟದ ಕಾರು ಸಿಗುತ್ತೆ ಅಂತ ಹೇಳಿದ್ರಿ, ಸಿಗಲಿಲ್ಲ. ಜನವರಿ 1 ಹೊಸ ವರ್ಷಕ್ಕೆ ಯಾವುದಾದರೂ ನಿಗಮದ ಅಧ್ಯಕ್ಷ ಆಗ್ತೀನಿ ಅಂದ್ರಿ, ಆಗಲಿಲ್ಲ. ಹೋಗಲಿ, ಸಂಕ್ರಾಂತಿಗೆ ಹೊಸ ಸೂಟ್ ಹಾಕ್ಕೊಂಡು ನಿಮ್ ಪಾರ್ಟಿ ಆಫೀಸ್‌ಗೆ ಹೋದ್ರಿ. ಆದರೂ, ಲಿಸ್ಟ್‌ನಲ್ಲಿ ಹೆಸರು ಬರಲಿಲ್ಲ' ಮೂತಿಗೆ ತಿವಿದು ಕುಳಿತಳು ಹೆಂಡತಿ.

'ಅಣ್ಣ, ಅಣ್ಣ, ಲಿಸ್ಟ್ ಬಿಟ್ಟಿದ್ದಾರಂತೆ' ಖುಷಿಯಿಂದ ಓಡಿ ಬಂದ ಮುದ್ದಣ್ಣ.

'ಹೌದಾ, ಪಾರ್ಟಿಯಿಂದ ನನಗಿನ್ನೂ ಲೆಟರ್ ಬಂದಿಲ್ವಲ್ಲ' ಎನ್ನುತ್ತಲೇ ಟಿ.ವಿ ಆನ್ ಮಾಡಿದೆ.

'ಬ್ರೇಕಿಂಗ್ ನ್ಯೂಸ್. ನಿಗಮ, ಮಂಡಳಿಗಳ ಅಧ್ಯಕ್ಷರ ಪಟ್ಟಿ ಪ್ರಕಟ' ನ್ಯೂಸ್ ಆ್ಯಂಕರ್ ಜೊತೆಗೆ ಹೆಂಡತಿಯೂ ದನಿಗೂಡಿಸಿ ಜೋರಾಗಿ ಹೇಳತೊಡಗಿದಳು.

ಪಟ್ಟಿಯಲ್ಲಿ ನನ್ನ ಹೆಸರೇ ಕಾಣಲಿಲ್ಲ. ಸಿಟ್ಟಿನಲ್ಲಿಯೇ ನಾಯಕರಿಗೆ ಫೋನ್ ಮಾಡಿದೆ.

'ಅಣ್ಣಾ, ಏನಣ್ಣಾ ಇದು. ನಿಮ್ಮ ಬಲಗೈ ಆಗಿ ಅಷ್ಟೇ ಅಲ್ಲ, ಕೈ-ಕಾಲು ಎಲ್ಲ ಆಗಿ ಕೆಲಸ ಮಾಡಿದ್ದೀನಿ. ಪಟ್ಟಿಯಲ್ಲಿ ನನ್ನ ಹೆಸರೇ ಇಲ್ವಲ್ಲ ಅಣ್ಣ' ಪಕ್ಷದ ಅಧ್ಯಕ್ಷರಿಗೆ ಕೇಳಿದೆ.

'ಏಯ್ ಸುಮ್ನಿರಪ್ಪ. ಅದು ಫೈನಲ್ ಅಲ್ಲ'.

'ನಿಮಗೆ ಗೊತ್ತಿಲ್ಲದೆ ಅದ್ಹೇಗೆ ಅವರ ಹೆಸರೆಲ್ಲ ಪಟ್ಟಿಯಲ್ಲಿ ಸೇರಿಕೊಳ್ಳುತ್ತಣ್ಣ?'

'ಅದು ಹೇಗೆ ಬೇರೆಯವರ ಹೆಸರು ಸೇರಿಕೊಂಡಿದೆಯೋ ನನಗೂ ಗೊತ್ತಿಲ್ಲ' ಎಂದು ಫೋನ್ ಕುಕ್ಕಿದರು ಅಧ್ಯಕ್ಷರು.

'ಅದೇ ಅಂದ್ಕೊಂಡೆ, ಈಗ ಬಸ್‌ನಲ್ಲಿ ಸೀಟ್ ಹಿಡಿಯೋಕೇ ಆಗಲ್ಲ ನಿಮ್ ಕೈಯಲ್ಲಿ, ಇನ್ನು ಗೂಟದ ಕಾರಿನಲ್ಲಿ ಹೇಗೆ ಸೀಟು ಸಿಗುತ್ತೆ ಅಂತ' ಮೂದಲಿಸಿದಳು ಹೆಂಡತಿ.

ದಿನದ ಟ್ವೀಟ್

ಮಾನಸಿಕ ಆರೋಗ್ಯ ಕಡೆಗಣಿಸದಿರಿ

ಬೆಂಗಳೂರಿನಿಂದ ಹೃದಯವಿದ್ರಾವಕ ಸುದ್ದಿ ವರದಿಯಾಗಿದೆ: ಪೋಷಕರ 12 ವರ್ಷದ ಏಕಮಾತ್ರ ಪುತ್ರಿ ತನ್ನ ಮನೆಯಿದ್ದ ಕಟ್ಟಡದ 29ನೇ ಮಹಡಿಯಿಂದ ಕೆಳಗೆ ಬಿದ್ದು ಜೀವ ಕಳೆದುಕೊಂಡಿದ್ದಾಳೆ. ಆತ್ಮಹತ್ಯೆ ಎಂದು ಪೊಲೀಸರು ದೃಢಪಡಿಸಿದ್ದಾರೆ. ಯಾವುದೇ ಪತ್ರ ಸಿಕ್ಕಿಲ್ಲ. ಆರಂಭಿಕ ಹಂತದಲ್ಲೇ ಮುಕ್ತ ಸಂವಾದ, ಬೆಂಬಲದ ವ್ಯವಸ್ಥೆ ಹಾಗೂ ಜಾಗೃತಿ ಮೂಡಿಸುವ ಮೂಲಕ ಮಾನಸಿಕ ಆರೋಗ್ಯದ ಬಗೆಗಿನ ಮೌನವನ್ನು ಮುರಿಯೋಣ. ಇದು ಆಗಲೇಬೇಕಾದ ಅಗತ್ಯ ಕಾರ್ಯ.

ನಬಿಲಾ ಜಮಾಲ್, ಪತ್ರಕರ್ತೆ

ಕಿಡಿನುಡಿ

'ಇಂಡಿಯಾ' ಮೈತ್ರಿಕೂಟವು ನಾಲ್ಕೈದು ಸಭೆಗಳನ್ನು ನಡೆಸಿದೆಯಾದರೂ ಯಾವುದೇ ನಿರ್ಧಾರ ಹೊರಬಿದ್ದಿಲ್ಲ. ಸೀಟು ಹಂಚಿಕೆ ಸೂತ್ರ ಒಂದು ರಾಜ್ಯದಲ್ಲೂ ಅಂತಿಮಗೊಂಡಿಲ್ಲ, ಸಾಮಾನ್ಯ ಕನಿಷ್ಠ ಕಾರ್ಯಕ್ರಮವಿಲ್ಲ, ಪ್ರಧಾನಿ ಅಭ್ಯರ್ಥಿಯಿಲ್ಲ, ಸೀಟು ಹಂಚಿಕೆಯನ್ನು ಎಂದು ಘೋಷಿಸಲಾಗುವುದು ಎಂಬ ಬಗ್ಗೆಯಾದರೂ ನಿರ್ದಿಷ್ಟ ದಿನಾಂಕ ಘೋಷಣೆಯಿಲ್ಲ. ಮತ್ತೊಂದು ಸಭೆ ನಡೆಯುತ್ತದೆ ಎನ್ನುವುದನ್ನು ಬಿಟ್ಟರೆ ಬೇರೆ ಏನನ್ನೂ ಘೋಷಿಸುವುದಿಲ್ಲ. ಆರಂಭದ ಆವೇಗ ಮಾಯವಾಗಿದೆ...

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಸೋಮವಾರ, 25-1-1999

● **ಸಂಪುಟ ಪುನರ್ರಚನೆ ಚರ್ಚೆ ಅಪೂರ್ಣ ವಿಸ್ತರಣೆಗಷ್ಟೇ ಪಟೇಲ್ ಸಮ್ಮತಿ**

ನವದೆಹಲಿ, ಜ. 24– ಮುಖ್ಯಮಂತ್ರಿ ಜೆ.ಎಚ್. ಪಟೇಲ್ ತಮ್ಮ ಮಂತ್ರಿಮಂಡಲವನ್ನು ವಿಸ್ತರಿಸಲು ಮಾತ್ರ ನಿರ್ಧರಿಸಿದ್ದು, ಈಗಿರುವ ಮಂತ್ರಿಗಳಲ್ಲಿ ಯಾರನ್ನೂ ಕೈಬಿಡದಿರುವ ನಿಲುವಿಗೆ ಬದ್ಧರಾಗಿರುವುದಾಗಿ ಪುನರುಚ್ಚರಿಸಿದರು.

ಆದರೆ ಈ ಹಿನ್ನೆಲೆಯಲ್ಲಿ ಸಂಪುಟ ಪುನರ್ರಚನೆ ಬಗೆಗೆ ಇಂದು ಇಲ್ಲಿ ದಳದ ನಾಯಕರೊಡನೆ ನಡೆಸಿದ ಮಾತುಕತೆಯು ಯಾವುದೇ ಫಲ ನೀಡದ ಕಾರಣ ಸಭೆಯು ಅಪೂರ್ಣಗೊಂಡಿತು.

ಕರ್ನಾಟಕ ಮಂತ್ರಿಮಂಡಲ ವಿಸ್ತರಣೆ ಕುರಿತು ಮುಖ್ಯಮಂತ್ರಿ ಜೆ.ಎಚ್. ಪಟೇಲ್, ದಳದ ನಾಯಕರಾದ ಎಚ್.ಡಿ. ದೇವೇಗೌಡ, ಎಸ್.ಆರ್. ಬೊಮ್ಮಾಯಿ ಮತ್ತು ದಳ ರಾಜ್ಯ ಘಟಕದ ಅಧ್ಯಕ್ಷ ಸಿದ್ದರಾಮಯ್ಯ ಅವರೊಡನೆ ನಡೆಸಿದ ಮಾತುಕತೆಯು ಯಾವುದೇ ಪ್ರತಿಫಲ ನೀಡಿಲ್ಲವಾದ ಕಾರಣ, ಬೆಂಗಳೂರಿನಲ್ಲಿ ಮತ್ತೆ ಸಭೆ ಸೇರಿ ಚರ್ಚಿಸಲು ನಿರ್ಧರಿಸಿದರು.

ಈ ತಿಂಗಳ 12ರಂದು ರಾಜಕೀಯ ವ್ಯವಹಾರಗಳ ಸಮಿತಿಯು ಬಿಕ್ಕಟ್ಟಿನ ಬಗ್ಗೆ ನಾಯಕರೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಸಲಹೆ ನೀಡಿತ್ತು.

50 ವರ್ಷಗಳ ಹಿಂದೆ

ಶುಕ್ರವಾರ, 25-1-1974

● **ಖಾಸಗಿ ವಿದ್ಯುತ್ ಹಂಚಿಕೆ ಸಂಸ್ಥೆಗಳ ರಾಷ್ಟ್ರೀಕರಣಕ್ಕೆ ಶೀಘ್ರವೇ ರಾಜ್ಯ ವಿಧೇಯಕ**

ಬೆಂಗಳೂರು, ಜ. 24– ರಾಜ್ಯದಲ್ಲಿ ವಿದ್ಯುತ್ ಹಂಚಿಕೆಯಲ್ಲಿ ತೊಡಗಿರುವ ಖಾಸಗಿ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡುವ ಉದ್ದೇಶದಿಂದ ವಿಧಾನಮಂಡಲದಲ್ಲಿ ವಿಧೇಯಕವನ್ನು ಮಂಡಿಸಲು ಇಂದು ಇಲ್ಲಿ ನಡೆದ ಮಂತ್ರಿಮಂಡಲದ ಸಭೆ ತೀರ್ಮಾನಿಸಿತು.

ರಾಜ್ಯದಲ್ಲಿ ಇಂಥ ಏಳು ಖಾಸಗಿ ಸಂಸ್ಥೆಗಳಿವೆ.

ವಿದ್ಯುತ್ ಸರಬರಾಜು ಮಾಡುವ ಪ್ರದೇಶದಲ್ಲಿನ ವಿದ್ಯುತ್ ಅಗತ್ಯ ಪೂರೈಸಲು ಈ ಸಂಸ್ಥೆಗಳಿಂದ ಸಾಧ್ಯವಾಗದಿರಬಹುದೆಂದು ಕಂಡುಬಂದಿದೆ. ಹೆಚ್ಚು ಸಾಧನ ಹಾಗೂ ಸಂಪತ್ತು ಇರುವ ಕಾರಣ ಕರ್ನಾಟಕ ವಿದ್ಯುತ್ ಮಂಡಳಿಯಿಂದ ಗ್ರಾಹಕರ ಹಿತ ಸಾಧನೆಯಾಗಲಿದೆ.

● **ಅಹಮದಾಬಾದಿನಲ್ಲಿ ಪೊಲೀಸರತ್ತ ಗುಂಡು; ಒಬ್ಬ ಅಧಿಕಾರಿ ಸಾವು**

ಅಹಮದಾಬಾದ್, ಜ. 24– ಧರಿಯಾಪುರ ವಲಯದ ಅಡ್ಡರಸ್ತೆಯೊಂದರಲ್ಲಿ ಇಂದು ಸಂಜೆ ಖಾಸಗಿ ತಂಡವೊಂದು ಪೊಲೀಸರ ಮೇಲೆ ಗುಂಡು ಹಾರಿಸಿದಾಗ ಒಬ್ಬ ಎಸ್.ಆರ್.ಪಿ. ಸಬ್ ಇನ್‌ಸ್ಪೆಕ್ಟರ್ ಸತ್ತು ಇಬ್ಬರು ಕಾನ್‌ಸ್ಟೆಬಲ್‌ಗಳು ಗಾಯಗೊಂಡರೆಂದು ನಗರ ಪೊಲೀಸರು ತಿಳಿಸಿದ್ದಾರೆ.

ಆನಂತರ ಸ್ವಲ್ಪ ಹೊತ್ತಿನಲ್ಲೇ ಅದೇ ವಲಯದ ಇನ್ನೊಂದು ಕಡೆ ತನ್ನ ಬಂದೂಕೊಂದನ್ನು ಕಿತ್ತುಕೊಳ್ಳಲು ಒಬ್ಬ ವ್ಯಕ್ತಿ ಪ್ರಯತ್ನಿಸಿದಾಗ, ಅದನ್ನು ತಪ್ಪಿಸಲು ಒಬ್ಬ ಕಾನ್‌ಸ್ಟೆಬಲ್ ಗುಂಡು ಹಾರಿಸಿದುದರಿಂದ ಒಬ್ಬ ಮೃತಪಟ್ಟನು.

ಸಂಗತ

ಮಂಗನ ಕಾಯಿಲೆ: ನಿಗೂಢ ನಡೆ

ಬಾಧಿತ ಸ್ಥಳಗಳಲ್ಲಿ ಎಲ್ಲ ಆಯಾಮದಲ್ಲೂ ಸಮಗ್ರ ತನಿಖೆಯ ಅಗತ್ಯವಿದೆ

● ಡಾ. ಮುರಳೀಧರ ಕಿರಣಕೆರೆ

ಕಾಡಂಚಿನ ಮಲೆನಾಡಿನಲ್ಲಿ ಮತ್ತೊಂದು ದುರಂತ ಘಟಿಸಿದೆ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಇನ್ನೂ ಹದಿನೆಂಟರ ಹರೆಯದ ಯುವತಿಯೊಬ್ಬಳು ಮಂಗನ ಕಾಯಿಲೆಗೆ ತುತ್ತಾಗುವ ಮೂಲಕ ಈ ವರ್ಷದ 'ಬಲಿ ಖಾತೆ' ತೆರೆದುಕೊಂಡಿದೆ. ಏಳು ದಶಕಗಳ ಹಿಂದೆಯೇ ಪತ್ತೆ ಹಚ್ಚಲಾದ ರೋಗವೊಂದು ಇಂದೂ ಸಾವು, ನೋವು ತರುತ್ತಿರುವುದು ನಮ್ಮ ವ್ಯವಸ್ಥೆಯ ಲೋಪಗಳನ್ನು ಎತ್ತಿ ತೋರುತ್ತಾ ತಲೆ ತಗ್ಗಿಸುವಂತೆ ಮಾಡಿದೆ!

ಹೌದು, ಬಿಸಿಲ ಝಳ ಏರುತ್ತಿರುವಂತೆಯೇ ಮಂಗನ ಕಾಯಿಲೆ ಸೋಂಕಿತರ ಸಂಖ್ಯೆಯೂ ನಿಧಾನವಾಗಿ ಹೆಚ್ಚುತ್ತಿದೆ. ಪ್ರತಿವರ್ಷವೂ ಚಳಿಗಾಲ, ಬೇಸಿಗೆಯಲ್ಲಿ ಮಲೆನಾಡಿನ ಒಂದಲ್ಲ ಒಂದು ಭಾಗದಲ್ಲಿ ಇದೇ ಕಣ್ಣೀರ ಕತೆ. ಪಶ್ಚಿಮಘಟ್ಟದ ಸೆರಗಿನ ಕೆಲವೆಡೆ ಧುತ್ತೆಂದು ಈ ರೋಗ ಅವತರಿಸುತ್ತದೆ. ಅದು ಎಲ್ಲಿ ಬರಬಹುದು, ಅಲ್ಲಿ ಯಾಕೆ, ಹೇಗೆ ಬಂತು ಎಂದೆಲ್ಲಾ ಊಹಿಸಲೂ ಸಾಧ್ಯವಾಗದ ರೀತಿಯಲ್ಲಿ ಏಕಾಏಕಿ ಕಾಣಿಸಿಕೊಳ್ಳುವುದೇ ಈ ಕಾಯಿಲೆಯ ವಿಶೇಷ.

50ರ ದಶಕದಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬದ ಕ್ಯಾಸನೂರು ಕಾಡಿನಲ್ಲಿ ಕಂಡುಬಂದ ಈ ಕಾಯಿಲೆಯ ಅಧಿಕೃತ ಹೆಸರು ಕ್ಯಾಸನೂರು ಫಾರೆಸ್ಟ್ ಡಿಸೀಸ್. ಸೋಂಕಿತ ಮಂಗನ ರಕ್ತ ಹೀರುವ ಉಣ್ಣೆ (ಇಣಗು) ಮಾನವನಿಗೆ ವೈರಾಣುಗಳನ್ನು ದಾಟಿಸುತ್ತದೆ ಎಂಬುದಷ್ಟೇ ನಮ್ಮ ಸದ್ಯದ ಜ್ಞಾನ. ಮಂಗನ ಕಾಯಿಲೆಗೆ ಇಲ್ಲಿಯವರೆಗೆ ಸಾವಿರಾರು ಜನ ಬಲಿಯಾಗಿದ್ದಾರೆ. ಎಲ್ಲರೂ ಕಾಡಿನ ಸನಿಹದಲ್ಲಿ ವಾಸಿಸುವ ರೈತರು, ಕೃಷಿಕಾರ್ಮಿಕರು, ಮತ್ತವರ ಮಕ್ಕಳೇ.

ಮಳೆ ಕೊರತೆಯ ಪರಿಣಾಮವಾಗಿ ಉಣ್ಣೆಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಇದರಿಂದ ಮಂಗನ ಕಾಯಿಲೆ ಪೀಡಿತರ ಸಂಖ್ಯೆಯೂ ಏರಬಹುದು ಎಂಬ ಭೀತಿಯಿದೆ. ಇತ್ತ ರೋಗ ತಡೆಗಟ್ಟಲು ಲಸಿಕೆಯೂ ಲಭ್ಯವಿಲ್ಲ. ವೈರಲ್ ಕಾಯಿಲೆಯಾದ್ದರಿಂದ ನಿರ್ದಿಷ್ಟ ಚಿಕಿತ್ಸೆಯೂ ಇಲ್ಲ. ಇಂತಹ ಪ್ರತಿಕೂಲ ಅಂಶಗಳು ಬಾಧಿತ ಪ್ರದೇಶದ ಜನರ ನಿದ್ದೆಗೆಡಿಸಿ ತೀವ್ರ ಆತಂಕಕ್ಕೆ ದೂಡಿವೆ.

ಮಂಗನ ಕಾಯಿಲೆಯ ಲಸಿಕೆ ಉತ್ಪಾದನೆ ಹೋದ ವರ್ಷದಿಂದ ಸ್ಥಗಿತಗೊಂಡಿದೆ. ರಾಷ್ಟ್ರೀಯ ವೈರಾಣು ಸಂಸ್ಥೆಯಿಂದ ಎಂಬತ್ತರ ದಶಕದಲ್ಲಿ ಕಂಡುಹಿಡಿದ ಲಸಿಕೆಯೇ ಇಲ್ಲಿಯವರೆಗೂ ಬಳಕೆಯಲ್ಲಿತ್ತು. ಕಾಲಕಾಲಕ್ಕೆ ಮಾರ್ಪಾಡುಗಳಿಗೆ ಒಳಗಾಗುವುದು ರೋಗಾಣುಗಳ ಸಹಜ ಪ್ರಕ್ರಿಯೆ. ಈ ಮ್ಯುಟೇಶನ್ ಕಾರಣದಿಂದ ಅವುಗಳ ರೂಪದಲ್ಲಿ ಅತಿಸೂಕ್ಷ್ಮ ಬದಲಾವಣೆಗಳಾಗುತ್ತವೆ. ಹೀಗಾದಾಗ ಮೂಲ ಲಸಿಕೆ ಹೆಚ್ಚು ಪರಿಣಾಮಕಾರಿಯಾಗದು. ರೂಪಾಂತರಿಯ ಅಂಶವನ್ನು ಸೇರಿಸಿ ಚುಚ್ಚುಮದ್ದನ್ನು ಮೇಲ್ದರ್ಜೆಗೆ ಏರಿಸುವುದು ಅನಿವಾರ್ಯ. ಮಂಗನ ಕಾಯಿಲೆಯಲ್ಲಿ ಲಸಿಕೆಯನ್ನು ನವೀಕರಿಸುವ ಪ್ರಯತ್ನಗಳಾಗಲೀ ಸಂಶೋಧನೆಗಳಾಗಲೀ ಆಗಲೇ ಇಲ್ಲ! ಪರಿಣಾಮ ಮತ್ತು ಸುರಕ್ಷತೆಯಲ್ಲಿ ಅಧಿಕೃತ ಮಾನದಂಡಗಳನ್ನು ಪೂರೈಸದ ಕಾರಣ ಉತ್ಪಾದನೆಯನ್ನು ಈಗ ಸ್ಥಗಿತಗೊಳಿಸಲಾಗಿದೆ.

ಹೆಚ್ಚು ಪರಿಣಾಮಕಾರಿಯಾದ ಲಸಿಕೆಯನ್ನು ಅಭಿವೃದ್ಧಿಪಡಿಸಲು ದೊಡ್ಡ ಮೊತ್ತದ ಹಣ ಬೇಕು. ಮಂಗನ ಕಾಯಿಲೆ ಎಂಬುದು ಸೀಮಿತ ಪ್ರದೇಶದಲ್ಲಿ, ಅದರಲ್ಲೂ ವರ್ಷದ ನಿರ್ದಿಷ್ಟ ಸಮಯದಲ್ಲಿ ಮಾತ್ರ ಕಾಣಿಸಿಕೊಳ್ಳುವುದರಿಂದ ದೊಡ್ಡ ಪ್ರಮಾಣದಲ್ಲಿ ಲಸಿಕೆ ಬೇಕಿಲ್ಲ. ವ್ಯಾವಹಾರಿಕವಾಗಿ ಲಾಭ ತರದ ಈ ಕಾರ್ಯಕ್ಕೆ ಬಂಡವಾಳ ಸುರಿಯಲು ಖಾಸಗಿಯವರು ಮುಂದೆ ಬರುತ್ತಿಲ್ಲ. ಹಾಗಾಗಿಯೇ ಪರಿಣಾಮಕಾರಿ ಲಸಿಕೆ ಬೇಕೆಂಬ ಬೇಡಿಕೆ ನನೆಗುದಿಗೆ ಬಿದ್ದಿರುವುದು. ಈ ದಿಸೆಯಲ್ಲಿ ಸಂಶೋಧನೆ, ಅಭಿವೃದ್ಧಿಗಾಗಿ ಅನುದಾನ ಒದಗಿಸಿ ತನ್ನ ಅಧೀನ ಸಂಸ್ಥೆಗಳಿಂದ ಲಸಿಕೆ ಉತ್ಪಾದಿಸಿ, ಅಮಾಯಕರ ಜೀವ ಕಾಪಾಡುವ ಹೊಣೆ ಸರ್ಕಾರದ್ದೇ ಆಗಿದೆ.

ಹಿಂದೇನೋ ಸರಿ, ಮಾನವರಲ್ಲಿ ಕಾಯಿಲೆ ಕಾಣಿಸಿಕೊಂಡಿದ್ದಕ್ಕೂ ದೊಡ್ಡ ಸಂಖ್ಯೆಯ ಮಂಗಗಳ ಸಾವಿಗೂ ಸಂಬಂಧವಿತ್ತು. ನಮ್ಮ ಸದ್ಯದ ಅರಿವಿನಂತೆ, ಅಕಸ್ಮಾತ್ ಒಂದು ಮಂಗಕ್ಕೆ ರೋಗ ಬಂದರೆ ಉಳಿದೆಲ್ಲವಕ್ಕೂ ವೇಗವಾಗಿ ಹರಡಿ ಅವು ಗುಂಪು ಗುಂಪಾಗಿ ಸಾಯಬೇಕು. ಆದರೆ ಮಾನವರಲ್ಲಿ ಸೋಂಕು ಕಾಣಿಸಿಕೊಂಡ ಜಾಗದಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಂಗಗಳು ಸತ್ತಿರುವುದು ಕಂಡುಬಂದಿಲ್ಲ. ಇನ್ನು ಸತ್ತ ಮಂಗಗಳ ದೇಹದಿಂದ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿದಾಗ, ವೈರಸ್ ಪತ್ತೆಯಾಗಿರುವುದು ಬೆರಳೆಣಿಕೆಯ ಪ್ರಕರಣಗಳಲ್ಲಷ್ಟೇ. ಹಾಗಾಗಿ, ಮಂಗನ ಕಾಯಿಲೆಯಲ್ಲಿ ಮಂಗಗಳ ಪಾತ್ರವೇ ಅನುಮಾನಾಸ್ಪದ. ವೈರಾಣುಗಳು ತಮ್ಮ ಪ್ರಸಾರಕ್ಕೆ ಬೇರೆ ಪಶು, ಪಕ್ಷಿಗಳನ್ನು ಆಶ್ರಯಿಸಿರಬಹುದು. ಅದು ಅಳಿಲು, ಇಲಿ, ಹೆಗ್ಗಣ, ಹಕ್ಕಿಗಳಂತಹ ಜೀವಿಗಳಾಗಿರಬಹುದು. ಉಣ್ಣೆಗಳ ಜೊತೆಗೆ ಕಾಡಿನ ಕೆಲವು ಕೀಟಗಳೂ ರೋಗಾಣುಗಳನ್ನು ದಾಟಿಸುತ್ತಿರುವ ಸಾಧ್ಯತೆಗಳಿವೆ.

ಬಾಧಿತ ಸ್ಥಳಗಳಲ್ಲಿ ಮಣ್ಣು, ನೀರು, ಜೀವಿಗಳು ಸೇರಿದಂತೆ ಎಲ್ಲ ಆಯಾಮದಲ್ಲೂ ಸಮಗ್ರ ತನಿಖೆಯ ಅಗತ್ಯವಿದೆ. ಇದಕ್ಕೆ ಬೇಕಿರುವುದು ಅಗತ್ಯ ಸೌಕರ್ಯ ಹೊಂದಿರುವ ಸಂಶೋಧನಾ ಕೇಂದ್ರ. 'ಏಕ ಸ್ವಾಸ್ಥ್ಯ' ಉಪಕ್ರಮದಡಿ ಪರಿಣತರ ತಂಡ ರಚಿಸಿ ವ್ಯಾಪಕ ಅಧ್ಯಯನ ಕೈಗೊಂಡಾಗ ಮಾತ್ರ ಮಂಗನ ಕಾಯಿಲೆಯ ನಿಗೂಢ ಬಯಲಾಗಬಹುದು. ಪ್ರಕರಣಗಳು ಕಾಣಿಸಿಕೊಂಡಾಗಲೆಲ್ಲಾ ಮಂಗ, ಉಣ್ಣೆಗಳ ಸುತ್ತವೇ ಸುತ್ತುವುದನ್ನು ಬಿಟ್ಟು ಬೇರೆ ಸಾಧ್ಯತೆಗಳತ್ತ ಹೊರಳಲು ಅಗತ್ಯವಾಗಿ ಬೇಕಿರುವುದು ಸಮರ್ಪಕ ಮಾಹಿತಿ.

ಹಲವು ದಶಕಗಳಿಂದ ನಿಗೂಢವಾಗಿರುವ ಮಂಗನ ಕಾಯಿಲೆಯನ್ನು ಮಣಿಸಲು ಪ್ರಬಲ ಇಚ್ಛಾಶಕ್ತಿ ಬೇಕಿದೆ. ಇಲ್ಲದಿದ್ದರೆ ಪ್ರತಿವರ್ಷವೂ ಜೀವಹಾನಿ, ವೈದ್ಯಕೀಯ ವೆಚ್ಚ, ಜಾಗೃತಿ, ನಿಯಂತ್ರಣ ಎಂದೆಲ್ಲಾ ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳು ವ್ಯಯವಾಗುತ್ತಲೇ ಇರುತ್ತವೆ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶುಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಅಂತರಂಗ ತಟ್ಟಲಿ

ಭಾರತ ಸ್ವತಂತ್ರಗೊಂಡು 75 ವರ್ಷಗಳನ್ನು ಪೂರೈಸಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಇದನ್ನು 'ಆಜಾದಿ ಕಾ ಅಮೃತ್ ಮಹೋತ್ಸವ್' ಎಂಬ ಹೆಸರಿನಲ್ಲಿ ವಿನೂತನ ಕಾರ್ಯಕ್ರಮಗಳನ್ನು ಏರ್ಪಡಿಸಿ ಸ್ಮರಣೀಯವಾಗಿಸಿತು. ಹಾಗೆಯೇ ಭಾರತದ ಸಂವಿಧಾನ ಕೂಡ ಜಾರಿಯಾಗಿ ಇನ್ನೇನು 75 ವರ್ಷ ಆಗಲಿದೆ. ಸಂವಿಧಾನದ ಕುರಿತು ಕೆಲವು ಪುಸ್ತಕಗಳು, ನಾಟಕಗಳು ಸಂಚಲನ ಮೂಡಿಸಿವೆ. ಸಂವಿಧಾನದ ಓದು, ಆಶಯ, ಪ್ರಸ್ತಾವನೆಯಂತಹ ಅಂಶಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವ ದಿಸೆಯಲ್ಲಿ ಅಭಿಯಾನವೊಂದನ್ನು ಹಮ್ಮಿಕೊಳ್ಳುವುದು ಅಗತ್ಯ. ಸಂವಿಧಾನದ ಮೂಲ ಕೃತಿಯನ್ನು ರಾಜ್ಯ ಸರ್ಕಾರ ಪ್ರಕಟಿಸಿ, ರಿಯಾಯಿತಿ ದರದಲ್ಲಿ ಜನಸಾಮಾನ್ಯರಿಗೆ ಸಿಗುವಂತೆ ಮಾಡಬೇಕು. ಸರ್ಕಾರಿ ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸಂವಿಧಾನ ಓದಿನ ಕಾರ್ಯಾಗಾರವನ್ನು ಹಮ್ಮಿಕೊಳ್ಳಬೇಕು.

ಪ್ರತಿಯೊಬ್ಬರ ಮನೆಯಲ್ಲಿ ಪೂಜಾ ಕೋಣೆಗಳು ಇರುವಂತೆ ಸಂವಿಧಾನದ ಪ್ರತಿ ಇರುವುದು ಅವಶ್ಯ. ಈಗಾಗಲೇ ಸರ್ಕಾರಿ ಶಾಲೆಗಳಲ್ಲಿ ಸಂವಿಧಾನದ ಪ್ರಸ್ತಾವನೆಯೂ ನಾಡಗೀತೆ, ರಾಷ್ಟ್ರಗೀತೆಯಂತೆ ಒಂದು ಭಾಗವಾಗಿದೆ. ಜೊತೆಗೆ ಇದು ಸರ್ಕಾರದ ಎಲ್ಲಾ ಶಾಲಾ ಕಾಲೇಜು ಹಾಗೂ ಕಚೇರಿಗಳ ಗೋಡೆಯ ಮೇಲೆ ವಿರಾಜಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ಅದು ಅಂತರಂಗವನ್ನೂ ತಟ್ಟಬೇಕಾದ ಜರೂರಿದೆ.

ರಾಜೇಂದ್ರ ಕುಮಾರ್ ಕೆ. ಮುದ್ನಾಳ್, ಯಾದಗಿರಿ

ಕರ್ತವ್ಯಲೋಪ: ವಿನಾಯಿತಿ ಸಲ್ಲ

ಬೆಂಗಳೂರಿನ ತಾಲ್ಲೂಕು ಕಚೇರಿಗಳಿಗೆ ಲೋಕಾಯುಕ್ತರು ಇತ್ತೀಚೆಗೆ ದಿಢೀರ್ ಭೇಟಿ ನೀಡಿದಾಗ, ಯಲಹಂಕ ತಾಲ್ಲೂಕು ಕಚೇರಿಯ 38 ಅಧಿಕಾರಿಗಳು ಹಾಗೂ ಸಿಬ್ಬಂದಿ ಕರ್ತವ್ಯದ ಅವಧಿಯಲ್ಲಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗಿಯಾಗಿದ್ದಾಗಿ ಒಪ್ಪಿಕೊಂಡಿರುವುದು ವರದಿಯಾಗಿದೆ. ಅಂತಹವರಿಗೆ ಕ್ಷಮಾಪಣೆ ನೀಡಿದರೆ, ಅಷ್ಟೇತಾನೆ ಎಂದುಕೊಂಡು ಇಂತಹ ತಪ್ಪುಗಳು ಪುನರಾವರ್ತನೆಯಾಗುವ ಸಾಧ್ಯತೆ ಇರುತ್ತದೆ.

ಆ ದಿನ ಕಚೇರಿಗೆ ಬಂದು ತಮ್ಮ ಕೆಲಸ ಮಾಡಿಸಿಕೊಳ್ಳಲು ಸಾಧ್ಯವಾಗದ ಜನಸಾಮಾನ್ಯರ ಅಲೆದಾಟಕ್ಕೆ, ಸಮಯಕ್ಕೆ ಬೆಲೆ ಇಲ್ಲವೇ? ತಿಂಗಳುಗಟ್ಟಲೆ ಅಲೆದಾಡಿದರೂ ಕೆಲಸ ಆಗದ ಬಡವರು, ನಿರ್ಗತಿಕರ ಪೆಚ್ಚುಮೋರೆ ಸರ್ಕಾರಿ ಕಚೇರಿಗಳ ಎದುರು ಸಾಮಾನ್ಯ ಎಂಬಂತಾಗಿದೆ. ರಜೆ ಹಾಕದೆ ಕರ್ತವ್ಯದ ಸಮಯವನ್ನು ದುರ್ಬಳಕೆ ಮಾಡಿಕೊಂಡಿರುವವರ ಒಂದು ತಿಂಗಳ ಸಂಬಳ ಕಡಿತ ಮಾಡಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಬಳಸುವುದು ಒಳಿತು.

ಮಲ್ಲತಹಳ್ಳಿ ಡಾ. ಎಚ್.ತುಕಾರಾಂ, ಬೆಂಗಳೂರು

ನಲುಗುತ್ತಿದೆ ಮಗುವಿನ ವ್ಯಕ್ತಿತ್ವ

ಬದಲಾಗುತ್ತಿರುವ ಗುರು– ಶಿಷ್ಯ ಸಂಬಂಧದ ಬಗ್ಗೆ ದೀಪಾ ಹಿರೇಗುತ್ತಿ ತುಂಬಾ ಚೆನ್ನಾಗಿ ಬರೆದಿದ್ದಾರೆ (ಸಂಗತ, ಜ. 24). ಶಿಕ್ಷಣದ ಜೊತೆಗೆ ಗುರುಗಳು ಕೂಡ ವ್ಯಾಪಾರೀಕರಣದ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ತಾಸುಗಳ ಲೆಕ್ಕದಲ್ಲಿ ಪಾಠ ಹೇಳಲು ಶಿಕ್ಷಕ ತನ್ನನ್ನು ಒಗ್ಗಿಸಿಕೊಂಡ. ಅಂಕ ಗಳಿಕೆಯ ಬೆನ್ನುಹತ್ತಿದ ಪೋಷಕರು ತಮ್ಮ ಮಕ್ಕಳ ನಿಜವಾದ ವಿಕಸನದ ಕಡೆ ಬೆನ್ನು ತಿರುಗಿಸಿದರು.

ಇದನ್ನು ಅರಿತ ಉಳ್ಳವರು, ಭವ್ಯ ಭಾರತದ ಪ್ರಜೆಗಳ ವ್ಯಕ್ತಿತ್ವವನ್ನು ರೂಪಿಸಲು ಹಗಲಿರುಳು ಶ್ರಮಿಸುತ್ತಿದ್ದೇವೆ ಎಂದು ಭಾಷಣ ಬಿಗಿಯುತ್ತಾರೆ. ಅದರ ಮರುವರ್ಷ ಶಾಲಾ ಶುಲ್ಕ ಹೆಚ್ಚಿಸುತ್ತಾರೆ. ಶಿಕ್ಷಕ, ಪೋಷಕ, ಶಾಲೆಯ ಮಾಲೀಕರ ನಡುವೆ ನಲುಗುವುದು ಮಾತ್ರ ಅಮಾಯಕ ಮಗು ಮತ್ತು ಅದರ ವ್ಯಕ್ತಿತ್ವ. ಶಿಕ್ಷಣದ ವ್ಯಾಪಾರೀಕರಣದಿಂದ ಗುರು ಪರಂಪರೆಯ ಮೇಲೆ ಮಗುವಿಗೆ ಗೌರವ ಕಡಿಮೆಯಾಯಿತು. ಗೌರವ, ನಂಬಿಕೆ, ವಿಶ್ವಾಸವಿಲ್ಲದ ಮಗುವಿಗೆ ಶಿಕ್ಷಕ ಏನು ತಾನೆ ಬೋಧಿಸಲು ಸಾಧ್ಯ?

ಕೆ.ಎಂ.ಬಿರಾದಾರ, ವಿಜಯಪುರ

ನಮಗೂ ಕ್ಷಮೆ ಇರಲಿ

ನಿನ್ನ ನೆಲದಲ್ಲಿ ನಿತ್ಯ ತಾಂಡವವಾಡುತ್ತಿರುವ
ಭ್ರಷ್ಟಾಚಾರ, ಕೋಮುವಾದ,
ಅಸಹನೆ, ಜಾತಿವಾದ,
ಬೆಲೆ ಏರಿಕೆ, ನಿರುದ್ಯೋಗ,
ಪರಿಸರ ಮಾಲಿನ್ಯ, ಮಹಿಳೆಯರ
ಮೇಲಿನ ಅತ್ಯಾಚಾರ, ದೌರ್ಜನ್ಯ...
ಇವುಗಳಿಗಾಗಿಯೂ ನೀನು
ನಮ್ಮನ್ನು ಕ್ಷಮಿಸು.
(ಶ್ರೀರಾಮನನ್ನು ವರ್ಷಗಳಿಂದ ಟೆಂಟ್‌ನಲ್ಲಿ
ಇರಿಸಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ
ಅವರು ಕೇಳಿದ ಕ್ಷಮೆಯನ್ನು ಇನ್ನಷ್ಟು
ವಿಸ್ತರಿಸುತ್ತಾ)

ಆನಂದ ರಾಮತೀರ್ಥ, ಜಮಖಂಡಿ

ದ್ವೇಷಭಾಷೆಯ ನಂಜಿಗೆ ಕೊನೆಯಿಲ್ಲವೇ?

ತನ್ನ ವಾಟ್ಸ್‌ಆ್ಯಪ್‌ನಲ್ಲಿ ಯಾವುದೋ ಸ್ಟೇಟಸ್ ಹಾಕಿಕೊಂಡಿದ್ದ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಬೀದರ್ ಜಿಲ್ಲೆಯ ಹುಮನಾಬಾದ್‌ನ ದರ್ಶನ್ ಎಂಬ ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಯ ಮೇಲೆ ಹಲ್ಲೆ ನಡೆಸಿ, ಆತನಿಂದ ಒತ್ತಾಯಪೂರ್ವಕವಾಗಿ ಜೈ ಶ್ರೀರಾಮ್ ಎಂದು ಹೇಳಿಸಿರುವ ಪ್ರಕರಣ, ಸಂವಿಧಾನದ ನೆರಳಿನಲ್ಲಿ ನೆಮ್ಮದಿಯಿಂದ ಬದುಕುತ್ತಿರುವ ನನ್ನಂತಹ ಎಷ್ಟೋ ಭಾರತೀಯ ಮನಸ್ಸುಗಳನ್ನು ಗಾಸಿಗೊಳಿಸುತ್ತದೆ. ಈ ಸಂಬಂಧ ಅವರಿಗೆ ಏನಾದರೂ ತಕರಾರು ಇದ್ದರೆ ಪೊಲೀಸ್ ಠಾಣೆಯಲ್ಲಿ ದೂರು ನೀಡಬೇಕಾಗಿತ್ತು. ಅದನ್ನು ಬಿಟ್ಟು ಕಾನೂನನ್ನು ತಾವೇ ಕೈಗೆ ತೆಗೆದುಕೊಳ್ಳುವುದು ಖಂಡನೀಯ.

ದ್ವೇಷಭಾಷೆಯ ನಂಜನ್ನುಂಡ ಇಂತಹವರಿಗೆ ಕಾನೂನಿನ ಮೂಲಕ ತಕ್ಕಪಾಠ ಕಲಿಸಬೇಕು. ಅಲ್ಲದೆ, ಯಾರಾದರೂ ಈ ರೀತಿ ತೊಂದರೆ ಎದುರಿಸುತ್ತಿದ್ದರೆ, ತೊಂದರೆಗೊಳಗಾದ ವ್ಯಕ್ತಿ ನಮ್ಮವನೋ ಅಥವಾ ಮತ್ತಾರೋ ಎಂದು ಲೆಕ್ಕಾಚಾರ ಹಾಕದೆ ಅವನ ಸಹಾಯಕ್ಕೆ ಧಾವಿಸಬೇಕು. ಅನ್ಯಾಯದ ವಿರುದ್ಧ ಪ್ರತಿಭಟಿಸುವ ಇಂತಹ ಸಾರ್ವಜನಿಕ ಪ್ರಜ್ಞೆ ಜಾಗೃತವಾಗಬೇಕು. ಏಕೆಂದರೆ, ಸಾರ್ವಜನಿಕ ಅಂತಃಸಾಕ್ಷಿಯ ನಾಶವು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ ಎಂಬುದನ್ನು ಮರೆಯಬಾರದು.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದತ್ತಾಂಶ ಸೋರಿಕೆಗಳ ಮಹಾಪ್ರಕರಣ

2,600 ಕೋಟಿ ದಾಖಲೆಗಳು ಡಾರ್ಕ್‌ವೆಬ್‌ನಲ್ಲಿ ಮಾರಾಟಕ್ಕೆ

ದತ್ತಾಂಶ ಸೋರಿಕೆ ಈ ಡಿಜಿಟಲ್ ಯುಗದ ಅಪಾಯಗಳಲ್ಲಿ ಒಂದು. ನಮ್ಮ ಕೈಯಲ್ಲಿರುವ ಫೋನ್ ಜಗತ್ತಿನ ಎಲ್ಲಾ ವಿಚಾರಗಳನ್ನು ನಮಗೆ ತಲುಪಿಸುವುದು ಮಾತ್ರವಲ್ಲ, ನಮ್ಮ ವೈಯಕ್ತಿಕ ವಿವರ, ಬ್ಯಾಂಕ್ ಖಾತೆ ಮಾಹಿತಿಗಳನ್ನೂ ಹ್ಯಾಕರ್‌ಗಳಿಗೆ ಒದಗಿಸುತ್ತವೆ. ನಾವು ಪ್ರತಿದಿನ ಬಳಸುವ ಅಪ್ಲಿಕೇಷನ್‌ಗಳು ನಮ್ಮೆಲ್ಲಾ ಮಾಹಿತಿಗಳನ್ನು ಕಲೆಹಾಕಿಕೊಂಡಿರುತ್ತವೆ. ಅಂತಹ ಮಾಹಿತಿಗಳನ್ನು ಕಳವು ಮಾಡಿ, ಈಚೆಗೆ ಡಾರ್ಕ್‌ವೆಬ್‌ನಲ್ಲಿ ಮಾರಾಟಕ್ಕೆ ಇಡಲಾಗಿದೆ. ಅಲ್ಲಿರುವ ಮಾಹಿತಿಯ ಗಾತ್ರ ಎಷ್ಟಿದೆ ಅಂದರೆ, 'ಈವರೆಗಿನ ಎಲ್ಲಾ ದತ್ತಾಂಶ ಸೋರಿಕೆಗಳ ಮಹಾತಾಯಿ' ಎಂದು ಬಣ್ಣಿಸಲಾಗಿದೆ

ಪ್ರಜಾವಾಣಿ ವಾರ್ತೆ

ಫೋಬ್ಸ್ ಈಚೆಗೆ ಒಂದು ವರದಿ ಪ್ರಕಟಿಸಿತ್ತು. 'ದತ್ತಾಂಶ ಸೋರಿಕೆಯ ಎಲ್ಲಾ ಪ್ರಕರಣಗಳ ಮಹಾತಾಯಿ' ಎಂದು ಆ ವರದಿಯ ತಲೆಬರಹವನ್ನು ಕನ್ನಡಕ್ಕೆ ಸ್ಥೂಲವಾಗಿ ಅನುವಾದಿಸಬಹುದು. ಆ ವರದಿಗೆ ಹಾಗೆ ತಲೆಬರಹ ನೀಡಲೂ ಫೋಬ್ಸ್ ಬಳಿ ಬಲವಾದ ಕಾರಣವಿತ್ತು. ಈಚೆಗೆ ಹೀಗೆ ಸೋರಿಕೆಯಾಗಿದ್ದರಲ್ಲಿ ಇದ್ದ ಬಳಕೆದಾರರ ಹೆಸರು, ಪಾಸ್‌ವರ್ಡ್‌ಗಳು, ಪಿನ್‌ಪ್ಯಾಟ್ರನ್‌ಗಳು, ವೈಯಕ್ತಿಕ ವಿವರಗಳಂತಹ ದತ್ತಾಂಶಗಳ ಒಟ್ಟು ಸಂಖ್ಯೆ 2,600 ಕೋಟಿಯಷ್ಟು. (ಕೆಲವು ದಾಖಲೆಗಳು ಹಲವು ಪ್ರತಿಗಳಲ್ಲಿ ಇರುವ ಕಾರಣ ಇಷ್ಟು ದೊಡ್ಡ ಸಂಖ್ಯೆಯನ್ನು ತೋರಿಸಲಾಗಿದೆ) ಭಾರತದ ಸುದ್ದಿ ಮಾಧ್ಯಮಗಳು ಈ ಬಗ್ಗೆ ಸಂಕ್ಷಿಪ್ತ ವರದಿಗಳನ್ನು ಪ್ರಕಟಿಸಿ ಸುಮ್ಮನಾದವು. ಏಕೆಂದರೆ ಫೋಬ್ಸ್ ಪ್ರಕಟಿಸಿದ್ದ ವರದಿಯಲ್ಲಿ ಭಾರತೀಯರ ದತ್ತಾಂಶಗಳು ಸೋರಿಕೆಯಾದುದರ ಬಗ್ಗೆ ಮಾಹಿತಿ ಇರಲಿಲ್ಲ. ಆದರೆ ವಾಸ್ತವ ಸಂಗತಿ ಬೇರೆಯದ್ದೇ ಆಗಿತ್ತು. ಲಕ್ಷಾಂತರ ಭಾರತೀಯರ ದತ್ತಾಂಶಗಳೂ ಇಲ್ಲಿ ಸೋರಿಕೆಯಾಗಿದ್ದವು.

ಈ ದತ್ತಾಂಶ ಸೋರಿಕೆಯನ್ನು ಪತ್ತೆ ಮಾಡಿದ್ದು, ಸೈಬರ್ ಭದ್ರತಾ ಸೇವಾ ಸಂಸ್ಥೆ 'ಸೆಕ್ಯುರಿಟಿ ಡಿಸ್ಕವರಿ'. 'ಡಾರ್ಕ್‌ವೆಬ್‌ನಲ್ಲಿ ಇಷ್ಟೊಂದು ದತ್ತಾಂಶವನ್ನು ಸೋರಿಕೆ ಮಾಡಲಾಗಿತ್ತು. ಇವೆಲ್ಲವೂ ಈಚೆಗೆ ಕದ್ದ ಮಾಹಿತಿಯಲ್ಲ. ಬದಲಿಗೆ ಈವರೆಗಿನ ಎಲ್ಲಾ ದತ್ತಾಂಶ ಸೋರಿಕೆಗಳ ಮಾಹಿತಿಗಳನ್ನು ಒಳಗೊಂಡ ಫೋಲ್ಡರ್‌ಗಳು ಡಾರ್ಕ್‌ವೆಬ್‌ಗೆ ಬಂದುಬಿದ್ದಿವೆ. ವಿಶ್ವದ ಎಲ್ಲಾ ಮೂಲೆಯಲ್ಲಿ ನಡೆದಿದ್ದ ದತ್ತಾಂಶ ಸೋರಿಕೆಗಳಲ್ಲಿನ ಮಾಹಿತಿಯನ್ನು ಪ್ರತ್ಯೇಕ ಫೋಲ್ಡರ್‌ಗಳಲ್ಲಿ ಸಂಗ್ರಹಿಸಿ ಇಡಲಾಗಿದೆ. ಇಂತಹ ಒಟ್ಟು 3,800 ಫೋಲ್ಡರ್‌ಗಳು ಇಲ್ಲಿವೆ. ಇದು ಹೊಸದಾಗಿ ಕದ್ದ ದತ್ತಾಂಶಗಳು ಅಲ್ಲವಾದರೂ, ಒಂದು ಬಳಕೆದಾರರ ಹೆಸರಿಗೆ ಸಂಬಂಧಿಸಿದ ಪಾಸ್‌ವರ್ಡ್ ಮತ್ತು ಪಿನ್‌ಗಳನ್ನು ಪರಸ್ಪರ ಹೊಂದಿಸಲಾಗಿದೆ. ಇದು ಹೆಚ್ಚು ಅಪಾಯಕಾರಿ ಅಂಶ' ಎಂದು ಸೆಕ್ಯುರಿಟಿ ಡಿಸ್ಕವರಿ ಕಳವಳ ವ್ಯಕ್ತಪಡಿಸಿದೆ.

'ಇಷ್ಟೊಂದು ದತ್ತಾಂಶಗಳನ್ನು ಒಂದೆಡೆ ಕ್ರೋಡೀಕರಿಸಿ, ಬಳಕೆದಾರರ ಹೆಸರು ಮತ್ತು ಪಾಸ್‌ವರ್ಡ್‌ಗಳನ್ನು ಹೊಂದಿಸಿ ಇಡುವ ಅವಶ್ಯಕತೆ ಯಾರಿಗೆ ಇತ್ತು? ಯಾವ ಉದ್ದೇಶಕ್ಕಾಗಿ ಅವುಗಳನ್ನು ಹೀಗೆ ವಿಂಗಡಿಸಿ ಇಡಲಾಗಿತ್ತು? ಇವು ನಮ್ಮ ಮುಂದೆ ಇದ್ದ ದೊಡ್ಡ ಪ್ರಶ್ನೆಗಳು. ಇಷ್ಟು ದೊಡ್ಡ ಪ್ರಮಾಣದ ದತ್ತಾಂಶ ಸಂಸ್ಕರಣೆಯನ್ನು ಯಾವುದೋ ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ಮಾಡಲು ಸಾಧ್ಯವಿಲ್ಲ. ಬದಲಿಗೆ ಹೆಚ್ಚು ಬಂಡವಾಳ ಹೂಡಲು ಶಕ್ತವಾಗಿರುವ ದೊಡ್ಡ ಗುಂಪು ಅಥವಾ ಸರ್ಕಾರ ಹೀಗೆ ಮಾಡಿರಬಹುದು' ಎಂದು ವರದಿಯಲ್ಲಿ ಶಂಕಿಸಲಾಗಿದೆ.

'ಆದರೆ ಅದಕ್ಕಿಂತಲೂ ಹೆಚ್ಚು ಅಪಾಯಕಾರಿಯಾದ ಅಂಶವೆಂದರೆ ಹೀಗೆ ಅತ್ಯಂತ ವ್ಯವಸ್ಥಿತವಾಗಿ ವಿಂಗಡಿಸಿ ಇಟ್ಟಿದ್ದ 3,800 ಫೋಲ್ಡರ್‌ಗಳನ್ನು, ಯಾರೋ ಬೇರೊಬ್ಬರು ಕದ್ದಿದ್ದಾರೆ ಮತ್ತು ಅವನ್ನು ಡಾರ್ಕ್‌ವೆಬ್‌ನಲ್ಲಿ ಮಾರಾಟಕ್ಕೆ ಇಟ್ಟಿದ್ದಾರೆ. ಇಲ್ಲಿರುವ ದತ್ತಾಂಶಗಳನ್ನು ಬಳಸಿಕೊಂಡು ನಿಮ್ಮ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ಬ್ಯಾಂಕ್ ಖಾತೆಗಳಿಂದ ಹಣವನ್ನು ವರ್ಗಾವಣೆ ಮಾಡಿಕೊಳ್ಳಬಹುದು. ನಿಮ್ಮ ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ಬೇರೊಬ್ಬರು ತೆರೆದು, ಪೋಸ್ಟ್ ಮಾಡಬಹುದು ಅಥವಾ ನಿಮ್ಮ ಖಾತೆಗಳಲ್ಲಿ ಇರುವ ವೈಯಕ್ತಿಕ ಚಿತ್ರಗಳನ್ನು ಕದಿಯಬಹುದು...' ಈ ದತ್ತಾಂಶಗಳ ದುರ್ಬಳಕೆಯ ಸಾಧ್ಯತೆಯನ್ನು ಸೆಕ್ಯುರಿಟಿ ಡಿಸ್ಕವರಿ ವಿವರಿಸುವುದು ಹೀಗೆ.

ಬಳಕೆದಾರರ ಇಷ್ಟೆಲ್ಲಾ ಮಾಹಿತಿಯನ್ನು ಎಲ್ಲಿಂದ ಕದಿಯಲಾಗಿದೆ ಎಂಬುದರ ವಿವರವನ್ನೂ ವರದಿಯಲ್ಲಿ ನೀಡಲಾಗಿದೆ. ಜನರು ಪ್ರತಿದಿನ ಸಾಮಾನ್ಯವಾಗಿ ಬಳಸುವ ಆನ್‌ಲೈನ್ ಪ್ಲಾಟ್‌ಫಾರಂಗಳು, ಸ್ಮಾರ್ಟ್‌ಫೋನ್ ಅಪ್ಲಿಕೇಷನ್‌ಗಳ ಮೂಲಕ ಬಳಕೆದಾರರ ಮಾಹಿತಿಯನ್ನು ಕದಿಯಲಾಗಿದೆ. ಭಾರತೀಯರು ಸಾಮಾನ್ಯವಾಗಿ ಬಳಸುವ ಟ್ವಿಟರ್, ಫೇಸ್‌ಬುಕ್, ಲಿಂಕ್ಡ್‌ಇನ್, ಅಡೋಬಿ, ಕ್ಯಾನ್ವಾಗಳಿಂದ ಈ ಮಾಹಿತಿಗಳನ್ನು ಕದಿಯಲಾಗಿದೆ. ಈ ಸಂಬಂಧ ಟೆಕ್ ಕಂಪನಿಗಳು ಸ್ಪಷ್ಟೀಕರಣ ನೀಡಿವೆ. ಕೆಲವು ಕಂಪನಿಗಳು ತಮ್ಮ ಭದ್ರತಾ ವ್ಯವಸ್ಥೆಗಳನ್ನು ಬಲಪಡಿಸಿಕೊಳ್ಳುವುದಾಗಿ ಹೇಳಿದ್ದರೆ, ಕೆಲವು ಕಂಪನಿಗಳು ಪ್ರತಿಕ್ರಿಯೆ ನೀಡಿಲ್ಲ. ಆದರೆ 'ಈ ಪ್ಲಾಟ್‌ಫಾರ್ಂಗಳು ಮತ್ತು ಅಪ್ಲಿಕೇಷನ್‌ಗಳ ಬಳಕೆದಾರರು ತಮ್ಮ ಪಾಸ್‌ವರ್ಡ್‌ಗಳನ್ನು ತಕ್ಷಣವೇ ಬದಲಿಸುವುದು ಈಗಿರುವ ಏಕೈಕ ಪರಿಣಾಮಕಾರಿ ಪರಿಹಾರ' ಎನ್ನುತ್ತದೆ ಸೆಕ್ಯುರಿಟಿ ಡಿಸ್ಕವರಿ.



ಅತಿಹೆಚ್ಚು ದತ್ತಾಂಶ ಸೋರಿಕೆಯಾದ ಆ್ಯಪ್‌ಗಳು

(ಸೋರಿಕಾಯದ ದತ್ತಾಂಶಗಳ ಸಂಖ್ಯೆ; ಕೋಟಿಗಳಲ್ಲಿ)

ಆ್ಯಪ್	ಸಂಖ್ಯೆ
ಟೆನ್ಸೆಂಟ್	150
ವ್ಹೀಬೊ	50.40
ಟ್ವಿಟರ್	36
ವಾಟ್‌ಪ್ಯಾಡ್	27.1
ಲಿಂಕ್ಡ್‌ಇನ್	25.1
ಅಡಲ್ಟ್‌ಫ್ರೆಂಡ್ ಫೈಂಡರ್	22
ಝಿಂಗಾ	21.7
ಅಡೋಬಿ	15.3
ಮೈಫಿಟ್‌ನೆಸ್ ಪಾಲ್	15.1
ಕ್ಯಾನ್ವಾ	14.3

29.3 ಕೋಟಿ
ಭಾರತೀಯರ ಖಾತೆಗಳಿಂದ ಕದ್ದು ಸೋರಿಕೆ ಮಾಡಲಾದ ದತ್ತಾಂಶಗಳ ಸಂಖ್ಯೆ

22,460
ಜಾಲತಾಣಗಳ ಮೂಲಕ ಭಾರತೀಯರ ದತ್ತಾಂಶಗಳನ್ನು ಕದಿಯಲಾಗಿದೆ

ಕೋಟ್ಯಂತರ ಭಾರತೀಯರ ಖಾತೆಗಳಿಗೆ ಕನ್ನ

ಭಾರತೀಯರು ಇಂತಹ ದತ್ತಾಂಶ ಕಳವು ಮತ್ತು ದತ್ತಾಂಶ ಸೋರಿಕೆಗೆ ಗುರಿಯಾಗುತ್ತಲೇ ಬಂದಿದ್ದಾರೆ. ಈಗ ಸೋರಿಕೆಯಾಗಿರುವ 2,600 ಕೋಟಿ ದಾಖಲೆಗಳಲ್ಲಿ ಭಾರತೀಯರಿಗೆ ಸಂಬಂಧಿಸಿದ ದತ್ತಾಂಶಗಳೂ ಇವೆ. 2023ರಲ್ಲಿ ದತ್ತಾಂಶ ಕಳುವಿಗೆ ಅತಿಹೆಚ್ಚು ಗುರಿಯಾದವರಲ್ಲಿ ಭಾರತೀಯರು ನಾಲ್ಕನೇ ಸ್ಥಾನದಲ್ಲಿದ್ದಾರೆ. 2003ರಿಂದ ಈವರೆಗಿನ ಎಲ್ಲಾ ದತ್ತಾಂಶ ಸೋರಿಕೆಗಳಲ್ಲಿ ಗುರಿಯಾದವರಲ್ಲಿ ಭಾರತೀಯರು 10ನೇ ಸ್ಥಾನದಲ್ಲಿದ್ದಾರೆ.

ಭಾರತೀಯರ ದತ್ತಾಂಶಗಳು ಹೆಚ್ಚು ಸೋರಿಕೆಯಾಗಿದ್ದು 'ಇಂಡಿಯಾಮಾರ್ಟ್_ಕಾಂ'ನಿಂದ ಎಂದು ಸೆಕ್ಯುರಿಟಿ ಡಿಸ್ಕವರಿ ಮತ್ತು ಸೈಬರ್‌ನ್ಯೂಸ್ ಪೋರ್ಟಲ್‌ನ 'ಲೀಕ್‌ಚೆಕ್ಕರ್' ಹೇಳುತ್ತದೆ. ಲೀಕ್‌ಚೆಕ್ಕರ್‌ನಲ್ಲಿ ಇ-ಮೇಲ್ ಮತ್ತು ಫೋನ್ ನಂಬರ್ ನಮೂದಿಸಿದರೆ, ಈಗ ಸೋರಿಕೆಯಾಗಿರುವ ದತ್ತಾಂಶಗಳಲ್ಲಿ ನಿಮ್ಮ ಮಾಹಿತಿ ಇದೆಯೇ ಎಂಬುದನ್ನು ತೋರಿಸುತ್ತದೆ. ಜತೆಗೆ ಯಾವ ಪ್ಲಾಟ್‌ಫಾರಂಗಳು ಮತ್ತು ಅಪ್ಲಿಕೇಷನ್‌ಗಳ ಮೂಲಕ ಅವು ಸೋರಿಕೆಯಾಗಿವೆ ಎಂಬುದರ ಮಾಹಿತಿಯನ್ನೂ ಅದು ನೀಡುತ್ತದೆ.ಭಾರತದಲ್ಲಿ ನೋಂದಣಿಯಾದ ಕೆಲವು ಫೋನ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸಗಳನ್ನು ನಮೂದಿಸಿ ಹುಡುಕಿದಾಗ ಇಂಡಿಯಾಮಾರ್ಟ್, ಝೂಮ್‌ಕಾರ್, ಬಿಗ್‌ಬ್ಯಾಸ್ಕೆಟ್, ಲಿಂಕ್ಡ್‌ಇನ್, ಗಾಡಿ.ಕಾಂ, ಟ್ರೂಕಾಲರ್, ಕ್ಯಾನ್ವಾಗಳಿಂದ ದತ್ತಾಂಶಗಳನ್ನು ಕದಿಯಲಾಗಿದೆ ಎಂಬ ವಿವರ ದೊರೆಯಿತು. ಫೇಸ್‌ಬುಕ್‌ನಲ್ಲಿ ಅವತಾರ್‌ಗಳನ್ನು ಸೃಷ್ಟಿಸಿ ಎಂದು ಬಿತ್ತರವಾಗುವ ಲಿಂಕ್‌ಗಳಿಂದಲೂ ದತ್ತಾಂಶ ಕಳುವಾಗಿದೆ ಎಂದು ಲೀಕ್‌ಚೆಕ್ಕರ್ ಹೇಳುತ್ತದೆ.

ಭದ್ರತೆಗಾಗಿ ಹೀಗೆ ಮಾಡಿ...

ಇಲ್ಲಿ ಸೋರಿಕೆಯಾಗಿರುವ ಎಲ್ಲಾ ದತ್ತಾಂಶಗಳು ಒಂದೋ ಇ-ಮೇಲ್ ಜತೆಗೆ ಜೋಡಣೆಯಾಗಿವೆ ಅಥವಾ ಫೋನ್ ನಂಬರ್‌ಗೆ ಜೋಡಣೆಯಾಗಿವೆ. ಹೀಗಾಗಿ ನಿಮ್ಮ ಇ-ಮೇಲ್ ಮತ್ತು ಫೋನ್ ನಂಬರ್‌ಗಳನ್ನು ಒಳಗೊಂಡಿರುವ ಅಪ್ಲಿಕೇಷನ್‌ಗಳನ್ನು ಅಪ್‌ಡೇಟ್ ಮಾಡಿ. ನಂತರ ಅವುಗಳ ಪಾಸ್‌ವರ್ಡ್ ಮತ್ತು ಪಿನ್ ಅನ್ನು ಬದಲಿಸಿ.

ಸೈಬರ್‌ನ್ಯೂಸ್‌ನ 'Personal Data Leak Checker: Your Email & Data - Breached? | CyberNews' ವಿಳಾಸದಲ್ಲಿ ದೊರೆಯುವ ಪೋರ್ಟಲ್ ಅನ್ನು ತೆರೆಯಿರಿ. ಅಲ್ಲಿ ಇ-ಮೇಲ್ ಅಥವಾ ಫೋನ್ ನಂಬರ್ ಅನ್ನು ನಮೂದಿಸಿ. ನಿಮ್ಮ ಖಾತೆಗಳಿಂದ ಎಷ್ಟು ಬಾರಿ ದತ್ತಾಂಶಗಳನ್ನು ಕದಿಯಲಾಗಿದೆ ಮತ್ತು ಯಾವ ಯಾವ ಅಪ್ಲಿಕೇಷನ್‌ಗಳಿಂದ ಕದಿಯಲಾಗಿದೆ ಎಂಬ ಮಾಹಿತಿ ದೊರೆಯಲಿದೆ. ನಿಮ್ಮ ಖಾತೆಗಳು ದತ್ತಾಂಶ ಕಳವಿಗೆ ಗುರಿಯಾಗದೇ ಇದ್ದರೆ, ಅದು ಸುರಕ್ಷಿತವಾಗಿದೆ ಎಂದೂ ಪೋರ್ಟಲ್ ತೋರಿಸುತ್ತದೆ.

ನಿಮ್ಮ ಖಾತೆಗಳಿಂದ ದತ್ತಾಂಶ ಕಳವಾಗಿದ್ದರೆ,

- ಯಾವ ಅಪ್ಲಿಕೇಷನ್‌ಗಳಿಂದ ನಿಮ್ಮ ದತ್ತಾಂಶಗಳನ್ನು ಕದಿಯಲಾಗಿದೆ ಎಂದು ತೋರಿಸುತ್ತದೆಯೋ, ಆ ಅಪ್ಲಿಕೇಷನ್ ಅನ್ನು ಹೆಚ್ಚು ಬಳಸದೇ ಇದ್ದರೆ ಡಿಲೀಟ್ ಮಾಡಿ. ಆಗ್ಗಾಗ್ಗೆ ಬಳಸುತ್ತಿದ್ದರೆ, ಅವುಗಳಿಗೆ ನೀಡಿರುವ ಆ್ಯಪ್ ಪರ್ಮಿಷನ್‌ಗಳನ್ನು ತೆಗೆದುಹಾಕಿ. ಅಗತ್ಯವಿದ್ದಾಗಷ್ಟೇ ಪರ್ಮಿಷನ್‌ಗಳನ್ನು ನೀಡಿ
- ಅತ್ಯಂತ ಶಕ್ತಿಯುತವಾದ ಪಾಸ್‌ವರ್ಡ್‌ಗಳನ್ನು ಬಳಸಿದರೆ, ದತ್ತಾಂಶ ಕಳವಿನ ಸಾಧ್ಯತೆ ಕಡಿಮೆ ಇರುತ್ತದೆ. ಅದಕ್ಕಾಗಿ ಪಾಸ್‌ವರ್ಡ್ ಮ್ಯಾನೇಜರ್‌ಗಳನ್ನು ಬಳಸಿ
- ಪಾಸ್‌ವರ್ಡ್ ಮತ್ತು ಪಿನ್ ಪ್ಯಾಟ್ರನ್‌ಗಳನ್ನು ನಿಯಮಿತವಾಗಿ ಬದಲಿಸುತ್ತಿರಿ. ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್
- ಫೋನ್ ಅಪ್ಲಿಕೇಷನ್‌ಗಳಿಗೆ ಎರಡು ಹಂತದ ಪರಿಶೀಲನಾ ವ್ಯವಸ್ಥೆಯನ್ನು ಬಳಸಿ. ಇದರಿಂದ ಪಾಸ್‌ವರ್ಡ್ ಕಳವಾದರೂ, ಅದರ ದುರ್ಬಳಕೆ ಸಾಧ್ಯತೆಯನ್ನು ತಡೆಗಟ್ಟಬಹುದು

ಆಧಾರ: ಫೋಬ್ಸ್, ಸೆಕ್ಯುರಿಟಿ ಡಿಸ್ಕವರಿ ವರದಿ

ಸಿನಿ ಬಿಟ್ಸ್

'ಕಬ್ಜ 2' ಸೇರಿದಂತೆ ಐದು ಸಿನಿಮಾ!

ನೂತನ ಚಿತ್ರಗಳ ಶೀರ್ಷಿಕೆ ಬಿಡುಗಡೆಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಸುದೀಪ್, ಉಪೇಂದ್ರ ನಟನೆಯ 'ಕಬ್ಜ' ಸಿನಿಮಾದ ಬಳಿಕ ನಿರ್ದೇಶಕ ಆರ್. ಚಂದ್ರು 'ಕಬ್ಜ 2' ಮಾಡುತ್ತಾರೆಂಬ ಮಾತುಗಳು ಕೇಳಿಬಂದಿದ್ದವು. ಆದಾಗ್ಯೂ ಅವರು ಅಧಿಕೃತವಾಗಿ ತಮ್ಮ ಮುಂದಿನ ಯೋಜನೆ ಮಾಹಿತಿ ಬಿಟ್ಟುಕೊಟ್ಟಿರಲಿಲ್ಲ. ಇದೀಗ ಒಟ್ಟಿಗೆ ಐದು ಸಿನಿಮಾಗಳನ್ನು ಘೋಷಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗಷ್ಟೇ ಈ ಚಿತ್ರಗಳ ಶೀರ್ಷಿಕೆ ಅನಾವರಣಗೊಳಿಸಿ ತಂಡಕ್ಕೆ ಶುಭ ಕೋರಿದರು.

ಚಂದ್ರು, ತಮ್ಮ ಆರ್‌ಸಿ ಪ್ರೊಡಕ್ಷನ್ ಸಂಸ್ಥೆಯಿಂದ ಈ ಸಿನಿಮಾಗಳನ್ನು ನಿರ್ಮಿಸಲಿದ್ದಾರೆ. 'ಡಾಗ್', 'ಫಾದರ್', 'ಪಿಓಕೆ', 'ಶ್ರೀ ರಾಮ ಬಾಣಂ', 'ಕಬ್ಜ 2' ಸಿನಿಮಾಗಳನ್ನು ಘೋಷಣೆ ಮಾಡಿದ್ದಾರೆ. ಆದರೆ ಈ ಎಲ್ಲ ಸಿನಿಮಾಗಳನ್ನು ಚಂದ್ರು ನಿರ್ದೇಶಿಸುತ್ತಿಲ್ಲ. ಕೆಲವು ಹೊಸ ನಿರ್ದೇಶಕರಿಗೆ, ಹೊಸ ನಟರಿಗೆ ಅವಕಾಶ ನೀಡುತ್ತಿದ್ದಾರೆ.

''ಕಬ್ಜ' ಸಿನಿಮಾದ ಗಳಿಕೆ ಕುರಿತು ಕೆಲವರು ಆಡಿಕೊಂಡರು. ಆದರೆ ಆ ಸಿನಿಮಾದಿಂದ ನಾನು ಸರ್ಕಾರಕ್ಕೆ ₹20 ಕೋಟಿ ತೆರಿಗೆ ಕಟ್ಟಿರುವೆ. ಸಿನಿಮಾದಲ್ಲಿ ಸೋಲು, ಗೆಲುವು ಸಹಜ. ಒಳ್ಳೆಯ ಸಿನಿಮಾಗಳನ್ನು ಮಾಡುತ್ತ ಹೋಗುತ್ತೇನೆ' ಎಂದರು ಆರ್.ಚಂದ್ರು.

ಶೀರ್ಷಿಕೆ ಬಿಡುಗಡೆ ಸಮಾರಂಭದಲ್ಲಿ ಬಾಲಿವುಡ್ ನಿರ್ಮಾಪಕ ಆನಂದ್ ಪಂಡಿತ್, ರಿಯಲ್ ಸ್ಟಾರ್ ಉಪೇಂದ್ರ, ಡಾರ್ಲಿಂಗ್ ಕೃಷ್ಣ ಮುಂತಾದವರು ಹಾಜರಿದ್ದು ಚಂದ್ರುಗೆ ಸಾಥ್ ನೀಡಿದ್ದಾರೆ. 'ಚಂದ್ರು ಸದಾ ಪಾಸಿಟಿವ್ ಆಗಿ ಯೋಚಿಸುವ ವ್ಯಕ್ತಿ. ಅವರ ಮುಂದಿನ ಸಿನಿಮಾಗಳ ಬಜೆಟ್ ಬಹುಶಃ ₹500 ಕೋಟಿ ಮೀರಿರಬಹುದು' ಎಂದು ಗೆಳೆಯನಿಗೆ ಶುಭ ಹಾರೈಸಿದರು ನಟ ಉಪೇಂದ್ರ.

ಅಜಯ್ ರಾವ್ ಹೊಸ ಚಿತ್ರ

ಅಜಯ್ ರಾವ್

ನಟ ಅಜಯ್ ರಾವ್ ಜನ್ಮದಿನದ ಅಂಗವಾಗಿ ಹೊಸ ಚಿತ್ರ ಘೋಷಣೆಯಾಗಿದೆ. ಈ ಹಿಂದೆ 'ಮಳೆ' ಚಿತ್ರವನ್ನು ನಿರ್ದೇಶಿಸಿದ್ದ ಶಿವತೇಜಸ್ ಹೆಸರಿಡದ ಈ ಚಿತ್ರಕ್ಕೆ ಆ್ಯಕ್ಷನ್-ಕಟ್ ಹೇಳುತ್ತಿದ್ದಾರೆ. ಹೆಚ್‌ಪಿಆರ್ ಎಂಟರ್‌ಪ್ರೈಸಸ್ ಲಾಂಛನದಲ್ಲಿ ಹರೀಶ್ ದೇವಿತಂದ್ರ ಬಂಡವಾಳ ಹೂಡುತ್ತಿದ್ದಾರೆ.

'ಈ ಹಿಂದೆ ನಾನು ನಿರ್ದೇಶಿಸಿದ್ದ 'ಧೈರ್ಯಂ' ಚಿತ್ರದಲ್ಲಿ ಅಜಯ್ ರಾವ್ ನಾಯಕರಾಗಿ ನಟಿಸಿದ್ದರು. 'ದಿಲ್ ಪಸಂದ್' ಚಿತ್ರದಲ್ಲಿ ಅತಿಥಿಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಈಗ ನಮ್ಮಿಬ್ಬರ ಕಾಂಬಿನೇಶನ್‌ನಲ್ಲಿ ಹೊಸ ಚಿತ್ರವೊಂದು ಸದ್ಯದಲ್ಲೇ ಆರಂಭವಾಗಲಿದೆ. ಚಿತ್ರದ ಶೀರ್ಷಿಕೆ ಹಾಗೂ ಹೆಚ್ಚಿನ ಮಾಹಿತಿಯನ್ನು ಸದ್ಯದಲ್ಲೇ ನೀಡುತ್ತೇವೆ' ಎಂದು ನಿರ್ದೇಶಕ ಶಿವತೇಜಸ್ ತಿಳಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಕ್ರಿಕೆಟಿಗ** ವಿರಾಟ್ ಕೊಹ್ಲಿ ಮತ್ತು ಅವರ ಪತ್ನಿ, ನಟಿ ಅನುಷ್ಕಾ ಶರ್ಮಾ ಅವರು ಅಯೋಧ್ಯೆಯ ರಾಮ ಮಂದಿರದಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು ಎಂಬ ವಿವರ ಇರುವ ಹಲವು ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಕೊಹ್ಲಿ ಅವರು ಕಪ್ಪು ದಿರಿಸು ತೊಟ್ಟಿರುವ ಚಿತ್ರ, ಅವರು ಮತ್ತು ಅವರ ಪತ್ನಿ ಸನ್ಯಾಸಿಯೊಬ್ಬರ ಜತೆಗೆ ನಿಂತಿರುವ ಚಿತ್ರಗಳನ್ನೂ ಈ ಪೋಸ್ಟ್‌ಗಳ ಒಟ್ಟಿಗೆ ಹಂಚಿಕೊಳ್ಳಲಾಗುತ್ತಿದೆ. ಅಲ್ಲದೆ ಕೊಹ್ಲಿ ಅವರು ಕೇಸರಿ ಸಾಲು ಹಾಕಿಕೊಂಡು, ಅರ್ಚರೊಬ್ಬರ ಒಟ್ಟಿಗೆ ನಿಂತಿರುವ ಚಿತ್ರವನ್ನೂ ಹಂಚಿಕೊಳ್ಳಲಾಗುತ್ತಿದೆ. ಆದರೆ ಈ ಚಿತ್ರಗಳೊಟ್ಟಿಗೆ ಹಂಚಿಕೊಳ್ಳಲಾಗುತ್ತಿರುವ ಮಾಹಿತಿ ತಪ್ಪು.

✓ 'ವಿರಾಟ್ ಕೊಹ್ಲಿ ಮತ್ತು ಅನುಷ್ಕಾ ಶರ್ಮಾ ಅವರು ಇದೇ ಜನವರಿ 22ರಂದು ನಡೆದಿದ್ದ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಹೋಗಿರಲಿಲ್ಲ. ಅಂತಹ ಮಾಹಿತಿಯೊಟ್ಟಿಗೆ ಹಂಚಿಕೊಳ್ಳಲಾಗುತ್ತಿರುವ ಮೂರೂ ಚಿತ್ರಗಳು ಹಳೆಯವು. ವಿರಾಟ್ ಅವರು ಕಪ್ಪು ಬಟ್ಟೆ ಹಾಕಿರುವ ಚಿತ್ರವು 2023ರ ಸೆಪ್ಟೆಂಬರ್‌ನಲ್ಲಿ ತೆಗೆದದ್ದು. ಆಗ ಅವರು ಮುಂಬೈನ ಗಣೇಶ ಪೆಂಡಾಲ್ ಒಂದಕ್ಕೆ ಭೇಟಿ ನೀಡಿದ್ದಾಗ ಆ ಚಿತ್ರವನ್ನು ತೆಗೆಯಲಾಗಿತ್ತು. ಅದೇ ಕಾರ್ಯಕ್ರಮದಲ್ಲಿ ಕೊಹ್ಲಿ ಅವರು ಕೇಸರಿ ಶಾಲು ಹಾಕಿಕೊಂಡು ಚಿತ್ರ ತೆಗೆಸಿಕೊಂಡಿದ್ದರು. ದಂಪತಿಯು ಸನ್ಯಾಸಿ ಒಟ್ಟಿಗೆ ನಿಂತಿರುವ ಚಿತ್ರವು ಋಷಿಕೇಶದಲ್ಲಿ ತೆಗೆದದ್ದು. ಈ ಮೂರೂ ಚಿತ್ರಗಳಿಗೂ, ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೂ ಸಂಬಂಧವಿಲ್ಲ' ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಕಾರ್ಯತತ್ಪರತೆಯ ಮಹತ್ವ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಂದಾನೊಂದು ಕಾಲದಲ್ಲಿ ಒಂದು ರಾಜ್ಯವಿತ್ತು. ಆ ರಾಜ್ಯದ ವಿಶೇಷ ಏನೆಂದರೆ ಪ್ರಜೆಗಳೆಲ್ಲ ಸೇರಿ ಯೋಗ್ಯ ವ್ಯಕ್ತಿಯೊಬ್ಬನನ್ನು ರಾಜನಾಗಿ ಆಯ್ಕೆ ಮಾಡುತ್ತಿದ್ದರು. ಆದರೆ ರಾಜನ ಆಳ್ವಿಕೆ ಕೇವಲ ಐದು ವರ್ಷ ಮಾತ್ರ! ಐದು ವರ್ಷದ ನಂತರ ಅವನನ್ನು ಬಹುದೂರದ ಒಂದು ಘೋರ ಅರಣ್ಯದಲ್ಲಿ ಬಿಟ್ಟು ಬರಲಾಗುತ್ತಿತ್ತು. ಅಲ್ಲಿಂದ ಯಾರೂ ವಾಪಾಸು ಬರುವ ಪ್ರಶ್ನೆಯೇ ಇರಲಿಲ್ಲ. ಅದೆಷ್ಟೋ ವರ್ಷಗಳಿಂದ ಈ ಸಂಪ್ರದಾಯ ಕಡ್ಡಾಯವಾಗಿ ನಡೆದುಕೊಂಡು ಬರುತ್ತಿತ್ತು.

ಹೀಗೆ ಆಯ್ಕೆಯಾದ ಹೊಸ ರಾಜನೊಬ್ಬನಿಗೆ ಐದು ವರ್ಷದ ನಂತರದ ಸಮಸ್ಯೆ ಯೋಚಿಸಿ ಭಯ ಶುರುವಾಗುತ್ತದೆ. ಆದರೆ ಬುದ್ಧಿವಂತನಾದ ಆತ ಅದರ ಬಗ್ಗೆ ಆರಂಭದಲ್ಲಿಯೇ ಗಮನ ಹರಿಸುತ್ತಾನೆ. ಇತರರಂತೆ ಮೋಜು ಮಸ್ತಿಯಲ್ಲಿ ಕಾಲಹರಣ ಮಾಡುವ ಬದಲು ಈ ಸಮಸ್ಯೆಯಿಂದ ಹೇಗೆ ಪಾರಾಗಬಹುದೆಂದು ಯೋಚಿಸತೊಡಗುತ್ತಾನೆ. ತನ್ನ ನಂಬುಗೆಯ ಸೈನಿಕರನ್ನು ಆ ಕಾಡಿಗೆ ಕಳುಹಿಸುತ್ತಾನೆ. ಆ ಅಭೇದ್ಯ ಕಾಡನ್ನು ನಿಧಾನವಾಗಿ ಪರಿವರ್ತಿಸತೊಡಗುತ್ತಾನೆ. ಹಂತಹಂತವಾಗಿ ಕಾಡಿನ ನಟ್ಟನಡುವಿನ ಮರಗಿಡಗಳನ್ನು ಕಡಿಸಿ, ತೊರೆಗಳನ್ನು ಶುಚಿಗೊಳಿಸುತ್ತಾನೆ. ರಾಜ್ಯದ ಕಡುಬಡವರನ್ನು ಹುಡುಕಿಸಿ ಅವರನ್ನು ಅಲ್ಲಿ ವಾಸಿಸಲು ಕಳುಹಿಸುತ್ತಾನೆ. ಹೊರಗಿನಿಂದ ಗೊಂಡಾರಣ್ಯವಾಗಿ ಕಾಣುವ ಕಾಡನ್ನು ನಟ್ಟನಡುವೆ ಸುಂದರವಾದ ಎಲ್ಲ ಸೌಕರ್ಯಗಳಿರುವ ಊರನ್ನಾಗಿ ಮಾರ್ಪಡಿಸುತ್ತಾನೆ. ಐದು ವರ್ಷದ ನಂತರ ಎಲ್ಲ ರಾಜರೂ ಅಳುತ್ತ ಗಾಬರಿಯಿಂದ ಜೀವಭಯದಿಂದ ಹೊರಟರೆ ಈತ ಮುಗುಳ್ನಗುತ್ತ ಜನರಿಂದ ಬೀಳ್ಕೊಳ್ಳುತ್ತಾನೆ. ಮುಂದಾಲೋಚನೆಯಿಂದ ತಾನು ಐದು ವರ್ಷಗಳ ಕಾಲ ಶ್ರಮಪಟ್ಟು ನಿರ್ಮಿಸಿದ್ದ ಕಾಡೊಳಗಿನ ನಾಡಿಗೆ ಹೋದಾಗ ಅಲ್ಲಿದ್ದವರು ಅವನನ್ನು ಆತ್ಮೀಯತೆಯಿಂದ ಸ್ವಾಗತಿಸುತ್ತಾರೆ. ಅಲ್ಲಿಯೂ ತಾನೇ ಕಟ್ಟಿದ ರಾಜ್ಯದ ಪ್ರಜೆಗಳ ಪ್ರೀತಿಯ ರಾಜನಾಗಿ ಬದುಕುತ್ತಾನೆ.

ಹಾಗಾದರೆ ಹಿಂದಿನ ರಾಜರಿಗ್ಯಾರಿಗೂ ಈ ಉಪಾಯ ಹೊಳೆಯಲಿಲ್ಲವೇ? ಇಷ್ಟು ಸರಳ ಸಂಗತಿ ಗೊತ್ತಿಲ್ಲದವರೇನಲ್ಲ ಯಾರೂ. ಆರಾಮಾಗಿ ರಾಜನಾಗಿ ಕಾಲ ಕಳೆಯೋಣ ಮತ್ತೆ ನೋಡಿಕೊಂಡರಾಯಿತೆಂದು ಆಯ್ಕೆಯಾದವರೂ ಯೋಚಿಸುತ್ತಿದ್ದರು. ಆದರೆ ಕಾರ್ಯತತ್ಪರರಾಗುವಷ್ಟರಲ್ಲಿ ಸಮಯ ಉರುಳಿಹೋಗುತ್ತಿತ್ತು! ನಾವೂ ಹಾಗೆಯೇ ಅಲ್ಲವೇ? ನಮಗೂ ಎಲ್ಲ ಗೊತ್ತಿದೆ! ದಿನವೂ ಹೊಟ್ಟೆ ಬಿರಿಯುವಷ್ಟು ತಿಂದರೆ, ದೈಹಿಕ ಚಟುವಟಿಕೆ ಮಾಡದಿದ್ದರೆ ಮುಂದೆ ಅನಾರೋಗ್ಯಕ್ಕೀಡಾಗುತ್ತೇವೆಂದು, ಕಷ್ಟವಾದರೂ ಸರಿ ಉಳಿತಾಯ ಮಾಡದಿದ್ದರೆ ಸಮಸ್ಯೆಯಾಗುತ್ತದೆಂದು, ಓದದಿದ್ದರೆ ಒಳ್ಳೆಯ ಅಂಕ ಬರುವುದಿಲ್ಲವೆಂದು ಯಾರಿಗೆ ತಾನೇ ಗೊತ್ತಿಲ್ಲ? ಬಾಯಿ ಮೊಸರಾಗಲು ಕೈ ಕೆಸರು ಮಾಡಿಕೊಳ್ಳುವುದು ಬಹುಮುಖ್ಯವೆಂಬ ಅರಿವು ಯಾರಿಗಿಲ್ಲ? ನಾಳೆ ಎನ್ನುವವರ ನಾಳೆಗಳು ಇಂದಿನಂತೆಯೇ ಕಳೆದುಹೋಗುತ್ತವೆ. ಮುನ್ನೆಚ್ಚರಿಕೆಯಿಂದ, ಶ್ರಮ ವಹಿಸಿ ಕಾರ್ಯತತ್ಪರರಾಗುವವರು ಮಾತ್ರ ಅಂದುಕೊಂಡಿದ್ದನ್ನು ಸಾಧಿಸುತ್ತಾರೆ, ಅಷ್ಟೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜನವರಿ 25, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ಪೂರ್ಣಿಮಾ ಗಂ. 23-24 ನಕ್ಷತ್ರ: ಪುನರ್ವಸು ಗಂ. 08-17 ಯೋಗ: ವಿಷ್ಕಂಭ ಗಂ. 07-32 ಕರಣ: ವಿಷ್ಟಿ ಗಂ. 10-34, ಮಕರ ಮಾಸದ 10 ನೇ ದಿನ, ಮಳೆನಕ್ಷತ್ರ: ಶ್ರವಣ 1.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 07-01 ಸೂರ್ಯಾಸ್ತ: 06-24
ಮುಸ್ಲಿಂ ದಿನಾಂಕ: 13 ರಜಬ್
ಅದೃಷ್ಟ ಸಂಖ್ಯೆ: 12, 4

ಮೇಷ: ಸಂಬಂಧಿಕರಿಗಾಗಿ ಅಥವಾ ಆಪ್ತ ಸ್ನೇಹಿತನಿಗಾಗಿ ಸಮಯ ಮತ್ತು ಹಣವನ್ನು ಖರ್ಚು ಮಾಡುವ ಪರಿಸ್ಥಿತಿ ನಿಮಗೆ ಈ ದಿನ ಬರುವುದು. ಚಿತ್ರ ನಿರ್ಮಾಪಕರಿಗೆ ಹೊಸ ಹುರುಪು ಮೂಡಲಿದೆ. ಹಣದ ಅಡಚಣೆ ಇರುವುದಿಲ್ಲ.

ವೃಷಭ: ಉದ್ಯೋಗದಲ್ಲಿನ ಬದಲಾವಣೆಯನ್ನು ಬಯಸಿದ ನಿಮಗೆ ನಿಮ್ಮಿಚ್ಛೆಯಂತೆಯೇ ಆದಾಯ ದೊರೆಯುವ ಕೆಲಸ ಸಿಗಲಿದೆ, ಆದರೆ ಕಾರ್ಯದ ಸಮಯ, ಒತ್ತಡಗಳು ನಿಮ್ಮ ಸುಖ-ಶಾಂತಿಯನ್ನು ಕಡಿಮೆ ಮಾಡಬಹುದು.

ಮಿಥುನ: ಅದೃಷ್ಟದ ಕಾಲವಾದ ಕಾರಣ ಬಂದ ಅವಕಾಶಗಳನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡಲ್ಲಿ ವ್ಯಾಪಾರ ವ್ಯವಹಾರದಲ್ಲಿ ಅಧಿಕ ಲಾಭ ಕಾಣಬಹುದು. ಪತ್ನಿಯ ಆರೋಗ್ಯ ಸುಧಾರಿಸುವುದು.

ಕರ್ಕಾಟಕ: ದಾಂಪತ್ಯ ಜೀವನದಲ್ಲಿ ತಾಳ್ಮೆ, ಸಮಾಧಾನದಿಂದ ಮುಂದುವರಿದು ಸಂಸಾರದಲ್ಲಿ ಉತ್ತಮ ಹೊಂದಾಣಿಕೆ ಕಾಣುವಿರಿ. ವಿಪರೀತ ಕೆಲಸಗಳಿಂದ ದೇಹಾಲಸ್ಯ ತೋರಲಿದೆ.

ಸಿಂಹ: ವ್ಯವಹಾರಕ್ಕೆ ಸಂಬಂಧಿಸಿದಂತೆ ಮನೆಯಲ್ಲಿ ಹಿರಿಯರ ಮತ್ತು ಮಡದಿಯಲ್ಲಿದ್ದ ನಕಾರಾತ್ಮಕ ಪ್ರತಿಕ್ರಿಯೆ ಬದಲಾಗಿ ನಿಮ್ಮ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ. ಆರೋಗ್ಯದಲ್ಲಿ ಕಾಳಜಿ ಇಡಿ.

ಕನ್ಯಾ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವವರಿಗೆ ರಾಜಕೀಯ ಸೇರಲು ಆಹ್ವಾನ ದೊರೆಯಲಿದೆ. ಭಯ-ಭೀತಿಯಿಂದ ಹೊರಬರುವಂತಾಗುವುದು.

ತುಲಾ: ಒಡಹುಟ್ಟಿದವರ ಸಹಾಯದಿಂದ ನಿಮ್ಮ ಹಿಂದಿನ ಹಣಕಾಸಿನ ತೊಂದರೆಗಳು ದೂರಾಗಿ ಹೊಸ ಯೋಜನೆಗೆ ಚಾಲನೆ ಮಾಡಬಹುದು. ಮಗನ ಇಂದಿನ ಅನಿರೀಕ್ಷಿತ ಬದಲಾವಣೆ ನಿಮಗೆ ಅಚ್ಚರಿ ತರುತ್ತದೆ.

ವೃಶ್ಚಿಕ: ಜೀವನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳುವ ಅನಿವಾರ್ಯತೆ ಕಂಡುಬರಲಿದೆ. ಕುಟುಂಬದ ಸದಸ್ಯರಿಂದ ಒಂದು ಶುಭ ಸುದ್ದಿಯನ್ನು ಕೇಳುವಿರಿ. ದೇವಿಯ ಆರಾಧನೆ ಮಾಡುವುದರಿಂದ ತುಸು ನೆಮ್ಮದಿ.

ಧನು: ಕುಟುಂಬದಲ್ಲಿ ಮಾನಸಿಕ ಸಮಾಧಾನ ದೊರೆತು ಹಂತ ಹಂತವಾಗಿ ಅನುಕೂಲ ವಾತಾವರಣದ ಅನುಭವ ದೊರಕಲಿದೆ. ಉತ್ತಮ ವರಮಾನದಿಂದ ಯಾವುದೇ ತರದಲ್ಲಿ ಹಣದ ತೊಂದರೆ ನಿಮಗೆ ಕಾಣಿಸದು.

ಮಕರ: ತಂದೆ ತಾಯಿಯ ಆರೋಗ್ಯವು ಸುಧಾರಿಸಿ, ಮನೆಯಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ. ಮನೋಭಿಲಾಷೆಯಂತೆ ನಿಶ್ಚಯಿಸಿದ ಕಾರ್ಯ ಸಾಗುವುದು. ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಬೇಡಿ.

ಕುಂಭ: ಬೆಂಕಿಯಿಂದ ಅನಾಹುತಗಳು ಸಂಭವಿಸುವ ಲಕ್ಷಣಗಳಿರುವುದರಿಂದ ಜಾಗ್ರತರಾಗಿರುವುದು ಒಳ್ಳೆಯದು. ಲೆಕ್ಕಪತ್ರಗಳನ್ನು ಸರಿಯಾಗಿ ಪರಿಶೀಲಿಸಿ ಸಹಿ ಮಾಡುವುದು ಒಳಿತು.

ಮೀನ: ನಿರೀಕ್ಷಿಸಿದ ಉದ್ಯಮದಲ್ಲಿ ಅಲ್ಲದೆ ಬೇರೆ ಕಡೆ ನಿಮಗೆ ಅವಕಾಶ ದೊರೆಯಲಿದೆ. ಚಿಂತೆಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ. ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸುವುದರಿಂದ ಬಹುಮಾನ ಪಡೆಯುವಿರಿ.

ಪದಬಂಧ 5571

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗನು ಹಿಡಿದಿರುವ ಮೈಕ್ರೋಸ್ಕೋಪ್ (5)
3.ಕೂಸಿನ ತಲೆಗೆ ಕಟ್ಟುವ ಟೋಪಿ (3)
5.ಆಹಾ! ರುಚಿಕಟ್ಟಾದ ಭೋಜನವಿದು! (5)
7.ಕೊನೆಗೆ ಹಣ್ಣನ್ನಿಟ್ಟರೆ ಖಂಡಿತಾ ಯಶಸ್ವಿ! (3)
8.ಯಾವುದೇ ಅಪರಾಧವನ್ನು ಮಾಡದಿರುವವನು (5)
11.ಸೂಕ್ಷ್ಮವಾದ ಪರಿಶೀಲನೆ (3)
12.ನವ ಬಾಳಿದು (5)
15.ಗತಿಸಿದ ವಿಭೂತಿ ಪುರುಷರ ಜನ್ಮದಿನ (3)
16.ಪ್ರಸವ ಕೋಣೆ ಇಲ್ಲಿದೆ (5)

ಮೇಲಿಂದ ಕೆಳಕ್ಕೆ
1.ಕೊನೆಗೆ ಕೈಯಿಟ್ಟಾಗ ಹಂದಿ ಕಾಣಿಸಿತಲ್ಲಾ! (3)
2.ಹತ್ತು ವರ್ಷಗಳ ಕಾಲದ ಅವಧಿ (3)
4.ಒಡೆಯುವಿಕೆ ಅಥವಾ ಸೀಳುವಿಕೆ (4)
6.ವಠಾರದಲ್ಲಿ ಕಾಣಿಸಿರುವ ಪ್ರತಿನಿಧಿ (3)
7.ಸತ್ತವರನ್ನು ಹೂಳುವ ಸ್ಥಳ (3)
8. ಎದುರು ನೋಡುವುದು (3)
9.ರಾಯರಿಂದ ಬಂದಿರುವ ನಿರೂಪ (3)
10.ಇದು ಕೃತಕವಾದುದು (4)
13.ಇದೊಂದು ಸಾಂಬಾರ ದ್ರವ್ಯ (3)
14.ಮಾದರಿಗೊಂದು ಪರ್ಯಾಯ ಪದ (3)



5570ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮೆಲುನುಡಿ 4.ಅಳಿಲು
5.ಬಂಡವಾಳ 6.ಗಾರ್ದಭ
8.ಪರಾಜಯ 9.ವನಚರ
11.ಕದನ 14.ಅವನತಿ
16.ಸನ್ಮಿತ್ರ 17.ಪರಭಾರೆ

ಮೇಲಿಂದ ಕೆಳಕ್ಕೆ:
1.ಮೆಲುಕು 2.ಡಿಂಬ
3.ಕವಾಟ 4.ಅಪರೂಪ
6.ಗಾಯಕ 7.ಭವನ
10.ರಕ್ಷಾಪತ್ರ 12.ತೆವಲು
13.ಆಸರೆ 15.ತಪ

ಸುಡೊಕು 5956

	1				5	4		9
4			6				5	
	6	5		4	8	1		
	2				7			6
5		1		6			2	
			5					7
	3	9				6		
6			8		4		3	1
		4		3		2		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5955 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ಷೇರುಪೇಟೆ ವಹಿವಾಟು 689



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,238
ಇಂದಿನ ಅಂತ್ಯ	21,453
▲	215
ದಿನದ ಗರಿಷ್ಠ	21,482

ವಿನಿಮಯ ದರ

$ ಡಾಲರ್	83.12
£ ಪೌಂಡ್	106.13
€ ಯುರೊ	90.66
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹572

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹900 (905)
ಸೂರ್ಯಕಾಂತಿ (ರಿಫೈನ್ಡ್)	₹925 (920)
ಪಾಮೋಲಿನ್	₹860 (855)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1300-1600
ಮಧ್ಯಮ	₹900-1300
ಸಣ್ಣ	₹400-800

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹158.50
ಆರ್‌ಎಸ್‌ಎಸ್-5	₹153
ಗುಡ್ ಲಾಟ್	₹136.50

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹112-466
ದ್ವಿತಳಿ (ಬಿ.ವಿ)	₹110-548

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9000-10100
ಪುತ್ತೂರು	₹5500-9200
ತಿಪಟೂರು	₹8000-9800

2 ದಿನದ ಬಳಿಕ ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಮುಂಬೈ (ಪಿಟಿಐ): ಸತತ ಎರಡು ದಿನಗಳ ವಹಿವಾಟಿನಲ್ಲಿ ಇಳಿಕೆ ಕಂಡಿದ್ದ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕ ಬುಧವಾರ ಶೇ 1ರಷ್ಟು ಏರಿಕೆಯಾಗಿದೆ.

ಲೋಹ, ಸರಕು ಮತ್ತು ಟೆಲಿಕಾಂ ಷೇರುಗಳ ಖರೀದಿ ಹೆಚ್ಚಿದ್ದರಿಂದ ಮಾರುಕಟ್ಟೆಯು ಚೇತರಿಕೆಯ ಹಳಿಗೆ ಮರಳಿತು. ಸೆನ್ಸೆಕ್ಸ್ 689 ಅಂಶ ಮತ್ತು ನಿಫ್ಟಿ 215 ಅಂಶ ಏರಿಕೆಯಾಗಿದೆ.

ಬಿಎಸ್‌ಇಯ 30 ಷೇರುಗಳಲ್ಲಿ 25 ಷೇರುಗಳು ಮತ್ತು ನಿಫ್ಟಿಯ 50 ಷೇರುಗಳ ಪೈಕಿ 43 ಷೇರುಗಳು ಗಳಿಕೆ ಕಂಡಿವೆ. ಮಂಗಳವಾರ ಬಿಎಸ್‌ಇ 1,053 ಮತ್ತು ನಿಫ್ಟಿ 333 ಅಂಶ ಕುಸಿತ ಕಂಡಿತ್ತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಮಂಗಳವಾರ ₹3,115 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಷೇರುಪೇಟೆಯ ಅಂಕಿ ಅಂಶಗಳು ತಿಳಿಸಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	570
ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-36000
ಹಳತು	42000-44500
ಕಾರ್ಕಳ	
ಹೊಸತು	25000-36000
ಹಳತು	30000-44500
ಕುಮಟ	
ಬೆಟ್ಟೆ	33599-45009
ಚಿಪ್ಪು	26589-32899
ಕೋಕ	18899-29999
ಫ್ಯಾಕ್ಟರಿ	11269-22329
ಹಳೆಚಾಲಿ	36899-38525
ಹೊಸಚಾಲಿ	33099-35525
ಪುತ್ತೂರು	
ಕೋಕ	11000-25000
ಹೊಸತು	27000-36000
ಶಿವಮೊಗ್ಗ	
ಬೆಟ್ಟೆ	41009-54719
ಗೊರಬಲು	22009-36490
ರಾಶಿ	35899-48961
ಸರಕು	50100-77640
ಸಿದ್ದಾಪುರ	
ಬಿಳಿಗೋಟು	31899-34019
ಚಾಲಿ	37289-38899
ಕೋಕ	30669-32899
ಹೊಸಚಾಲಿ	31899-34219
ಕೆಂಪುಗೋಟು	32619-35099
ರಾಶಿ	45319-47699
ತಟ್ಟಿಬೆಟ್ಟೆ	41209-46699
ಶಿರಸಿ	
ಬೆಟ್ಟೆ	40018-45199
ಬಿಳಿಗೋಟು	27109-35509
ಚಾಲಿ	36529-39662
ಕೆಂಪುಗೋಟು	30699-36990
ರಾಶಿ	44518-49289

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14500	14500	-	192.95 ಸೆಂಟ್ಸ್
ಎಸಿ	7900	7,800	-	
ಆರ್‌ಪಿ	12200	12,500	-	ಲಂಡನ್
ಆರ್‌ಸಿ	7370	270 on OT	-	3,182 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

24-1-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	868 (865)
ಪಾಮ್ ವಾರದ ಡೆಲಿವರಿ	858 (853)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,350 (62,200)
ಬೆಳ್ಳಿ ಕೆ.ಜಿ ₹71,100 (70,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿ

ಐಒಸಿಗೆ ₹8,063 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ತೈಲ ನಿಗಮವು (ಐಒಸಿ) 2023–24ನೇ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹8,063 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹448.1 ಕೋಟಿ ಲಾಭ ಗಳಿಸಿತ್ತು. ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹12,967.32 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಮೂರನೇ ತ್ರೈಮಾಸಿಕದಲ್ಲಿ ಆದಾಯ ಕಡಿಮೆಯಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

2022-23ರಲ್ಲಿ ಕಚ್ಚಾ ತೈಲದ ದರ ಗರಿಷ್ಠ ಮಟ್ಟದಲ್ಲಿ ಇದ್ದಾಗ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಏರಿಕೆ ಮಾಡಿರಲಿಲ್ಲ. ಆಗ ಆಗಿದ್ದ ನಷ್ಟವನ್ನು ತುಂಬಿಕೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

ಪೆಟ್ರೋಲಿಯಂ ಉತ್ಪನ್ನಗಳ ಮಾರಾಟದಿಂದ ಬರುವ ತೆರಿಗೆ ಪೂರ್ವದ ಲಾಭವು ಹೆಚ್ಚಳವಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ₹1,541.95 ಕೋಟಿ ಇದ್ದಿದ್ದು, ಈ ತ್ರೈಮಾಸಿಕದಲ್ಲಿ ₹11,428.88 ಕೋಟಿಗೆ ಏರಿಕೆ ಆಗಿದೆ ಎಂದು ವಿವರಿಸಿದೆ.

2023ರಲ್ಲಿ 3.77 ಲಕ್ಷ ಟನ್‌ಗೆ ಇಳಿಕೆ: ಕರ್ನಾಟಕದಲ್ಲಿ ಉತ್ಪಾದನೆ ಕುಂಠಿತ

ಕಾಫಿ ರಫ್ತು ಶೇ 5.4ರಷ್ಟು ಕುಸಿತ

ನವದೆಹಲಿ (ಪಿಟಿಐ): ದೇಶದಲ್ಲಿ 2023ನೇ ಸಾಲಿನಡಿ ಕಾಫಿ ರಫ್ತು ಶೇ 5.4ರಷ್ಟು ಕುಸಿದಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

2022ನೇ ಸಾಲಿನಡಿ ವಿದೇಶಕ್ಕೆ 3.98 ಲಕ್ಷ ಟನ್ ಕಾಫಿ ರಫ್ತು ಆಗಿತ್ತು. 2023ರಲ್ಲಿ 3.77 ಲಕ್ಷ ಟನ್‌ಗೆ ಇಳಿಕೆಯಾಗಿದೆ. ರೊಬಸ್ಟಾ ಕಾಫಿ ರಫ್ತು ಗಣನೀಯವಾಗಿ ಕಡಿಮೆಯಾಗಿದೆ ಎಂದು ತಿಳಿಸಿದೆ.

ಅರೇಬಿಕಾ ಮತ್ತು ರೊಬಸ್ಟಾ ತಳಿಯ ಕಾಫಿ ಉತ್ಪಾದನೆ ಮತ್ತು ರಫ್ತು ಮಾಡುವುದರಲ್ಲಿ ಭಾರತವು ಏಷ್ಯಾದಲ್ಲಿಯೇ ಮೂರನೇ ಅತಿದೊಡ್ಡ ರಾಷ್ಟ್ರವಾಗಿದೆ. ಇಟಲಿ, ರಷ್ಯಾ, ಯುಎಇ, ಜರ್ಮನಿ ಮತ್ತು ಟರ್ಕಿಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತದೆ.

ರೊಬಸ್ಟಾಗೆ ಹೋಲಿಸಿದರೆ ಅರೇಬಿಕಾ ಕಾಫಿ ಬೀಜಗಳಲ್ಲಿ ಕೆಫಿನ್ ಅಂಶದ ಪ್ರಮಾಣ ಕಡಿಮೆ ಇದೆ. ಅಲ್ಲದೆ, ಸ್ವಲ್ಪ ಒಗರು ಕಡಿಮೆ ಇದ್ದು, ಹೆಚ್ಚು ರುಚಿ- ಆಗಿರುತ್ತದೆ. ಆದರೆ, ರೊಬಸ್ಟಾದಲ್ಲಿ ಒಗರು ಮತ್ತು ಸ್ವಲ್ಪ ಕಹಿ ಇರುತ್ತದೆ.

ದೇಶದಲ್ಲಿ ರೊಬಸ್ಟಾ ರಫ್ತು ಶೇ15ರಷ್ಟು ಕುಸಿದಿದೆ. 2022ರಲ್ಲಿ 2.20 ಲಕ್ಷ ಟನ್ ರಫ್ತು ಮಾಡಲಾಗಿತ್ತು. 2023ರಲ್ಲಿ 1.87 ಲಕ್ಷ ಟನ್‌ಗೆ ಇಳಿದಿದೆ.

ಅಂಕಿ ಅಂಶಗಳು

₹9,580.58 ಕೋಟಿ
2023ರಲ್ಲಿ ಕಾಫಿ ರಫ್ತಿನ ಒಟ್ಟು ಮೌಲ್ಯ

3.52 ಲಕ್ಷ ಟನ್
2022–23ರಲ್ಲಿ ಒಟ್ಟು ಉತ್ಪಾದನೆ

3.74 ಲಕ್ಷ ಟನ್
2023–24ರಲ್ಲಿ ಉತ್ಪಾದನೆಯ ಅಂದಾಜು

ಆದರೆ, ಅರೇಬಿಕಾ ಕಾಫಿ ರಫ್ತು ಶೇ5.79ರಷ್ಟು ಏರಿಕೆಯಾಗಿದೆ. 2022ರಲ್ಲಿ 44,302 ಟನ್ ರಫ್ತು ಮಾಡಲಾಗಿತ್ತು. 2023ರಲ್ಲಿ 46,869 ಟನ್‌ಗೆ ಏರಿಕೆಯಾಗಿದೆ.

ಇನ್‌ಸ್ಟಂಟ್ ಕಾಫಿ ರಫ್ತು ಪ್ರಮಾಣವೂ ಶೇ6.68ರಷ್ಟು ಹೆಚ್ಚಳವಾಗಿದೆ. ಭಾರತವು 2022ರಲ್ಲಿ 1.33 ಲಕ್ಷ ಟನ್‌ನಷ್ಟು ರಫ್ತು ಮಾಡಿತ್ತು. 2023ರಲ್ಲಿ 1.42 ಲಕ್ಷ ಟನ್‌ನಷ್ಟು ಇನ್‌ಸ್ಟಂಟ್ ಕಾಫಿಯನ್ನು ರಫ್ತು ಮಾಡಲಾಗಿದೆ.

2023–24ರ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್–ನವೆಂಬರ್) ಹಿಂದಿನ ವರ್ಷಕ್ಕಿಂತಲೂ ಹೆಚ್ಚು ಕಾಫಿ ಉತ್ಪಾದನೆಯಾಗಲಿದೆ ಎಂದು ಕಾಫಿ ಮಂಡಳಿ ಹೇಳಿದೆ.

ಬೆಳೆಗಾರರಿಗೆ ಲಾಭ ಮರೀಚಿಕೆ

ಚಿಕ್ಕಮಗಳೂರು: ಬ್ರೆಜಿಲ್ ಮತ್ತು ವಿಯೆಟ್ನಾಂನಲ್ಲಿ ಕಾಫಿ ಉತ್ಪಾದನೆಯು ಕಡಿಮೆ ಆಗಿರುವುದರಿಂದ ಕಾಫಿಗೆ ಸಾರ್ವಕಾಲಿಕ ದಾಖಲೆಯ ಬೆಲೆ ಲಭಿಸಿದೆ. ಆದರೆ, ರಾಜ್ಯದಲ್ಲಿ ಕಾಫಿ ಉತ್ಪಾದನೆ ಕಡಿಮೆಯಾಗಿದ್ದು, ಬೆಳೆಗಾರರಿಗೆ ಸಂಪೂರ್ಣ ಲಾಭ ದೊರಕದಂತಾಗಿದೆ.


ರೊಬಸ್ಟಾ ಕಾಫಿ

ರೊಬಸ್ಟಾ ಕಾಫಿ ಪ್ರತಿ ಮೂಟೆಗೆ ₹7,370 ದರ ಇದೆ. ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿ ಬೆಲೆ ಬುಧವಾರ 3229 ಡಾಲರ್ ಇತ್ತು. ಇನ್ನೂ 46 ಡಾಲರ್ ಹೆಚ್ಚಾಗುವ ಸಾಧ್ಯತೆ ಇದೆ ಎನ್ನುತ್ತಾರೆ ವ್ಯಾಪಾರಿಗಳು.

ಆದರೆ, ರಾಜ್ಯದಲ್ಲಿ ಈ ಬಾರಿ ಹವಾಮಾನ್ಯ ವೈಪರೀತ್ಯದಿಂದ ಕಾಫಿ ಉತ್ಪಾದನೆ ಶೇ 20ರಿಂದ ಶೇ 30ರಷ್ಟು ಕಡಿಮೆಯಾಗಿದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಮಳೆ ಬರಲಿಲ್ಲ. ಮುಂಗಾರಿನಲ್ಲೂ ವಾಡಿಕೆಯಷ್ಟು ಮಳೆಯಾಗಲಿಲ್ಲ. ಇದರಿಂದ ಫಸಲು ಕಡಿಮೆಯಾಗಿದೆ.

ಈ ನಡುವೆ ಕಾಫಿ ಹಣ್ಣು ಕೊಯ್ಲಿನ ವೇಳೆ ಅಕಾಲಿಕ ಮಳೆಯಾಗಿದ್ದು, ಗಿಡದಲ್ಲೇ ಹಣ್ಣು ಕೊಳೆಯುವಂತಾಯಿತು. ಇನ್ನಷ್ಟು ನೆಲಕ್ಕೆ ಉದುರಿ ಮಣ್ಣು ಪಾಲಾಗಿದೆ. 'ಈಗ ಬಿಸಿಲಿದ್ದರೂ ಕಾರ್ಮಿಕರ ಕೊರತೆಯಿಂದ ಕೊಯ್ಲು ಸಾಧ್ಯವಾಗುತ್ತಿಲ್ಲ. ಹಣ್ಣು ಕೊಯ್ಲಿನ ಬಳಿಕ ಸಂಸ್ಕರಣೆ ಮಾಡಿ ಬೆಲೆ ಹೆಚ್ಚಳದ ಲಾಭ ಪಡೆದುಕೊಳ್ಳಲು ಸಾಧ್ಯವಾಗದೆ ಪರದಾಡುವಂತಾಗಿದೆ' ಎಂದು ಬೆಳೆಗಾರರು ಬೇಸರ ವ್ಯಕ್ತಪಡಿಸುತ್ತಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ದಾವೋಸ್‌ನಲ್ಲಿ ಹಲವು ಕಂಪನಿಗಳ ಜೊತೆ ಒಪ್ಪಂದ: ಎಂ.ಬಿ. ಪಾಟೀಲ

'₹23 ಸಾವಿರ ಕೋಟಿ ಬಂಡವಾಳ ನಿರೀಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಿಟ್ಜರ್ಲೆಂಡ್‌ನ ದಾವೋಸ್ ನಗರದಲ್ಲಿ ನಡೆದ ವಿಶ್ವ ಆರ್ಥಿಕ ಸಮಾವೇಶದಲ್ಲಿ ಹಲವು ಬಹುರಾಷ್ಟ್ರೀಯ ಕಂಪನಿಗಳ ಜೊತೆಗೆ ಮಾಡಿಕೊಂಡಿರುವ ಒಪ್ಪಂದಗಳಿಂದ ರಾಜ್ಯಕ್ಕೆ ₹23 ಸಾವಿರ ಕೋಟಿಗೂ ಹೆಚ್ಚಿನ ಬಂಡವಾಳ ಹರಿದು ಬರುವ ನಿರೀಕ್ಷೆಯಿದೆ' ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ತಮ್ಮ ನೇತೃತ್ವದ ನಿಯೋಗ ಕೈಗೊಂಡ ದಾವೋಸ್ ಪ್ರವಾಸ ಕುರಿತು ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾಹಿತಿ ನೀಡಿದ ಅವರು, 'ನೆಸ್ಲೆ, ಎಚ್‌ಪಿ, ಎಚ್‌ಸಿಎಲ್, ವೋಲ್ವೊ ಗ್ರೂಪ್, ಐಕಿಯಾ, ಸೋನಿ, ಮೈಕ್ರೊಸಾಫ್ಟ್, ಹಿಟಾಚಿ ಮತ್ತಿತರ ಉದ್ಯಮ ಸಂಸ್ಥೆಗಳ ಪ್ರಮುಖರ ಜೊತೆ 50ಕ್ಕೂ ಹೆಚ್ಚು ಸಭೆಗಳನ್ನು ನಡೆಸಲಾಗಿದೆ' ಎಂದರು.

ದಾವೋಸ್‌ನಲ್ಲಿ ಆಗಿರುವ ಒಪ್ಪಂದಗಳನ್ನು ಕಾರ್ಯಗತಗೊಳಿಸಲು ಸರ್ಕಾರ ಗಮನ ಕೇಂದ್ರೀಕರಿಸಲಿದೆ. ಕಂಪನಿಗಳ ಅಗತ್ಯಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದು
ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

'ಬೆಂಗಳೂರಿನಲ್ಲಿ 100 ಮೆಗಾವಾಟ್ ಸಾಮರ್ಥ್ಯದ ಬೃಹತ್ ದತ್ತಾಂಶ ಕೇಂದ್ರ ಸ್ಥಾಪಿಸಲು ವೆಬ್ ವರ್ಕ್ಸ್ ಕಂಪನಿ ₹20 ಸಾವಿರ ಕೋಟಿ ಬಂಡವಾಳ ಹೂಡಲು ಮುಂದಾಗಿದೆ. ಇದರಿಂದ ಒಂದು ಸಾವಿರ ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ. ಡಿಜಿಟಲ್ ಕೌಶಲ ವೃದ್ಧಿ ಪ್ರಕ್ರಿಯೆ ಹಮ್ಮಿಕೊಳ್ಳುವುದಾಗಿ ಮೈಕ್ರೊಸಾಫ್ಟ್ ಹೇಳಿದೆ. ಗ್ರಾಮೀಣ ಪ್ರದೇಶ ಕೇಂದ್ರಿತ ಆರ್ಥಿಕ ಬೆಳವಣಿಗೆ ಉತ್ತೇಜಿಸಲು ಹಿಟಾಚಿ ಕಂಪನಿಯು ಒಪ್ಪಂದಕ್ಕೆ ಸಹಿ ಹಾಕಿದೆ' ಎಂದು ಹೇಳಿದರು.

'ಉತ್ತರ ಕರ್ನಾಟಕ ಭಾಗದಲ್ಲಿಯೂ ಉದ್ದಿಮೆಗಳನ್ನು ಆರಂಭಿಸಲು ಕಂಪನಿಗಳು ಆಸಕ್ತಿ ತೋರಿಸಿವೆ. ವಿಜಯಪುರ, ಹುಬ್ಬಳ್ಳಿ- ಧಾರವಾಡ, ಬೆಳಗಾವಿ ಮತ್ತಿತರ ಸ್ಥಳಗಳಲ್ಲಿ ಕೈಗಾರಿಕೆಗಳ ಸಮಾನ ಅಭಿವೃದ್ಧಿಗೆ ಕೊಡುಗೆ ನೀಡುವ ಹಲವು ಯೋಜನೆಗಳನ್ನು ಕಂಪನಿಗಳು ಹಮ್ಮಿಕೊಳ್ಳಲಿವೆ' ಎಂದರು.

ವಿಜಯಪುರದಲ್ಲಿ ಲುಲು ಘಟಕ

'ವಿಜಯಪುರದಲ್ಲಿ ₹300 ಕೋಟಿ ವೆಚ್ಚದಲ್ಲಿ ಆಹಾರ ಸಂಸ್ಕರಣಾ ಘಟಕ ಸ್ಥಾಪಿಸಲು ಹಾಗೂ ಕಲಬುರಗಿಯಲ್ಲಿನ ತನ್ನ ಘಟಕದ ಸಾಮರ್ಥ್ಯ ವಿಸ್ತರಿಸಲು ಲುಲು ಸಮೂಹ ಮುಂದಾಗಿದೆ. ಬಿಎಲ್ ಅಗ್ರೊ ಕಂಪನಿಯು ಸುಸಜ್ಜಿತ ಆಹಾರ ಸಂಸ್ಕರಣಾ ಘಟಕ ಆರಂಭಿಸಲಿದೆ' ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

'ಸ್ಮಾರ್ಟ್ ಸಿಟಿ ಮೂಲಸೌಲಭ್ಯ, ನವೀಕರಿಸಬಹುದಾದ ಇಂಧನ ಪರಿಹಾರಗಳು, ಡೇಟಾ ಕೇಂದ್ರಗಳು ಮತ್ತು ಸಂಬಂಧಿತ ವಲಯಗಳಲ್ಲಿ ವಿವಿಧ ಕಂಪನಿಗಳಿಂದ ₹3 ಸಾವಿರ ಕೋಟಿ ಬಂಡವಾಳ ಹೂಡಿಕೆಯ ನಿರೀಕ್ಷೆಯಿದೆ. ಎಬಿ ಇನ್‌ಬೇವ್ ಇಂಡಿಯಾ ಕಂಪನಿಯು ಮದ್ಯ ತಯಾರಿಕಾ ಘಟಕಗಳ ಸಾಮರ್ಥ್ಯ ಹೆಚ್ಚಿಸಲು ₹400 ಕೋಟಿ ಹೂಡಿಕೆಯ ಇಂಗಿತ ವ್ಯಕ್ತಪಡಿಸಿದೆ' ಎಂದೂ ಸಚಿವರು ವಿವರಿಸಿದರು.

ಕಾನೂನು ನ್ಯಾಯಮಂಡಳಿ ಮೊರೆ ಹೋದ ಜೀ

ನವದೆಹಲಿ (ಪಿಟಿಐ): ಸೋನಿ ಪಿಕ್ಚರ್ಸ್ ನೆಟ್‌ವರ್ಕ್ಸ್ ಇಂಡಿಯಾವು (ಎಸ್‌ಪಿಎನ್‌ಐ) ಒಪ್ಪಂದ ರದ್ದುಪಡಿಸಿರುವುದನ್ನು ಪ್ರಶ್ನಿಸಿ ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ ಬುಧವಾರ, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಮೊರೆ ಹೋಗಿದೆ.

ಒಪ್ಪಂದವನ್ನು ಅನುಷ್ಠಾನಗೊಳಿಸುವಂತೆ ಸೋನಿ ಕಂಪನಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ನ್ಯಾಯಮಂಡಳಿಗೆ ಕೋರಿದೆ.

ಜೀ ಕಂಪನಿಯು ಒಪ್ಪಂದ ಉಲ್ಲಂಘಿಸಿದೆ. ಹಾಗಾಗಿ, ₹748.5 ಕೋಟಿ ಶುಲ್ಕ ಪಾವತಿಸಬೇಕು ಎಂದು ಸೋನಿ ಕಂಪನಿಯು ನೋಟಿಸ್ ನೀಡಿತ್ತು.

ಇದನ್ನು ಪ್ರಶ್ನಿಸಿ ಜೀ ಕಂಪನಿಯು ಸಿಂಗಪುರದ ಅಂತರರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರದ ಮೆಟ್ಟಿಲನ್ನೂ ಹತ್ತಿದೆ ಎಂದು ಮೂಲಗಳು ತಿಳಿಸಿವೆ.

1ನೇ ವರ್ಷದ ಪುಣ್ಯಸ್ಮರಣೆ
ಹೆಚ್.ಎನ್. ವೆಂಕಟರಮಣಪ್ಪ
ಜನನ : 18.09.1935 – ಮರಣ : 25.01.2023
ನಿವೃತ್ತ ಐಟಿಐ, ಬೆಂಗಳೂರು
ನಿಮ್ಮ ಆದರ್ಶಮಯ ಜೀವನ, ಪ್ರೀತಿ–ವಾತ್ಸಲ್ಯ ನಮ್ಮ ಮನಸ್ಸಿನಲ್ಲಿ ಸದಾ ಹಸಿರಾಗಿ ಉಳಿದಿದೆ.
ಇಂತಿ ದುಃಖತಪ್ತರು
ಶ್ರೀಮತಿ ಜಯಮ್ಮ ಮತ್ತು ಕುಟುಂಬ, ಬಿ. ನಾರಾಯಣಪುರ
ಮೊ : 9844252947 / 9845403291

23 ನೇ ವಾರ್ಷಿಕ ಚಿರಸ್ಮರಣೆ | 8 ನೇ ವಾರ್ಷಿಕ ಚಿರಸ್ಮರಣೆ
ಶ್ರೀ ಗುರುಮೂರ್ತಿ ರೆಡ್ಡಿ ಮತ್ತು ಶ್ರೀಮತಿ ಮುನಿತಾಯಮ್ಮ
(ಕಂಟ್ರಾಕ್ಟರ್) ಬೆಳ್ಳಂದೂರು
ನಿಧನ: 25.01.2001 ನಿಧನ: 27.05.2016
ದುಃಖತಪ್ತ ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

ನ್ಯೂ ಹ್ಯಾಂಪ್‌ಶೈರ್: ಟ್ರಂಪ್‌ಗೆ ಗೆಲುವು

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಆಯ್ಕೆ ಸಂಬಂಧ ನ್ಯೂ ಹ್ಯಾಂಪ್‌ಶೈ-ರ್‌ನಲ್ಲಿ ನಡೆದ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತೀಯ ಮೂಲದ ರಾಜಕಾರಣಿ ನಿಕ್ಕಿ ಹ್ಯಾಲೆ ಅವರನ್ನು ಸೋಲಿಸಿದ್ದಾರೆ. ಈ ಮೂಲಕ ಪಕ್ಷದ ಅಭ್ಯರ್ಥಿಯಾಗುವ ನಿಟ್ಟಿನಲ್ಲಿ ಅವರು ಮುನ್ನಡೆ ಹೆಚ್ಚಿಸಿಕೊಂಡಿದ್ದಾರೆ.

ಡೊನಾಲ್ಡ್ ಟ್ರಂಪ್

ಟ್ರಂಪ್ ಅವರು ಶೇ 55ರಷ್ಟು ಮತಗಳನ್ನು ಪಡೆದರೆ, ಅವರ ಎದುರಾಳಿ ಹ್ಯಾಲೆ ಶೇ 44ರಷ್ಟು ಮತಗಳನ್ನು ಪಡೆದರು.

ಸ್ವೀಡನ್‌ಗೆ ನ್ಯಾಟೊ ಸದಸ್ಯತ್ವ: ಟರ್ಕಿ ಅನುಮೋದನೆ

ಅಂಕಾರ (ಎಎಫ್‌ಪಿ): ಸ್ವೀಡನ್‌ಗೆ ನ್ಯಾಟೊ ಸದಸ್ಯತ್ವ ನೀಡುವುದಕ್ಕೆ ದೀರ್ಘಕಾಲದ ಬಳಿಕ ಟರ್ಕಿ ಅನುಮೋದನೆ ನೀಡಿದೆ. ನ್ಯಾಟೊದ 32ನೇ ಸದಸ್ಯ ರಾಷ್ಟ್ರವಾಗುವ ನಿಟ್ಟಿನಲ್ಲಿ ಸ್ವೀಡನ್ ಪರವಾಗಿ ಟರ್ಕಿಯ 287 ಸಂಸದರು ಮತ ಚಲಾಯಿಸಿದರು. ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗಾನ್ ಅವರು ಸ್ವೀಡನ್‌ಗೆ ಬೆಂಬಲ ಸೂಚಿಸಿದ್ದರು. 'ನ್ಯಾಟೊ ಸದಸ್ಯರಾಗುವ ನಿಟ್ಟಿನಲ್ಲಿ ನಾವು ಒಂದು ಹೆಜ್ಜೆ ಮುಂದೆ ಇಟ್ಟಿದ್ದೇವೆ' ಎಂದು ಸ್ವೀಡನ್‌ನ ಪ್ರಧಾನಿ ಉಲ್ಫ್ ಕ್ರಿಸ್ಟರ್ಸನ್ ಹೇಳಿದ್ದಾರೆ. ಟರ್ಕಿಯ ನಡೆಯನ್ನು ಸ್ವಾಗತಿಸಿರುವ ನ್ಯಾಟೊ ಮುಖ್ಯಸ್ಥ ಜೇನ್ಸ್ ಸ್ಟೋಲ್ಟೆನ್ ಬರ್ಗ್, ಹಂಗೇರಿ ಕೂಡ ಇದೇ ನಡೆ ಯನ್ನು ಅನುಸರಿಸಬೇಕು ಎಂದು ಹೇಳಿದ್ದಾರೆ.

ಕೆನರಾ ಬ್ಯಾಂಕ್‌ಗೆ ₹3,656 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು ₹3,656 ಕೋಟಿ ಲಾಭಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2,832 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಮೂರನೇ ತ್ರೈಮಾಸಿಕದಲ್ಲಿ ಆದಾಯವು ಶೇ 29ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ವರಮಾನವು ₹26,218 ಕೋಟಿ ಇತ್ತು. ಈ ಅವಧಿಯಲ್ಲಿ ₹32,334 ಕೋಟಿಗೆ ಏರಿಕೆಯಾಗಿದೆ. ಅಲ್ಲದೇ, ನಿವ್ವಳ ಬಡ್ಡಿ ಆದಾಯವು ಶೇ 9.5ರಷ್ಟು ಏರಿಕೆಯಾಗಿದ್ದು, ಒಟ್ಟು ₹9,417 ಕೋಟಿ ಆಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಇಳಿಕೆಯಾಗಿದೆ. 2023ರ ಡಿಸೆಂಬರ್‌ನಲ್ಲಿ ಶೇ 5.89 ಇತ್ತು. ಈ ತ್ರೈಮಾಸಿಕದಲ್ಲಿ ಶೇ 4.39ಕ್ಕೆ ಇಳಿಕೆಯಾಗಿದೆ. ನಿವ್ವಳ ಎನ್‌ಪಿಎ ಶೇ 1.96ರಿಂದ ಶೇ 1.32ಕ್ಕೆ ಕುಗ್ಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ಗೆ ಲಾಭ: ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಓವರ್ ಸೀಸ್ ಬ್ಯಾಂಕ್‌ನ ಲಾಭದಲ್ಲಿ ಶೇ 30ರಷ್ಟು ಏರಿಕೆಯಾಗಿದೆ. ಹಿಂದಿನ ಹಣಕಾಸು ವರ್ಷದ 3ನೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹555 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹723 ಕೋಟಿ ಲಾಭ ಗಳಿಸಿದೆ. ಕಾರ್ಯಾಚರಣೆ ಲಾಭವು ₹1,540 ಕೋಟಿಯಿಂದ ₹1,780 ಕೋಟಿಗೆ ಏರಿಕೆಯಾಗಿದೆ. ಒಟ್ಟು ವರಮಾನವು ₹6,006 ಕೋಟಿಯಿಂದ ₹7,437 ಕೋಟಿಗೆ ಏರಿಕೆಯಾಗಿದೆ. ಎನ್‌ಪಿಎ ಸರಾಸರಿ ಪ್ರಮಾಣವು ಇಳಿಕೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ 8.19ರಷ್ಟು ಇದ್ದಿದ್ದು, ಶೇ 3.90ಕ್ಕೆ ಇಳಿದಿದೆ ಎಂದು ಬ್ಯಾಂಕ್ ತಿಳಿಸಿದೆ.

ಇಂಡಿಯನ್ ಬ್ಯಾಂಕ್ ಲಾಭ ವೃದ್ಧಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಇಂಡಿಯನ್ ಬ್ಯಾಂಕ್ 2023–24ನೇ ಹಣಕಾಸು ವರ್ಷದ ತ್ರೈಮಾಸಿಕದಲ್ಲಿ ಶೇ 52ರಷ್ಟು ನಿವ್ವಳ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹1,396 ಕೋಟಿ ಲಾಭಗಳಿಸಿತ್ತು. ಈ ತ್ರೈಮಾಸಿಕದಲ್ಲಿ ₹2,119 ಕೋಟಿಗೆ ಏರಿಕೆಯಾಗಿದೆ.

2022ರ ಡಿಸೆಂಬರ್‌ನಲ್ಲಿ ಬ್ಯಾಂಕ್‌ನ ಕಾರ್ಯಾಚರಣೆ ಆದಾಯವು ₹4,061 ಕೋಟಿ ಇತ್ತು. ಈ ತ್ರೈಮಾಸಿಕದಲ್ಲಿ ₹4,097 ಕೋಟಿಗೆ ಏರಿಕೆಯಾಗಿದೆ. ಒಟ್ಟು ವರಮಾನವು ₹13,551 ಕೋಟಿಯಿಂದ ₹16,099 ಕೋಟಿಗೆ ಹೆಚ್ಚಳವಾಗಿದೆ. ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 6.53ರಿಂದ ಶೇ 4.47ಕ್ಕೆ ಇಳಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

ಫೈನಾಯಿಲ್, ಸೋಪ್ ಕಂಪನಿಗೆ ಯುವಕಯುವತಿಯರು ಬೇಕಾಗಿದ್ದಾರೆ. ವಸತಿ ವ್ಯವಸ್ಥೆಯಿದೆ. ಸಂಬಳ ರೂ.9000/–ದಿಂದ 13,000/–. ನೇರ ಭೇಟಿ ಮಾಡಿ. Mangala Hygiene Products, Anand Nagar, Mangalore. Ph: 9241738717

Part-Time Jobs

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ:9035492999/ 9663563555

ಪ್ರವಾಸ

Travel

21.02.2024 6ದಿನಗಳು ವಿಮಾನ,A/C_ಬಸ್ಸಿನಲ್ಲಿ ರಿಯಾಯಿತಿದರ ಅಯೋಧ್ಯೆ ನೂತನ ರಾಮಮಂದಿರ, ಕಾಶಿ,ಗಯಾ, ಅಲಹಬಾದ್(ಕೆಲವೇ ಸೀಟುಗಳಿವೆ)ಫೆಬ್ರವರಿ,ಮಾರ್ಚ್ ನಲ್ಲಿ ಅಂಡಮಾನ್,ಹವಳದ್ವೀಪ, RoyalPackage'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219

ಶಿವನಂದಿ ಟ್ರಾವೆಲ್ಸ್.(ರಿ) ಹನುಮಂತನಗರ, ಬೆಂಗಳೂರು. ಅಯೋಧ್ಯ,ನೇಪಾಳ ಮುಕ್ತಿನಾಥ್ 12ದಿನ,21.3.2024, 15.4.2024. ದೆಹಲಿ,ಕಾಶಿ ಅಯೋಧ್ಯ,10ದಿನ 24.4.2024. ಚಾರ್ ಧಾಮ್ 14ದಿನ,3.6.24. 9036056352 9481027363.

24/03/2024 ಅಯೋಧ್ಯ 12 ದಿನಗಳ ಪ್ರವಾಸ ನೇಪಾಳ ಮತ್ತು ಮುಕ್ತಿನಾಥ. 23/05/2024 ಚಾರಧಾಮ್ 14 ದಿನಗಳ ಪ್ರವಾಸ ಟ್ರೈಟ್ ಹಾಲಿಡೇಸ್ ಸಂಪರ್ಕಿಸಿ: 8088559962

Pilgrimage Tours

★ಆರ್.ಗಾಂಧಿ ಟೂರ್ಸ್★ 1.02.2024 13ದಿನಗಳು ಕಾಶಿ ಹರಿದ್ವಾರ, 9ದಿನಗಳು ಆಂಧ್ರ ಭದ್ರಾಚಲಂ. 22.02.2024 10ದಿನಗಳು ಗುಜರಾತ್ ಉಜ್ಜೈನ್,ಓಂಕಾರೇಶ್ವರ. 9945445809/ 9902433500

ಇತರೆ

Medical

ಸಂಪೂರ್ಣ ಉಚಿತ ಶಿಬಿರ. ದಿನಾಂಕ 19/01/2024 ರಿಂದ 31 /01/2024 ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು, ಬೆಂಗಳೂರು. ಮೊಬೈಲ್: 9019626612. ಬೆಳಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ದಕ್ಷಿಣ ಇಸ್ರೇಲ್ ಗಡಿಯ ಗಾಜಾ ಪಟ್ಟಿ ಪ್ರದೇಶದಲ್ಲಿ ಇಸ್ರೇಲ್ ಸೇನೆಯ ಟ್ಯಾಂಕ್‌ಗಳು ಬುಧವಾರ ಹಮಾಸ್ ವಿರುದ್ಧದ ಯುದ್ಧಕಾರ್ಯದಲ್ಲಿ ನಿರತವಾಗಿದ್ದವು. –ಎಎಫ್‌ಪಿ ಚಿತ್ರ

ಭಾರತ ಮೂಲದ ಮೂವರು ಯುವ ವಿಜ್ಞಾನಿಗಳಿಗೆ 'ಬ್ಲವ್ಯಾಟ್ನಿಕ್' ಪ್ರಶಸ್ತಿ

ಲಂಡನ್ (ಪಿಟಿಐ): ಬ್ರಿಟನ್‌ನಲ್ಲಿ ಯುವ ವಿಜ್ಞಾನಿಗಳಿಗೆ ನೀಡುವ ಪ್ರತಿಷ್ಠಿತ 'ದಿ ಬ್ಲವ್ಯಾಟ್ನಿಕ್ ಪ್ರಶಸ್ತಿ'ಗೆ ಭಾರತ ಮೂಲದ ಪ್ರೊ. ರಾಹುಲ್ ಆರ್. ನಾಯರ್, ಮೆಹುಲ್ ಮಲಿಕ್ ಹಾಗೂ ತನ್ಮಯ್ ಭರತ್ ಸೇರಿದಂತೆ ಒಂಬತ್ತು ಮಂದಿ ಆಯ್ಕೆಯಾಗಿದ್ದಾರೆ.

ರಸಾಯನ ಶಾಸ್ತ್ರ, ಭೌತವಿಜ್ಞಾನ, ಎಂಜಿನಿಯರಿಂಗ್ ಮತ್ತು ಜೀವ ವಿಜ್ಞಾನ ಕ್ಷೇತ್ರದಲ್ಲಿನ ಸಂಶೋಧನೆಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಫೆಬ್ರುವರಿ 27ರಂದು ಲಂಡನ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. 4.8 ಲಕ್ಷ ಪೌಂಡ್ (ಅಂದಾಜು ₹5.7 ಕೋಟಿ) ಮೊತ್ತವನ್ನು ಈ ಪ್ರಶಸ್ತಿ ಒಳಗೊಂಡಿದೆ.

ನಾಯರ್ ಅವರು ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನಿಯಾಗಿದ್ದಾರೆ. ಮಲಿಕ್ ಅವರು ಹೆರಿಯಟ್-ವ್ಯಾಟ್ ವಿಶ್ವವಿದ್ಯಾಲಯದಿಂದ ಹಾಗೂ ತನ್ಮಯ್ ಅವರು ಇಂಗ್ಲೆಂಡ್‌ನ ಎಂಆರ್‌ಸಿ 'ಲ್ಯಾಬೊರೇಟರಿ ಆಫ್ ಮಾಲಿಕ್ಯುಲರ್ ಬಯಾಲಜಿ' ಸಂಸ್ಥೆಯಿಂದ ಪಿಎಚ್.ಡಿ ಪಡೆದಿದ್ದಾರೆ.

2024ರ ಸಾಲಿನ ಪ್ರಶಸ್ತಿಗೆ 40 ಸಂಶೋಧನಾ ಸಂಸ್ಥೆಗಳಿಂದ 84 ನಾಮನಿರ್ದೇಶನಗಳು ಬಂದಿದ್ದವು ಎಂದು ಪ್ರಶಸ್ತಿ ನೀಡುವ ಬ್ಲವ್ಯಾಟ್ನಿಕ್ ಕುಟುಂಬ ಪ್ರತಿಷ್ಠಾನ ಮತ್ತು ದಿ ನ್ಯೂಯಾರ್ಕ್ ಅಕಾಡೆಮಿ ಆಫ್ ಸೈನ್ಸ್ ಸಂಸ್ಥೆ ಹೇಳಿದೆ.

ಉಕ್ರೇನ್‌ನ ಯುದ್ಧ ಕೈದಿಗಳಿದ್ದ ರಷ್ಯಾದ ವಿಮಾನ ಪತನ

ಮಾಸ್ಕೊ (ಎಪಿ): ಉಕ್ರೇನ್‌ನ 65 ಮಂದಿ ಯುದ್ಧ ಕೈದಿಗಳಿದ್ದ ರಷ್ಯಾದ ಸೇನಾಪಡೆಯ ಸಾಗಣೆ ವಿಮಾನವು ಬೆಲ್ಗೊರೊದ್ ಪ್ರದೇಶದಲ್ಲಿ ಬುಧವಾರ ಪತನಗೊಂಡಿದೆ.

ವಿಮಾನವು ಬೆಳಿಗ್ಗೆ 11 ಗಂಟೆ ಸುಮಾರಿಗೆ ಉಕ್ರೇನ್‌ಗೆ ಸಮೀಪದ ಪ್ರದೇಶದಲ್ಲಿ ಪತನಗೊಂಡಿದ್ದು, ಅದರಲ್ಲಿ ಯುದ್ಧ ಕೈದಿಗಳಲ್ಲದೆ ಆರು ಮಂದಿ ಸಿಬ್ಬಂದಿ ಮತ್ತು ಇತರ ಮೂವರಿದ್ದರು ಎಂದು ರಷ್ಯಾದ ರಕ್ಷಣಾ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಯಾವ ಕಾರಣಕ್ಕೆ ವಿಮಾನ ಪತನಗೊಂಡಿದೆ ಎಂಬುದರ ಬಗ್ಗೆ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಸೇನಾಪಡೆಯ ವಿಶೇಷ ಆಯೋಗವು ಸ್ಥಳಕ್ಕೆ ತೆರಳಿದೆ ಎಂದೂ ವಿವರಿಸಿದ್ದಾರೆ.

ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಎಲ್ಲರೂ ಮೃತಪಟ್ಟಿದ್ದಾರೆ ಎಂದು ಬೆಲ್ಗೊರೊದ್ ಪ್ರದೇಶದ ಗವರ್ನರ್ ತಿಳಿಸಿದ್ದಾರೆ.

ರಷ್ಯಾ ಕ್ಷಿಪಣಿ ದಾಳಿಗೆ 18 ಮಂದಿ ಸಾವು: ಉಕ್ರೇನ್‌ನ ವಾಯು ರಕ್ಷಣಾ ವ್ಯವಸ್ಥೆಯನ್ನು ಗುರಿಯಾಗಿಸಿ ರಷ್ಯಾ ಪಡೆಗಳು ನಡೆಸಿರುವ ಕ್ಷಿಪಣಿ ದಾಳಿಯಲ್ಲಿ 18 ಮಂದಿ ಮೃತಪಟ್ಟಿದ್ದು, 130 ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್‌ನ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಕೀವ್, ಹಾರ್ಕೀವ್ ಸೇರಿದಂತೆ ಉಕ್ರೇನ್‌ನ ಮೂರು ಪ್ರಮುಖ ನಗರಗಳ 130 ವಸತಿ ಸಮುಚ್ಚಯಗಳ ಮೇಲೆ ರಷ್ಯಾದ ಪಡೆಗಳು ಬ್ಯಾಲೆಸ್ಟಿಕ್, ಕ್ರೂಸ್, ವಿಮಾನ ನಿರೋಧಕ, ಗೈಡೆಡ್ ಕ್ಷಿಪಣಿಗಳಿಂದ ದಾಳಿ ನಡೆಸಿವೆ ಎಂದು ಅವರು 'ಎಕ್ಸ್' ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಪ್ರಮುಖ ನಗರಗಳ ರಕ್ಷಣೆಗಾಗಿ ವಾಯು ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಲು ಈ ವರ್ಷ ಆದ್ಯತೆ ನೀಡಲಾಗುವುದು ಎಂದಿದ್ದಾರೆ.

ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧವು 700ನೇ ದಿನಕ್ಕೆ ಕಾಲಿಟ್ಟಿದ್ದು, ರಷ್ಯಾ ಪಡೆಗಳು ದಾಳಿಯನ್ನು ತೀವ್ರಗೊಳಿಸಿರುವುದಾಗಿ ಮೂಲಗಳು ತಿಳಿಸಿವೆ.

ಇರಾನ್, ಉತ್ತರ ಕೊರಿಯಾ ಮೊದಲಾದ ದೇಶಗಳಿಂದ ರಷ್ಯಾವು ಬ್ಯಾಲೆಸ್ಟಿಕ್ ಕ್ಷಿಪಣಿಗಳನ್ನು ಖರೀದಿಸುತ್ತಿದೆ ಎಂದು ಅಮೆರಿಕದ ಚಿಂತಕರ ಚಾವಡಿ ಹೇಳಿವೆ.

ಬೇಕಾದಷ್ಟು ಎಫ್‌ಐಆರ್ ದಾಖಲಿಸಿ, ನನ್ನನ್ನು ಬೆದರಿಸಲಾಗದು– ಕಾಂಗ್ರೆಸ್ ನಾಯಕನ ವಾಗ್ದಾಳಿ

ಅಸ್ಸಾಂ ಸರ್ಕಾರ ವಿರುದ್ಧ ರಾಹುಲ್ ಕಿಡಿ

ಬರ್ಪೇಟಾ(ಅಸ್ಸಾಂ) (ಪಿಟಿಐ): 'ಹಿಂಸಾಚಾರ ನಡೆಸಲು ಗುಂಪೊಂದಕ್ಕೆ ಪ್ರಚೋದನೆ' ನೀಡಿದ ಆರೋಪದಡಿ ಪಕ್ಷದ ನಾಯಕರ ವಿರುದ್ಧ ಗುವಾಹಟಿ ಪೊಲೀಸರು ಪ್ರಕರಣ ದಾಖಲಿಸಿದ ಬೆನ್ನಲ್ಲೇ, ಅಸ್ಸಾಂ ಸರ್ಕಾರದ ವಿರುದ್ಧ ಬುಧವಾರ ಗುಡುಗಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ನನ್ನ ವಿರುದ್ಧ ಎಷ್ಟು ಬೇಕಾದರೂ ಎಫ್‌ಐಆರ್‌ಗಳನ್ನು ದಾಖಲಿಸಿ. ಇಂತಹ ಕ್ರಮಗಳಿಂದ ನನ್ನನ್ನು ಬೆದರಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

ಭಾರತ ಜೋಡೊ ನ್ಯಾಯ ಯಾತ್ರೆಯ ಏಳನೇ ದಿನವಾದ ಬುಧವಾರ ಇಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ವಿರುದ್ಧ ವಾಗ್ದಾಳಿ ನಡೆಸಿದರು.

'ಹಿಮಂತ ಬಿಸ್ವ ಶರ್ಮ, ದೇಶದಲ್ಲಿಯೇ ಅತ್ಯಂತ ಭ್ರಷ್ಟ ಮುಖ್ಯಮಂತ್ರಿ. ಭೂ ಹಾಗೂ ಅಡಿಕೆ ಸಾಗಣೆಗೆ ಸಂಬಂಧಿಸಿದ ಹಗರಣ ಸೇರಿದಂತೆ ಹಲವು ಆರೋಪಗಳನ್ನು ಎದುರಿಸುತ್ತಿದ್ದಾರೆ' ಎಂದು ಟೀಕಿಸಿದರು.

'ಶರ್ಮ ನಿಮ್ಮೊಂದಿಗೆ ಮಾತನಾಡುತ್ತಿರುವಂತೆಯೇ ನಿಮ್ಮ ಜಮೀನನ್ನು ಕಳುವು ಮಾಡುತ್ತಾರೆ. ನೀವು ಜಗಿಯುವ ಅಡಿಕೆಯ ವ್ಯಾಪಾರವನ್ನು ಅವರೇ ನಿಯಂತ್ರಿಸುತ್ತಾರೆ. ಕಾಜಿರಂಗ ರಾಷ್ಟ್ರೀಯ ಉದ್ಯಾನದಲ್ಲಿಯೂ ಶರ್ಮ ಜಮೀನು ಪಡೆದುಕೊಂಡಿದ್ದಾರೆ' ಎಂದು ಆರೋಪಿಸಿದರು.

'ಶರ್ಮ ಅವರ ದಿನ ಶುರುವಾಗುವುದೇ ದ್ವೇಷದೊಂದಿಗೆ. ಎಲ್ಲರನ್ನೂ ಅವರು ದ್ವೇಷಿಸುತ್ತಾರೆ. ಆದರೆ, ನಮ್ಮ ಹೋರಾಟ ಶರ್ಮ ವಿರುದ್ಧ ಅಲ್ಲ, ಅವರ ಹೃದಯದಲ್ಲಿರುವ ದ್ವೇಷ ಭಾವನೆ ವಿರುದ್ಧ' ಎಂದೂ ಹೇಳಿದರು.

'ಎಫ್‌ಐಆರ್‌ಗಳನ್ನು ದಾಖಲಿಸುವ ಮೂಲಕ ನನ್ನನ್ನು ಬೆದರಿಸಲು ಸಾಧ್ಯ ಎಂಬ ವಿಚಾರ ಹಿಮಂತ ಬಿಸ್ವ ಶರ್ಮ ಅವರಿಗೆ ಅದು ಹೇಗೆ ಹೊಳೆಯಿತೋ ನನಗೆ ತಿಳಿದಿಲ್ಲ. ಆದರೆ, ನನ್ನ ವಿರುದ್ಧ ಎಷ್ಟು ಬೇಕಾದರೂ ಎಫ್‌ಐಆರ್‌ಗಳನ್ನು ದಾಖಲಿಸಲಿ. ಇನ್ನೂ 25ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಲಿ. ಇದರಿಂದ ನಾನು ಹೆದರುವುದಿಲ್ಲ. ಬಿಜೆಪಿ–ಆರ್‌ಎಸ್‌ಎಸ್ ನನ್ನನ್ನು ಹೆದರಿಸಲು ಸಾಧ್ಯ ಇಲ್ಲ' ಎಂದು ಹೇಳಿದರು.

ಭಾರತ ಜೋಡೊ ನ್ಯಾಯ ಯಾತ್ರೆಯು ಅಸ್ಸಾಂನ ಬೊಂಗೈಗಾಂವ್ ಜಿಲ್ಲೆಯಲ್ಲಿ ಬುಧವಾರ ಸಾಗಿದ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜನರನ್ನು ಉದ್ದೇಶಿಸಿ ಮಾತನಾಡಿದರು –ಪಿಟಿಐ ಚಿತ್ರ

ಚುನಾವಣೆ ಬಳಿಕ ರಾಹುಲ್ ಬಂಧನ: ಅಸ್ಸಾಂ ಮುಖ್ಯಮಂತ್ರಿ

ಗುವಾಹಟಿ (ಪಿಟಿಐ): 'ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ ಆರೋಪದ ಮೇಲೆ ರಾಹುಲ್ ಗಾಂಧಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು, ಲೋಕಸಭೆ ಚುನಾವಣೆ ಬಳಿಕ ಅವರನ್ನು ಬಂಧಿ ಸಲಾಗುವುದು' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಬುಧವಾರ ಹೇಳಿದ್ದಾರೆ.

'ಈಗಾಗಲೇ ಎಫ್‌ಐಆರ್ ದಾಖಲಿಸಿದ್ದೇವೆ. ಪ್ರಕರಣದ ವಿಚಾರಣೆಯನ್ನು ವಿಶೇಷ ತನಿಖಾ ತಂಡ ನಡೆಸುತ್ತದೆ' ಎಂದು ಶರ್ಮಾ ಅವರು ತಿಳಿಸಿದ್ದಾರೆ. ಮಂಗಳವಾರ 'ಭಾರತ್ ಜೋಡೊ ನ್ಯಾಯ ಯಾತ್ರೆ' ವೇಳೆ ಉದ್ದೇಶಪೂರ್ವಕವಾಗಿ ಹಿಂಸಾ ಕೃತ್ಯಗಳನ್ನು ಎಸಗಿದ್ದಾರೆ ಎಂದು ಆರೋಪಿಸಿ ರಾಹುಲ್ ಮತ್ತು ಹಲವು ನಾಯಕರ ವಿರುದ್ಧ ಅಸ್ಸಾಂ ಪೊಲೀಸರು ಸ್ವಯಂಪ್ರೇರಿತ ವಾಗಿ ಪ್ರಕರಣ ದಾಖಲಿಸಿಕೊಂಡಿದ್ದರು.

'ಕೂಲಂಕಷವಾಗಿ ತನಿಖೆ ನಡೆಸುವುದಕ್ಕೋಸ್ಕರ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿದೆ. ಸಿಐಡಿಯ ಹೆಚ್ಚುವರಿ ಡಿಜಿಪಿ ಎಸ್‌ಐಟಿ ರಚಿಸಲಿದ್ದಾರೆ' ಎಂದು ಅಸ್ಸಾಂ ಡಿಜಿಪಿ ಜಿ.ಪಿ. ಸಿಂಗ್ ಮಾಹಿತಿ ನೀಡಿದ್ದಾರೆ.

'ಕಾಂಗ್ರೆಸ್ ನ್ಯಾಯ ಯಾತ್ರೆಯಿಂದ ಟಿಎಂಸಿ ದೂರ?'

ಕೋಲ್ಕತ್ತ(ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ ಜೋಡೊ ನ್ಯಾಯ ಯಾತ್ರೆ'ಯು ಪಶ್ಚಿಮ ಬಂಗಾಳವನ್ನು ಇದೇ 25ರಂದು ಪ್ರವೇಶಿಸಲಿದ್ದು, 'ಇಂಡಿಯಾ' ಮೈತ್ರಿಕೂಟದ ಭಾಗವಾಗಿರುವ ಟಿಎಂಸಿ ಈ ಯಾತ್ರೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇಲ್ಲ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಬುಧವಾರ ಹೇಳಿದ್ದಾರೆ.

'ಯಾತ್ರೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿ ಈವರೆಗೆ ಕಾಂಗ್ರೆಸ್‌ನಿಂದ ನಮಗೆ ಔಪಚಾರಿಕ ಆಹ್ವಾನ ಬಂದಿಲ್ಲ. ಒಂದು ವೇಳೆ ಆಹ್ವಾನ ಬಂದರೂ, ನಾವು ಈ ಯಾತ್ರೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಕಡಿಮೆ' ಎಂದೂ ಟಿಎಂಸಿ ಹಿರಿಯ ನಾಯಕ ಹೇಳಿದ್ದಾರೆ.

ಲೋಕಸಭಾ ಚುನಾವಣೆಗಾಗಿ ಪಶ್ಚಿಮ ಬಂಗಾಳದಲ್ಲಿ ಸೀಟುಗಳ ಹಂಚಿಕೆ ವಿಚಾರವಾಗಿ ಕಾಂಗ್ರೆಸ್ ಮತ್ತು ಟಿಎಂಸಿ ನಡುವೆ ಒಡಕು ಮೂಡಿರುವ ಬೆನ್ನಲ್ಲೇ, ಈ ಬೆಳವಣಿಗೆ ನಡೆದಿದೆ.

'ನರೇಂದ್ರ ಮೋದಿ ಅವರ ವಿಶೇಷ ಮಿತ್ರನ (ಗೌತಮ್ ಅದಾನಿ) ವಿರುದ್ಧ ನಾನು ಮಾತನಾಡಿದೆ. ಅದಕ್ಕಾಗಿ ನನ್ನ ವಿರುದ್ಧ ಪ್ರಕರಣ ದಾಖಲಿಸಲಾಯಿತು, ನಂತರ ಸಂಸತ್ತಿನ ಸದಸ್ಯತ್ವದಿಂದ ಅನರ್ಹಗೊಳಿಸಲಾಯಿತು. ನನಗೆ ನೀಡಿದ್ದ ಸರ್ಕಾರಿ ಬಂಗ್ಲೆಯನ್ನು ವಾಪಸು ಪಡೆಯಲಾಯಿತು. ನನಗೆ ಸರ್ಕಾರಿ ಬಂಗ್ಲೆ ಬೇಕಿರಲಿಲ್ಲ, ಸ್ವತಃ ನಾನೇ ಅದರ ಬೀಗದ ಕೈಗಳನ್ನು ಮರಳಿಸಿದೆ' ಎಂದರು.

'ಪ್ರತಿಯೊಬ್ಬ ಭಾರತೀಯ ಪ್ರಜೆಯ ಹೃದಯದಲ್ಲಿ ನನ್ನ ಮನೆ ಇದೆ. ಅಲ್ಲಿಯೇ ನನ್ನ ವಾಸ. ಅಸ್ಸಾಂ, ಒಡಿಶಾ, ಉತ್ತರ ಪ್ರದೇಶ ಸೇರಿದಂತೆ ಎಲ್ಲ ರಾಜ್ಯಗಳಲ್ಲಿ ನಾನು ಲಕ್ಷಾಂತರ ಮನೆಗಳನ್ನು ಹೊಂದಿದ್ದೇನೆ' ಎಂದರು.

ರೋಡ್ ಶೋ: ಬರ್ಪೇಟಾ ತಲುಪುವುದಕ್ಕೂ ಮುನ್ನ, ಮಂಗಳವಾರ ರಾತ್ರಿ ವಿಷ್ಣುಪುರದಲ್ಲಿ ರಾಹುಲ್ ಗಾಂಧಿ ಅವರು ವಾಸ್ತವ್ಯ ಹೂಡಿದ್ದರು. ನಂತರ ಬೊಂಗೈಗಾಂವ್ ಮೂಲಕ ಯಾತ್ರೆ ಸಾಗಿತು.

ಬರ್ಪೇಟಾದಲ್ಲಿ ರೋಡ್ ಶೋ ಬಳಿಕ, ಬಸ್ ನಿಲ್ದಾಣದ ಬಳಿ ಸಾರ್ವಜನಿಕ ಸಭೆ ನಡೆಸಿದರು. ಯಾತ್ರೆ ಅಂಗವಾಗಿ ತಾವು ಬಳಸುತ್ತಿರುವ ವಾಹನದ ಚಾವಣಿಯಿಂದಲೇ ಅವರು ಜನರನ್ನು ಉದ್ದೇಶಿಸಿ ಮಾತನಾಡಿದರು.

> **ಹಿಮಂತ ಬಿಸ್ವ ಶರ್ಮ ಅವರು ಅಮಿತ್ ಶಾ ನಿಯಂತ್ರಣದಲ್ಲಿದ್ದಾರೆ. ಶಾ ವಿರುದ್ಧ ಮಾತನಾಡುವವರನ್ನು ಎರಡು ನಿಮಿಷದೊಳಗೆ ಶರ್ಮ ಹೊರಹಾಕುತ್ತಾರೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಎಫ್‌ಐಆರ್ ಕೋರಿದ್ದ ಅರ್ಜಿ ವಿಲೇವಾರಿ

ನವದೆಹಲಿ(ಪಿಟಿಐ): ಅತ್ಯಾಚಾರಕ್ಕೆ ಒಳಗಾಗಿದ್ದಳು ಎನ್ನಲಾದ ದಲಿತ ಬಾಲಕಿಯ ಗುರುತು ಬಹಿರಂಗಪಡಿಸುವ ರೀತಿ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದ ಆರೋಪ ಎದುರಿಸುತ್ತಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಬುಧವಾರ ವಿಲೇವಾರಿ ಮಾಡಿದೆ.

'ಸಂತ್ರಸ್ತ ಬಾಲಕಿ ಗುರುತು ಬಹಿರಂಗಪಡಿಸುವಂತಹ ಪೋಸ್ಟ್ ಅನ್ನು ಅಂತರ ರಾಷ್ಟ್ರೀಯ ಮಟ್ಟದಲ್ಲಿಯೂ ತೆಗೆದು ಹಾಕಲಾಗಿದೆ' ಎಂದು ರಾಹುಲ್ ಪರ ವಕೀಲೆ ತರನ್ನುಮ್ ಚೀಮಾ ಅವರು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಮತ್ತು ನ್ಯಾ. ಮನಮೀತ್ ಪಿ.ಎಸ್. ಅರೋರ ಅವರಿದ್ದ ನ್ಯಾಯಪೀಠಕ್ಕೆ ತಿಳಿಸಿದರು.

ರಾಹುಲ್ ಭದ್ರತೆ: ಶಾಗೆ ಪತ್ರ

ಅಸ್ಸಾಂನಲ್ಲಿ ಕಾಂಗ್ರೆಸ್‌ನ ಭಾರತ ಜೋಡೊ ನ್ಯಾಯ ಯಾತ್ರೆ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ(ಪಿಟಿಐ): ಕಾಂಗ್ರೆಸ್ ಹಮ್ಮಿಕೊಂಡಿರುವ ಭಾರತ ಜೋಡೊ ನ್ಯಾಯ ಯಾತ್ರೆಯು ಅಸ್ಸಾಂನಲ್ಲಿ ಸಾಗುವ ವೇಳೆ 'ಭದ್ರತೆ' ವಿಚಾರವಾಗಿ ರಾಹುಲ್ ಗಾಂಧಿ ಎದುರಿಸಿದ ತೊಂದರೆಗಳ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದು, ಪಕ್ಷದ ನಾಯಕನ ಸುರಕ್ಷತೆಯನ್ನು ಖಾತ್ರಿಪಡಿಸುವಂತೆ ಒತ್ತಾಯಿಸಿದ್ದಾರೆ.

'ಝಡ್ ಪ್ಲಸ್ ಭದ್ರತೆ ಹೊಂದಿರುವ ರಾಹುಲ್ ಗಾಂಧಿ ಅವರಿಗೆ ಅಸ್ಸಾಂ ಪೊಲೀಸರು ಅಗತ್ಯಕ್ಕೆ ತಕ್ಕಂತೆ ಭದ್ರತೆ ಒದಗಿಸದಿರುವ ಹಲವು ಘಟನೆಗಳು ನಡೆದಿವೆ' ಎಂದು ಖರ್ಗೆ ಅವರು ಬರೆದಿರುವ ಪತ್ರದಲ್ಲಿ ವಿವರಿಸಿದ್ದಾರೆ.

ಯಾತ್ರೆ ವೇಳೆ, 'ಹಿಂಸಾಚಾರ' ನಡೆಸಿದ ಆರೋಪದಡಿ ಅಸ್ಸಾಂ ಪೊಲೀಸರು ಕಾಂಗ್ರೆಸ್ ನಾಯಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೇ, ಗುವಾಹಟಿಯಲ್ಲಿ ಪೊಲೀಸರ ಮೇಲೆ ದಾಳಿ ನಡೆಸುವಂತೆ ಗುಂಪೊಂದಕ್ಕೆ ಪ್ರಚೋದನೆ ನೀಡಿದ ಆರೋಪದ ಮೇಲೆ ರಾಹುಲ್ ಗಾಂಧಿ ಹಾಗೂ ಇತರ ಮುಖಂಡರ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಖರ್ಗೆ ಅವರು ಸಚಿವ ಶಾ ಅವರಿಗೆ ಪತ್ರ ಬರೆದಿದ್ದಾರೆ.

ಭಾರತ ಜೋಡೊ ನ್ಯಾಯ ಯಾತ್ರೆಯು ಅಸ್ಸಾಂ ಪ್ರವೇಶಿಸಿದಾಗಿನಿಂದ ಭದ್ರತೆ ವಿಚಾರವಾಗಿ ರಾಹುಲ್ ಗಾಂಧಿ ಅವರು ಎದುರಿಸಿದ ಸಮಸ್ಯೆಗಳನ್ನು ಪತ್ರದಲ್ಲಿ ಖರ್ಗೆ ವಿವರಿಸಿದ್ದಾರೆ. ಮಂಗಳವಾರ ರಾತ್ರಿ, ರಾಹುಲ್ ಗಾಂಧಿ ನೇತೃತ್ವದ ಯಾತ್ರೆಯು ಗುವಾಹಟಿ ನಗರ ಪ್ರವೇಶಿಸುವುದಕ್ಕೆ ಪೊಲೀಸರು ಅನುಮತಿ ನೀಡಲಿಲ್ಲ. ಇದು ಕಾಂಗ್ರೆಸ್ ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಯಿತಲ್ಲದೇ, ನಗರದ ಹೊರಭಾಗದಲ್ಲಿ ಅಳವಡಿಸಿದ್ದ ತಡೆಗೋಡೆಗಳನ್ನು ಕಾರ್ಯಕರ್ತರು ಕಿತ್ತು ಹಾಕಿ, ಪ್ರತಿಭಟಿಸಿದ್ದರು.

ಖರ್ಗೆ ಅವರು ಗೃಹ ಸಚಿವ ಅಮಿತ್ ಶಾ ಅವರಿಗೆ ಬರೆದಿರುವ ಪತ್ರವನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು 'ಎಕ್ಸ್'ನ ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಕೇಂದ್ರದ ವಿರುದ್ಧ 'ಇಂಡಿಯಾ' ಟೀಕಾಪ್ರಹಾರ

ಬಿಜೆಪಿ ವಿರುದ್ಧ ವಾಗ್ದಾಳಿಗೆ ಜಾತಿ ಗಣತಿಯೇ ಅಸ್ತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಮಾಜವಾದಿ ನಾಯಕ ಹಾಗೂ ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವ 'ಭಾರತ ರತ್ನ' ಘೋಷಿಸಿರುವುದನ್ನು 'ಇಂಡಿಯಾ' ಮೈತ್ರಿಕೂಟ ಸ್ವಾಗತಿಸಿದ್ದರೂ, ಜನಸಂಘವು ಕರ್ಪೂರಿ ಠಾಕೂರ್ ನೇತೃತ್ವದ ಸರ್ಕಾರವನ್ನು ಕೆಡವಿದ್ದ ವಿಷಯವನ್ನು ಅಸ್ತ್ರವಾಗಿ ಬಳಸಿಕೊಂಡು, ಬಿಜೆಪಿ ವಿರುದ್ಧ ಬುಧವಾರ ಟೀಕಾಪ್ರಹಾರ ನಡೆಸಿದೆ.

'ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ವಿಚಾರವಾಗಿ ಕರ್ಪೂರಿ ಠಾಕೂರ್ ನೇತೃತ್ವದ ಸರ್ಕಾರವನ್ನು ಉರುಳಿಸಿದ್ದು ಹಾಗೂ ಸದ್ಯ, ದೇಶದಾದ್ಯಂತ ಜಾತಿಗಣತಿ ನಡೆಸುವುದಕ್ಕೆ ಕೇಂದ್ರ ಸರ್ಕಾರ ಮುಂದಾಗದಿರುವುದನ್ನು ಮುಂದಿಟ್ಟುಕೊಂಡು 'ಇಂಡಿಯಾ' ಅಂಗಪಕ್ಷಗಳು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿವೆ.

'ಕರ್ಪೂರಿ ಠಾಕೂರ್ ಅವರಿಗೆ ಬಹು ದಿನಗಳ ಹಿಂದೆಯೇ ಅತ್ಯುನ್ನತ ನಾಗರಿಕ ಪುರಸ್ಕಾರ ಲಭಿಸಬೇಕಿತ್ತು. ಇದು ಸಮಾಜವಾದ ಚಿಂತನೆಯ ಎಲ್ಲ ಪಕ್ಷಗಳ ಬೇಡಿಕೆಯೂ ಆಗಿತ್ತು. ಪ್ರಶಸ್ತಿಯನ್ನು ಈಗ ಘೋಷಿಸಿರುವುದು ಸ್ವಾಗತಾರ್ಹ' ಎಂದು ಕಾಂಗ್ರೆಸ್‌ನ ರಾಹುಲ್ ಗಾಂಧಿ ಅವರಿಂದ ಹಿಡಿದು ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ವರೆಗೆ ವಿಪಕ್ಷಗಳ ನಾಯಕರು ಹೇಳಿದ್ದಾರೆ. ಆದರೆ, 'ದೇಶದಲ್ಲಿ ಈಗ ಜಾತಿಗಣತಿ ಅಗತ್ಯವಿದೆ. ದೇಶದ ಬಡವರಿಗೆ ತೋರಿಕೆಯ ಬದಲಾಗಿ ನಿಜವಾದ ನ್ಯಾಯ ಒದಗಿಸುವುದು ಈಗಿನ ತುರ್ತು' ಎಂದು ವಿಪಕ್ಷಗಳ ನಾಯಕರು ಪ್ರತಿಪಾದಿಸುತ್ತಿದ್ದಾರೆ.

ಕರ್ಪೂರಿ ಠಾಕೂರ್ ಅವರ ಜನ್ಮ ಶತಮಾನೋತ್ಸವಕ್ಕೂ ಮುನ್ನಾ ದಿನವೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಠಾಕೂರ್ ಅವರಿಗೆ ಮರಣೋತ್ತರವಾಗಿ ಭಾರತ ರತ್ನ ಘೋಷಿಸಿದೆ. ಬಿಹಾರದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಆಡಳಿತಾರೂಢ ಜೆಡಿಯು ಹಾಗೂ ಲಾಲು ಪ್ರಸಾದ್ ನೇತೃತ್ವದ ಆರ್‌ಜೆಡಿಗೆ ಮುಂಬರುವ ಚುನಾವಣೆಯಲ್ಲಿ ಸಡ್ಡು ಹೊಡೆಯುವ ಪ್ರಯತ್ನದ ಭಾಗವಾಗಿ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

'ಸಾಮಾಜಿಕ ನ್ಯಾಯಕ್ಕಾಗಿ ಕರ್ಪೂರಿ ಠಾಕೂರ್ ನಡೆಸಿದ ಹೋರಾಟ ಅನನ್ಯ' ಎಂದಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, '2011ರಲ್ಲಿ ನಡೆಸಿದ್ದ ಸಾಮಾಜಿಕ–ಆರ್ಥಿಕ ಮತ್ತು ಜಾತಿ ಗಣತಿಯ ವರದಿಯನ್ನು ಬಿಜೆಪಿ ನೇತೃತ್ವದ ಸರ್ಕಾರ ಬಹಿರಂಗಗೊಳಿಸುತ್ತಿಲ್ಲ. ಜಾತಿ ಗಣತಿ ವಿಚಾರವಾಗಿ ಬಿಜೆಪಿ ಹೊಂದಿರುವ ಅಸಡ್ಡೆಯನ್ನು ಇದು ತೋರಿಸುತ್ತದೆ' ಎಂದು ರಾಹುಲ್ ಗಾಂಧಿ ಟೀಕಿಸಿದ್ದಾರೆ. ಈ ಕುರಿತು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಬಿಹಾರ ಸರ್ಕಾರ ಜಾತಿ ಗಣತಿ ನಡೆಸಿ, ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಅವಕಾಶ ಮಾಡಿಕೊಟ್ಟ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಮೋದಿ ಸರ್ಕಾರ, ಕರ್ಪೂರಿ ಠಾಕೂರ್ ಅವರಿಗೆ ಭಾರತ ರತ್ನ ಪ್ರಶಸ್ತಿ ಘೋಷಿಸಿದೆ' ಎಂದು ಲಾಲು ಪ್ರಸಾದ್ ಹೇಳಿದ್ದಾರೆ.

> **ಕರ್ಪೂರಿ ಠಾಕೂರ್ ಅವರಿಗೆ 'ಭಾರತ ರತ್ನ' ಘೋಷಿಸಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ. ಆದರೆ, ಇದು ನಮ್ಮ ಬಹಳ ಹಳೆಯ ಬೇಡಿಕೆಯಾಗಿತ್ತು ಎಂಬುದನ್ನು ಅವರಿಗೆ ನೆನಪಿಸಲು ಬಯಸುತ್ತೇನೆ**
> **ನಿತೀಶ್ ಕುಮಾರ್,** ಬಿಹಾರ ಮುಖ್ಯಮಂತ್ರಿ

> **ಸಾಮಾಜಿಕ ನ್ಯಾಯ ಇಲ್ಲದೇ ದೇಶದ ಪ್ರಗತಿ ಸಾಧ್ಯವಿಲ್ಲ ಎಂಬುದು ಕರ್ಪೂರಿ ಠಾಕೂರ್ ಅವರ ದೃಢವಾದ ನಂಬಿಕೆಯಾಗಿತ್ತು. ಅವರು ಜಾತಿ ಗಣತಿ ಪರವೂ ಇದ್ದರು. ಆದರೆ, ಜಾತಿಗಣತಿಯನ್ನು ಬಿಜೆಪಿ ವಿರೋಧಿಸುತ್ತಿದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> **ಸಾಮಾಜಿಕ ನ್ಯಾಯದ ಪರ ಕರ್ಪೂರಿ ಠಾಕೂರ್ ಕೈಗೊಂಡ ಕಾರ್ಯ ಸಕಾರಾತ್ಮಕ ಪರಿಣಾಮ ಬೀರಿದೆ. ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಅವರು ಅಳಿಸಲಾಗದ ಹೆಜ್ಜೆ ಗುರುತು ಮೂಡಿಸಿದ್ದಾರೆ**
> **ನರೇಂದ್ರ ಮೋದಿ,** ಪ್ರಧಾನಿ

ರಾಮ ಮಂದಿರದಲ್ಲಿ ಜನಸಾಗರ

ಭೇಟಿಗೂ ಮೊದಲು ಮಾಹಿತಿ ನೀಡುವಂತೆ ಅತಿಗಣ್ಯ ವ್ಯಕ್ತಿಗಳಿಗೆ ಟ್ರಸ್ಟ್ ಮನವಿ

ಪ್ರಜಾವಾಣಿ ವಾರ್ತೆ/ಪಿಟಿಐ

ಅಯೋಧ್ಯೆ/ಲಖನೌ: ಬಾಲರಾಮನ ಪ್ರಾಣಪ್ರತಿಷ್ಠಾಪನೆಯ ನಂತರದಲ್ಲಿ ಭಾರಿ ಪ್ರಮಾಣದ ಭಕ್ತರ ಹರಿವನ್ನು ಕಂಡಿದ್ದ ಅಯೋಧ್ಯೆಯಲ್ಲಿ ಬುಧವಾರ ಭಕ್ತರ ಸಂಖ್ಯೆಯು ತುಸು ಮಟ್ಟಿಗೆ ಕಡಿಮೆ ಇತ್ತು. ಇದು ಅಲ್ಲಿನ ಅಧಿಕಾರಿಗಳಲ್ಲಿ ಸಮಾಧಾನ ಮೂಡಿಸಿತು. ಹೀಗಿದ್ದರೂ, ಅತಿಗಣ್ಯ ವ್ಯಕ್ತಿಗಳು ಮುಂದಿನ ಹತ್ತು ದಿನಗಳವರೆಗೆ ಮಂದಿರಕ್ಕೆ ಭೇಟಿ ನೀಡಬಾರದು ಎಂದು ಉತ್ತರ ಪ್ರದೇಶ ಸರ್ಕಾರವು ಬುಧವಾರ ಕೋರಿದೆ.

ಮಂದಿರಕ್ಕೆ ಭೇಟಿ ನೀಡುವ ಆಲೋಚನೆ ಹೊಂದಿರುವ ಅತಿಗಣ್ಯ ವ್ಯಕ್ತಿಗಳು ಕನಿಷ್ಠ ಏಳು ದಿನ ಮೊದಲು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ಮಾಹಿತಿ ನೀಡುವಂತೆಯೂ ಸರ್ಕಾರವು ಕೋರಿದೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಯೋಧ್ಯೆಯಲ್ಲಿನ ಪರಿಸ್ಥಿತಿ ಬಗ್ಗೆ ಪರಾಮರ್ಶೆ ನಡೆಸಲು ಲಖನೌನಲ್ಲಿ ಸಭೆ ನಡೆಸಿದರು. ಬುಧವಾರ ಮಧ್ಯಾಹ್ನದ ವೇಳೆಗೆ ಸರಿಸುಮಾರು 3 ಲಕ್ಷ ಮಂದಿ ಬಾಲರಾಮನ ದರ್ಶನ ಪಡೆದಿದ್ದಾರೆ.

ಭಕ್ತರ ದಂಡನ್ನು ಹೆಚ್ಚು ಸಮರ್ಪಕವಾಗಿ ನಿಭಾಯಿಸುವ ಉದ್ದೇಶದಿಂದ ಅಯೋಧ್ಯೆ ಪ್ರವೇಶಿಸುವ ಒಂದು ಮಾರ್ಗವನ್ನು ಮಾತ್ರ ಮುಕ್ತವಾಗಿ ಇರಿಸಿದ್ದರು. 'ಭಕ್ತರನ್ನು ಗರ್ಭಗೃಹಕ್ಕೆ ಗುಂಪುಗಳಲ್ಲಿ ಕಳುಹಿಸಲಾಗುತ್ತಿದೆ... ಬುಧವಾರ ಗೊಂದಲ ನಿರ್ಮಾಣವಾಗಿಲ್ಲ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಬಾಲರಾಮನ ದರ್ಶನವು ಸುಗಮವಾಗಿ ನಡೆಯುತ್ತಿದೆ ಎಂದು ಉತ್ತರ ಪ್ರದೇಶದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಜಿಪಿ ಪ್ರಶಾಂತ್ ಕುಮಾರ್ ಹೇಳಿದರು.

ದರ್ಶನ ಪಡೆಯಲು ಬರುತ್ತಿರುವ ಭಕ್ತರ ಸರತಿ ಸಾಲಿನ ವ್ಯವಸ್ಥೆಯನ್ನು ಇನ್ನಷ್ಟು ಉತ್ತಮಪಡಿಸಲಾಗಿದೆ ಎಂದು ಪ್ರಶಾಂತ್ ಅವರು ಹೇಳಿದರು.

ಭಕ್ತರಿಗೆ ತೊಂದರೆ ಆಗದೆ ಇರಲಿ ಎಂಬ ಉದ್ದೇಶದಿಂದ ಒಟ್ಟು ಎಂಟು ಸಾವಿರ ಮಂದಿ ಭದ್ರತಾ ಸಿಬ್ಬಂದಿಯನ್ನು ದೇವಸ್ಥಾನ ಒಳಗೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಯೋಜಿಸಲಾಗಿದೆ ಎಂದು ಅವರು ತಿಳಿಸಿದರು. ಭಕ್ತರು ಇನ್ನೂ ಕೆಲವು ದಿನಗಳವರೆಗೆ ಅಯೋಧ್ಯೆಗೆ ಭಾರಿ ಸಂಖ್ಯೆಯಲ್ಲಿ ಬರಬಹುದು, ಅದಾದ ನಂತರದಲ್ಲಿ ಪರಿಸ್ಥಿತಿಯು ಸಹಜವಾಗಬಹುದು ಎಂದು ಮೂಲಗಳು ಹೇಳಿವೆ.

ರಾಮ ಮಂದಿರದ ಮುಖ್ಯ ದ್ವಾರದ ಬಳಿ ಬರುತ್ತಿರುವ ಭಕ್ತರು –ಪಿಟಿಐ ಚಿತ್ರ



ಅಯೋಧ್ಯೆಯ ಕುಬೇರ ಟೀಲಾದಲ್ಲಿ ಇರಿಸಲಾಗಿರುವ ಜಟಾಯುವಿನ ಪ್ರತಿಮೆ –ಪಿಟಿಐ ಚಿತ್ರ

ಪ್ರಧಾನಿಗೆ ಅಭಿನಂದನೆ

ನವದೆಹಲಿ (ಪಿಟಿಐ): ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆಯನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿ ಕೇಂದ್ರ ಸಚಿವ ಸಂಪುಟವು ನಿರ್ಣಯ ಕೈಗೊಂಡಿದೆ. 'ಮೋದಿ ಜನರ ಶತಮಾನಗಳ ಕನಸನ್ನು ನನಸು ಮಾಡಿದ್ದಾರೆ' ಎಂದು ಸಂಪುಟವು ಶ್ಲಾಘಿಸಿದೆ.

ಜಟಾಯು: 2 ತಿಂಗಳ ಅಧ್ಯಯನ

ಅಯೋಧ್ಯೆ (ಪಿಟಿಐ): ಅಯೋಧ್ಯೆಯ ಕುಬೇರ ಟೀಲಾದಲ್ಲಿ ಸ್ಥಾಪಿಸಲಾಗಿರುವ ಜಟಾಯು ಪಕ್ಷಿಯ 3.5 ಟನ್ ತೂಕದ ಪ್ರತಿಮೆಯನ್ನು ರೂಪಿಸಲು ಶಿಲ್ಪಿ ರಾಮ ಸುತಾರ ಅವರಿಗೆ ಮೂರು ತಿಂಗಳು ಬೇಕಾಯಿತು. ರಾಮ ಸುತಾರ ಅವರು ಎರಡು ತಿಂಗಳನ್ನು ಜಟಾಯುವಿನ ಬಗ್ಗೆ ಅಧ್ಯಯನ ನಡೆಸುವುದಕ್ಕಾಗಿಯೇ ವ್ಯಯಿಸಿದ್ದರು.

ಜಟಾಯು ಪ್ರತಿಮೆಯನ್ನು ರಾಮ ಮಂದಿರ ಸಂಕೀರ್ಣದ ಆವರಣದಲ್ಲಿ ಎಂಟು ಅಡಿ ಎತ್ತರದ ದಿಬ್ಬವೊಂದರ ಮೇಲೆ ಇರಿಸಲಾಗಿದೆ. 'ಪಕ್ಷಿಯ ಪ್ರತಿಮೆಯು ಒಟ್ಟು 20 ಅಡಿ ಎತ್ತರ ಇದೆ. ಇದರ ಅಗಲ ಮತ್ತು ಉದ್ದ ತಲಾ 8 ಅಡಿಗಳಷ್ಟಿದೆ. ಇದು ಈಗ ಅಯೋಧ್ಯೆಯಲ್ಲಿ ನೆಲೆಯಾಗಿರುವುದು ಸಂತಸದ ವಿಚಾರ' ಎಂದು ರಾಮ ಸುತಾರ ಅವರ ಮಗ ಅನಿಲ್ ರಾಮ ಸುತಾರ ತಿಳಿಸಿದರು.

ಮಂದಿರದಲ್ಲೊಂದು 'ಸುಂದರ ಪ್ರಸಂಗ'

ಲಖನೌ (ಪಿಟಿಐ): ಅಯೋಧ್ಯೆಯ ರಾಮ ಮಂದಿರದ ಗರ್ಭಗುಡಿಯನ್ನು ಪ್ರವೇಶಿಸಿದ ಒಂದು ಮಂಗ, ಅಲ್ಲಿ ಯಾವುದೇ ಉಪಟಳ ನೀಡದೆ ವಾಪಸ್ಸಾಗಿದೆ... ಈ ಪ್ರಸಂಗವನ್ನು ಜಾಲತಾಣಗಳ ಮೂಲಕ ಹಂಚಿಕೊಂಡಿರುವ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್, 'ಇದೊಂದು ಸುಂದರ ಪ್ರಸಂಗ' ಎಂದು ಬಣ್ಣಿಸಿದೆ.

ಅಲ್ಲಿ ನಿಯೋಜನೆಗೊಂಡಿದ್ದ ಭದ್ರತಾ ಸಿಬ್ಬಂದಿಯು, ಬಾಲರಾಮನ ದರ್ಶನ ಪಡೆಯಲು ಹನುಮಂತನೇ ಖುದ್ದಾಗಿ ಬಂದಿದ್ದಾನೆ ಎಂದು ಭಾವಿಸಿದರು ಎಂದು ಕೂಡ ಟ್ರಸ್ಟ್ ಹೇಳಿದೆ. ಈ ಪ್ರಸಂಗವು ಮಂಗಳವಾರ ಸಂಜೆ ನಡೆದಿದೆ ಎಂದು ಟ್ರಸ್ಟ್ ತಿಳಿಸಿದೆ.

'ಮಂದಿರದಲ್ಲಿ ಮಂಗಳವಾರ ಸುಂದರ ಪ್ರಸಂಗ ನಡೆಯಿತು. ಸಂಜೆ 5.50ರ ಸುಮಾರಿಗೆ ಮಂದಿರದ ದಕ್ಷಿಣ ಬಾಗಿಲಿನ ಮೂಲಕ ಮಂಗವೊಂದು ಗರ್ಭಗುಡಿಯನ್ನು ಪ್ರವೇಶಿಸಿದೆ, ಉತ್ಸವ ಮೂರ್ತಿಯ ಬಳಿ ಬಂದಿದೆ. ಮಂಗವು ಮೂರ್ತಿಯನ್ನು ನೆಲಕ್ಕೆ ಬೀಳಿಸಬಹುದು ಎಂದು ಭಾವಿಸಿ ಭದ್ರತಾ ಸಿಬ್ಬಂದಿ ಅದರ ಬಳಿ ಧಾವಿಸಿದ್ದಾರೆ.

'ಆದರೆ, ಪೊಲೀಸರು ಮಂಗನ ಬಳಿ ಓಡಿದಾಗ ಅದು ಗಲಿಬಿಲಿಗೆ ಒಳಗಾಗದೆ ಉತ್ತರ ಬಾಗಿಲಿನ ಕಡೆ ಸಾಗಿದೆ. ಆ ಬಾಗಿಲು ಮುಚ್ಚಿದ್ದ ಕಾರಣ ಅದು ಪೂರ್ವದ ಬಾಗಿಲಿನ ಕಡೆ ಸಾಗಿ, ಭಕ್ತರನ್ನು ದಾಟಿ ಆಚೆ ಹೋಗಿದೆ. ಮಂಗವು ಯಾರಿಗೂ ಯಾವುದೇ ರೀತಿಯಲ್ಲಿ ತೊಂದರೆ ಮಾಡಿಲ್ಲ' ಎಂದು ಪ್ರಸಂಗವನ್ನು ಟ್ರಸ್ಟ್ ವಿವರಿಸಿದೆ.

ತಾತ್ಕಾಲಿಕ ಗುಡಿಯಲ್ಲಿ ಇರಿಸಲಾಗಿದ್ದ ಬಾಲರಾಮನ ಮೂರ್ತಿಯನ್ನು ಈಗ ಉತ್ಸವ ಮೂರ್ತಿ ಎಂದು ಕರೆಯಲಾಗುತ್ತಿದೆ. ಇದನ್ನು ನೂತನ ಮಂದಿರದ ಗರ್ಭಗುಡಿಯಲ್ಲಿ ಇರಿಸಲಾಗಿದೆ.

ಯಲ್ಲಮ್ಮ ಜಾತ್ರೆ, ಬನಶಂಕರಿ ರಥೋತ್ಸವ ಇಂದು

ಹುಬ್ಬಳ್ಳಿ: ಬೆಳಗಾವಿ ಜಿಲ್ಲೆಯ ಯಲ್ಲಮ್ಮನಗುಡ್ಡದಲ್ಲಿ ಬನದ ಹುಣ್ಣಿಮೆ ಜಾತ್ರೆ ಹಾಗೂ ಬಾಗಲಕೋಟೆಯಲ್ಲಿ ಬನಶಂಕರಿದೇವಿ ರಥೋತ್ಸವವು ಗುರುವಾರ (ಜನವರಿ 25) ನಡೆಯಲಿದೆ.

ಯಲ್ಲಮ್ಮದೇವಿ ದರ್ಶನಕ್ಕೆ ಸರದಿ ವ್ಯವಸ್ಥೆ ಮಾಡಲಾಗಿದೆ. ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಪುರುಷರು ಮತ್ತು ಮಹಿಳೆಯರ ಸ್ನಾನಕ್ಕೆ ಎಣ್ಣೆ ಹೊಂಡದಲ್ಲಿ ಜಲವೃಷ್ಟಿ ಸೌಲಭ್ಯ ಕಲ್ಪಿಸಲಾಗಿದೆ.

ಬೆಳಗಾವಿಯಿಂದ ಯಲ್ಲಮ್ಮನ ಗುಡ್ಡದವರೆಗೆ 24x7 ಮಾದರಿಯಲ್ಲಿ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ವಾಹನ ದಟ್ಟಣೆ ನಿಯಂತ್ರಣಕ್ಕೆ ಸವದತ್ತಿಯಿಂದ ಯಲ್ಲಮ್ಮನ ಗುಡ್ಡಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗಗಳಲ್ಲಿ ಏಕಮುಖ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ಬನಶಂಕರಿ ರಥೋತ್ಸವ: ಬಾಗಲಕೋಟೆ ಜಿಲ್ಲೆಯ ಚೊಳಚಗುಡ್ಡ ಗ್ರಾಮದ ಬನಶಂಕರಿದೇವಿ ಜಾತ್ರೆಗೆ ಸಕಲ ಸಿದ್ಧತೆ ಮಾಡಲಾಗಿದೆ. ಸಂಜೆ 5ಕ್ಕೆ ರಥೋತ್ಸವ ಜರುಗಲಿದೆ. ತಿಂಗಳು ಪೂರ್ತಿ ಜಾತ್ರೆ ನಡೆಯಲಿದೆ.

ಠಾಣೆ: ಕಿಡಿಗೇಡಿಗಳಿಂದ ಅಂಗಡಿಗಳತ್ತ ಕಲ್ಲು ತೂರಾಟ

ಮುಂಬೈ/ಠಾಣೆ (ಪಿಟಿಐ): ಮೂರು ದಿನಗಳ ಹಿಂದಷ್ಟೆ ಕೋಮು ಸಂಘರ್ಷಕ್ಕೆ ಸಾಕ್ಷಿಯಾಗಿದ್ದ ನಯಾ ನಗರ ಸೇರಿದಂತೆ ಠಾಣೆ ಜಿಲ್ಲೆಯ ಕೆಲ ಪ್ರದೇಶಗಳಲ್ಲಿ ದುಷ್ಕರ್ಮಿಗಳು ಕೆಲವು ಅಂಗಡಿಗಳನ್ನು ಧ್ವಂಸ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಶ್ಮೀರಿ ನಗರ, ನಯಾ ನಗರ ಮತ್ತು ನವಘರ್‌ನಲ್ಲಿರುವ ಕೆಲ ಅಂಗಡಿಗಳಿಗೆ ಹಾನಿ ಮಾಡಲಾಗಿದೆ. ಘಟನೆಯಿಂದ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಕರಣ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಬೈಕ್‌ಗಳಲ್ಲಿ ಬಂದ ಕಿಡಿಗೇಡಿಗಳು ಅಂಗಡಿಗಳತ್ತ ಕಲ್ಲು ತೂರಾಡಿರುವ ದೃಶ್ಯ ಅದರಲ್ಲಿದೆ. ಘಟನೆಗೆ ಸಂಬಂಧಿಸಿದಂತೆ ಅನಾಮಧೇಯ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ತಪ್ಪಿತಸ್ಥರ ಪತ್ತೆಗೆ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣಪ್ರತಿಷ್ಠಾಪನೆ ಅಂಗವಾಗಿ ಮುಸ್ಲಿಂ ಸಮುದಾಯವೇ ಪ್ರಧಾನವಾಗಿರುವ ನಯಾ ನಗರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ರ‍್ಯಾಲಿ ವೇಳೆ ಎರಡು ಸಮುದಾಯಗಳ ನಡುವೆ ಸಂಘರ್ಷ ನಡೆದಿತ್ತು. ಈ ಬೆನ್ನಲ್ಲೇ 13 ಜನರನ್ನು ಬಂಧಿಸಲಾಗಿದೆ. ಸೋಮವಾರ ರಾತ್ರಿ ಮೀರಾ ರಸ್ತೆ ಮತ್ತು ಬೋರಿವಲ್ಲಿ ಗ್ರಾಮದಲ್ಲಿ ಮೆರವಣಿಗೆ ನಡೆಸುತ್ತಿದ್ದವರ ಮೇಲೂ ಕಿಡಿಗೇಡಿಗಳು ಕಲ್ಲು ಎಸೆದಿದ್ದರು. ಈ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ.

ಈ ಬೆನ್ನಲ್ಲೇ ನಯಾನಗರ ಪ್ರದೇಶದ ರಸ್ತೆಬದಿಯಲ್ಲಿ ಕಾನೂನು ಬಾಹಿರವಾಗಿ ನಿರ್ಮಿಸಲಾಗಿದ್ದ ಅಂಗಡಿಗಳನ್ನು ನಗರಾಡಳಿತವು ಮಂಗಳವಾರ ಬುಲ್ಡೋಜರ್ ಬಳಸಿ ನೆಲಸಮ ಮಾಡಿದೆ.

'ನಯಾನಗರದಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅಂಗಡಿಗಳು, ಮತ್ತು ಶೈಕ್ಷಣಿಕ ಸಂಸ್ಥೆಗಳು ತೆರೆದಿವೆ. ಕೋಮು ಸಾಮರಸ್ಯ ಹಾಳುಮಾಡಲು ಯತ್ನಿಸು ವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವರಾಳೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಮಾಡಿ ರಾಷ್ಟ್ರಪತಿಯವರು ಆದೇಶ ಹೊರಡಿಸಿದ್ದಾರೆ.

ಕೊಲಿಜಿಯಂ ಮಾಡಿದ್ದ ಶಿಫಾರಸಿಗೆ ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದ ಬಳಿಕ ಈ ಆದೇಶ ಹೊರಡಿಸಲಾಗಿದೆ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇದರಿಂದಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 34ಕ್ಕೆ ಏರಿದೆ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಪಿ.ಎಸ್.ದಿನೇಶ್ ಕುಮಾರ್ ಅವರನ್ನು ನೇಮಕ ಮಾಡಬೇಕೆಂಬ ಶಿಫಾರಸಿಗೂ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಅವರು ಫೆ. 24ರಂದು ನಿವೃತ್ತರಾಗಲಿದ್ದಾರೆ.

ಕೇಂದ್ರದ ನಿಲುವಿಗೆ 'ಸುಪ್ರೀಂ' ಅಚ್ಚರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ (ಎಎಂಯು) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಎಂಬ ಸ್ಥಾನವನ್ನು ಮತ್ತೆ ಕಲ್ಪಿಸಿ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯ ಕಾಯ್ದೆಗೆ 1981ರಲ್ಲಿ ಸಂಸತ್ತು ತಂದ ತಿದ್ದುಪಡಿಯನ್ನು ಕೇಂದ್ರ ಸರ್ಕಾರವು ಸಮರ್ಥಿಸಿಕೊಳ್ಳದೆ ಇದ್ದುದರ ಬಗ್ಗೆ ಸುಪ್ರೀಂ ಕೋರ್ಟ್ ಆಶ್ಚರ್ಯ ವ್ಯಕ್ತಪಡಿಸಿದೆ.

'1981ರ ತಿದ್ದುಪಡಿ ಒಪ್ಪಿಕೊಳ್ಳುವಿರಾ' ಎಂಬ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಏಳು ಮಂದಿ ನ್ಯಾಯಮೂರ್ತಿಗಳ ಪೀಠವು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಲ್ಲಿ ಕೇಳಿತು. 'ಒಪ್ಪುವುದಿಲ್ಲ' ಎಂಬ ಉತ್ತರ ಮೆಹ್ತಾ ಅವರಿಂದ ಬಂತು.

1981ರ ತಿದ್ದುಪಡಿಯು ಅಸಾಂವಿಧಾನಿಕ ಎಂದು ಅಲಹಾಬಾದ್ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಎಎಂಯು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಈ ಪೀಠ ನಡೆಸುತ್ತಿದೆ. 'ಸಂಸತ್ತು ತಂದ ತಿದ್ದುಪಡಿಯನ್ನು ನೀವು ಒಪ್ಪಿಕೊಳ್ಳದೆ ಇರುವುದು ಹೇಗೆ ಸಾಧ್ಯ? ದೇಶದ ಸಂವಿಧಾನದ ಪ್ರಕಾರ ಸಂಸತ್ತು ಶಾಶ್ವತವೂ, ಅವಿನಾಶಿಯೂ ಆದ ಸಂಸ್ಥೆ...' ಎಂದು ಪೀಠ ಹೇಳಿತು.

'ಈ ತಿದ್ದುಪಡಿಯ ಪರವಾಗಿ ನೀವಿರಬೇಕು' ಎಂದು ಪೀಠವು ಹೇಳಿತು. ಇದಕ್ಕೆ ಉತ್ತರವಾಗಿ ಮೆಹ್ತಾ ಅವರು, 'ನಾನು ಇಲ್ಲಿ ಸಾಂವಿಧಾನಿಕ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದೇನೆ. ಈ ತಿದ್ದುಪಡಿಯು ಕೆಲವು ಕಾರಣಗಳಿಗಾಗಿ ಅಸಾಂವಿಧಾನಿಕ ಎಂದು ಒಂದು ಆದೇಶದಲ್ಲಿ ಹೇಳಲಾಗಿದೆ. ಕಾನೂನು ಅಧಿಕಾರಿಯಾಗಿ, ಈ ಆದೇಶದಲ್ಲಿನ ನಿಲುವು ಸರಿಯಾಗಿರುವಂತೆ ಕಾಣುತ್ತಿದೆ ಎಂದು ಹೇಳುವ ಹಕ್ಕು, ಅಧಿಕಾರ ನನಗೆ ಇದೆ' ಎಂದು ಹೇಳಿದರು.

ತಾನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಎಂಬ ಕಾರಣ ನೀಡಿ ಎಎಂಯು, ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಲ್ಲಿ ಶೇಕಡ 50ರಷ್ಟು ಸೀಟುಗಳನ್ನು ಮುಸ್ಲಿಂ ವಿದ್ಯಾರ್ಥಿಗಳಿಗೆ ಮೀಸಲಾಗಿ ಇರಿಸಿತು. ಇದನ್ನು ಅಲಹಾಬಾದ್ ಹೈಕೋರ್ಟ್ 2005ರಲ್ಲಿ ರದ್ದುಪಡಿಸಿತು. ಈ ಆದೇಶವನ್ನು ಪ್ರಶ್ನಿಸಿ ಎಎಂಯು ಮತ್ತು ಕೇಂದ್ರ ಸರ್ಕಾರ 2006ರಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದವು. ಆದರೆ 2016ರಲ್ಲಿ ಅರ್ಜಿಯನ್ನು ಹಿಂದಕ್ಕೆ ಪಡೆದುಕೊಂಡ ಕೇಂದ್ರ ಸರ್ಕಾರವು, ಈ ವಿಶ್ವವಿದ್ಯಾಲಯಕ್ಕೆ ನೀಡಿರುವ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಎಂಬ ಸ್ಥಾನವನ್ನು ತಾನು ಒಪ್ಪುವುದಿಲ್ಲ ಎಂದು ಹೇಳಿತು.

ಪ್ರಜಾವಾಣಿ
ಸ್ಪರ್ಧಾವಾಣಿ
MASTERMIND
ಈ ಸಂಚಿಕೆಯಲ್ಲಿ 200ಕ್ಕೂ ಹೆಚ್ಚು ಅಭ್ಯಾಸ ಪ್ರಶ್ನೆಗಳು!
ಈ QR ಕೋಡ್ ಸ್ಕ್ಯಾನ್ ಮಾಡಿ,
ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ,
ಚಂದಾದಾರರಾಗಿ ನೊಂದಣಿ ಮಾಡಿಕೊಳ್ಳಿ
ವಾರ್ಷಿಕ ಚಂದಾ ₹700
ಅರೆ ವಾರ್ಷಿಕ ಚಂದಾ ₹360

ಭಾರತ– ಇಂಗ್ಲೆಂಡ್ ಮೊದಲ ಕ್ರಿಕೆಟ್ ಟೆಸ್ಟ್ ಇಂದಿನಿಂದ • ಪ್ರಾಬಲ್ಯ ಮುಂದುವರಿಸುವ ವಿಶ್ವಾಸದಲ್ಲಿ ರೋಹಿತ್ ಪಡೆ

ಬ್ಯಾಝ್‌ಬಾಲ್ ಶೈಲಿಗೆ ಸ್ಪಿನ್ ಅಸ್ತ್ರ

ಭಾರತ ತಂಡದ ನಾಯಕ ರೋಹಿತ್ ಶರ್ಮಾ –ಪಿಟಿಐ ಚಿತ್ರ

ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಹೈದರಾಬಾದ್ (ಪಿಟಿಐ): ಸುಮಾರು 12 ವರ್ಷಗಳಿಂದ ತವರಿನಲ್ಲಿ ಪಾಬಲ್ಯ ಮೆರೆದಿರುವ ಭಾರತ ತಂಡಕ್ಕೆ ಈಗ ವಿಭಿನ್ನ ರೀತಿಯ ಸವಾಲು ಎದುರಾಗಿದೆ. ಗುರುವಾರ ಆರಂಭವಾಗುವ ಐದು ಟೆಸ್ಟ್‌ಗಳ ದೀರ್ಘ ಸರಣಿಯ ಮೊದಲ ಪಂದ್ಯದಲ್ಲಿ ರೋಹಿತ್ ಶರ್ಮಾ ಪಡೆ, ಸಾಂಪ್ರದಾಯಿಕ ಶೈಲಿಯಿಂದ ವಿಮುಖವಾಗಿ ಆಕ್ರಮಣದ ಕ್ರಿಕೆಟ್ ಆಡುವ ಇಂಗ್ಲೆಂಡ್ ತಂಡವನ್ನು ಎದುರಿಸಲಿದ್ದು ಕುತೂಹಲಕ್ಕೆ ದಾರಿಮಾಡಿಕೊಟ್ಟಿದೆ.

2012ರಲ್ಲಿ ಅಲಿಸ್ಟರ್ ಕುಕ್ ನೇತೃತ್ವದ ಇಂಗ್ಲೆಂಡ್ ತಂಡಕ್ಕೆ 1–2 ರಿಂದ ಸೋತ ನಂತರ ಭಾರತ ತವರಿನಲ್ಲಿ ಅಜೇಯವಾಗಿ ಉಳಿದಿದೆ. ಸತತ 16 ಸರಣಿಗಳಲ್ಲಿ ಜಯಗಳಿಸಿದೆ. ಅದರಲ್ಲೂ ಏಳು ಸರಣಿಗಳನ್ನು 'ಸ್ವೀಪ್' ಮಾಡಿದೆ. ಈ ಅವಧಿಯಲ್ಲಿ ಆಡಿರುವ 44 ಟೆಸ್ಟ್‌ಗಳಲ್ಲಿ ಸೋತಿರುವುದು ಬರೇ ಮೂರನ್ನು. 1980ರ ದಶಕದಲ್ಲಿ ವೆಸ್ಟ್ ಇಂಡೀಸ್, ಶತಮಾನದ ಕೊನೆಯಲ್ಲಿ ಆಸ್ಟ್ರೇಲಿಯಾ ಕೂಡ ಇಂಥ ಪಾರಮ್ಯ ಮೆರೆದಿರಲಿಲ್ಲ.

ಪಿಚ್‌ಗಳ ಜೊತೆಗೆ, ಪರಿಸ್ಥಿತಿಗೆ ಅನುಗುಣವಾಗಿ ಬೌಲಿಂಗ್, ರನ್ ಹರಿಸುವ ಬ್ಯಾಟರ್‌ಗಳಿಂದ ತಂಡ ಮೇಲುಗೈ ಸಾಧಿಸಿದೆ. ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಮತ್ತು ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಹಲವು ಗೆಲುವುಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ರಾಜೀವ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದ ಪಿಚ್ ದಿನಕಳೆದಂತೆ ಸ್ಪಿನ್ನರ್‌ಗಳಿಗೆ ನೆರವು ನೀಡುವ ನಿರೀಕ್ಷೆಯಿದ್ದು, ಇವರಿಬ್ಬರ ಮೇಲೆ ಹೊಣೆಯಿದೆ.

ಕಳೆದ ಬಾರಿಯ ಸರಣಿಯಲ್ಲಿ ಇಂಗ್ಲೆಂಡ್, ಭಾರತದ ಸ್ಪಿನ್ ಬಲ ನೋಡಿದೆ. 2012ರ ನಂತರ ಅಶ್ವಿನ್ 46 ಟೆಸ್ಟ್‌ಗಳಲ್ಲಿ 283 ವಿಕೆಟ್ ಪಡೆದು ಭಾರತದ ಸ್ಪಿನ್ನ ಬತ್ತಳಿಕೆಯ ಪ್ರಮುಖ ಅಸ್ತ್ರವಾಗಿದ್ದಾರೆ. ಇದೇ ಅವಧಿಯಲ್ಲಿ 39 ಟೆಸ್ಟ್‌ಗಳಲ್ಲಿ 191 ವಿಕೆಟ್ ಕಿತ್ತಿರುವ ಜಡೇಜಾ ಅವರೂ ನಿರ್ಣಾಯಕ ಹೊಡೆತ ನೀಡಬಲ್ಲವರು. ಇವರ ಜೊತೆಗೆ ಭಾರತ ಅಕ್ಷರ್ ಪಟೇಲ್ ಅಥವಾ ಕುಲದೀಪ್ ಯಾದವ್ ಇವರಲ್ಲೊಬ್ಬರನ್ನು ಆಡಿಸುವುದು ಖಚಿತ.

ಇದರ ಅರಿವಿರುವ ಇಂಗ್ಲೆಂಡ್ ತಂಡ, ಸ್ಪಿನ್ ಆಡಲು ಅಬುಧಾಬಿಯಲ್ಲಿ ಸಿದ್ಧತಾ ಶಿಬಿರ ನಡೆಸಿದೆ.

ಭಾರತ, ಈ ಪಂದ್ಯವನ್ನು ಪ್ರಮುಖ ಬ್ಯಾಟರ್ ವಿರಾಟ್ ಕೊಹ್ಲಿ ಇಲ್ಲದೇ ಆಡಬೇಕಿದೆ. ವೈಯಕ್ತಿಕ ಕಾರಣಗಳಿಂದ ಎರಡು ಟೆಸ್ಟ್‌ಗಳಿಗೆ ಅವರು ಅಲಭ್ಯರಾಗಿದ್ದಾರೆ. ಅವರು ಇಂಗ್ಲೆಂಡ್ ಎದುರು 28 ಟೆಸ್ಟ್‌ಗಳಿಂದ 1991 ರನ್ ಗಳಿಸಿದ್ದು ಇದರಲ್ಲಿ ಐದು ಶತಕಗಳಿವೆ. ಇಲ್ಲಿ ಅವರ ಅನುಪಸ್ಥಿತಿ ಕಾಡಲಿದೆ. ಅವರ ನಾಲ್ಕನೇ ಕ್ರಮಾಂಕದ ಸ್ಥಾನದಲ್ಲಿ ರಜತ್ ಪಾಟೀದಾರ್ ಆಡುವ ಸಾಧ್ಯತೆಯಿದೆ.

ಇದರ ಜೊತೆಗೆ ಭಾರತ, ಎದುರಾಳಿಗಳ ಭಾಝ್‌ಬಾಲ್ ಶೈಲಿಯನ್ನೂ ಎದುರಿಸಬೇಕಾಗಿದೆ.

2022ರಲ್ಲಿ ಇಂಗ್ಲೆಂಡ್, ಪಾಕಿಸ್ತಾನದಲ್ಲಿ ಟೆಸ್ಟ್ ಸರಣಿಯನ್ನು 3–0ಯಿಂದ ಗೆದ್ದುಕೊಂಡಿದೆ.

ತಂಡದ ಆಫ್ ಸ್ಪಿನ್ನರ್ ಶೋಯೆಬ್ ಬಷೀರ್ ವೀಸಾ ಸಿಗದೇ ತವರಿಗೆ ಮರಳಿರುವುದು ತಂಡಕ್ಕೆ ಹಿನ್ನಡೆ. ಇದು 20 ವರ್ಷದ ಬೌಲರ್‌ನನ್ನು 'ಗಾಸಿ'ಗೊಳಿಸಿದೆ ಎಂದು ನಾಯಕ ಬೆನ್ ಸ್ಟೋಕ್ಸ್ ಹೇಳಿದ್ದಾರೆ.

ಬಾಝ್‌ಬಾಲ್ ಕ್ರಿಕೆಟ್ ಆಟದಿಂದ ಇಂಗ್ಲೆಂಡ್ ಹಲವು ಪಂದ್ಯಗಳನ್ನು ಹಿನ್ನಡೆಯಿಂದ ಗೆದ್ದಿದೆ. ಇಲ್ಲಿ ಈ ತಂತ್ರ ಕೈಗೂಡುವುದೇ ಎಂಬ ಕುತೂಹಲ ನೆಲೆಸಿದೆ.

ತಂಡ ಜೋ ರೂಟ್ ಮತ್ತು ಬೆನ್ ಸ್ಟೋಕ್ಸ್ ಅವರ ಪಾತ್ರ ನಿರ್ಣಾಯಕವಾಗಿದ್ದು, ತಂಡ ಅವರಿಂದ ಹೆಚ್ಚಿನ ರನ್ನುಗಳನ್ನು ನಿರೀಕ್ಷಿಸಿದೆ. ಪಿಚ್ ಸ್ವಭಾವ ಗಮನಿಸಿ ತಂಡ ತಂಡ ಮೂವರು ಸ್ಪಿನ್ನರ್‌ಗಳಿಗೆ– ಎಡಗೈ ಸ್ಪಿನ್ನರ್‌ಗಳಾದ ಜಾಕ್ ಲೀಚ್, ಟಾಮ್ ಹಾರ್ಟ್ಲಿ ಮತ್ತು ಲೆಗ್ ಸ್ಪಿನ್ನರ್ ರೆಹಾನ್ ಅಹ್ಮದ್– ಅವಕಾಶ ನೀಡಿದೆ. ಈ ಅನನುಭವಿ ಬೌಲರ್‌ಗಳಿಗೆ ಇಲ್ಲಿನ ಸ್ಥಿತಿ ಸವಾಲಿನದ್ದಾಗಲಿದೆ. ಹಿರಿಯ ಬೌಲರ್ ಜೇಮ್ಸ್ ಆ್ಯಂಡರ್ಸನ್‌ಗೆ ವಿಶ್ರಾಂತಿ ನೀಡಲಾಗಿದೆ. ಮಾರ್ಕ್ ವುಡ್ ಏಕೈಕ ಪರಿಣತ ವೇಗದ ಬೌಲರ್ ಆಗಿ ಉಳಿದಿದ್ದಾರೆ.

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್, ಕೆ.ಎಸ್.ಭರತ್ (ವಿಕೆಟ್ ಕೀಪರ್), ಧ್ರುವ್ ಜುರೇಲ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಜಸ್‌ಪ್ರೀತ್ ಬೂಮ್ರಾ (ಉಪ ನಾಯಕ), ಆವೇಶ್ ಖಾನ್.

ಇಂಗ್ಲೆಂಡ್ (11): ಬೆನ್ ಸ್ಟೋಕ್ಸ್ (ನಾಯಕ), ಜಾಕ್ ಕ್ರಾಲಿ, ಬೆನ್ ಡಕೆಟ್, ಓಲಿ ಪೋಪ್, ಜೋ ರೂಟ್, ಜಾನಿ ಬೇಸ್ಟೊ, ಬೆನ್ ಫೋಕ್ಸ್, ರೆಹಾನ್ ಅಹ್ಮದ್, ಟಾಮ್ ಹಾರ್ಟ್ಲಿ, ಮಾರ್ಕ್ ವುಡ್, ಜಾಕ್ ಲೀಚ್.

ಯುವ ಆಟಗಾರರ ಪರ ರೋಹಿತ್ ಬ್ಯಾಟಿಂಗ್

ಹೈದರಾಬಾದ್ (ಪಿಟಿಐ): ಹಿರಿಯ ಆಟಗಾರರಾದ ಚೇತೇಶ್ವರ ಪೂಜಾರ ಮತ್ತು ಅಜಿಂಕ್ಯ ರಹಾನೆ ಅವರಿಗೆ ಟೆಸ್ಟ್ ಪಂದ್ಯಗಳಲ್ಲಿ ಮತ್ತೆ ಅವಕಾಶ ಸಿಗುವ ಸಾಧ್ಯತೆಗಳು ಕಡಿಮೆ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಬುಧವಾರ ಸುಳಿವು ನೀಡಿದರು. ತಂಡದ ಗಮನ, ಯುವ ಆಟಗಾರರಿಗೆ ಹೆಚ್ಚು ಅವಕಾಶಗಳನ್ನು ನೀಡುವತ್ತ ಇರಲಿದೆ ಎನ್ನುವ ಇಂಗಿತವನ್ನು ಅವರು ವ್ಯಕ್ತಪಡಿಸಿದ್ದಾರೆ.

ವಿರಾಟ್ ಕೊಹ್ಲಿ ಮೊದಲ ಎರಡು ಟೆಸ್ಟ್‌ಗಳಿಗೆ ಅಲಭ್ಯರಾದಾಗ ಪೂಜಾರ ಅಥವಾ ರಹಾನೆ ಅವರಿಗೆ ಮತ್ತೆ ಅವಕಾಶಗಳನ್ನು ನೀಡುವ ಸಾಧ್ಯತೆಗಳ ಬಗ್ಗೆ ವ್ಯಾಪಕ ಚರ್ಚೆಗಳು ನಡೆದಿದ್ದವು. ಆದರೆ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿ ಮತ್ತೆ ಹಿಂದಡಿ ಇಡುವ ಯೋಚನೆ ಮಾಡಲಿಲ್ಲ. ಕೊಹ್ಲಿ ಸ್ಥಾನದಲ್ಲಿ ಯುವ ಆಟಗಾರ ರಜತ್ ಪಾಟೀದಾರ್ ಅವರನ್ನು ಆಯ್ಕೆ ಮಾಡಿತು.

ಈ ನಿರ್ಧಾರದ ಹಿಂದಿನ ತರ್ಕವನ್ನು ರೋಹಿತ್ ವಿವರಿಸಿದರು. 'ನಾವು ಆ ಬಗ್ಗೆ (ಮತ್ತೆ ಹಳಬರನ್ನು ಕರೆಸುವ ಬಗ್ಗೆ) ಯೋಚಿಸಿದ್ದೆವು. ಆದರೆ ಈಗಿರುವ ಯುವ ಆಟಗಾರರರಿಗೆ ಅವಕಾಶ ಸಿಗುವುದು ಯಾವಾಗ? ಎಂಬ ಯೋಚನೆ ನಮಗೆ ಬಂತು' ಎಂದು ರೋಹಿತ್ ಮೊದಲ ಟೆಸ್ಟ್‌ಗೆ ಪೂರ್ವಭಾವಿಯಾಗಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಆದರೆ ಹಿರಿಯ ಆಟಗಾರರನ್ನು ಕೈಬಿಡುವ ನಿರ್ಧಾರ ಸುಲಭವಾಗಿರಲಿಲ್ಲ ಎಂದೂ ಹೇಳಿದರು.

'ಅನುಭವಿ ಆಟಗಾರರನ್ನು ಕೈಬಿಡುವುದು ಅಥವಾ ಪರಿಗಣಿಸದಿರುವುದು ತುಂಬಾ ಕಷ್ಟ. ಅವರು ಗಳಿಸಿರುವ ರನ್‌ಗಳ ಪ್ರಮಾಣ, ಅವರ ಅನುಭವ, ಅವರು ಗೆಲ್ಲಿಸಿಕೊಟ್ಟಿರುವ ಪಂದ್ಯಗಳನ್ನು ಗಮನಿಸಿದಲ್ಲಿ ಅವರನ್ನು ಕಡೆಗಣಿಸುವ ನಿರ್ಧಾರ ತುಂಬಾ ಕಠಿಣ' ಎಂದು ತಮ್ಮ ದೀರ್ಘಕಾಲದ ಸಹ ಆಟಗಾರರ ಬಗ್ಗೆ ರೋಹಿತ್ ಅನುಕಂಪದ ಧಾಟಿಯಲ್ಲಿ ಮಾತನಾಡಿದರು.

ರಹಾನೆ ಕಳೆದ ವರ್ಷದ ಮಧ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಕೊನೆಯ ಟೆಸ್ಟ್ ಆಡಿದ್ದರು. ಪೂಜಾರ ಅವರನ್ನು ಆಸ್ಟ್ರೇಲಿಯಾ ವಿರುದ್ಧ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ನಂತರ ಕೈಬಿಡಲಾಗಿತ್ತು.

ಚೆಸ್: ಅಗ್ರಸ್ಥಾನಕ್ಕೇರಿದ ಚೆನ್ನೈನ ಸೇತುರಾಮನ್

ಪ್ರಜಾವಾಣಿ ವಾರ್ತೆ

ಎಸ್‌.ಪಿ.ಸೇತುರಾಮನ್

ಬೆಂಗಳೂರು: ಅಗ್ರ ಶ್ರೇಯಾಂಕದ ಅಭಿಜಿತ್ ಗುಪ್ತಾ ಅವರನ್ನು ಬುಧವಾರ ಎಂಟನೇ ಸುತ್ತಿನಲ್ಲಿ ಸೋಲಿಸಿದ ರಾಷ್ಟ್ರೀಯ ಚಾಂಪಿಯನ್ ಎಸ್.ಪಿ. ಸೇತುರಾಮನ್ ಅವರು ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್‌ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿಯಲ್ಲಿ ಏಳು ಪಾಯಿಂಟ್‌ಗಳೊಂದಿಗೆ ಏಕಾಂಗಿಯಾಗಿ ಅಗ್ರಸ್ಥಾನಕ್ಕೆ ಏರಿದರು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಟಾಪ್ ಬೋರ್ಡ್‌ನ ಪಂದ್ಯದಲ್ಲಿ ಚೆನ್ನೈನ ಸೇತುರಾಮನ್ ಅವರ 55ನೇ ನಡೆಯ ನಂತರ ಬಂಗಾಳದ ಆಟಗಾರ ಪಂದ್ಯ ತ್ಯಜಿಸಿದರು. ಮಿಡ್ಲ್‌ಗೇಮ್‌ನಲ್ಲಿ ಸೇತುರಾಮನ್ ಮೇಲುಗೈ ಸಾಧಿಸಿದರು.

ಮಂಗಳವಾರ 'ಸೇತು' ಜೊತೆ ಮುನ್ನಡೆ ಹಂಚಿಕೊಂಡಿದ್ದ ಇಂಗ್ಲೆಂಡ್‌ನ ನೈಜೆಲ್ ಶಾರ್ಟ್ ಮತ್ತು ಮಿತ್ರಬಾ ಗುಹಾ ಎರಡನೇ ಬೋರ್ಡ್‌ನಲ್ಲಿ ಎಚ್ಚರಿಕೆಗೆ ಒತ್ತು ನೀಡಿ 30 ನಡೆಗಳ ನಂತರ 'ಒಪ್ಪಂದ'ಕ್ಕೆ ಸಹಿ ಹಾಕಿದರು. ಈ ಉದಾರ ನಿಲುವಿನಿಂದ ಇವರಿಬ್ಬರು ತಲಾ ಆರೂವರೆ ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಮೊದಲ ಬೋರ್ಡ್‌ನಲ್ಲಿ ಸೋತ ಅಭಿಜಿತ್ ಸೇರಿ 13 ಮಂದಿ 6 ಅಂಗಗಳೊಂದಿಗೆ 3ನೇ ಸ್ಥಾನ ಹಂಚಿಕೊಂಡಿದ್ದು ಪೈಪೋಟಿ ನೀಡುತ್ತಿದ್ದಾರೆ. ಬೆಂಗಳೂರಿನ ಪ್ರಣವ್ ಆನಂದ್ (6) ಅವರು ಬಂಗಾಳದ ಸುಭಾಯನ್ ಕುಂದು (5) ಅವರನ್ನು ಸೋಲಿಸಿದರು. ಮೂರು, ನಾಲ್ಕು ಮತ್ತು ಐದನೇ ಬೋರ್ಡ್ ಪಂದ್ಯಗಳು ಡ್ರಾ ಆದವು.

ನೀಲೋತ್ಪಲ್ ದಾಸ್ (6) ಮತ್ತು ಶ್ಯಾಮಸುಂದರ್ (6), ನೀಲೇಶ್ ಸಹಾ (6) ಮತ್ತು ಸಂದೀಪನ್ ಚಂದಾ (6), ತಮಿಳುನಾಡಿನ ಎಲ್.ಆರ್.ಶ್ರೀಹರಿ ಮತ್ತು ಕೇರಳದ ನಿತಿನ್ ಬಾಬು (6) ನಡುವಣ ಪಂದ್ಯಗಳೂ ಡ್ರಾ ಹಾದಿ ಹಿಡಿದವು. ದೀಪ್ತಾಯನ್ ಘೋಷ್ (6), ಇರಾನ್‌ನ ತಹಬಾಝ್ ಅರಶ್ (5) ಅವರನ್ನು, ಅರಣ್ಯಕ್ ಘೋಷ್ (6), ಇರಾನ್‌ನ ಆರ್ಯ ಒಮಿದಿ (5) ಅವರನ್ನು ಮಣಿಸಿದರು. ಮಹಾರಾಷ್ಟ್ರದ ಪುಷ್ಕರ್ ಡೇರೆ (6), ಗೋವಾದ ನಿತೀಶ್ ಬೆಲೂರ್ಕರ್ (5) ಅವರನ್ನು ಮಣಿಸಿದರು.

ಚೆಸ್: ಜಂಟಿ ಅಗ್ರಸ್ಥಾನಕ್ಕೆ 'ಪ್ರಗ್ಗು'

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್): ಭಾರತದ ಆರ್. ಪ್ರಜ್ಞಾನಂದ ಅವರು ಬುಧವಾರ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ಒಂಬತ್ತನೇ ಸುತ್ತಿನ ಪಂದ್ಯದಲ್ಲಿ ಹಾಲಿ ಮತ್ತು ನಾಲ್ಕು ಬಾರಿಯ ಮಹಿಳಾ ವಿಶ್ವ ಚಾಂಪಿಯನ್ ವೆಂಜುನ್ ಜು ಅವರನ್ನು ಸೋಲಿಸಿ, ಜಂಟಿ ಅಗ್ರಸ್ಥಾನಕ್ಕೆ ಏರಿದರು.

ತನ್ಮೂಲಕ ಪ್ರಜ್ಞಾನಂದ ಅವರು ಇತ್ತೀಚಿನ ವರ್ಷಗಳಲ್ಲಿ ಓಪನ್ ಹಾಗೂ ಮಹಿಳಾ ವಿಭಾಗದ ಹಾಲಿ ಚಾಂಪಿಯನ್ನರನ್ನು ಸೋಲಿಸಿದ ಏಕೈಕ ಆಟಗಾರ ಎನಿಸಿದರು. ವಾರದ ಹಿಂದೆ ಇದೇ ಟೂರ್ನಿಯಲ್ಲಿ ಅವರು ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಅವರನ್ನು ಸೋಲಿಸಿದ್ದರು.

ಭಾರತದ ಡಿ. ಗುಕೇಶ್, ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ಮತ್ತು ಆತಿಥೇಯ ನೆದರ್ಲೆಂಡ್ಸ್‌ನ ಅನೀಶ್ ಗಿರಿ ಜತೆ 5.5 ಪಾಯಿಂಟ್‌ಗಳೊಂದಿಗೆ ಪ್ರಜ್ಞಾನಂದ ಅಗ್ರಸ್ಥಾನವನ್ನು ಹಂಚಿಕೊಂಡಿದ್ದಾರೆ.

ಭಾರತಕ್ಕೆ ಇಂದು ಐರ್ಲೆಂಡ್ ಸವಾಲು

ಬ್ಲೂಮ್‌ಫೊಂಟೀನ್ (ಪಿಟಿಐ): ಭಾರತ ತಂಡ, ಐಸಿಸಿ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ತನ್ನ 2ನೇ ಗ್ರೂಪ್ ಪಂದ್ಯದಲ್ಲಿ ಗುರುವಾರ ಐರ್ಲೆಂಡ್ ತಂಡವನ್ನು ಎದುರಿಸಲಿದೆ. ತಂಡವು ಭರವಸೆಯ ಬ್ಯಾಟರ್‌ಗಳು ಸಕಾರಾತ್ಮಕ ಮನೋಭಾವದಿಂದ ಆಡುವುದನ್ನು ನಿರೀಕ್ಷಿಸುತ್ತಿದೆ.

ಮೊದಲ ಪಂದ್ಯದಲ್ಲಿ ಭಾರತ ನಿರೀಕ್ಷೆಗಿಂತ ಸುಲಭವಾಗಿ ಬಾಂಗ್ಲಾದೇಶ ತಂಡವನ್ನು 84 ರನ್‌ಗಳಿಂದ ಸೋಲಿಸಿದ್ದು ಶುಭಾರಂಭ ಮಾಡಿದೆ. ಇನ್ನೊಂದೆಡೆ, ಮೊದಲ ಪಂದ್ಯದಲ್ಲಿ ಕ್ರಿಕೆಟ್ ಶಿಶುಗಳಾದ ಅಮೆರಿಕ ತಂಡದ ಮೇಲೆ ಜಯಗಳಿಸಿದ್ದ ಐರ್ಲೆಂಡ್, ನಂತರ ಬಾಂಗ್ಲಾ ಎದುರು ಸೋಲನುಭವಿಸಿತ್ತು.

ಮೊದಲ ಪಂದ್ಯದಲ್ಲಿ ನಾಯಕ ಉದಯ್ ಸಹಾರಣ್ 64 ರನ್ ಮತ್ತು ಆದರ್ಶ್ ಸಿಂಗ್ 76 (ಪಂದ್ಯದ ಗರಿಷ್ಠ) ರನ್ ಗಳಿಸಿದ್ದರು. ಆದರೆ ಕ್ರಮವಾಗಿ 79 ಮತ್ತು 68ರ ಸ್ಟ್ರೈಕ್‌ರೇಟ್ ಇದ್ದು, ಆಧುನಿಕ ಕ್ರಿಕೆಟ್‌ಗೆ ಹೋಲಿಸಿದರೆ ಇದು ಕಡಿಮೆ. ಮಂದಗತಿಯ ಬ್ಲೂಮ್‌ಫೊಂಟೀನ್ ಪಿಚ್‌ನಲ್ಲಿ ಭಾರತದ ಬೌಲರ್‌ಗಳು ವೇಗವಾಗಿ ರನ್ ಗಳಿಸಬೇಕಾದ ಅಗತ್ಯವಿದೆ.

ಸ್ಪಿನ್ ಬೌಲರ್‌ಗಳಾದ ಸೌಮ್ಯ ಕುಮಾರ್ ಪಾಂಡೆ ಮತ್ತು ಮುಶೀರ್ ಖಾನ್ ಅವರ ಉತ್ತಮ ನಿರ್ವಹಣೆ ಯಿಂದ ಕೋಚ್ ಹೃಷಿಕೇಶ್ ಕಾನಿಟಕರ್ ತೃಪ್ತಿ ಹೊಂದಿದ್ದಾರೆ. ಮೊದಲ ಪಂದ್ಯದಲ್ಲಿ ಕೊನೆಗಳಿಗೆಯಲ್ಲಿ ಬಿರುಸಿನ ಆಟವಾಡಿದ ಸಚಿನ್ ದಾಸ್ ತಂಡ 250ರ ಗಡಿ ದಾಟಲು ನೆರವಾಗಿದ್ದರು. ಒಟ್ಟಾರೆ ಆಯ್ಕೆಗಾರರ ಗಮನ ಸೆಳೆಯಲು ಯುವ ಆಟಗಾರರಿಗೆ ಈ ಟೂರ್ನಿ ಉತ್ತಮ ವೇದಿಕೆ. ಬರೋಡಾ ಪರ ರಣಜಿಯಲ್ಲಿ ಎರಡು ಶತಕ ಬಾರಿಸಿರುವ ಪ್ರಿಯಾಂಶು ಮೊಲಿಯಾ ಅವರ ಮೇಲೆಯೂ ಕಣ್ಣಿಡಲಾಗಿದೆ. ಐಪಿಎಲ್ ತಂಡಕ್ಕೂ ಅವರು ಆಯ್ಕೆಯಾಗಿದ್ದಾರೆ.

ಬಷೀರ್‌ಗೆ ಕೊನೆಗೂ ಭಾರತದ ವೀಸಾ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ತಂಡದಲ್ಲಿರುವ ಪಾಕ್ ಸಂಜಾತ ಸ್ಪಿನ್ನರ್ ಶೋಯೆಬ್ ಬಷೀರ್ ಅವರಿಗೆ ಕೊನೆಗೂ ಭಾರತಕ್ಕೆ ತೆರಳಲು ಬುಧವಾರ ವೀಸಾ ನೀಡಲಾಗಿದೆ. ಈ ಮೊದಲು ವೀಸಾ ಸಿಗದ ಕಾರಣ ಬೆನ್ ಸ್ಟೋಕ್ಸ್ ನೇತೃತ್ವದ ತಂಡದ ಜೊತೆ ಅವರಿಗೆ ಅಬುಧಾಬಿಯಿಂದ ಭಾರತಕ್ಕೆ ಪ್ರಯಾಣಿಸಲು ಆಗಿರಲಿಲ್ಲ.

'ಶೋಯೆಬ್ ಬಷೀರ್ ಅವರಿಗೆ ಈಗ ವೀಸಾ ನೀಡಲಾಗಿದೆ. ಅವರು ವಾರಾಂತ್ಯದಲ್ಲಿ ಭಾರತದಲ್ಲಿರುವ ತಂಡವನ್ನು ಸೇರಿಕೊಳ್ಳಲಿದ್ದಾರೆ. ಕಗ್ಗಂಟು ಬಗೆಹರಿದಿರುವುದರಿಂದ ಸಂತಸವಾಗಿದೆ' ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಮಂಡಳಿ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದೆ.

20 ವರ್ಷದ ಬೌಲರ್‌ಗೆ ವೀಸಾ ಸಿಗದೇ ಸಮಸ್ಯೆ ಎದುರಿಸಿದ್ದರಿಂದ ಬೇಸರವಾಗಿತ್ತು ಎಂದು ಇದಕ್ಕೆ ಮೊದಲು ನಾಯಕ ಬೆನ್ ಸ್ಟೋಕ್ಸ್ ಹೇಳಿದ್ದರು. 'ಅಬುದಾಬಿಯಲ್ಲಿ ಈ ವಿಷಯ ಗೊತ್ತಾದಾಗ, ಬಷೀರ್‌ಗೆ ವೀಸಾ ಸಿಗುವವರೆಗೆ ನಾವು ಅಲ್ಲಿಂದ ಹೊರಡಬಾರದು ಎಂದಿದ್ದೆ' ಎಂದು ಟೆಸ್ಟ್ ಪಂದ್ಯಕ್ಕೆ ಮುನ್ನಾದಿನದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದರು.

ಬೆಂಗಳೂರು ಓಪನ್: ನಗಾಲ್‌ಗೆ ನೇರ ಪ್ರವೇಶ

ಬೆಂಗಳೂರು (ಪಿಟಿಐ): ಸುಮಿತ್ ನಗಾಲ್ ಅವರು ಫೆಬ್ರುವರಿ 10ರಂದು ಇಲ್ಲಿ ಆರಂಭವಾಗುವ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೂರ್ನಿಗೆ ನೇರ ಪ್ರವೇಶ ಪಡೆದ ಭಾರತದ ಏಕೈಕ ಆಟಗಾರ ಎನಿಸಿದ್ದಾರೆ.

ನಗಾಲ್ ಅವರು ಸೋಮದೇವ್ ದೇವ್‌ವರ್ಮನ್ ನಂತರ ಕಳೆದ ವಾರ ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಎರಡನೇ ಸುತ್ತನ್ನು ತಲುಪಿದ ಭಾರತದ ಎರಡನೇ ಆಟಗಾರ ಎನಿಸಿದ್ದರು. ಮೊದಲ ಸುತ್ತಿನಲ್ಲಿ ಅವರು 27ನೇ ಶ್ರೇಯಾಂಕದ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ಮಣಿಸಿದ್ದರು. ಬೆಂಗಳೂರು ಓಪನ್‌ಗೆ 257ರವರೆಗಿನ ಕ್ರಮಾಂಕ 'ಕಟ್‌ಆಫ್' ಆಗಿದ್ದು, 137ನೇ ಕ್ರಮಾಂಕದ ನಗಾಲ್ ಅವರು ಪ್ರಧಾನ 'ಡ್ರಾ'ಗೆ ಅರ್ಹರಾದ 11 ರಾಷ್ಟ್ರಗಳ 21 ಆಟಗಾರರಲ್ಲಿ ಒಳಗೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಫ್ರಾನ್ಸ್‌ನ ಬೆಂಜಮಿನ್ ಬೊಂಝ್ (106ನೇ) ಟೂರ್ನಿಯಲ್ಲಿ ಅತಿ ಹೆಚ್ಚಿನ ರ್‍ಯಾಂಕ್ ಹೊಂದಿರುವ ಆಟಗಾರ.

ಬ್ಯಾಡ್ಮಿಂಟನ್: ಸೇನ್, ಕಿರಣ್‌ಗೆ ಜಯ

ಭಾರತದ ಲಕ್ಷ್ಯ ಸೇನ್

ಜಕಾರ್ತಾ (ಪಿಟಿಐ): ಭಾರತದ ಲಕ್ಷ್ಯ ಸೇನ್ ಮತ್ತು ಕಿರಣ್ ಜಾರ್ಜ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತನ್ನು ಪ್ರವೇಶಿಸಿದರು. ಆದರೆ ಬುಧವಾರ ನಡೆದ ಇನ್ನೊಂದು ಪಂದ್ಯದಲ್ಲಿ ಭಾರತದ ಅಗ್ರ ಸಿಂಗಲ್ಸ್ ಆಟಗಾರ ಎಚ್.ಎಸ್.ಪ್ರಣಯ್ ಮತ್ತು ಕಿದಂಬಿ ಶ್ರೀಕಾಂತ್ ಸೋಲನುಭವಿಸಿದರು.

ವಿಶ್ವ ಕ್ರಮಾಂಕದಲ್ಲಿ 19ನೇ ಸ್ಥಾನದಲ್ಲಿರುವ ಲಕ್ಷ್ಯ ಓಪನ್ 24–22, 21–15 ರಿಂದ ಚೀನಾದ ವೆಂಗ್ ಹಾಂಗ್ ಯಾಂಗ್ ಅವರಿಗೆ ಸೋಲುಣಿಸಿದರು. ಆ ಮೂಲಕ ಮಲೇಷ್ಯಾ ಓಪನ್ ಮೊದಲ ಸುತ್ತಿನಲ್ಲಿ ಇದೇ ಆಟಗಾರನೆದುರು ಅನುಭವಿಸಿದ ಸೋಲಿಗೆ ಪ್ರತೀಕಾರ ತೀರಿಸಿಕೊಂಡರು.

23 ವರ್ಷದ ಕಿರಣ್ ಮೊದಲ ಸುತ್ತಿನ ಪಂದ್ಯದಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡು 18–21, 21–16, 21–19 ರಿಂದ ಫ್ರಾನ್ಸ್‌ನ ತೊಮಾ ಜೂನಿಯರ್ ಪೊಪಯ್ ಅವರನ್ನು ಹಿಮ್ಮೆಟ್ಟಿಸಿದರು.

ಆದರೆ ವಿಶ್ವದ 8ನೇ ಕ್ರಮಾಂಕದ ಆಟಗಾರ ಪ್ರಣಯ್ ನಿರಾಸೆ ಮೂಡಿಸಿದರು. ಅವರು ಮೊದಲ ಸುತ್ತಿನಲ್ಲಿ ಸಿಂಗಪುರದ ಲೊ ಕಿನ್ ಯೂ ಅವರಿಗೆ 18–21, 21–19, 10–21 ರಲ್ಲಿ ಸೋತರು.

ಲಕ್ಷ್ಯ ಅವರಂತೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಪೈಪೋಟಿಯಲ್ಲಿರುವ ಕಿದಂಬಿ ಶ್ರೀಕಾಂತ್ ಬರಿಗೈಯಲ್ಲಿ ಮರಳಬೇಕಾಯಿತು.

ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿರುವ ಮಲೇಷ್ಯಾದ ಲೀ ಝಿ ಜಿಯಾ ಅವರು 54 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ 19–21, 21–14, 21–11 ರಿಂದ ಶ್ರೀಕಾಂತ್ ಅವರನ್ನು ಸೋಲಿಸಿದರು.

ದಬಾಂಗ್, ತಲೈವಾಸ್‌ಗೆ ಜಯ

ಹೈದರಾಬಾದ್: ಸ್ಥಿರ ಪ್ರದರ್ಶನ ನೀಡುತ್ತಿರುವ ಆಶು ಮಲಿಕ್ ಅವರ ಅಮೋಘ ರೈಡಿಂಗ್ (14 ಪಾಯಿಂಟ್ಸ್) ನೆರವಿನಿಂದ ದಬಾಂಗ್ ಡೆಲ್ಲಿ ತಂಡ ಬುಧವಾರ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವನ್ನು 35–32 ರಲ್ಲಿ ಮೂರು ಪಾಯಿಂಟ್ ಅಂತರದಿಂದ ಸೋಲಿಸಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸ್ಟೀಲರ್ಸ್ ಪರ ಸಿದ್ಧಾರ್ಥ ದೇಸಾಯಿ 11 ಪಾಯಿಂಟ್ಸ್ ಗಳಿಸಿ ಗಮನ ಸೆಳೆದರು. ಪಾಯಿಂಟ್ ಪಟ್ಟಿಯಲ್ಲಿ ಡೆಲ್ಲಿ ತಂಡ (54 ಪಾಯಿಂಟ್ಸ್) ಮೂರನೇ ಸ್ಥಾನದಲ್ಲಿ ಮುಂದುವರಿದರೆ, ಸ್ಟೀಲರ್ಸ್ (45) ನಾಲ್ಕನೇ ಸ್ಥಾನದಲ್ಲಿದೆ.

ಇನ್ನೊಂದು ಪಂದ್ಯದಲ್ಲಿ ತಮಿಳು ತಲೈವಾಸ್ 54–29 ಪಾಯಿಂಟ್‌ಗಳಿಂದ ತಳದಲ್ಲಿರುವ ತೆಲುಗು ಟೈಟನ್ಸ್ ತಂಡದ ಮೇಲೆ ಸುಲಭ ಜಯಪಡೆಯಿತು. ತಲೈವಾಸ್ ರೈಡಿಂಗ್, ರಕ್ಷಣೆ ಎರಡರಲ್ಲೂ ಗಮನ ಸೆಳೆಯಿತು. ಟೈಟನ್ಸ್ ಪರ ನಾಯಕ ಪವನ್ ಎಂದಿನಂತೆ ಹೆಚ್ಚು ಪಾಯಿಂಟ್ಸ್ (10) ಗಳಿಸಿದರು.

ಹ್ಯಾಮರ್ ಥ್ರೋ: ಯಶಸ್‌ಗೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ಯಶಸ್ ಕೆ. ಅವರು ತಮಿಳುನಾಡಿನ ಚೆನ್ನೈನಲ್ಲಿ ನಡೆಯುತ್ತಿರುವ 6ನೇ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಪುರುಷರ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. ಈ ವಿಭಾಗದಲ್ಲಿ ಒಡಿಶಾದ ಓಂಕಾರ್ ಪ್ರಸಾದ್ ನಂದಾ ಚಿನ್ನ ಗೆದ್ದರೆ, ಹರಿಯಾಣದ ನಿಖಿಲ್ ಯಾದವ್ ಕಂಚು ಗೆದ್ದರು.

ಮಹಿಳೆಯರ 800 ಮೀ. ಓಟದಲ್ಲಿ ಕರ್ನಾಟಕದ ಪ್ರಿಯಾ ಓಲೇಕಾರ ಅವರು ಕಂಚಿನ ಪದಕ ಗೆದ್ದರು. ತಮಿಳುನಾಡಿನ ಅನ್ಸಿಲಿನ್ ಎಂ. ಮತ್ತು ಅಕ್ಸ್‌ಲಿನ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು.

ನಾಳೆ 'ಬೆಂಗಳೂರು ಚಳಿಗಾಲದ ಡರ್ಬಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ರೇಸ್‌ಕೋರ್ಸ್ ಅಂಗಳದಲ್ಲಿ ಪ್ರತಿಷ್ಠಿತ 'ದಿ ವಿನ್‌ಫೇರ್ 247 ಬೆಂಗಳೂರು ಡರ್ಬಿ' ಶುಕ್ರವಾರ (ಜ.26) ನಡೆಯಲಿದ್ದು, ಹತ್ತು ಕುದುರೆಗಳು ಪೈಪೋಟಿ ನಡೆಸಲಿವೆ.

'51ನೇ ಆವೃತ್ತಿಯ ಚಳಿಗಾಲದ ಡರ್ಬಿಯು ಒಟ್ಟು ₹1.70 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿದೆ. ವಿಜೇತ ಕುದುರೆಯು ತನ್ನ ಮಾಲೀಕನಿಗೆ ₹ 83.72 ಲಕ್ಷ ದೊರಕಿಸಿಕೊಡಲಿದೆ' ಎಂದು ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಅಧ್ಯಕ್ಷ ಮತ್ತು ಸೀನಿಯರ್ ಸ್ಟೀವರ್ಡ್ ಅರವಿಂದ್ ರಾಘವನ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವಿನ್‌ಫೇರ್247 ಪ್ರಾಯೋಜಕತ್ವ: ಆನ್‌ಲೈನ್ ಗೇಮಿಂಗ್ ಆ್ಯಪ್ ಮತ್ತು ಈ ಗೇಮಿಂಗ್ ಬ್ರಾಂಡ್ 'ವಿನ್‌ಫೇರ್ 247' ಈ ರೇಸ್‌ನ ಪ್ರಾಯೋಜಕತ್ವ ಪಡೆದಿದೆ. ಚಳಿಗಾಲದ ಡರ್ಬಿಯ 'ಟೈಟಲ್ ಪ್ರಾಯೋಜಕತ್ವ'ವನ್ನೂ ವಿನ್‌ಫೇರ್ ತನ್ನದಾಗಿಸಿಕೊಂಡಿದೆ ಎಂದು ಅರವಿಂದ್ ತಿಳಿಸಿದರು.

ಇದೇ ವೇಳೆ ಟ್ರೋಫಿಗಳನ್ನು ಅನಾವರಣ ಮಾಡಲಾಯಿತು. ಬಳಿಕ ಡರ್ಬಿ ಕುದುರೆಗಳ 'ಡ್ರಾ' ಸಂಖ್ಯೆ ನಿಗದಿಪಡಿಸಲಾಯಿತು.

ಡರ್ಬಿಯಲ್ಲಿ ಪಾಲ್ಗೊಳ್ಳುವ ಕುದುರೆಗಳು ಹಾಗೂ ಡ್ರಾ ಸಂಖ್ಯೆ: 1.ಪ್ರಾಣ (4), 2. ರೂಲಿಂಗ್ ಡೈನಾಸ್ಟಿ (9), 3.ಸಾಯ್ಗಾನ್ (7), 4.ಆಗಸ್ಟ್ (3), 5.ಫಾಸ್ಟ್ ಪೇಸ್ (1), 6.ಜಮಾರಿ (6), 7.ಮೇಡಮ್ ರಿಚ್ (10), 8.ಸ್ನೋಪಿಯರ್ಸರ್ (5), 9.ಸಂಥಿಂಗ್ ರಾಯಲ್ (2), 10. ಟೆಹಾನಿ (8).

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ಕರ್ನಾಟಕಕ್ಕೆ ಜಯ

ಬೆಂಗಳೂರು: ಕರ್ನಾಟಕ ತಂಡ, ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಬುಧವಾರ ಜಮ್ಮು ಮತ್ತು ಕಾಶ್ಮೀರ ತಂಡವನ್ನು 129 ರನ್‌ಗಳಿಂದ ಸೋಲಿಸಿತು.

ಕೊನೆಯ ದಿನ ಕರ್ನಾಟಕ ಪರ ಅನೀಶ್ ಕೆ.ವಿ. ಶತಕ (101, 100ಎ, 4x11, 6x2) ಬಾರಿಸಿದರೆ, ಮೆಕ್ನೀಲ್ ನೊರೊನಾ 14 ರನ್ನಿಗೆ 4 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 426, ಜಮ್ಮು ಮತ್ತು ಕಾಶ್ಮೀರ: 297; ಎರಡನೇ ಇನಿಂಗ್ಸ್: ಕರ್ನಾಟಕ: 46.2 ಓವರುಗಳಲ್ಲಿ 8 ವಿಕೆಟ್‌ಗೆ 238 ಡಿಕ್ಲೇರ್ (ಅನೀಶ್ ಕೆ.ವಿ. 101; ಮುಜ್ತಾಬ ಯೂಸುಫ್ 77ಕ್ಕೆ4); ಜಮ್ಮು ಮತ್ತು ಕಾಶ್ಮೀರ: 56.5 ಓವರುಗಳಲ್ಲಿ 238 (ಖಾಜಿ ಜುನೇದ್ ಮಸೂದ್ 73, ಆರ್ಯ ಠಾಕೂರ್ 41, ಕವಲ್ ಪ್ರೀತ್ ಸಿಂಗ್ 39; ಹಾರ್ದಿಕ್ ರಾಜ್ 84ಕ್ಕೆ3, ಧೀರಜ್ ಗೌಡ 74ಕ್ಕೆ2, ಮೆಕ್ನೀಲ್ ಹೆಡ್ಲಿ ನೊರೊನ್ಹ 14ಕ್ಕೆ4).

ಕಬಡ್ಡಿ: ಬಾಲಕಿಯರಿಗೆ ಗೆಲುವು

ನಾಗಮಂಗಲ (ಮಂಡ್ಯ): ಆತಿಥೇಯ ಕರ್ನಾಟಕ ತಂಡಗಳು ಬುಧವಾರ ಇಲ್ಲಿನ ಆದಿಚುಂಚನಗಿರಿಯ ಬಿಜಿಎಸ್ ಕ್ರೀಡಾಂಗಣ ದಲ್ಲಿ ಆರಂಭವಾದ 67ನೇ ರಾಷ್ಟ್ರಮಟ್ಟದ 19 ವರ್ಷದ ಒಳಗಿನ ಬಾಲಕ ಹಾಗೂ ಬಾಲಕಿಯರ ಕಬಡ್ಡಿ ಟೂರ್ನಿಯಲ್ಲಿ ಮಿಶ್ರಫಲ ಕಂಡವು.

ಸ್ಕೂಲ್ ಗೇಮ್ಸ್ ಫೆಡರೇಶನ್ ಆಫ್ ಇಂಡಿಯಾ ಹಾಗೂ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಸಹಯೋಗದಲ್ಲಿ ನಡೆದಿರುವ ಟೂರ್ನಿಯ ಬಾಲಕರ ವಿಭಾಗದಲ್ಲಿ ಕರ್ನಾಟಕ ತಂಡವು 28–28 ಅಂಕಗಳ ಅಂತರದಲ್ಲಿ ಮಹಾರಾಷ್ಟ್ರ ಎದುರು ಡ್ರಾಗೆ ತೃಪ್ತಿಪಟ್ಟುಕೊಂಡಿತು. ಬಾಲಕಿಯರ ವಿಭಾಗದಲ್ಲಿ ಆತಿಥೇಯ ತಂಡವು 45–33ರಿಂದ ಮಹಾರಾಷ್ಟ್ರ ಎದುರು ಗೆಲುವು ಸಾಧಿಸಿತು.

ಎಳೆಯರ ಡೋಪಿಂಗ್ ಪಿಡುಗು: ಭಾರತಕ್ಕೆ 2ನೇ ಸ್ಥಾನ

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವನೆಯಲ್ಲಿ ಸಿಲುಕುತ್ತಿರುವ ಎಳೆಯ ಕ್ರೀಡಾಪಟುಗಳ ಸಂಖ್ಯೆ ರಷ್ಯಾ ಬಿಟ್ಟರೆ ಭಾರತದಲ್ಲಿ ಅತ್ಯಧಿಕವಾಗಿದೆ ಎಂದು ವಿಶ್ವ ಉದ್ದೀಪನ ಮದ್ದು ಸೇವನೆ ತಡೆ ಘಟಕ ನಡೆಸಿದ ಅಧ್ಯಯನದಲ್ಲಿ ಬಹಿರಂಗಗೊಂಡಿದೆ.

'ಆಪರೇಷನ್ ರೆಫ್ಯೂಜ್' ಹೆಸರಿನ ಈ ವರದಿಯಲ್ಲಿ ಎಳೆಯ ಕ್ರೀಡಾಪಟುಗಳ ಡೋಪಿಂಗ್ ಪ್ರಮಾಣ ಹೆಚ್ಚಾಗಿರುವುದನ್ನು ಗುರುತಿಸಲಾಗಿದೆ. ರಷ್ಯಾ, ಭಾರತದ ನಂತರ ಚೀನಾ ಮೂರನೇ ಸ್ಥಾನದಲ್ಲಿದೆ. 'ವಾಡಾ' ಸಂಹಿತೆ ಪ್ರಕಾರ ಎಳೆಯ ಕ್ರೀಡಾಪಟುಗಳೆಂದರೆ 18 ವರ್ಷದೊಳಗಿನವರು.

ಟಿಟಿ: ತನಿಷ್ಕಾಗೆ ಡಬಲ್ ಕಂಚು

ಬೆಂಗಳೂರು: ಕರ್ನಾಟಕದ ತನಿಷ್ಕಾ ಕಾಲಭೈರವ ಅವರು ಇಂದೋರ್‌ನಲ್ಲಿ ನಡೆದ ಯುಟಿಟಿ 85ನೇ ಅಂತರರಾಜ್ಯ ಕೆಡೆಟ್ ಮತ್ತು ಸಬ್ ಜೂನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಬಾಲಕಿಯರ (13 ವರ್ಷದೊಳಗಿನವರ) ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ (ರಾಶಿ ವಿ. ರಾವ್ ಅವರೊಂದಿಗೆ) ಕಂಚಿನ ಪದಕ ಗೆದ್ದರು.

ಆಸ್ಟ್ರೇಲಿಯನ್ ಓಪನ್: ಡಯಾನಾ, ಜ್ವೆರೇವ್ ಮುನ್ನಡೆ

ಸೆಮಿಫೈನಲ್‌ಗೆ ಮೆಡ್ವೆಡೇವ್

ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಮತ್ತು ಭಾರತದ ರೋಹನ್ ಬೋಪಣ್ಣ

ಮೆಲ್ಬರ್ನ್ (ಎಎಫ್‌ಪಿ): ಭರ್ಜರಿ ಸರ್ವ್‌ಗಳ ಆಟಗಾರ ಹ್ಯೂಬರ್ಟ್ ಹರ್ಕಾಝ್ ಅವರ ಸುದೀರ್ಘ ಹೋರಾಟವನ್ನು ಬದಿಗೊತ್ತಿದ ಎರಡು ಬಾರಿಯ ರನ್ನರ್ ಅಪ್ ಡೇನಿಯಲ್ ಮೆಡ್ವೆಡೇವ್ ಬುಧವಾರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ತಲುಪಿದರು. ಇನ್ನೊಂದೆಡೆ ಅರ್ಹತಾ ಸುತ್ತಿನಿಂದ ಬಂದಿದ್ದ ಉಕ್ರೇನ್‌ನ ಆಟಗಾರ್ತಿ ಡಯಾನಾ ಎಸ್ಟ್ರೆಮ್‌ಸ್ಕಾ ಅವರ 'ಕನಸಿನ ಓಟ' ಅಬಾಧಿತವಾಗಿ ಮುಂದುವರಿದಿದೆ.

ರಾಡ್ ಲೇವರ್ ಅರೇನಾದಲ್ಲಿ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮೂರನೇ ಕ್ರಮಾಂಕದ ಮೆಡ್ವೆಡೇವ್ 7–6 (7–4), 2–6, 6–3, 5–7, 6–4 ರಿಂದ ಪೋಲೆಂಡ್‌ನ ಆಟಗಾರನನ್ನು ಸೋಲಿಸಿದರು. ಬಿಸಿಲಿನಲ್ಲಿ ಸುಮಾರು ನಾಲ್ಕು ತಾಸುಗಳ ಹೋರಾಟದ ನಂತರ ಕುಸಿದು ಬಿದ್ದ ಅನುಭವವಾಯಿತು ಎಂದು ಮೆಡ್ವೆಡೇವ್ ಹೇಳಿದರು.

ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಮೆಡ್ವೆಡೇವ್ ಸೆಮಿಫೈನಲ್‌ನಲ್ಲಿ 6ನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೇವ್ ಅವರನ್ನು ಎದುರಿಸಲಿದ್ದಾರೆ. ಜರ್ಮನಿಯರ ಜ್ವೆರೆವ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರನ್ನು 6-1, 6-3, 6-7 (2/7), 6-4 ರಿಂದ ಹಿಮ್ಮೆಟ್ಟಿಸಿದರು.

27 ವರ್ಷದ ಮೆಡ್ವೆಡೇವ್ 2021ರ ಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ ಅವರಿಗೆ ಮಣಿದಿದ್ದರು. ಮರು ವರ್ಷ ರಫೆಲ್ ನಡಾಲ್ ಎದುರು ಸೋತಿದ್ದರು.

ಸೆಂಟರ್ ಕೋರ್ಟ್‌ನಲ್ಲಿ ನಡೆದ ಮಹಿಳೆಯರ ಸಿಂಗಲ್ಸ್ ಮೊದಲ ಪಂದ್ಯದಲ್ಲಿ 93ನೇ ಕ್ರಮಾಂಕದ ಯಸ್ಟ್ರೆಮ್‌ಸ್ಕಾ ಅವರು ಶ್ರೇಯಾಂಕರಹಿತ ಆಟಗಾರ್ತಿ ಲಿಂಡಾ ನೊಸ್ಕೊವಾ ಅವರನ್ನು 6–3, 6–4 ರಿಂದ ಸೋಲಿಸಿ, ಓಪನ್ ಯುಗದಲ್ಲಿ (1968ರ ನಂತರ) ಈ ಟೂರ್ನಿಯ ಸೆಮಿಫೈನಲ್ ತಲುಪಿದ ಎರಡನೇ ಕ್ವಾಲಿಫೈಯರ್ (ಅರ್ಹತಾ ಸುತ್ತಿನಿಂದ ಬಂದ) ಆಟಗಾರ್ತಿ ಎನಿಸಿದರು. 1978ರಲ್ಲಿ ಆಸ್ಟ್ರೇಲಿಯಾದ ಕ್ರಿಸ್ಟೀನ್ ಮೆಟಿಸನ್ ಈ ಹಂತ ತಲುಪಿದ್ದ ಮೊದಲ ಕ್ವಾಲಿಫೈಯರ್.

23 ವರ್ಷದ ಎಸ್ಟ್ರೆಮ್‌ಸ್ಕಾ ಗೆಲುವಿನ ನಂತರ ಟಿವಿ ಕ್ಯಾಮೆರಾ ಲೆನ್ಸ್ ಮೇಲೆ, ಉಕ್ರೇನ್ ಯೋಧರನ್ನು ಬೆಂಬಲಿಸುವ ಸಂದೇಶವನ್ನು ಬರೆದರು. 'ಯೋಧರ ಬಗ್ಗೆ ಹೆಮ್ಮೆಯಿದೆ. ಅವರಿಗೆ ದೊಡ್ಡ ಗೌರವ ಸಲ್ಲಬೇಕು' ಎಂದರು. ಈ ಟೂರ್ನಿಯ ಮೊದಲ ಸುತ್ತಿನಲ್ಲಿ ಅವರು ಏಳನೇ ಶ್ರೇಯಾಂಕದ ಮರ್ಕೆತಾ ವೊಂದ್ರುಸೋವಾ ಮತ್ತು ನಾಲ್ಕನೇ ಸುತ್ತಿನಲ್ಲಿ ಎರಡು ಬಾರಿಯ ಚಾಂಪಿಯನ್ ವಿಕ್ಟೋರಿಯಾ ಅಜರೆಂಕಾ ಅವರನ್ನು ಮಣಿಸಿದ್ದಾರೆ.

ಅವರ ಮುಂದಿನ ಎದುರಾಳಿ 12ನೇ ಶ್ರೇಯಾಂಕದ ಝೆಂಗ್ ಕ್ವಿನ್ವೆನ್. ಚೀನಾದ ಈ ಆಟಗಾರ್ತಿ 6–7 (4–7), 6–3, 6–1 ರಿಂದ ರಷ್ಯಾದ ಅನ್ನಾ ಕಲಿನ್‌ಸ್ಕಾಯಾ ಅವರನ್ನು ಪರಾಭವಗೊಳಿಸಿದರು. 21 ವರ್ಷದ ಝೆಂಗ್ ಕೂಡ ಮೊದಲ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಗೆ ಯತ್ನಿಸುತ್ತಿದ್ದಾರೆ. ಅವರು ಇದುವರೆಗಿನ ಎಂಟು ಗ್ರ್ಯಾಂಡ್‌ಸ್ಲಾಮ್ ಟೂರ್ನಿಗಳಲ್ಲಿ ಕ್ವಾರ್ಟರ್‌ಫೈನಲ್ ದಾಟಿರಲಿಲ್ಲ.

ಹಿರಿ ವಯಸ್ಸಿನಲ್ಲಿ ಅಗ್ರ ಕ್ರಮಾಂಕ: ರೋಹನ್ ಬೋಪಣ್ಣ ಸಾಧನೆ

ಮೆಲ್ಬರ್ನ್ (ಎಎಫ್‌ಪಿ): ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಬುಧವಾರ ಪುರುಷರ ಡಬಲ್ಸ್ ಸೆಮಿಫೈನಲ್ ತಲುಪಿರುವ ಭಾರತದ ರೋಹನ್ ಬೋಪಣ್ಣ ಅವರು ಡಬಲ್ಸ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ ಅತಿ ಹಿರಿಯ ಆಟಗಾರ ಎನಿಸಲಿದ್ದಾರೆ. ಸೋಮವಾರ ಹೊಸ ಕ್ರಮಾಂಕಪಟ್ಟಿ ಪ್ರಕಟವಾಗಲಿದೆ.

ಯೋಗಾಭ್ಯಾಸ ತಮ್ಮ ಯಶಸ್ಸಿನ ಗುಟ್ಟು ಎಂದಿರುವ 43 ವರ್ಷ ವಯಸ್ಸಿನ ಬೋಪಣ್ಣ, ಎರಡು ದಶಕಗಳ ಹಿಂದೆ ವೃತ್ತಿಪರ ಬದುಕು ಆರಂಭಿಸಿದ್ದರು. 2013ರಲ್ಲಿ ಮೂರನೇ ಕ್ರಮಾಂಕಕ್ಕೆ ಏರಿದ್ದು ಅವರ ಈ ಹಿಂದಿನ ಅತ್ಯುತ್ತಮ ಸಾಧನೆಯಾಗಿದೆ. ಆಸ್ಟ್ರೇಲಿಯಾದ ಜೊತೆಗಾರ ಮ್ಯಾಥ್ಯೂ ಎಬ್ಡೆನ್ ಜೊತೆ ಬೋಪಣ್ಣ ಅವರು 6–4, 7–6 (7–5) ರಿಂದ ಅರ್ಜೆಂಟೀನಾದ ಮ್ಯಾಕ್ಸಿಮೊ ಗೊನ್ಸಾಲ್ವೆಝ್ ಮತ್ತು ಆಂಡ್ರೆಸ್ ಮೊಲ್ಟೆನಿ ಅವರನ್ನು ಸೋಲಿಸಿದ್ದರು.

'ಪ್ರತಿ ದಿನ ನಾನು ಯೋಗ, ಧ್ಯಾನದಲ್ಲಿ ತೊಡಗುತ್ತೇನೆ. ಮನಸ್ಸಿಗೆ ಧಾವಂತದ ಭಾವನೆಯೇ ಮೂಡುವುದಿಲ್ಲ. ವೃತ್ತಿ ಜೀವನದ ಸಂಧ್ಯಾಕಾಲದಲ್ಲಿ ಡಬಲ್ಸ್‌ನಲ್ಲಿ ಅಗ್ರಸ್ಥಾನಕ್ಕೇರಿರುವುದು ಮಸುಕಾಗುತ್ತಿದ್ದ ಭಾರತದ ಟೆನಿಸ್‌ಗೆ ಅತ್ಯಗತ್ಯವಾದ ಪ್ರೇರಣೆ ಮೂಡಿಸಲಿದೆ' ಎಂದು ಬೋಪಣ್ಣ ಹೇಳಿದ್ದಾರೆ.

'ಇದು ನನಗಷ್ಟೇ ಅಲ್ಲ, ಭಾರತೀಯ ಟೆನಿಸ್‌ಗೂ ಮಹತ್ವದ್ದಾಗಲಿದೆ. ಮುಂದಿನ ತಲೆಮಾರಿಗೆ ಸ್ಫೂರ್ತಿ ತುಂಬಲು ಇಂಥ ಗೆಲುವು ನೆರವಾಗಲಿದೆ. ಸುಮಿತ್ ನಗಾಲ್ ಆಸ್ಟ್ರೇಲಿಯನ್ ಓಪನ್‌ನಲ್ಲಿ ಅತ್ಯುತ್ತಮ ಸಾಧನೆ ಮಾಡಿದರು. ಅವರು ಒಂದು ಸುತ್ತನ್ನು ಗೆದ್ದರು' ಎಂದು ಅವರು ಪಿಟಿಐಗೆ ತಿಳಿಸಿದರು.